# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

## ೧೨೯ನೇ ಅಧಿವೇಶನ

129th Session

**(20ನೇ ಏಪ್ರಿಲ್ 2015)**

**(20th APRIL 2015)**

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೯ನೇ ಅಧಿವೇಶನ

129th Session

(20ನೇ ಏಪ್ರಿಲ್ 2015)

**(20th APRIL 2015)**

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನ ಪರಿಷತ್ತು

## ವಿಷಯಾನುಕ್ರಮಣಿಕೆ

ದಿನಾಂಕ: 20ನೇ ಏಪ್ರಿಲ್ 2015
ಸೋಮವಾರ


1. ಸಭೆಯ ಮುಂದಿಡಲಾದ ಕಾಗದ ಪತ್ರಗಳು 3–10

2. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು 10–13

(ಅ) ದಿನಾಂಕ: 19–04–2015ರ ಬೆಳಿಗ್ಗೆ 9–30 ಗಂಟೆ ಸಮಯದಲ್ಲಿ ಹೊಸಕೋಟೆ ನಗರದಲ್ಲಿ
ಟೋಲ್ ಹಣ ನೀಡಿಲ್ಲವೆಂದು ಟೋಲ್ ಸಿಬ್ಬಂದಿ ಮಾರಣಾಂತಿಕ ಹಲ್ಲೆ ಮಾಡಿರುವ ಕುರಿತು
– ಶ್ರೀಮತಿ ತಾರಾ ಅನೂರಾಧ
– ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)

(ಆ) ದೈಹಿಕ ಶಿಕ್ಷಣ ಶಿಕ್ಷಕರ ನೇಮಕ ಕುರಿತು

– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

3. ಸದನದಲ್ಲಿ ಮಾನ್ಯ ಬಸವೇಶ್ವರರ ಹಾಗೂ ಡಾ: ಅಂಬೇಡ್ಕರ್‌ರವರ ಭಾವಚಿತ್ರಗಳನ್ನು ಹಾಕುವ ಬಗ್ಗೆ 14–16

– ಶ್ರೀ ಅಲ್ಲಮ ಪ್ರಭು ಪಾಟೀಲ್
– ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)

4. ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ 17–59

ಅಕಾಲಿಕ ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರ ಬಗ್ಗೆ
– ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)
– ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)
– ಶ್ರೀ ಆಚಾರ್ ಹಾಲಪ್ಪ ಬಸಪ್ಪ
– ಶ್ರೀ ಸೋಮಣ್ಣ ಮ. ಬೇವಿನಮರದ
– ಶ್ರೀ ಎನ್.ಎಸ್. ಬೋಸ್‌ರಾಜು
– ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ

– ಶ್ರೀ ಅಲ್ಲಮ ಪ್ರಭು ಪಾಟೀಲ್
– ಶ್ರೀ ಜಿ.ಎಸ್. ನ್ಯಾಮಗೌಡ
– ಶ್ರೀ ವಿ.ಎಸ್. ಉಗ್ರಪ್ಪ
– ಡಾ: ಎಂ.ಆರ್. ಹುಲಿನಾಯ್ಕರ್
– ಶ್ರೀ ಅಮರನಾಥ ಪಾಟೀಲ್
– ಶ್ರೀ ವೈ.ಎ. ನಾರಾಯಣಸ್ವಾಮಿ
– ಶ್ರೀ ಮರಿತಿಬ್ಬೇಗೌಡ
– ಡಾ: ಮತ್ತಿಕಟ್ಟಿ ವೀರಣ್ಣ

(ನಿಯಮ 68ರಡಿಯಲ್ಲಿ ಚರ್ಚಿಸಲು ಅನುಮತಿಸಲಾಯಿತು)

5. ಪ್ರಕಟಣೆ 59–59

6. ನಿಯಮ 68ರಡಿಯಲ್ಲಿ ಮುಂದುವರೆದ ಚರ್ಚೆ 59–61

ಅಕಾಲಿಕ ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರ ಬಗ್ಗೆ
– ಶ್ರೀ ರಾಮಚಂದ್ರಗೌಡ
–

7. ಸಭೆಯ ಮುಂದಿಡಲಾದ ಕಾಗದ ಪತ್ರಗಳು 61–61

8. ನಿಯಮ 68ರಡಿಯಲ್ಲಿ ಮುಂದುವರೆದ ಚರ್ಚೆ 62–66

ಅಕಾಲಿಕ ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರ ಬಗ್ಗೆ
– ಶ್ರೀ ಸಿ.ಹೆಚ್. ವಿಜಯಶಂಕರ್

9. ಸಭೆಯ ಮುಂದಿಡಲಾದ ಕಾಗದ ಪತ್ರಗಳು 67–69

10. ನಿಯಮ 68ರಡಿಯಲ್ಲಿ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ 70–101

ವಿಷಯ: ಅಕಾಲಿಕ ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರ ಬಗ್ಗೆ
– ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)
– ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು)
– ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು)
– ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು)
– ಶ್ರೀ ಬಸವರಾಜ ಹೊರಟ್ಟಿ
– ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)

11. ಶಾಸನ ರಚನೆ 102–128

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಕರ್ನಾಟಕ ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ 2015

– ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ)

– ಶ್ರೀ ವಿ. ಸೋಮಣ್ಣ

– ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

– ಶ್ರೀಮತಿ ವಿಮಲಾಗೌಡ

(ವಿಧೇಯಕದ ಚರ್ಚೆ ಮುಂದುವರೆದಿದೆ)

*********

**ಕರ್ನಾಟಕ ವಿಧಾನ ಪರಿಷತ್ತು**

*ಸೋಮವಾರ, 20ನೇ ಏಪ್ರಿಲ್ 2015*

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಮಧ್ಯಾಹ್ನ 3 ಗಂಟೆ 39 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

("ವಂದೇ ಮಾತರಂ" ಗೀತೆಯೊಂದಿಗೆ ಸದನ ಪ್ರಾರಂಭಗೊಂಡಿತು)

## 1. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ, ಕ.ವಿ.ಪ:–** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

**ರಾಷ್ಟ್ರಪತಿಯವರಿಂದ/ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕದ ಪಟ್ಟಿ**

**ವಿಧಾನ ಸಭೆಯ ವಿಧೇಯಕಗಳು**

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01. | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ 2014 | 02–09–2014 | ರಾಜ್ಯಪಾಲರು |
| 02. | ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014 | 07–01–2015 | ರಾಜ್ಯಪಾಲರು |
| 03. | ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2013 | 21–11–2014 | ರಾಷ್ಟ್ರಪತಿಯವರು |
| 04. | ಕರ್ನಾಟಕ ಪೌರಸಭೆಗಳು ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2014 | 07–01–2015 | ರಾಜ್ಯಪಾಲರು |
| 05. | ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2014 | 07–01–2015 | ರಾಜ್ಯಪಾಲರು |

**ಸಭಾಪತಿಯವರು:–** ಈಗ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಗಳ ನಿಯಮ 301ರಡಿಯಲ್ಲಿ ಶೂನ್ಯವೇಳೆಗೆ ಬದಲಾಗಿ ವಿಶೇಷ ಪ್ರಸ್ತಾವವನ್ನು ತೆಗೆದುಕೊಳ್ಳಲಾಗುತ್ತದೆ. ಅದರ ನಂತರ ಬೇರೆ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

**ಸಭಾಪತಿಯವರು:–** ನಿಯಮ 301ನ್ನು ತೆಗೆದುಕೊಂಡ ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ವಿಶೇಷ ಪ್ರಸ್ತಾವದ ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಂಡರೆ ನಿಲುವಳಿ ಸೂಚನೆಗೆ ಬೆಲೆ ಇಲ್ಲದಂತಾಗುತ್ತದೆ.

**ಸಭಾಪತಿಯವರು:–** ಪದ್ಧತಿ ಪ್ರಕಾರ ಪ್ರಶ್ನೋತ್ತರ ಮತ್ತು ಶೂನ್ಯವೇಳೆ ಆದ ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ ಈಗ ವಿಶೇಷ ಪ್ರಸ್ತಾವವನ್ನು ತೆಗೆದುಕೊಳ್ಳಲಾಗುತ್ತದೆ. ಇಲ್ಲದಿದ್ದರೆ ವಿಶೇಷ ಪ್ರಸ್ತಾವವನ್ನು ಕಳುಹಿಸಿಕೊಟ್ಟ ಸದಸ್ಯರಿಗೆ ಅವಕಾಶ ದೊರೆಯುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಮಾತುಗಳನ್ನು ಕೇಳುತ್ತೇನೆ. ಸರ್ಕಾರಕ್ಕೆ ನಾನು ಸಲಹೆ ಕೊಡುವುದೇನೆಂದರೆ, ... . . . .

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ವಿಶೇಷ ಪ್ರಸ್ತಾವ ಎನ್ನುವುದು ಕೇವಲ 2–3 ನಿಮಿಷಗಳಲ್ಲಿ ಮುಗಿದು ಹೋಗುತ್ತದೆ. ಆದ್ದರಿಂದ ಅದನ್ನು ತೆಗೆದುಕೊಂಡ ನಂತರ ಬೇರೆ ವಿಚಾರವನ್ನು ತೆಗೆದುಕೊಳ್ಳಬಹುದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ 10–15 ನಿಮಿಷಗಳ ಕಾಲ ಪ್ರಾಸ್ತವಿಕವಾಗಿ ಮಾತನಾಡುತ್ತೇನೆ. ನಂತರ ನಿಲುವಳಿ ಸೂಚನೆಯನ್ನೇ ಮುಂದುವರಿಸಬಹುದೇ ಅಥವಾ ಬೇರೆ ವಿಷಯವನ್ನು ತೆಗೆದುಕೊಳ್ಳಬೇಕೇ ಎನ್ನುವ ವಿಚಾರವನ್ನು ತಮಗೆ ಬಿಡುತ್ತೇನೆ.

**ಸಭಾಪತಿಯವರು:–** ಸಾಮಾನ್ಯವಾಗಿ ಪ್ರಶ್ನೋತ್ತರ ಮತ್ತು ಶೂನ್ಯವೇಳೆಯಾದ ನಂತರ ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡುತ್ತಿದ್ದೆವು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸ್ವಾಭಾವಿಕವಾಗಿ 'ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಗೂ ಮೊದಲು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡಿ' ಎಂದು ನಾವು ಕೇಳುತ್ತೇವೆ. ತಾವು 10–15 ನಿಮಿಷಗಳ ಕಾಲ ಪ್ರಾಸ್ತಾವಿಕವಾಗಿ ನಿಲುವಳಿ ಸೂಚನೆಯ ಪ್ರಾಮುಖ್ಯತೆಯ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ನೀಡುತ್ತೀರಿ. ಇವತ್ತು ಮೊದಲು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಟ್ಟು ನಂತರ ಬೇರೆ ವಿಚಾರಗಳನ್ನು ತೆಗೆದುಕೊಳ್ಳಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಬಿ. ರಾಮಕೃಷ್ಣ:–** ಸನ್ಮಾನ್ಯ ಸಭಾಪತಿಯವರೇ, ತುರ್ತು ಅಧಿವೇಶನವನ್ನು ಕರೆದಿರುವ ಉದ್ದೇಶವೇನು?

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುವುದಕ್ಕೂ ಮೊದಲೇ ನಿಲುವಳಿ ಸೂಚನೆಯ ಬಗ್ಗೆ ಪ್ರಾಸ್ತಾವಿಕವಾಗಿ ವಿಚಾರ ಮಂಡನೆ ಮಾಡುವುದಕ್ಕೆ ಅವಕಾಶವಿದೆ. ಈ ದಿನ ಪ್ರಶ್ನೋತ್ತರ ಇಲ್ಲದೇ ಇರುವುದರಿಂದ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬಹುದು.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವ ನಿಲುವಳಿ ಸೂಚನೆಯ ವಿಚಾರ ಬಹಳ ಮಹತ್ವವಾಗಿದೆ ಅದು ರೈತರ ಹಿತಾಸಕ್ತಿಗೆ ಸಂಬಂಧಪಟ್ಟಿದೆ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಆದರೆ, ವಿಶೇಷ ಪ್ರಸ್ತಾವನೆಯನ್ನು ಸಂಬಂಧಪಟ್ಟ ಸದಸ್ಯರು 2–3 ನಿಮಿಷದಲ್ಲಿ ಪ್ರಸ್ತಾಪ ಮಾಡಿ ಮುಗಿಸುತ್ತಾರೆ, ಅದಕ್ಕೆ ಸರ್ಕಾರದ ಪರವಾಗಿ ನಾನು ಉತ್ತರ ಹೇಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಹಿಂದೆ ವಿಶೇಷ ಪ್ರಸ್ತಾವನೆಯನ್ನು ತೆಗೆದುಕೊಳ್ಳುವುದಕ್ಕೂ ಮೊದಲು ಕೆಲವು ಬಾರಿ ನಿಲುವಳಿ ಸೂಚನೆಗೆ ಅವಕಾಶವನ್ನು ಕೊಟ್ಟಿದ್ದೀರಿ.

**ಶ್ರೀ ಬಿ. ರಾಮಕೃಷ್ಣ:–** ಸನ್ಮಾನ್ಯ ಸಭಾಪತಿಯವರೇ, ತುರ್ತು ಅಧಿವೇಶನ ಕರೆದ ಉದ್ದೇಶವೇನು ಎನ್ನುವುದನ್ನು ಹೇಳಬೇಕಾಗುತ್ತದೆ. ನಾನು ಬೇರೆ ವಿಚಾರದ ಬಗ್ಗೆ ಮಾತನಾಡುವುದಿಲ್ಲ.

**ಸಭಾಪತಿಯವರು:–** ಮಾನ್ಯ ರಾಮಕೃಷ್ಣನವರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. 'ತುರ್ತು ಅಧಿವೇಶನ' ಎನ್ನುವುದು ವಾಡಿಕೆಯಲ್ಲಿ ಬಂದಿರುವ ಪದವಾಗಿದೆಯೇ ಹೊರತು, 'ತುರ್ತು ಅಧಿವೇಶನ' ಎನ್ನುವ ಉಲ್ಲೇಖ ನಿಯಮಾವಳಿಗಳಲ್ಲಿ ಎಲ್ಲಿಯೂ ಇಲ್ಲ. ಮಾನ್ಯ ಸದಸ್ಯರುಗಳಿಗೆ ಕಳುಹಿಸಿಕೊಟ್ಟಿರುವ ನೋಟಿಸ್‌ನಲ್ಲಿ ಸಹ '128ನೇ ಅಧಿವೇಶನಕ್ಕೆ ಎಲ್ಲ ಗೌರವಾನ್ವಿತ ಸದಸ್ಯರು ಬರಬೇಕು' ಎಂದು ಕರೆದಿದ್ದೇವೆಯೇ ಹೊರತು 'ತುರ್ತು ಅಧಿವೇಶನ' ಅಥವಾ 'ವಿಶೇಷ ಅಧಿವೇಶನ' ಎನ್ನುವ ಪದವನ್ನು ಎಲ್ಲಿಯೂ ಬಳಸಿಲ್ಲ. ಈ ಅಧಿವೇಶನವನ್ನು ಕರೆದಿರುವ ಉದ್ದೇಶವನ್ನು ಸರ್ಕಾರ ಆಮೇಲೆ ಹೇಳುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಇದು ವಿಶೇಷ ಅಥವಾ ತುರ್ತು ಅಧಿವೇಶನವಲ್ಲ. ವಾಡಿಕೆಯಾಗಿ ಮಾನ್ಯ ಸದಸ್ಯರು 'ಇದು ತುರ್ತು ಅಧಿವೇಶನ ಅಥವಾ ವಿಶೇಷ ಅಧಿವೇಶನ' ಎಂದು ಕರೆಯಬಹುದು. ಸಂವಿಧಾನದ ಅನುಚ್ಛೇದ 174ರಡಿಯಲ್ಲಿ ಘನತೆವೆತ್ತ ರಾಜ್ಯಪಾಲರು ಈ ಅಧಿವೇಶನವನ್ನು ಕರೆದಿದ್ದಾರೆ. ಸಂವಿಧಾನದ ಅನುಚ್ಛೇದ 176ರಡಿಯಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾತನಾಡುತ್ತಾರೆ. ಆದ್ದರಿಂದ ಸಂವಿಧಾನದ ಅನುಚ್ಛೇದ 174ರಡಿಯಲ್ಲಿ ಕರೆದಿರುವ ಈ ಅಧಿವೇಶನ ತುರ್ತು ಅಥವಾ ವಿಶೇಷ ಅಧಿವೇಶನವಲ್ಲ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಈಗ ರಾಜ್ಯದಲ್ಲಿ ಅಕಾಲಿಕ ಮಳೆಯಾಗುತ್ತಿದೆ. ಅದೇ ರೀತಿಯಲ್ಲಿ ಇದು ಅಕಾಲಿಕ ಅಧಿವೇಶನವಾಗಿದೆ.

**ಸಭಾಪತಿಯವರು:–** ನಮ್ಮ ರಾಜ್ಯಾಂಗದ 174ನೇ ವಿಧಿಯ ಪ್ರಕಾರ ಘನತೆವೆತ್ತ ರಾಜ್ಯಪಾಲರು 'ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಅಧಿವೇಶನವನ್ನು ಕರೆಯಿರಿ' ಎಂದು ಹೇಳಿದ ಮೇಲೆ ನಾವು ತಮ್ಮೆಲ್ಲರಿಗೂ ನೋಟಿಸ್ ಕಳುಹಿಸಿ ಸದನಕ್ಕೆ ಬನ್ನಿ ಎಂದು ಕರೆದಿದ್ದೇವೆ, ತಾವೆಲ್ಲರೂ ಬಂದಿದ್ದೀರಿ.

**ಶ್ರೀ ಬಿ. ರಾಮಕೃಷ್ಣ:–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಅಂಕಿತ ಹಾಕಿದ ಮೇಲೆ ತಾವು ಸದನವನ್ನು ಕರೆದಿದ್ದೀರಿ ಅದನ್ನು ಒಪ್ಪಬಹುದು. ಆದರೆ, ಅಧಿವೇಶನ ಕರೆಯುವುದಕ್ಕೆ ಕಾರಣವೇನು ಅದರ ಉದ್ದೇಶವೇನು ಎನ್ನುವುದನ್ನು ಹೇಳಬೇಕಾಗುತ್ತದೆ. ಘನತೆವೆತ್ತ ರಾಜ್ಯಪಾಲರು ಸುಮ್ಮನೆ ಸಹಿ ಹಾಕುವುದಿಲ್ಲ. ಸದನ ಪ್ರಾರಂಭ ಮಾಡಲು ಸುಮಾರು ಎರಡು ಗಂಟೆಗಳ ಕಾಲ ಬೆಲ್ ಹಾಕಲಾಗಿದೆ. 2 ಗಂಟೆಗೆ ಬೆಲ್ ಹಾಕಿ, 4 ಗಂಟೆಗೆ ಸದನ ಸೇರಿದೆ.

**ಸಭಾಪತಿಯವರು:–** ಮಂತ್ರಿಗಳು ಇಲ್ಲದಿದ್ದರೆ ನಾನೇನು ಮಾಡಲಿ?

**ಶ್ರೀ ಬಿ. ರಾಮಕೃಷ್ಣ:–** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳು ಇಲ್ಲವೆಂದರೆ ಯಾಕೆ ವಿಶೇಷ ಅಧಿವೇಶನವನ್ನು ಕರೆಯಬೇಕಾಗಿತ್ತು?

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಈ ದಿನ ಪ್ರಶ್ನೋತ್ತರ, ಶೂನ್ಯವೇಳೆ ಇಲ್ಲವೇ?

**ಸಭಾಪತಿಯವರು:–**ಎಲ್ಲರೂ ಮಾತನಾಡುತ್ತಿರೋ, ಒಬ್ಬೊಬ್ಬರೇ ಮಾತನಾಡುತ್ತಿರೋ?

**ಶ್ರೀ ಬಿ. ರಾಮಕೃಷ್ಣ:–** ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿದ ಪ್ರಶ್ನೆಗೆ ಸಮಂಜಸವಾದ ಉತ್ತರ ಸಿಗಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, 4 ಜನ ಮಂತ್ರಿಗಳಿದ್ದಾರೆ. ಸಭಾ ನಾಯಕನಾಗಿ ನಾನು ಇದ್ದೇನೆ. ಮತ್ತೇನು ಬೇಕು? ಕೆಳಮನೆಯಲ್ಲಿ ವಿಪ್. . . . .

**ಸಭಾಪತಿಯವರು:–** ಬಹಳ ಸಮಯದವರೆಗೆ ಬೆಲ್ ಹಾಕಿದ್ದು ನನ್ನ ಮನಸ್ಸಿಗೂ ನೋವನ್ನುಂಟು ಮಾಡಿದೆ. ಆದರೆ, ಪರಿಸ್ಥಿತಿ ಏನು ಎನ್ನುವುದನ್ನು ನಾನು ತಮಗೆ ಹೇಳುತ್ತೇನೆ. ಬೆಲ್ ಹಾಕಿದ ತಕ್ಷಣ ಆಡಳಿತ ಪಕ್ಷದ ಮಾನ್ಯ ಮುಖ್ಯ ಸಚೇತಕರನ್ನು ಕರೆದು, 'ಸಚಿವರನ್ನು ಕರೆಯಿರಿ, ಕೋರಂ ಆದ ತಕ್ಷಣ ಬೆಲ್ ಬಾರಿಸುವುದನ್ನು ನಿಲ್ಲಿಸೋಣ' ಎಂದು ಹೇಳಿದೆ. ಆಗ ಅವರು ತಮ್ಮ ಕಷ್ಟವನ್ನು ಹೇಳಿಕೊಂಡರು. 'ಕೆಳಮನೆಯಲ್ಲಿ ಒಂದು ಮುಖ್ಯವಾದ ವಿಧೇಯಕದ ಬಗ್ಗೆ ಚರ್ಚೆಯಾಗುತ್ತಿದೆ. ಕೆಳಮನೆಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಮಗೊಂದು ವಿಪ್ ಕೊಟ್ಟಿದ್ದಾರೆ, ಕೆಳಮನೆಯ ಸದಸ್ಯರು ಓಟಿಂಗ್ ಬಂದಾಗ ಎಲ್ಲರೂ ಅಲ್ಲಿದ್ದು ಓಟಿಂಗ್ ಮಾಡಬೇಕಾಗುತ್ತದೆ. ಅವರುಗಳಿಗೆ ಓಟಿಂಗ್ ಅಧಿಕಾರ ಇರುವುದು ಅಲ್ಲಿ. ಕೆಳಮನೆಗೆ ಅವರುಗಳು ಬಂದಾಗ, ಅಲ್ಲಿ ಏನಾದರೂ ಗಡಿಬಿಡಿಯಾದರೆ, ನಾವು ಬಹಳ ಇಕ್ಕಟಿಗೆ ಸಿಕ್ಕಿಕೊಳ್ಳುತ್ತೇವೆ ತಾವು ಇದರ ಬಗ್ಗೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬನ್ನಿ ಎಂದು ಹೇಳಿದ್ದಾರೆ' ಎಂದು ಅವರು ಹೇಳಿದ ಮೇಲೆ ನಾನು ಯೋಚನೆ ಮಾಡಿ, 'ಅಲ್ಲಿ ಇರುವಂತಹ ವಾತಾವರಣವನ್ನು ಮತ್ತು ಪರಿಸ್ಥಿತಿಯನ್ನು ನೋಡಿ ಓಟಿಂಗ್ ಸ್ಥಿತಿ ಹತ್ತಿರದಲ್ಲಿ ಇಲ್ಲ, ಇನ್ನೂ ವಿಧೇಯಕದ ಮೇಲೆ ಚರ್ಚೆ ನಡೆಯುತ್ತಿದೆ ಎನ್ನುವ ಪರಿಸ್ಥಿತಿ ಇದ್ದರೆ

ಲಿಸ್ಟ್ ಆಗಿರುವ ಸಚಿವರ ಪೈಕಿ ಕೆಲವರನ್ನು ಕರೆದುಕೊಂಡು ಬನ್ನಿ ಎಂದು ಹೇಳಿದ ಮೇಲೆ ನಮ್ಮ ಮುಖ್ಯ ಸಚೇತಕರು ಹೋಗಿ 3–4 ಜನ ಮಂತ್ರಿಗಳನ್ನು ಕರೆದುಕೊಂಡು ಬಂದಿದ್ದಾರೆ. ನಂತರ ಬೆಲ್ ಬಾರಿಸುವುದನ್ನು ನಿಲ್ಲಿಸುವಂತೆ ಆಜ್ಞೆ ಮಾಡಿದೆ. ನಾನು ಸಭಾಪತಿಯವಾದ ಮೇಲೆ ಬಹುಶ: ಈ ದಿನವೇ ಮೊದಲ ಬಾರಿಗೆ ಬೆಲ್ ಬಹಳ ಸಮಯದವರೆಗೆ ಬಾರಿಸಬೇಕಾದ ಸನ್ನಿವೇಶ ಬಂದಿತು. ಇದರಿಂದ ನನ್ನ ಮನಸ್ಸಿಗೂ ನೋವುಂಟಾಗಿದೆ.

**ಶ್ರೀ ಬಿ. ರಾಮಕೃಷ್ಣ:–** ಸನ್ಮಾನ್ಯ ಸಭಾಪತಿಯವರೇ, ಇದಕ್ಕೇನಾದರೂ ಪರಿಹಾರವನ್ನು ಹುಡುಕಬೇಕಾಗುತ್ತದೆ.

**ಸಭಾಪತಿಯವರು:–**ಪರಿಹಾರವನ್ನು ಹುಡುಕೋಣ.

**ಶ್ರೀ ಬಿ. ರಾಮಕೃಷ್ಣ:–** ಸನ್ಮಾನ್ಯ ಸಭಾಪತಿಯವರೇ, ಇದು ವಿಶೇಷ ಅಧಿವೇಶನ ಅಥವಾ ತುರ್ತು ಅಧಿವೇಶನ ಅಲ್ಲವೆಂದು ಹೇಳುತ್ತಿದ್ದೀರಿ. ಪ್ರಶ್ನೋತ್ತರ ಅವಧಿ ಸಹ ಇಲ್ಲ. ಬೆಳಿಗ್ಗೆ 11 ಗಂಟೆಗೆ ಪ್ರಾರಂಭ ಮಾಡಬೇಕಾಗಿದ್ದ ಅಧಿವೇಶನವನ್ನು 4 ಗಂಟೆಗೆ ಪ್ರಾರಂಭ ಮಾಡಿದ್ದೀರಿ. ಗೌಪ್ಯವಾಗಿರುತ್ತೀರಿ, ವೋಟಿಂಗ್ ಆಗುತ್ತದೆ ಎನ್ನುತ್ತೀರಿ. ಮಂತ್ರಿಗಳು ಇಲ್ಲ, ಸರ್ಕಾರವೇ ಇಲ್ಲವೆಂದು ಹೇಳುತ್ತೀರಿ. ಇದರ ಅರ್ಥ ನನಗೆ ಒಂದು ಚೂರು ಗೊತ್ತಾಗಿಲ್ಲ. ಸರಿಯಾಗಿ ಇದನ್ನು ಬಿಡಿಸಿ ಹೇಳಿ. ಸಭಾಪತಿಯವರು ಹೇಳಿದ್ದನ್ನೇ ನಾನು ಹೇಳುತ್ತಿರುವುದು. ರೆಕಾರ್ಡ್ ತೆಗೆದು ನೋಡಿ. ಸರ್ಕಾರ ಇಲ್ಲವೆಂದರೆ ಅದಕ್ಕೆ ಉತ್ತರವನ್ನು ಕೊಡಿ.

**ಸಭಾಪತಿಯವರು:–** ನಾನು ಸರ್ಕಾರವಿಲ್ಲವೆಂದು ಹೇಳಲಿಲ್ಲ.

**ಶ್ರೀ ಬಿ. ರಾಮಕೃಷ್ಣ:–** ಅಲ್ಲಿಯೇ ರೆಕಾರ್ಡ್ ಇದೆ, ತೆಗೆಸಿ, ನೋಡಿ.

**ಸಭಾಪತಿಯವರು:–** ಸರ್ಕಾರದ ಪರವಾಗಿ ಮಂತ್ರಿಗಳು ಬರುವುದಕ್ಕೆ ಆಗಲಿಲ್ಲವೆಂದು ಹೇಳಿದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರು ಸರ್ಕಾರವಿಲ್ಲವೆಂದು ಹೇಳಿಲ್ಲ, ನೀವು ಸರಿಯಾಗಿ ಕೇಳಿಸಿಕೊಳ್ಳಿ.

**ಸಭಾಪತಿಯವರು:–** ಈಗ ಈ ವಿಷಯದ ಬಗ್ಗೆ ಚರ್ಚೆಯಾಗಬೇಕೇ?

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಮಂತ್ರಿಗಳೇ ಇಲ್ಲವೆಂದರೆ ಅರ್ಥವೇನು? ಸರ್ಕಾರವಿಲ್ಲವೆಂದು ಅರ್ಥ ಅಲ್ಲವೇ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಮಾತನಾಡಿ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರು ಆ ರೀತಿ ಹೇಳಿದರೇ? ಅವರು ಆ ರೀತಿ ಹೇಳಿದರೇ? ಅವರು ಹೇಳದೇ ಇರುವುದನ್ನು ಹೇಳಿದ್ದಾರೆ ಎಂದು ಹೇಳಿದರೆ ಹೇಗೆ? ರೆಕಾರ್ಡ್ ತೆಗೆದು ನೋಡಿ. ಏಕೆ ಆ ರೀತಿ ಹೇಳುತ್ತೀರಾ? ಮಾನ್ಯ ಸಭಾಪತಿಯವರು ನಾನು ಆ ರೀತಿ ಹೇಳಲಿಲ್ಲವೆಂದು ಹೇಳಲಿಲ್ಲವೇ?

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಬೆಲ್ ಆದಾಗ ಮಂತ್ರಿಗಳು ಇಲ್ಲವೆಂದರೆ ಏನು ಅರ್ಥ?

**ಸಭಾಪತಿಯವರು:–** ನೀವು ಏನು ಕೇಳಿದಿರೋ ಅದಕ್ಕೆ ನಾನು ವಿವರಣೆಯನ್ನು ನೀಡಿದ್ದೇನೆ. That ends the matter. ವಿರೋಧ ಪಕ್ಷದ ನಾಯಕರು ಪದ್ಧತಿಯಂತೆ ನಿಲುವಳಿ ಸೂಚನೆಗೆ ಮೊದಲನೆಯ ಅವಕಾಶವನ್ನು ಕೊಡಿ, ಪ್ರಿಲಿಮಿನರಿ ಸಬ್ಮಿಶನ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕೂ ಮೊದಲು 330(ಎ) ಅಡಿಯಲ್ಲಿ ಸದಸ್ಯರು ಏನು ವಿಶೇಷ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ, ಅದಕ್ಕೆ ಅವಕಾಶ ಸಿಕ್ಕಿದರೆ ಅವರಿಗೆ ಅವಕಾಶ ಸಿಗುತ್ತದೆ. ಇಲ್ಲದೇ ಹೋದರೆ ನಾನೇನು ಮಾಡುವುದಕ್ಕಾಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ವಿಶೇಷ ಪ್ರಸ್ತಾವನೆಯನ್ನು ನೀಡಿದಂಥ ಸದಸ್ಯರೇ ಮಾತನಾಡಲಿ. ಅದಾದ ನಂತರ ನಾನು ಮಾತನಾಡುತ್ತೇನೆ. ಅದಕ್ಕೆ ನನ್ನದೇನು ಅಭ್ಯಂತರವಿಲ್ಲ. ಏಕೆಂದರೆ ಅವರು ನಿಯಮ 330(ಎ) ಅಡಿಯಲ್ಲಿ ನೀಡಿರುವ ಸೂಚನೆಗಳು ವ್ಯರ್ಥವಾಗುವುದು ಬೇಡ. ಅವರು ಮಾತನಾಡುವುದಕ್ಕಿಂತ ಮೊದಲು ನನ್ನದೊಂದು ಪ್ರಾರ್ಥನೆ ಇದೆ. ಈಗ ಅಧಿವೇಶನವನ್ನು ಕರೆಯಲಾಗಿದೆ. ಅದನ್ನು ನಾನು ಸ್ವಾಗತಿಸುತ್ತೇನೆ. ಅತಿ ಹೆಚ್ಚು ದಿನಗಳ ಕಾಲ ಅಧಿವೇಶನ ನಡೆಯಬೇಕೆಂಬುದು ನನ್ನ ಅಪೇಕ್ಷೆಯೂ ಸಹ ಆಗಿದೆ. ಮೊದಲನೆಯದಾಗಿ ಸರ್ಕಾರ ಬೆಳಿಗ್ಗೆ 11.00 ಗಂಟೆಗೆ ಏಕೆ ಅಧಿವೇಶನವನ್ನು ಕರೆಯಲಿಲ್ಲವೆಂಬುದು ನನಗೆ ಗೊತ್ತಿಲ್ಲ. ನಾನು ತಮ್ಮ ಹತ್ತಿರ ಪ್ರಾರ್ಥನೆಯನ್ನು ಮಾಡಿದೆ. ಅಧಿವೇಶನವನ್ನು ಕರೆದಿದ್ದೀರಿ, ಬೆಳಿಗ್ಗೆ 11.00 ಗಂಟೆಗೆ ಅಧಿವೇಶನವನ್ನು ಕರೆದಿದ್ದರೆ, ರಾಜ್ಯದಲ್ಲಿರುವಂಥ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಏಕೆ ಮಧ್ಯಾಹ್ನ 2.00 ಗಂಟೆಗೆ ಅಧಿವೇಶನವನ್ನು ಕರೆಯುವಂಥ ವ್ಯವಸ್ಥೆಯನ್ನು ಮಾಡಿದಿರಿ ಎಂದು ಹೇಳಿದ್ದಕ್ಕೆ ಸರ್ಕಾರ ಹೇಳಿದ ಹಾಗೆ ನಾವು ಕೇಳಬೇಕಾಗುತ್ತದೆ ಎಂದು ತಾವು ಹೇಳಿದಿರಿ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ನಾನು ಸರ್ಕಾರವನ್ನು ಪ್ರಾರ್ಥನೆ ಮಾಡುವುದೇನೆಂದರೆ, ಇವತ್ತು ಅಧಿವೇಶನವನ್ನು ಕರೆದು ಆಗಿದೆ. ಒಂದು ದಿನದ ಅಧಿವೇಶನದ ಖರ್ಚು ಎಷ್ಟು ಬರುತ್ತದೆ ಎನ್ನುವುದು ಒಂದು ವಿಚಾರ. ಈಗ ನಾವು ಸುಮಾರು 4.00 ಗಂಟೆಗೆ ಸದನ ಸೇರಿದ್ದೇವೆ. ಬೆಳಿಗ್ಗೆಯಿಂದ ಕುಳಿತು ನಾವು ಚರ್ಚೆ ಮಾಡಿದ್ದರೆ ನಾವು ಅನೇಕ ಸಮಸ್ಯೆಗಳ ಕುರಿತು ಚರ್ಚೆ ಮಾಡಬಹುದಾಗಿತ್ತು.

ಇನ್ನು ಎರಡನೆಯದಾಗಿ ಸರ್ಕಾರದ ಮುಂದೆ ಎಷ್ಟು ಸಮಸ್ಯೆಗಳಿವೆ ಎನ್ನುವುದನ್ನು ವಿರೋಧ ಪಕ್ಷದವರು ತರುವುದನ್ನು ಅವರು ಗಮನಿಸುವುದಕ್ಕೂ ಅವರಿಗೊಂದು ಅವಕಾಶವಾಗುತ್ತಿತ್ತು. ರಾಜ್ಯದ ಜನರ ಸಮಸ್ಯೆಯನ್ನು ವಿರೋಧ ಪಕ್ಷದವರು ಸರ್ಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯವಾಗಿದೆ. ಇವತ್ತು ಅಧಿವೇಶನವನ್ನು ಮಧ್ಯಾಹ್ನ 2.00 ಗಂಟೆಗೆ ಕರೆದು ಆಗಿದೆ. ನಾನು ಖಂಡಿತ ಇದರ ಬಗ್ಗೆ ಬಹಳ ಮುಂದುವರೆಸುವುದಕ್ಕೆ ಇಷ್ಟಪಡುವುದಿಲ್ಲ. ಮುಂದಿನ ಬಾರಿಯಿಂದ ಯಾವುದೇ ಕಾರಣಕ್ಕೂ ಸಹ ಮಧ್ಯಾಹ್ನ 2.00 ಗಂಟೆಗೆ ಅಧಿವೇಶನವನ್ನು ಕರೆಯುವಂಥ ಒಂದು ವ್ಯವಸ್ಥೆ ಇದೆಯಲ್ಲಾ, ಇದು ಒಂದು ವ್ಯವಸ್ಥೆಯೇ ಅಲ್ಲ. ಇನ್ನು ಎರಡನೆಯದಾಗಿ ನಮಗೇನು ಎಲ್ಲಾ ಮಂತ್ರಿಗಳಿದ್ದು ಅವರಿಂದ ನಾವು ಉತ್ತರವನ್ನು ನಿರೀಕ್ಷೆ ಮಾಡುವುದಿಲ್ಲ. ನಾವು ನಮ್ಮ ಅಭಿಪ್ರಾಯವನ್ನು ಹೇಳುತ್ತೇವೆ. ಮಾನ್ಯ ಸಭಾನಾಯಕರಿದ್ದಾರೆ, ಮಂತ್ರಿಗಳಿದ್ದಾರೆ. ಒಬ್ಬರು ಇದ್ದರೆ ಸಾಕು. ವೋಟಿಂಗ್ ದೃಷ್ಟಿಯಿಂದ ಇನ್ನಿತರ ಮಂತ್ರಿಗಳು ಕೆಳಮನೆಗೆ ಹೋಗಬೇಕೆಂದರೆ ಅವರನ್ನು ಕಳುಹಿಸಿ, ನಾನು ಬೇಡವೆಂದು ಹೇಳುವುದಿಲ್ಲ. ಮಾನ್ಯ ಎಸ್.ಆರ್. ಪಾಟೀಲರು ವಿಧಾನ ಪರಿಷತ್ತಿನ ಸದಸ್ಯರು. ಹಾಗಾಗಿ ಅವರಿಗೆ ಕೆಳಮನೆಯಲ್ಲಿ ವೋಟಿಂಗ್ ಮಾಡುವಂಥ ಸಂದರ್ಭ ಇಲ್ಲ. ಅವರು ನಮ್ಮ ಸದನದಲ್ಲಿ ಉಳಿಯಲಿ. ಅನೇಕ ಬಾರಿ ಅವರೇನು ಉತ್ತರವನ್ನು ಕೊಡುತ್ತಾರೆಂದರೆ, ನಾವು ಮಾತನಾಡುವಂಥ ಸಂದರ್ಭದಲ್ಲಿ ಮಂತ್ರಿಗಳಿಲ್ಲವೆಂದು ಹೇಳುತ್ತೇವೆ. ಇವತ್ತಿನ ಪರಿಸ್ಥಿತಿಯಲ್ಲಿ ವೋಟಿಂಗ್ ಬಂದರೆ ಮಂತ್ರಿಗಳು ಕೆಳಮನೆಯಲ್ಲಿ ಉಳಿಯಬೇಕೆಂಬ ಕಾರಣವನ್ನು ತಾವು ನೀಡಿದಿರಿ. ಎಷ್ಟೋ ಸಾರಿ ಮಂತ್ರಿಗಳು ಇಲ್ಲದೇ ಇರುವಂಥ ಸಂದರ್ಭದಲ್ಲಿ ಸರ್ಕಾರ ಯಾವ ರೀತಿಯ ಉತ್ತರವನ್ನು ಕೊಡುತ್ತಾರೆಂದರೆ, ಸದನದಲ್ಲಿ ಅಧಿಕಾರಿಗಳಿದ್ದಾರೆ, ಅವರು ತಾವು ಹೇಳುವುದನ್ನು ಬರೆದುಕೊಳ್ಳುತ್ತಾರೆ ಎನ್ನುತ್ತಾರೆ. ಇವತ್ತೂ ಸಹ ಅವರು ಅದನ್ನೇ ಮಾಡಲಿ. ದಯಮಾಡಿ ಅಧಿವೇಶನವನ್ನು ಕರೆದಂಥ ಸಂದರ್ಭದಲ್ಲಿ ಅದು ಯಾವುದೇ ದಿನವಾಗಲಿ, ದಯಮಾಡಿ ಬೆಳಿಗ್ಗೆ 11.00 ಗಂಟೆಗೆ ಅಧಿವೇಶನವನ್ನು ಕರೆಯಿರಿ. ಮಧ್ಯಾಹ್ನ 2.00 ಗಂಟೆಗೆ ಅಧಿವೇಶನವನ್ನು ಕರೆಯುವಂಥ ಈ ಪದ್ಧತಿ ಇದೆಯಲ್ಲಾ, ಇದು ಹೋಗಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇದನ್ನು ಸರ್ಕಾರ ಸ್ಪಷ್ಟಪಡಿಸಲಿ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಗೌರವವನ್ನು ಕೊಟ್ಟು ಮಾತನಾಡಬೇಕಾಗುತ್ತದೆ. ಘನತೆವೆತ್ತ ರಾಜ್ಯಪಾಲರು ಕಳುಹಿಸಿದ ಆದೇಶ (1) ಅನ್ನು ತಾವು ಪರಾಮರ್ಶಿಸಿದ್ದೀರಿ ಎಂದು ಭಾವಿಸುತ್ತೇನೆ. ಆದೇಶ (1)ರ ಪ್ರಕಾರ ಗೌರವಾನ್ವಿತ ರಾಜ್ಯಪಾಲರೇ ಮಧ್ಯಾಹ್ನ 2.00 ಗಂಟೆಗೆ ವಿಧಾನ ಪರಿಷತ್ತಿನ ಅಧಿವೇಶನವನ್ನು ಕರೆಯುವುದಕ್ಕೆ ಘನತೆವೆತ್ತ ರಾಜ್ಯಪಾಲರಿಗೆ ಇರುವಂಥ ಒಂದು ಅಧಿಕಾರ ಅದು. ಅವರು ಮಧ್ಯಾಹ್ನ 2.00 ಗಂಟೆಗೆ ಅಧಿವೇಶನವನ್ನು ಕರೆಯಿರಿ ಎಂದು ಹೇಳಿದ ಮೇಲೆ ತಾವು ಅದರ ಪ್ರಕಾರ ನಮ್ಮೆಲ್ಲರನ್ನು

ಕರೆದಿದ್ದೀರಿ. ಆದಾಗ್ಯೂ ಕೂಡ ದಿನದ ಸಮಯ ವ್ಯರ್ಥವಾಗಬಾರದೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಇದಕ್ಕೆ ಸರ್ಕಾರ, ತಾವು ಅಥವಾ ಅವರು ಬಾಧ್ಯಸ್ತರಾಗಿಲ್ಲ. ಘನತೆವೆತ್ತ ರಾಜ್ಯಪಾಲರು ಆದೇಶ (1) ರಲ್ಲಿ ವಿಧಾನ ಪರಿಷತ್ತನ್ನು ಕರೆದಿದ್ದಾರೆ ಮತ್ತು ಆದೇಶ (2) ರಲ್ಲಿ ವಿಧಾನ ಸಭೆಯನ್ನು ಕರೆದಿದ್ದಾರೆ. ಶಿಷ್ಠಾಚಾರದ ಪ್ರಕಾರ ಮೊದಲನೆಯ ಆದ್ಯತೆಯನ್ನು ನಮಗೆ ಕೊಟ್ಟಿದ್ದಾರೆ. ಆದೇಶ (1) ರಲ್ಲಿ ವಿಧಾನ ಪರಿಷತ್ತಿಗೆ ದಿನಾಂಕ: 20–04–2015ರಂದು ಮಧ್ಯಾಹ್ನ 2.00 ಗಂಟೆಗೆ ಅಧಿವೇಶನ ಕರೆಯಬೇಕೆಂದು ತಮಗೆ ಆದೇಶ ಬಂದಿದೆ. ಅದರ ಪ್ರಕಾರ ತಾವು ಎಲ್ಲರಿಗೂ ಮಾಹಿತಿ ನೀಡಿದ್ದೀರಿ. ಆದರೂ ಸಹ ಮಾನ್ಯ ವಿರೋಧ ಪಕ್ಷದ ನಾಯಕರ ಸಲಹೆ ಏನಿದೆ, ಬೆಳಗ್ಗಿನ ಅರ್ಧ ದಿವಸ ವ್ಯರ್ಥವಾಗುವುದು ಬೇಡ, ಬೆಳಗ್ಗಿನಿಂದ ರಾಜ್ಯ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಅನುವು ಆಗುತ್ತಿತ್ತು ಎಂದು ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯನ್ನು ನಾವು ಸ್ವೀಕಾರ ಮಾಡುತ್ತೇವೆ.

## 2. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು

(ಅ) **ವಿಷಯ:** ದಿನಾಂಕ: 19–04–2015 ರ ಬೆಳಿಗ್ಗೆ 9–30 ಘಂಟೆ ಸಮಯದಲ್ಲಿ ಹೊಸಕೋಟೆ ನಗರದಲ್ಲಿ ಟೋಲ್ ಹಣ ನೀಡಿಲ್ಲವೆಂದು ಟೋಲ್ ಸಿಬ್ಬಂದಿ ಮರಣಾಂತಿಕ ಹಲ್ಲೆ ಮಾಡಿರುವ ಕುರಿತು.

-----

**ಶ್ರೀಮತಿ ತಾರಾ ಅನೂರಾಧ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ವಂದಿಸುತ್ತೇನೆ. ದಿನಾಂಕ: 19–04–2015ರ ಭಾನುವಾರ ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಹೊಸಕೋಟೆ ನಗರದಲ್ಲಿ ಪಾಸ್ ಇದ್ದರೂ ಟೋಲ್ ಹಣ ನೀಡಿಲ್ಲವೆಂದು ಸ್ಥಳೀಯ ಹುಸ್ಕೂರು ಕೋಡಿ ಗ್ರಾಮದ ನಿವಾಸಿ ಮಂಜುನಾಥ್ ಎಂಬ ವ್ಯಕ್ತಿಯ ಮೇಲೆ ಟೋಲ್‌ಗೇಟ್ ಸಿಬ್ಬಂದಿಗಳು ಮಾರಣಾಂತಿಕ ಹಲ್ಲೆಯನ್ನು ಮಾಡಿ ಕೈಯಲ್ಲಿನ ನರಗಳನ್ನು ಕತ್ತರಿಸಿದ್ದಾರೆ. ನಂತರ ಸ್ಥಳೀಯ ನಾಗರೀಕರು ಆಕ್ರೋಶಗೊಂಡು ಟೋಲ್ ಗೇಟ್‌ಗೆ ಹಾನಿ ಮಾಡಿದ್ದಾರೆ. ಈ ರೀತಿ ಟೋಲ್‌ಗೇಟ್ ಸಿಬ್ಬಂದಿಗಳು ನಾಗರೀಕರ ಮೇಲೆ ಹಲ್ಲೆ ನಡೆಸಿರುವುದು ಇದೇ ಮೊದಲಲ್ಲ ಎನ್ನುವುದನ್ನು ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುತ್ತೇವೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ತುರ್ತು ಅಧಿವೇಶನವನ್ನು ಇದಕ್ಕಾಗಿ ಕರೆಯಬೇಕಾಗಿತ್ತೇ? ಇದೆಲ್ಲಾ ಏನು ಸರ್? ತಾವು ನಮ್ಮನ್ನು ಏಕೆ ಕತ್ತಲೆಯಲ್ಲಿ ಇಟ್ಟಿದ್ದೀರಿ?

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ವೇಳೆ ಇಲ್ಲ.

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೆ, ತಾವು ಹಿರಿಯ ಸದಸ್ಯರು. ಪ್ರಶ್ನೋತ್ತರ ವೇಳೆ ಇಲ್ಲದ ದಿವಸ ಏನು ಮಾಡಬೇಕೆಂದು ನಿಯಮಾವಳಿಗಳ ಪುಸ್ತಕದಲ್ಲಿದೆ. ದಯಮಾಡಿ ತಾವು ಗಮನಿಸಿ. ತಾವು ಹಿರಿಯ ಸದಸ್ಯರು ನಾನು ನಿಮಗೆ ಓದಿ ಹೇಳಬೇಕಾಗಿಲ್ಲ. ದಯಮಾಡಿ ಓದಿ. ವಿಶೇಷ ಪ್ರಸ್ತಾವನೆಗೆ ಅವಕಾಶವಿದೆ. ಅದರಡಿಯಲ್ಲಿ ಮಾನ್ಯ ಸದಸ್ಯರುಗಳು ನೋಟಿಸ್ ಕೊಟ್ಟಿದ್ದಾರೆ. ನಾನೇನು ಮಾಡಲಿ? ಗೊತ್ತಿಲ್ಲದೇ ಇರುವುದರ ಬಗ್ಗೆ ಮಾತನಾಡಬೇಡಿ ಒಳ್ಳೆಯದಲ್ಲ, ನಿಮಗೆ ಅವಮಾನವಾಗುತ್ತದೆ.

**(ಆ) ವಿಷಯ: ದೈಹಿಕ ಶಿಕ್ಷಣ ಶಿಕ್ಷಕರ ನೇಮಕ ಕುರಿತು.**

-----

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ವಿದ್ಯಾರ್ಥಿಗಳ ಶಾರೀರಿಕ, ಬೌದ್ಧಿಕ, ಸಾಮಾಜಿಕ, ನೈತಿಕ ಹಾಗೂ ಸರ್ವತೋಮುಖ ಅಭಿವೃದ್ಧಿ ಹಿನ್ನೆಲೆಯಲ್ಲಿ ಹಿರಿಯ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ರಾಜ್ಯಾದ್ಯಂತ ದೈಹಿಕ ಶಿಕ್ಷಣ ಪಠ್ಯಪುಸ್ತಕಗಳನ್ನು ಪೂರೈಸಿರುವ ಸರ್ಕಾರ, ಸುಮಾರು 47,000 ಹಿರಿಯ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಿಸಲು ಮೀನಾಮೇಷ ಎಣಿಸುತ್ತಿದೆ.

ರಾಜ್ಯ ಹಾಗೂ ರಾಷ್ಟ್ರೀಯ ಪಠ್ಯ ಚೌಕಟ್ಟಿನಲ್ಲಿ ದೈಹಿಕ ಶಿಕ್ಷಣ ಜಾರಿಗೆ ಸಂಬಂಧ ಹಲವು ಸಮಿತಿಗಳು ವರದಿ ಸಲ್ಲಿಸಿದ್ದವು. 2001–02ರಲ್ಲಿ ಕೆ.ಪಿ. ಸಿಂಗ್ ದೇವ್ ಸಮಿತಿ ಹೊಸ ರಾಷ್ಟ್ರೀಯ ನೀತಿ ಅನುಷ್ಠಾನಕ್ಕೆ ಶಿಫಾರಸ್ಸು ಮಾಡಿತ್ತು. 2003–04ರಲ್ಲಿ ದೈಹಿಕ ಶಿಕ್ಷಣವನ್ನು ಎಲ್ಲಾ ಶಾಲೆಗಳಲ್ಲಿ ಕಡ್ಡಾಯ ವಿಷಯವನ್ನಾಗಿ ಪರಿಗಣಿಸಲಾಗಿತ್ತು. 2004–05ರಲ್ಲಿ ರಾಜ್ಯ ಸರ್ಕಾರ ತ್ರೈಮಾಸಿಕ ಶಿಕ್ಷಣ ಪದ್ಧತಿ ಜಾರಿಗೆ ತಂದು ದೈಹಿಕ ಶಿಕ್ಷಣವನ್ನು ಸಹ ಪಠ್ಯದಲ್ಲಿ ಸೇರಿಸಿ ಜೀವನ ವಿಜ್ಞಾನದ ಒಂದು ಅವಿಭಾಜ್ಯ ಅಂಗವಾಗಿ ಪರಿಗಣಿಸಿ ಯೋಗ ಶಿಕ್ಷಣಕ್ಕೆ ಮಹತ್ವ ನೀಡಿತ್ತು. 2005ರಲ್ಲಿ ರಾಷ್ಟ್ರೀಯ ಪಠ್ಯ ಚೌಕಟ್ಟು ಹಾಗೂ ಪ್ರೊ॥ ಎಲ್.ಆರ್. ವೈದ್ಯನಾಥನ್ ವರದಿ ಆಧರಿಸಿ ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಇಲಾಖೆ ರಚಿಸಿರುವ ಪಠ್ಯಪುಸ್ತಕವನ್ನು ಪರಿಶೀಲಿಸಿ ಈ ಪಠ್ಯಕ್ರಮಗಳನ್ನು 1–5ನೇ ತರಗತಿ ಮತ್ತು 6–7ನೇ ತರಗತಿ, 8–10ನೇ ತರಗತಿಗಳಿಗೆ ಅಳವಡಿಸಿಕೊಳ್ಳಲು ಆದೇಶ ನೀಡಲಾಗಿತ್ತು.

ಇದರನ್ವಯ ಸರ್ಕಾರ 6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ದೈಹಿಕ ಪಠ್ಯಪುಸ್ತಕಗಳನ್ನು ಇರಿಸಿದೆ. ಆದರೆ ದೈಹಿಕ ಶಿಕ್ಷಣ ಪಠ್ಯ ಬೋಧನೆಗೆ ಶಿಕ್ಷಕರೇ ಇಲ್ಲದಂತಾಗಿದೆ. 7,000 ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಿದ್ದರೆ, ಸುಮಾರು 47,000 ಸರ್ಕಾರಿ, ಅನುದಾನಿತ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರಿಲ್ಲ. ಇದರಿಂದ ದೈಹಿಕ ಶಿಕ್ಷಣ ಪಠ್ಯ ಬೋಧನೆ ಇಲ್ಲದೇ ವಿದ್ಯಾರ್ಥಿಗಳು ಪರದಾಡುವಂತಾಗಿದೆ.

ಆದುದರಿಂದ ಶಿಕ್ಷಣದ ಅವಿಭಾಜ್ಯ ಅಂಗವಾಗಿರುವ ದೈಹಿಕ ಶಿಕ್ಷಣ ನೀಡಲು ಅಗತ್ಯವಿರುವ ದೈಹಿಕ ಶಿಕ್ಷಕರ ನೇಮಕಾತಿಗಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸರಕಾರವನ್ನು ನಿಯಮ 330ಎ ಅನ್ವಯ ಒತ್ತಾಯಿಸುತ್ತಿದ್ದೇನೆ.

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಸದರಿ ವಿಚಾರವಾಗಿ ಉತ್ತರವನ್ನು ನಂತರ ಒದಗಿಸಲಾಗುವುದು.

**ಶ್ರೀ ಸಂದೇಶ್ ನಾಗರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಿಯಮಾವಳಿಗಳ ಪುಸ್ತಕದಲ್ಲಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಕಾರ್ಯಕಲಾಪಗಳ ಪಟ್ಟಿಯಲ್ಲಿ ವಿಷಯ ಬಂದಿದ್ದರೆ ನಾವು ಸಹ ವಿಶೇಷ ಪ್ರಸ್ತಾವನೆಗಳ ಅಡಿಯಲ್ಲಿ ಸೂಚನೆಯನ್ನು ಕೊಡುತ್ತಿದ್ದೆವು. ನಾವು ಹೇಳುತ್ತಿದ್ದೇವೆ, ಇವತ್ತು ಯಾರೂ ಸಹ ಉತ್ತರವನ್ನು ಕೊಡಬೇಡಿ ಎಂದು ಹೇಳುತ್ತೇನೆ.

**ಸಭಾಪತಿಯವರು:–** ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಮ್ಮ ನಿಯಮಾವಳಿಗಳ ಪುಸ್ತಕದಲ್ಲಿ ನಾವು ಏನೇನು, ಯಾವ್ಯಾವ ರೀತಿ ಅಧಿವೇಶನವನ್ನು ನಡೆಸಬೇಕೆಂದು ಸ್ಪಷ್ಟವಾಗಿ ಹೇಳಲಾಗಿದೆ. ಅದರಲ್ಲಿ ನಿಯಮ 330ಎ ಅನ್ನು ದಯಮಾಡಿ ತಾವುಗಳು ಓದಿ. ಅದರಲ್ಲೇನಿದೆ ಎಂದರೆ, ಯಾವತ್ತು ಪ್ರಶ್ನೋತ್ತರ ವೇಳೆ ಇರುವುದಿಲ್ಲ, ಶೂನ್ಯ ವೇಳೆಗೆ ಅವಕಾಶವಿರುವುದಿಲ್ಲ, ಅಂತಹ ದಿವಸ ವಿಶೇಷ ಪ್ರಸ್ತಾವನೆಯನ್ನು ಮಾಡಲಿಕ್ಕೆ ಸದನ ಪ್ರಾರಂಭವಾದ ತಕ್ಷಣ ಅವಕಾಶ ಕೊಡುವುದಕ್ಕೆ 330ಎ ಅಡಿಯಲ್ಲಿ ನೋಟಿಸ್‌ಗಳನ್ನು ಕೊಟ್ಟರೆ ಅದನ್ನು ಸದಸ್ಯರು ಸರ್ಕಾರದ ಗಮನಕ್ಕೆ ತರುವುದಕ್ಕೆ ಮತ್ತು ಸರ್ಕಾರ ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಇದೆ.

**(4.00 ಗಂಟೆ)**

ಅವರು ನಿಯಮ 330ಎ ಅಡಿಯಲ್ಲಿ ನನಗೆ ನೋಟಿಸ್ ಕೊಟ್ಟಿದ್ದಾರೆ. ನಾನೂ ಪುಸ್ತಕವನ್ನು ತೆಗೆದು ನೋಡಿದೆ. ನಿಯಮ 330ಎ ಪ್ರಕಾರ ಅವರು ನೋಟಿಸ್ ಕೊಟ್ಟಿದ್ದರೆ ನಾನು ಅದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಹಾಗಾಗಿ ನಾನು ಅವಕಾಶ ಕೊಟ್ಟಿದ್ದೇನೆ. ಇದರ ಅಡಿಯಲ್ಲಿ ತರುವ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರ, ಶೂನ್ಯವೇಳೆ ಅಡಿ ಪ್ರಸ್ತಾಪಿಸುವಾಗ ಹೇಗೆ ಉತ್ತರ ಕೊಡುತ್ತದೆಯೋ ಅಂದರೆ, ವಿಷಯವನ್ನು ಪ್ರಸ್ತಾಪಿಸಿದ ವೇಳೆಯಲ್ಲೇ ಉತ್ತರ ಕೊಡಬಹುದು ಅಥವಾ ನಂತರ ಉತ್ತರ

ಕೊಡಬಹುದು ಅಥವಾ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಂದು ಉತ್ತರ ಕೊಡಬಹುದು. ಈ ಅವಕಾಶವನ್ನು ಇಲ್ಲಿ ಉಪಯೋಗಿಸಿಕೊಂಡಿದ್ದೇನೆ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಅಜೆಂಡಾದಲ್ಲಿ "ಕಾರ್ಯದರ್ಶಿಯವರ ವರದಿ" ಎನಿದೆ, ಅದಾದನಂತರ ಈ ನಿಯಮದ ಅಡಿ ಮಾತನಾಡುವ ವಿಚಾರ ಏಕೆ ಬರಲಿಲ್ಲ? ಅಜೆಂಡಾದಲ್ಲಿ ಬಂದಿದ್ದರೆ ನಮಗೂ ಗೊತ್ತಾಗುತ್ತಿತ್ತು, ನಾವೂ ಈ ನಿಯಮದ ಅಡಿ ನೋಟಿಸ್ ಕೊಡುತ್ತಿದ್ದೆವು.

**ಸಭಾಪತಿಗಳು:–** ಅದು ಬೇರೆ. ಕಳೆದ ಅಧಿವೇಶನದಲ್ಲಿ . . . . .

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ನಿಯಮಾವಳಿ ಪುಸ್ತಕದಲ್ಲಿ ತಾವು ಹೇಳಿದಂತೆ ಇರಬಹುದು ಆದರೆ ಅದು ಅಜೆಂಡಾದಲ್ಲಿ ಬಂದಿಲ್ಲ. ಅಜೆಂಡಾದಲ್ಲಿ ಬಂದಿದ್ದರೆ ನಮಗೂ ಗೊತ್ತಾಗುತ್ತಿತ್ತು. ಅಜೆಂಡಾ ನಿನ್ನೆ ಸಾಯಂಕಾಲ ಬಂತು . .

**ಸಭಾಪತಿಗಳು:–** ಅಜೆಂಡಾದಲ್ಲಿ ಬರುವುದಿಲ್ಲ. ಶೂನ್ಯ ವೇಳೆ ಬಗ್ಗೆಯೂ ಅಜೆಂಡಾದಲ್ಲಿ ಇರುವುದಿಲ್ಲ. ಇದೂ ಕೂಡ ಹಾಗೆಯೇ ಆಗಿದೆ . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಹಿರಿಯ ಸದಸ್ಯರು ದಯವಿಟ್ಟು ರೂಲ್ಸ್ ಪುಸ್ತಕವನ್ನು ತೆಗೆದು ನೋಡಿ. ಈ ರೀತಿ ಚರ್ಚೆ ಮಾಡಬೇಡಿ. ನಿಯಮಾವಳಿಗಳ ಪುಸ್ತಕದಲ್ಲಿ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ. If you have gone through the provisions of this Rules of Procedure, you would not have raised this point.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಈ ರೀತಿ ಮಾಡುತ್ತಿರುವವರು ಅಧಿಕಾರಿಗಳು . . .

## 3. ಸದನದಲ್ಲಿ ಮಾನ್ಯ ಬಸವೇಶ್ವರರ ಹಾಗೂ ಡಾ॥ ಅಂಬೇಡ್ಕರ್‌ರವರ ಭಾವಚಿತ್ರಗಳನ್ನು ಹಾಕುವ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್:–** ಮಾನ್ಯ ಸಭಾಪತಿಗಳೆ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾಳೆ ಬಸವ ಜಯಂತಿ ಇದೆ. 12ನೇ ಶತಮಾನದಲ್ಲಿ ಮಾನ್ಯ ಬಸವಣ್ಣನವರು ಇಂತಹ ಅನುಭವ ಮಂಟಪವನ್ನು ನಡೆಸಿದ್ದರು. ಮತ್ತೆ, ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರವನ್ನು ಸದನದಲ್ಲಿ ಹಾಕುವುದಕ್ಕೆ ಸಂಬಂಧಪಟ್ಟಂತೆ ತಾವು ಒಪ್ಪಿಗೆ ಕೊಟ್ಟಿದ್ದೀರಿ, ಆದರೆ ಇದುವರೆಗೂ ಹಾಕಿಲ್ಲ. ನಾವು ಡಾ: ಅಂಬೇಡ್ಕರ್‌ರವರ 125ನೇ ಜನ್ಮದಿನಾಚರಣೆ ಮಾಡುತ್ತಿದ್ದೇವೆ. ಹಾಗಾಗಿ ಈ ಇಬ್ಬರು ಮಹನೀಯರ ಭಾವಚಿತ್ರಗಳನ್ನು ಹಾಕಬೇಕು, ಇಲ್ಲದಿದ್ದರೆ ನಮಗೆಲ್ಲ ಅವಮಾನ ಆಗುತ್ತದೆ. ನಮಗೆ ಸಂವಿಧಾನದ ಪರಿಕಲ್ಪನೆ ಹಾಗೂ ಕಾನೂನು ಕೊಟ್ಟಂಥ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರ ಇಲ್ಲದೇ ಹೋದರೆ ನಮಗೆ ಬಹಳ ನೋವಾಗುತ್ತದೆ. ಮಾನ್ಯ ಬಸವೇಶ್ವರರ ಹಾಗೂ ಡಾ: ಅಂಬೇಡ್ಕರ್‌ರವರ ಭಾವಚಿತ್ರಗಳನ್ನು ಹಾಕಬೇಕೆಂದು ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಗಳು:–** ಸದನದಲ್ಲಿ ಒಂದು ವಿಷಯ ಬಂದಾಗ ಅದರ ಬಗ್ಗೆ ಪೂರ್ತಿಯಾಗಿ ತಿಳಿದುಕೊಳ್ಳಬೇಕು, ತಿಳಿದುಕೊಳ್ಳದೇ ಮಾತನಾಡಬಾರದು. ಸದನದ ಗಮನಕ್ಕೆ ಒಂದು ವಿಷಯ ತರಬಯಸುತ್ತೇನೆ. ನಮ್ಮ ಸದನದಲ್ಲಿ ಬಹಳ ವರ್ಷಗಳ ಕಾಲ ಪರಮಪೂಜ್ಯ ಮಹಾತ್ಮ ಗಾಂಧಿಯವರ ಭಾವಚಿತ್ರ ಬಿಟ್ಟರೆ ಬೇರೆ ಯಾವುದೇ ಭಾವಚಿತ್ರಗಳಿರಲಿಲ್ಲ. ಖಾಲಿ ಇರುವ ಜಾಗಗಳಲ್ಲಿ ನಮ್ಮ ದೇಶದ ಹಿರಿಯ ನಾಯಕರುಗಳ ಭಾವಚಿತ್ರಗಳನ್ನು ಹಾಕಬೇಕು ಎಂಬ ಬಗ್ಗೆ ಒಮ್ಮೆ ಚರ್ಚೆ ಆಗಿ ಸದನ ಒಂದು ನಿರ್ಣಯ ಮಾಡಿತ್ತು. ಸುಮಾರು 5 ವರ್ಷದ ಕೆಳಗೆ ನಡೆದ ಘಟನೆ ಇದು. ಇದು ಚರ್ಚೆಗೆ ಬಂದಾಗ ಚರ್ಚೆಯಲ್ಲಿ ಭಾಗವಹಿಸಿದ ಆವತ್ತಿನ ಗೌರವಾನ್ವಿತ ಸದಸ್ಯರ ಅಭಿಪ್ರಾಯ ಏನಿತ್ತು ಎಂದರೆ, ವಿಧಾನಸಭೆಯಲ್ಲಿ ತುಂಬಾ ಜನ ನಾಯಕರುಗಳ ಭಾವಚಿತ್ರಗಳಿವೆ, ಆದರೆ ಕೌನ್ಸಿಲ್‌ನಲ್ಲಿ ಯಾರದ್ದೂ ಇಲ್ಲ, ಇಲ್ಲಿ ಭಾವಚಿತ್ರಗಳನ್ನು ಹಾಕುವಾಗ, ವಿಧಾನಸಭೆಯಲ್ಲಿ ಯಾವ ಹಿರಿಯ ನಾಯಕರ ಭಾವಚಿತ್ರ ಇಲ್ಲವೋ, ಮಿಸ್ ಆಗಿದೆಯೋ ಅಂಥವರ ಭಾವಚಿತ್ರಗಳನ್ನು ಇಲ್ಲಿ ಹಾಕಿ ಎಂದು ಹೇಳಿದರು. ಆಗ ಈ 4 ಮಹನೀಯರುಗಳ ಹೆಸರು ಪ್ರಸ್ತಾಪ ಆಗಿ, ಇವರ ಭಾವಚಿತ್ರಗಳನ್ನು ಹಾಕಬೇಕು ಎಂಬ ಬಗ್ಗೆ ಬಿಎಸಿಯಲ್ಲಿ ಚರ್ಚೆಯಾಗಿ, ನಿರ್ಣಯ ಆಗಿ ಪ್ರಸ್ತುತ ಇರುವ ನಾಯಕರುಗಳ ಭಾವಚಿತ್ರಗಳನ್ನು ಹಾಕಲಾಯಿತು. ಇದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಹಾಗೆ ಮಾಡದೇ ಇದ್ದಿದ್ದರೆ, ಅವರ ಭಾವಚಿತ್ರವನ್ನು ಬಿಟ್ಟು ಇವರ ಭಾವಚಿತ್ರವನ್ನು ಹಾಕಿದರು, ಇವರ ಭಾವಚಿತ್ರವನ್ನು ಬಿಟ್ಟು ಅವರ

ಭಾವಚಿತ್ರವನ್ನು ಹಾಕಿದರು ಎನ್ನುವ ಮಾತು ಬರುತ್ತಿತ್ತು. ಈಗ ಬಹಳಷ್ಟು ಜನ ಹೊಸ ಸದಸ್ಯರು ಇದ್ದೀರಿ, ಆ ಚರ್ಚೆ ನಡೆದಾಗ ಕೆಲವು ಜನ ಸದಸ್ಯರು ಇರಲಿಲ್ಲ. ತದನಂತರ ಈಗ, ಭಾರತರತ್ನ ಬಾಬಾಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರವನ್ನೂ ಹಾಕಬೇಕು ಎಂದು ಸಭೆ ನಿರ್ಣಯ ಮಾಡಿದೆ. ಆ ನಿರ್ಣಯದ ಹಿನ್ನೆಲೆಯಲ್ಲಿ ನಾನು ಒಂದು ಸಭೆ ಮಾಡಿದೆ. ಒಬ್ಬ ವ್ಯಕ್ತಿಯ ಭಾವಚಿತ್ರ ಅನೇಕ ತರಹ ಇರುತ್ತದೆ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರ ಯಾವರೀತಿ ಇರಬೇಕು, ಎಲ್ಲಿ ಹಾಕಬಹುದು, ಎಲ್ಲಿ ಫಿಟ್ ಮಾಡಬಹುದು ಎನ್ನುವುದರ ಬಗ್ಗೆ ಸಭಾನಾಯಕರು, ವಿರೋಧ ಪಕ್ಷದ ನಾಯಕರು, ಮುಖ್ಯ ಸಚೇತಕರುಗಳು ಹಾಗೂ ಮಾನ್ಯ ಹೊರಟ್ಟಿಯವರನ್ನೂ ಕರೆದು ಒಂದು ಸಭೆ ಮಾಡಿದೆ. ಆ ಸಭೆ inconclusive ಆಗಿದೆ, complete ಆಗಿಲ್ಲ. ಸದನದಲ್ಲಿ ಈಗ ನಾಲ್ಕು ಭಾವಚಿತ್ರಗಳನ್ನು ಹಾಕಿದ್ದೇವೆ, 5ನೇ ಭಾವಚಿತ್ರವನ್ನು ಎಲ್ಲಿ ಫಿಟ್ ಮಾಡಬೇಕು ಎನ್ನುವ ಸಮಸ್ಯೆ ಬಂತು. ಏಕೆಂದರೆ symmetry ಬರಬೇಕಾಗುತ್ತದೆ. ಭಾರತರತ್ನ ಬಾಬಾಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರ ಹಾಕುವುದರ ಬಗ್ಗೆ ಯಾರದ್ದೇ ಭಿನ್ನಾಭಿಪ್ರಾಯ ಇಲ್ಲ, ಯಾರೂ ಬೇಡ ಎಂದು ಹೇಳಿಲ್ಲ ಅಥವಾ ಇದೇಕೆ ಬೇಕು ಎಂದು ಯಾರೂ ಹೇಳಿಲ್ಲ. ಅವರ ಭಾವಚಿತ್ರವನ್ನು ಹಾಕಬೇಕೆಂದು ಇವತ್ತು ಎಲ್ಲರೂ ಹೇಳುತ್ತಿದ್ದಾರೆ. ವಿಧಾನಸಭೆಯಲ್ಲಿ ಈ ಮಹನೀಯರ ಭಾವಚಿತ್ರ ಇದ್ದುದರಿಂದ ಇಲ್ಲಿ ಹಾಕಿರಲಿಲ್ಲ ಅಷ್ಟೆ. ಆದರೆ ಈಗ ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಮಾನ್ಯ ಸದಸ್ಯರು ಈಗ ಒಂದು ಹೊಸ ಸಲಹೆ ಕೊಟ್ಟಿದ್ದಾರೆ. ಬಸವಣ್ಣನವರ ಭಾವಚಿತ್ರವನ್ನು ಸೇರಿಸಿಬಿಟ್ಟರೆ ಒಟ್ಟು ಆರು ಭಾವಚಿತ್ರಗಳಾಗುತ್ತವೆ, ಆಗ ಸರಿಹೋಗುತ್ತದೆ ದಯವಿಟ್ಟು ಮಾಡಿ ಎಂದು ಹೇಳಿದರು. . . .

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಗಳೆ, ಕೆಂಪೇಗೌಡರ ಭಾವಚಿತ್ರವನ್ನು ಸೇರಿಸಿಬಿಡಿ . . .

**ಸಭಾಪತಿಗಳು:–** ಆಗ ಒಟ್ಟು 7 ಭಾವಚಿತ್ರಗಳಾಗುತ್ತವೆ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಆಗಲಿ, 7 ಭಾವಚಿತ್ರಗಳಾದರೇನು, ಒಂದೊಂದನ್ನೂ ಸೇರಿಸುತ್ತಾ ಹೋಗಿ, 12 ಭಾವಚಿತ್ರಗಳಾಗಲಿ. ಬಸವಣ್ಣನವರ ಭಾವಚಿತ್ರವನ್ನು ಸೇರಿಸಿ, ಕೆಂಪೇಗೌಡರ ಭಾವಚಿತ್ರವನ್ನು ಏಕೆ ಬಿಡುತ್ತೀರಿ? ಮೇಲ್ಭಾಗದಲ್ಲಿ ಸಾಕಷ್ಟು ಜಾಗ ಇದೆ. 12 ಭಾವಚಿತ್ರಗಳನ್ನು ಹಾಕಬಹುದು . . .

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ದೇವರಾಜ್ ಅರಸುರವರ ಭಾವಚಿತ್ರವನ್ನೂ ಹಾಕಬೇಕು . . .

**ಶ್ರೀಮತಿ ಎ.ವಿ. ಗಾಯಿತ್ರಿ ಶಾಂತೇಗೌಡ:–** ಕನಕದಾಸರ ಭಾವಚಿತ್ರವೂ ಇರಬೇಕಾಗುತ್ತದೆ . . .

**ಸಭಾಪತಿಗಳು:–** ನಾನು ಸಭೆಯ ಗಮನಕ್ಕೆ ವಿಷಯ ತಂದಿದ್ದೇನೆ. ಈ ಕುರಿತು ಓಪನ್ ಆಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೆ, ಭಾರತರತ್ನ ಡಾ: ಬಾಬಾಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರ ಹಾಕುವುದಕ್ಕೆ ಸಂಬಂಧಪಟ್ಟಂತೆ ನಾವು ನಿರ್ಣಯ ಕೈಗೊಂಡಿದ್ದೇವೆ. ಅದು symmetry ಆಗಬೇಕು. ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ಒಂದು ಸಲಹೆ ಮಾಡಿದರು. ತಮ್ಮ ಚೇಂಬರ್‌ನಲ್ಲಿ ಕರೆದು ಅದರ ಬಗ್ಗೆ ಚರ್ಚೆ ಮಾಡಿ.

**ಸಭಾಪತಿಗಳು:–** ಅದರ ಬಗ್ಗೆ ನಿಮ್ಮೆಲ್ಲರನ್ನು ಕರೆದು ಚರ್ಚೆ ಮಾಡುತ್ತೇನೆ. Not in this House. ನಾನೊಂದು ಸಮಿತಿ ಮಾಡಿದ್ದೇನೆ, ಆ ಸಮಿತಿಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡೋಣ.

**ಶ್ರೀ ಸಯದ್ ಮುಧೀರ್ ಆಗಾ:–** ಮಾನ್ಯ ಸಂದೇಶ್ ನಾಗರಾಜ್‌ರವರೂ ಒಂದು ಸಲಹೆ ಕೊಟ್ಟರು. ಅದನ್ನೂ ದಯವಿಟ್ಟು ಗಮನದಲ್ಲಿಟ್ಟುಕೊಳ್ಳಿ.

**ಸಭಾಪತಿಗಳು:–** ಆಯಿತು, ನೋಡೋಣ. ದಯವಿಟ್ಟು ಕುಳಿತುಕೊಳ್ಳಿ. (ಗೊಂದಲ) ಈಗ ನನ್ನ ಮುಂದೆ ನಿಲುವಳಿ ಸೂಚನೆ ಅಡಿ ಒಂದು ನೋಟಿಸ್ ಬಂದಿದೆ. ಈ ರೀತಿ ನೋಟಿಸ್ ಕೊಟ್ಟಾಗ ನಮ್ಮ ನಿಯಮಾವಳಿಗಳ ಪ್ರಕಾರ 6–8 ನಿಮಿಷಗಳ ಕಾಲ, ಈ ನೋಟಿಸನ್ನು ಏಕೆ ಕೊಟ್ಟಿದ್ದಾರೆ, ವಿಷಯವೇನು ಎಂಬುದನ್ನು ಹೇಳಬೇಕಾಗುತ್ತದೆ. ಅವರು ಹೇಳಿದ ಮೇಲೆ ಅದು ನಿಲುವಳಿ ಸೂಚನೆ ಅಡಿ ತೆಗೆದುಕೊಳ್ಳಬಹುದೋ ಇಲ್ಲವೋ ಎನ್ನುವುದರ ಬಗ್ಗೆ ನನ್ನ ನಿರ್ಣಯ ತಿಳಿಸುತ್ತೇನೆ. ಮೊದಲು ಅವರಿಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಇರುತ್ತದೆ. ಸಹಿ ಮಾಡಿರುವಂಥ ಯಾರಾದರೂ ಒಬ್ಬ ಸದಸ್ಯರು ಸಬ್‌ಮಿಷನ್ ಮಾಡಬಹುದು.

## 4. ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

## ವಿಷಯ: ಅಕಾಲಿಕ ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರ ಬಗ್ಗೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ನಾನು ಹುಟ್ಟಿದಾಗಿನಿಂದ, ನಾನು ಗಮನಿಸಿರುವ ಪ್ರಕಾರ, ಭತ್ತ ಬೆಳೆದಿದ್ದ ಲಕ್ಷಾಂತರ ಎಕರೆ ಭೂಮಿಯಲ್ಲಿ ದೊಡ್ಡ ದೊಡ್ಡ ಆಲಿಕಲ್ಲು ಬಿದ್ದು ನಾಶ ಆಗಿರುವುದು ಇದು ಮೊದಲನೆಯದು. ನಮ್ಮ ಕೊಪ್ಪಳ ಭಾಗದ, ಯಾದಗಿರಿ ಭಾಗದ ಪ್ರಮುಖರು ತಕ್ಷಣ ಬರಬೇಕು ಎಂದು ಹೇಳಿದಾಗ ನಾನು, ಮಾನ್ಯ ಹಾಲಪ್ಪ ಆಚಾರ್, ಆ ಭಾಗದ ಎಂಪಿ ಆದ ಮಾನ್ಯ ಸಂಗಣ್ಣ ಕರಡಿಯವರೂ ಸೇರಿದಂತೆ ಎಲ್ಲಾ ಪ್ರಮುಖರನ್ನು ಕರೆದುಕೊಂಡು ಅಲ್ಲಿಗೆ ಹೋಗಿ ನೋಡಿದಾಗ, ಪ್ರಕೃತಿ ಏಕಿಷ್ಟು ರೈತರ ಮೇಲೆ ಮುನಿಸಿಕೊಳ್ಳುತ್ತಿದೆ ಎಂದೆನಿಸಿ ಮನಸ್ಸಿಗೆ ತುಂಬಾ ನೋವಾಯಿತು. ವಿಜಯಪುರ, ಕೊಪ್ಪಳ, ರಾಯಚೂರು, ಬಳ್ಳಾರಿ, ಕಲಬುರಗಿ, ಯಾದಗಿರಿ, ಬೀದರ್ ಈ ರೀತಿ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅಕಾಲಿಕ ಮಳೆ ಮತ್ತು ಆಲಿಕಲ್ಲು ಮಳೆಯಿಂದ ಬೆಳೆ ನಾಶವಾಗಿದೆ. ಈ ಪ್ರದೇಶಗಳಲ್ಲಿ ಭತ್ತ ಜಮೀನಿನಲ್ಲಿ ಮಲಗಿಕೊಂಡಿರುವುದು ಅಷ್ಟೇ ಅಲ್ಲ, ಭತ್ತದ ಪೈರು ನೀರಿನಲ್ಲಿ ಬಿದ್ದುಬಿಟ್ಟಿದೆ. ಮಂತ್ರಿಗಳಾದ ಮಾನ್ಯ ಶರಣಪ್ರಕಾಶ್‌ರವರೂ ಬಂದಿದ್ದರು. ನಾನು ಮತ್ತು ಅವರು ಒಂದು ಸಭೆಯಲ್ಲಿ ಭಾಗವಹಿಸಿ. ರೈತರ ಜೊತೆ ಕುಳಿತು ಪರಿಸ್ಥಿತಿಯನ್ನು ನೋಡಿದ್ದೇವೆ. ನಾವು ಕಲ್ಪನೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಕಂದಾಯ ಮಂತ್ರಿಗಳೇ, ಅಂತಹ ಒಂದು ಸ್ಥಿತಿಯನ್ನು ನಾನು ನನ್ನ ಜೀವಮಾನದಲ್ಲೇ ನೋಡಿಲ್ಲ. ಬೆಳೆ ಎಷ್ಟರಮಟ್ಟಿಗೆ ನಾಶವಾಗಿದೆ ಎಂದರೆ . . . ಆ ರೈತರು ಬಾಯಿಬಿಟ್ಟು ಹೇಳಿದ್ದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಂದರೆ, ಅವರು ಬಾಯಿಬಿಟ್ಟು ಹೇಳಿದ್ದೇನೆಂದರೆ, ವಯಸ್ಸಿಗೆ ಬಂದಂತಹ ಯುವಕನನ್ನು ಹುಟ್ಟಿಸಿ, ಬೆಳೆಸಿ ಸಾಕಿ ಸಲುಹಿದ ಮೇಲೆ ತಂದೆ ತಾಯಿ ಅವನ ಮೇಲೆ ಜೀವ ಇಟ್ಟುಕೊಂಡಿರುವಂತಹ ಸಂದರ್ಭದಲ್ಲಿ ಅವನು ಸತ್ತರೆ ಏನಾಗುತ್ತದೆ ಆ ಸ್ಥಿತಿಯಲ್ಲಿ ನಾವಿದ್ದೇವೆ ಎಂದು ಹೇಳಿದರು. ಒಬ್ಬೊಬ್ಬರ ಮಾತು ಕೇಳಿ ಕರುಳು ಕಿತ್ತು ಬಂತು. ಒಬ್ಬ ಸರ್, ನಾನು ಎರಡು ಎಕರೆ, ಮೂರು ಎಕರೆ ಗುತ್ತಿಗೆ ತೆಗೆದುಕೊಂಡಿದ್ದೇನೆ, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಅಕಸ್ಮಾತ್ ಏನಾದರು ಪರಿಹಾರ ಸಿಕ್ಕಿದರೆ ನನಗೆ ಸಿಗುವುದಿಲ್ಲ. ನಾನು ಅವನು ಹೇಳಿರುವುದನ್ನೇ ಹೇಳುತ್ತಿದ್ದೇನೆ. ನಾನು ಎರಡು ಎಕರೆ ಗುತ್ತಿಗೆ ತೆಗೆದುಕೊಂಡಿದ್ದೆ, ಸುಮಾರು 25 ರಿಂದ 30 ಸಾವಿರ ರೂಪಾಯಿಗಳವರೆಗೆ ನಾನು ಖರ್ಚು ಮಾಡಿದ್ದೇನೆ. ಅಂದರೆ, ಎರಡು ಎಕರೆ ಸೇರಿ 60 ಸಾವಿರ ರೂಪಾಯಿ ಖರ್ಚು ಮಾಡಿದ್ದೇನೆ. ನನ್ನ ಪರಿಸ್ಥಿತಿ ಏನೆಂದರೆ, ನನ್ನ ಹೆಂಡತಿ ತಾಳಿ ಒಂದು ಬಿಟ್ಟು ಉಳಿದಷ್ಟೂ ಕೂಡ ನಾನು ಕಳೆದುಕೊಂಡಿದ್ದೇನೆ. ನನಗೆ ಈ ಭತ್ತದ

ಮೇಲೆಯೇ ನನ್ನ ಪೂರ್ಣ ಜೀವನ ಇತ್ತು ಎಂದು ಹೇಳಿದರು. ಅವರಿಗೆ ಉತ್ತರ ಕೊಡುವುದಕ್ಕೆ ನಮ್ಮ ಹತ್ತಿರ ಏನು ಉತ್ತರ ಇರಲಿಲ್ಲ. ತಾವು ಹೋಗಿ ನೋಡಿದ್ದೀರಿ. ಏಕೆಂದರೆ, ಕೇಂದ್ರ ಸರ್ಕಾರ ಇವತ್ತು ಪರಿಹಾರವನ್ನು ಸ್ವಲ್ಪ ಸಡಿಲಿಕೆ ಮಾಡಿದೆ. ಮುಂಚೆ ಒಂದು ಹೆಕ್ಟೇರ್‌ಗೆ 9,000 ರೂಪಾಯಿ ಇತ್ತು. ಈಗ ಒಂದು ಹೆಕ್ಟೇರ್‌ಗೆ 13,500 ರೂಪಾಯಿ ಮಾಡಿದ್ದಾರೆ. ಮುಂಚೆ ಎಷ್ಟೇ ಹೆಕ್ಟೇರ್ ಇದ್ದರೂ ಕೂಡ ಒಂದೇ ಹೆಕ್ಟೇರ್‌ಗೆ ಪರಿಹಾರ ಕೊಡುತ್ತಿದ್ದರು. ಈಗ ಡಬಲ್ ಮಾಡಿದ್ದಾರೆ. ಮುಂಚೆ 50 ಪರ್ಸೆಂಟ್ ನಾಶವಾದರೆ ಮಾತ್ರ ಕೊಡುತ್ತಿದ್ದರು, ಈಗ 30 ಪರ್ಸೆಂಟ್ ನಾಶವಾದರೂ ಕೊಡುತ್ತಾರೆ. ಇದು ಸೀಮಿತ. ಪಾಟೀಲ್‌ರವರೇ, 13,500 ರೂಪಾಯಿ ಒಂದು ಹೆಕ್ಟೇರ್‌ಗೆ ಎಂದರೆ ಎಕರೆಗೆ ಎಷ್ಟು ಬಂತು? ಸುಮಾರು 4,000 ರೂಪಾಯಿ ಬಂತು. 25 ರಿಂದ 30 ಸಾವಿರ ಕಳೆದುಕೊಂಡಿರುವವನಿಗೆ ಅದೇನಾದರೂ ಬೆಳೆ ಬಂದುಬಿಟ್ಟಿದರೆ 40–45 ಸಾವಿರ ರೂಪಾಯಿ ಸಿಗುತ್ತಿತ್ತು. 4,000 ರೂಪಾಯಿ ಕೈಗೆ ಸಿಗುತ್ತದೆ ಎಂದರೆ ಅವರು ಹೇಗೆ ಜೀವನ ಮಾಡುವುದು? ಆತ್ಮಹತ್ಯೆ ಮಾಡಿಕೊಳ್ಳುವುದು ಬಿಟ್ಟರೆ ಬೇರೆ ನಮಗೆ ಗತಿಯೇ ಇಲ್ಲ ಎಂದು ಅವರು ಹೇಳುತ್ತಾರೆ. ಸಾಲ ತೀರಿಸುವ ಪ್ರಶ್ನೆ ಇಲ್ಲವೇ ಇಲ್ಲ. ಇನ್ನು ನಾಶವಾಗಿರುವ ಜಮೀನು ಕಡೆ ನೋಡುತ್ತಾ ಹೋದರೆ ಆ ರೈತರು ನಮ್ಮ ಜಮೀನಿಗೆ ಬನ್ನಿ, ನಮ್ಮ ಜಮೀನಿಗೆ ಬನ್ನಿ ಎಂದು ಕರೆಯುತ್ತಾರೆ. ನಮ್ಮ ಪರಿಸ್ಥಿತಿ ಏನು? ನಾವೆಲ್ಲರೂ ಕೂಡ ರಾಜಕಾರಣಿಗಳು. ನಮಗೆ ತುಂಬಾ ಬೇಕಾದವರ ಮನೆಯಲ್ಲಿ ಸಾವು ಆದರೆ ನಾವೇನು ಮಾಡುತ್ತೇವೆ, ಹೋಗಿ ಸಾಂತ್ವನ ಹೇಳಿ ಬರುತ್ತೇವೆ. ಈ ದುಃಖವನ್ನು ಭರಿಸುವಂತಹ ಶಕ್ತಿ ಭಗವಂತ ನಿನಗೆ ಕೊಡಲಿ, ಧೈರ್ಯವಾಗಿರು ನಾವು ಇದ್ದೇವೆ ಎಂದು ಹೇಳುತ್ತೇವೆ. ನಾವು ಇದ್ದೇವೆ ಎಂದು ಹೇಳುವಂತಹ ಪರಿಸ್ಥಿತಿ ಇಲ್ಲಿ ಇಲ್ಲ. ಸತ್ತ ಮನೆಗೆ ಹೋದಂತಹ ಸಂದರ್ಭದಲ್ಲಿ ಏನು ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಆ ಬೆಳೆ ಕಳೆದುಕೊಂಡಿರುವಂತಹ ರೈತರ ಮನೆಗೆ ಹೋಗಿ ನಾವು ಅನುಭವಿಸಿದ್ದೇವೆ. ಸತ್ತ ಮನೆ ಪರಿಸ್ಥಿತಿ ರೈತನ ಮನೆಯಲ್ಲಿ ಇದೆ. ಸತ್ತ ಮನೆಯಲ್ಲಾದರೂ ನಾವು ಇದ್ದೇವೆ ಧೈರ್ಯವಾಗಿರು ಎಂದು ಹೇಳಿ ಬರಬಹುದು. ಇಲ್ಲಿ ನಾವು ಇದ್ದೇವೆ ಎಂದು ಹೇಳುವುದಕ್ಕೂ ನಮ್ಮ ಹತ್ತಿರ ಏನು ಇಲ್ಲ. ಕೇಂದ್ರ ಸರ್ಕಾರ ಮೂರ್‍ನಾಲ್ಕು ಸಾವಿರ ರೂಪಾಯಿ ಕೊಡುತ್ತದೆ, ರಾಜ್ಯ ಸರ್ಕಾರದಿಂದ ಇನ್ನೂ ಕೂಡ ಕ್ಲಿಯರ್ ಇಲ್ಲ. ಅದರಲ್ಲಿ ಆಲಿಕಲ್ಲು ಮಳೆಯಿಂದ ಒಂದು ಶಿಶು ಸಾವು, ನಾನು ಈಗ ಪೂರ್ಣ ವಿವರಕ್ಕೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಇದನ್ನು ತಾವು ಗಮನಿಸಿದ್ದೀರಿ ಎಂದು ಭಾವಿಸಿದ್ದೇನೆ. ಒಟ್ಟು ಸಾವು 14 ಆಗಿದೆ. ಅವರು 60–70 ಸಾವಿರ ಹೆಕ್ಟೇರ್‌ನಷ್ಟು ಹೋಗಿದೆ ಎಂದು ಲೆಕ್ಕ ಕೊಡುತ್ತಾರೆ. ಅಂದರೆ, ಒಂದೂವರೆ ಲಕ್ಷ, ಎರಡು ಲಕ್ಷ ಎಕರೆಗಿಂತಲೂ ಜಾಸ್ತಿ ಭತ್ತ ನಾಶವಾಗಿದೆ. ನಾನು ಹೋದಾಗ ಪರಿಹಾರವನ್ನು ಎಷ್ಟು ಕೇಳಬೇಕು, ನನಗಂತೂ ತೋಚಲಿಲ್ಲ. ಏಕೆಂದರೆ, ಕೇಂದ್ರ ಸರ್ಕಾರ ಇಷ್ಟು ಮಾಡಿದೆ, ರಾಜ್ಯ ಸರ್ಕಾರ ಎಷ್ಟು ಮಾಡಬೇಕು ಎಂದಾಗ ಸುಮ್ಮನೆ ಕೇಳಿದರೆ ಉಪಯೋಗವಾಗುವುದಿಲ್ಲ. 30,000, 40,000 ಕೊಡಬೇಕು, ಅದಕ್ಕೆ ಎಲ್ಲಿದೆ ಪ್ರಾವಿಜನ್?

ಏಕೆಂದರೆ, ರಾಜಕಾರಣ ಮಾಡಬೇಕೆಂದು ನಾನು ಅಲ್ಲಿಗೆ ಹೋಗಲಿಲ್ಲ. ಈ ರೀತಿ ಐದಾರು ಜಿಲ್ಲೆಗಳಲ್ಲಿ ಮಾತ್ರ ಆಗಿದೆ. ಎಲ್ಲಾ ಜಿಲ್ಲೆಗೂ ಹೋಗಲಿಲ್ಲ. ಕೆಲವು ತಾಲ್ಲೂಕುಗಳಿಗೆ ಮಾತ್ರ ಹೋಗಿದ್ದೆ. ಮಾನ್ಯ ಕೃಷ್ಣಭೈರೇಗೌಡರು ಸ್ಪಷ್ಟವಾಗಿ ಒಂದು ಹೇಳಿಕೆಯನ್ನು ಕೊಡುತ್ತಾರೆ. "ಮಳೆಯಿಂದ ಹಾನಿಯಾಗಿರುವ ಕುರಿತು ಜಿಲ್ಲಾಡಳಿತದಿಂದ ಸಮೀಕ್ಷೆ ನಡೆಸಲು ಸೂಚಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಸಚಿವ ಶಿವರಾಜ ತಂಗಡಗಿ, ರಾಯಚೂರು ಜಿಲ್ಲೆಯಲ್ಲಿ ಡಾ: ಶರಣಪ್ರಕಾಶ ಪಾಟೀಲ್, ಜಿಲ್ಲಾಡಳಿತದ ಜೊತೆಯಲ್ಲಿ ಮಳೆ ಹಾನಿ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿದ್ದಾರೆ. ಗುರುವಾರ ನಡೆಯಲಿರುವ ಸಚಿವ ಸಂಪುಟ ಉಪ ಸಮಿತಿ ಹಾಗೂ ಸಚಿವ ಸಂಪುಟದ ಸಭೆಯಲ್ಲಿ ಮಳೆ ಹಾನಿ ಕುರಿತು ಚರ್ಚಿಸಲಾಗುವುದು. ಸಮೀಕ್ಷೆ ವರದಿ ಕೈ ಸೇರಿದ ಬಳಿಕವೇ ಮಳೆ ಹಾನಿ ಅಂದಾಜು ಸಿಗಲಿದೆ" ಎಂದು ಹೇಳಿದ್ದಾರೆ. ನಾನು ಏಕೆ ಇದನ್ನು ಓದಿದೆ ಎಂದರೆ ಮಾನ್ಯ ಕೃಷಿ ಸಚಿವರು, ಮುಖ್ಯಮಂತ್ರಿಗಳು, ಈ ಐದಾರು ಜಿಲ್ಲೆಗಳಿಗೆ ಹೋಗಿ ಸಂಕಷ್ಟದಲ್ಲಿರುವ ರೈತರಿಗೆ ನಮ್ಮ ಸರ್ಕಾರ ಇದೆ, ನಾವು ಇದ್ದೇವೆ, ನೀವು ಧೈರ್ಯವಾಗಿರಿ ಎಂದು ಹೇಳಬೇಕು. ಪರಿಹಾರ ಕೊಡುವುದು, ಬಿಡುವುದು, ಎಷ್ಟು ಕೊಡುತ್ತೀರಿ ಎಂಬುದು ಆಮೇಲೆ. ನಾವು ಸತ್ತ ಮನೆಗೆ ಹೋಗಿ ಏನು ಹೇಳುತ್ತೇವೆ, ನೀವು ಧೈರ್ಯವಾಗಿರಪ್ಪಾ ನಾವು ಇದ್ದೇವೆ ಎಂದು ಹೇಳುತ್ತೇವೆ. ಕೃಷಿ ಸಚಿವರಾದ ಕೃಷ್ಣಭೈರೇಗೌಡರು ಒಂದು ಜಿಲ್ಲೆಗೆ ಬಂದರು. ಮಾನ್ಯ ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆಯನ್ನು ಅದೇ ಜಿಲ್ಲೆಯಲ್ಲಿ ಮಾಡಿದರು. ಮಾನ್ಯ ಶಿವರಾಜ ತಂಗಡಗಿಯವರು ಮತ್ತು ಮಾನ್ಯ ಶರಣಪ್ರಕಾಶ್ ಪಾಟೀಲ್‌ರವರು ಇವರಿಬ್ಬರು ವೀಕ್ಷಣೆಗೆ ಹೋದರು. ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಉಳಿದಂತಹ ಮಂತ್ರಿಗಳಿಗೆ ಏನಾಗಿದೆ? ಅಲ್ಲಿ ಜಿಲ್ಲಾವಾರು ಉಸ್ತುವಾರಿ ಸಚಿವರುಗಳು ಇಲ್ಲವೆ? ಈ ರೀತಿ ಹತ್ತು ಜಿಲ್ಲೆಗಳಲ್ಲಿ ಆಗಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಎಂಟು ಜಿಲ್ಲೆಗಳಲ್ಲಿ ಆಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಎಂಟು ಜಿಲ್ಲೆಗಳಿಗೂ ಇವರೇ ಉಸ್ತುವಾರಿ ಸಚಿವರೇ? ಸರ್, ಈ ರೀತಿ ಡಿಫೆಂಡ್ ಮಾಡಿಕೊಂಡು ನೀವು ಸಿಕ್ಕಿಹಾಕಿಕೊಳ್ಳಬೇಡಿ. ನೀವು ಮಂತ್ರಿಗಳ ಪರಿಸ್ಥಿತಿಯನ್ನು....

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಇವತ್ತು ಪ್ರಕೃತಿ ವಿಕೋಪ ಆಗಿದೆ. ಪ್ರಕೃತಿ ವಿಕೋಪ ಅನಿರೀಕ್ಷಿತವಾಗಿ ಆಗುವಂಥದ್ದು. ಮಳೆ ಯಾವ ರೀತಿ ಆಗಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿರಬಹುದು, ವಾಡಿಕೆ ಮಳೆ ಎಷ್ಟು ಬರುತ್ತಿತ್ತು, ಈಗ ಎಷ್ಟು ಮಳೆ ಬಿದ್ದಿದೆ, ವಾಡಿಕೆ ಮಳೆಗಿಂತ ಒಂದು ಸಾವಿರದಷ್ಟು ಹೆಚ್ಚು ಮಳೆ ಬಿದ್ದು ಈ ಅನಾಹುತ ಆಗಿರುವಂಥದ್ದು. ಅವರು ಹೇಳತಕ್ಕಂಥ ಎಲ್ಲಾ ವಿಚಾರಗಳನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ಸರ್ಕಾರ ಕೂಡ ಏನು

ಮಾಡಬೇಕೆಂದು ವಿಚಾರ ಮಾಡುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಪೂರ್ಣವಾಗಿ ವೈಮಾನಿಕ ಸಮೀಕ್ಷೆ ಮಾಡಿ, ಅಲ್ಲೆಲ್ಲಾ ವಿಚಾರಿಸಿ ಸಂಪೂರ್ಣ ಮಾಹಿತಿಯನ್ನು ಕೊಟ್ಟಿದ್ದಾರೆ. ಅಲ್ಲಿಗೆ ಕೃಷಿ ಸಚಿವರು ಹೋಗಿದ್ದಾರೆ. ಜಿಲ್ಲಾ ಸಚಿವರುಗಳು ಹೋಗಿದ್ದಾರೆ. ನಾನು ಕೂಡ ಹೋಗಬೇಕಾಗಿತ್ತು. ಆದರೆ ಬೇರೆ ಕಾರಣಗಳಿಗೋಸ್ಕರ ನಾನು ಅಲ್ಲಿಗೆ ಹೋಗುವುದಕ್ಕಾಗಲಿಲ್ಲ. ನಾನು ಮುಖ್ಯಮಂತ್ರಿಗಳಿಗೆ ತಿಳಿಸಿ ಹೇಳಿದ್ದೆ. ಅದಾದ ನಂತರ ನಮ್ಮ ಕಾರ್ಯದರ್ಶಿಯವರು ಅಲ್ಲಿಗೆ ಹೋಗಿ ಬಂದಿದ್ದಾರೆ. ನಾವೆಲ್ಲಾ ಪೂರ್ಣವಾಗಿ ಚರ್ಚೆ ಮಾಡಿದ್ದೇವೆ. ವಿಡಿಯೋ ಕಾನ್ಫರೆನ್ಸ್ ಮಾಡಿ ತಿಳಿದುಕೊಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಅಲ್ಲಿನ ಪರಿಸ್ಥಿತಿಯನ್ನು ತುಂಬಾ ಚೆನ್ನಾಗಿ ಹೇಳುತ್ತಿದ್ದಾರೆ. ನಾವು ಏನು ಮಾಡಬೇಕೆಂದು ಹೇಳಿದ್ದೇವೆ. ಈ ವಿಷಯವನ್ನು ಮಂತ್ರಿ ಮಂಡಲದಲ್ಲಿ ನಾವು ಯಾವ ರೀತಿ ಅವರಿಗೆ ಪರಿಹಾರ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ನಾವು NDRF norms ಪ್ರಕಾರವೇ ವಿಶೇಷವಾದ ಪ್ಯಾಕೇಜ್‌ನ್ನು ಕೊಡಬೇಕು. ಹಿಂದೆ ಆಲಿಕಲ್ಲು ಮಳೆಯಾದ ಸಮಯದಲ್ಲಿ ಸರ್ಕಾರ ರೈತರಿಗೆ ಯಾವ ರೀತಿ ಸ್ಪಂದಿಸಿದೆಯೋ ಅದೇ ರೀತಿ ಸ್ಪಂದಿಸಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಾವು ಸಮೀಕ್ಷೆಯನ್ನು ಮಾಡುತ್ತಿದ್ದೇವೆ. ಅದು ಕಂದಾಯ ಇಲಾಖೆ ಮತ್ತು ಕೃಷಿ ಇಲಾಖೆಯಿಂದ ಜಂಟಿಯಾಗಿ ಸಮೀಕ್ಷೆಯಾಗಬೇಕು. ಆ ಸಮೀಕ್ಷೆಯ ವರದಿಯನ್ನು ನಾವು ತರಿಸಿಕೊಳ್ಳುತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅವರಿಗೆ ಮಾನವೀಯತೆಯ ದೃಷ್ಟಿಯಿಂದ ವಿಶೇಷವಾಗಿ ಅವರು ಹೇಳಿರುವಂಥದ್ದು ಕೊಪ್ಪಳ ತಾಲ್ಲೂಕಿನಲ್ಲಿ ಗಂಗಾವತಿಯಲ್ಲಿ ಆಗಿರತಕ್ಕಂಥದ್ದು, ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಆಗಿರತಕ್ಕಂಥದ್ದು, ಬಳ್ಳಾರಿ ಜಿಲ್ಲೆಯ ಸಿರಗುಪ್ಪೆ ತಾಲ್ಲೂಕಿನಲ್ಲಿ ಆಗಿರತಕ್ಕಂಥದ್ದನ್ನು ಕಣ್ಣಲ್ಲಿ ನೋಡುವುದಕ್ಕಾಗುವುದಿಲ್ಲ. ಸುಮಾರು ಶೇಕಡ 80–90 ರಷ್ಟು ಬೆಳೆ ಹಾನಿಯಾಗಿದೆ. ಅದರ ಸಂಪೂರ್ಣ ವರದಿಯನ್ನು ತರಿಸಿಕೊಂಡಿದ್ದೇವೆ. ಸರ್ಕಾರವೂ ಕೂಡ ಅವರಿಗೆ ಯಾವ ರೀತಿ ಮಾಡಬೇಕೆಂದು ಹೇಳಿದ್ದೇವೆ. ಕೇಂದ್ರ ಸರ್ಕಾರಕ್ಕೂ ಕೂಡ ಯಾವ ರೀತಿ memorandum ಕೊಡಬೇಕು, total estimated loss ಎಷ್ಟಾಗಿದೆ ಎಂದು ಸರ್ಕಾರದ ವತಿಯಿಂದ ನಾವೇ ಮನವಿ ಕೊಡುತ್ತಿದ್ದೇವೆ. ಅದಲ್ಲದೆ, ಸ್ಟಡಿ ಟೀಮ್ ಬಂದು ಅದನ್ನೆಲ್ಲಾ ಅಧ್ಯಯನ ಮಾಡುವುದಕ್ಕೆ ಮೊದಲೇ ನಾವು ರಾಜ್ಯ ಸರ್ಕಾರ ಯಾವ ರೀತಿ ಅವರ ಬಗ್ಗೆ ಮಾಡಬೇಕೆಂಬುದನ್ನು ಈಗಾಗಲೇ ಯೋಚನೆ ಮಾಡುತ್ತಿದ್ದೇವೆ. ಖಂಡಿತವಾಗಿಯೂ NDRF norms ಪ್ರಕಾರ ವಿಶೇಷ ಪ್ರಕರಣ ಎಂದು ಅವರಿಗೆ ಎಷ್ಟು ಕೊಡಬೇಕು ಎನ್ನುವುದನ್ನು ಮುಖ್ಯಮಂತ್ರಿಗಳು ತೀರ್ಮಾನ ಮಾಡುತ್ತಾರೆ. ಈಗಾಗಲೇ ಅದರ ಬಗ್ಗೆ ಮಂತ್ರಿ ಮಂಡಲದಲ್ಲಿ ಯೋಚನೆ ಮಾಡಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ತುಂಬಾ ಸಂತೋಷ. ಅವರಿಗೆ ಆಸಕ್ತಿ ಇರುವುದಕೋಸ್ಕರವೇ ಮಾನ್ಯ ಶರಣ ಪಾಟೀಲ್‌ರವರು ಬಂದರು, ಆಸಕ್ತಿ ಇರುವುದಕೋಸ್ಕರವೇ ಮಾನ್ಯ ಶಿವರಾಜ ತಂಗಡಗಿಯವರು ಬಂದರು, ಆಸಕ್ತಿ ಇರುವುದಕೋಸ್ಕರವೇ ಮಾನ್ಯ ಕೃಷಿ ಮಂತ್ರಿಗಳು ಬಂದರು, ಆಸಕ್ತಿ ಇರುವುದಕೋಸ್ಕರವೇ ಮಾನ್ಯ ಮುಖ್ಯಮಂತ್ರಿಗಳು ಬಂದರು, ಇದೆಲ್ಲಾ ಸರಿ. ಈ ರೀತಿ ಎಂಟು ಜಿಲ್ಲೆಗಳಲ್ಲಿ ಆಗಿದೆ. ಇವರು ಎರಡು ಜಿಲ್ಲೆಗಳಲ್ಲಿ ಓಡಾಟ ಮಾಡುತ್ತಿದ್ದಾರೆ. ನಾನು ಅವರಿಗೆ ಕೇಳುವುದಕ್ಕೆ ಹೊರಟಿರುವುದೇನೆಂದರೆ, ಆ ಪಕ್ಷ ಈ ಪಕ್ಷ ಅಲ್ಲ, ಇನ್ನು ಉಳಿದಂತಹ ಮಂತ್ರಿಗಳು ಮನೆಯಲ್ಲಿ ಮಲಗಿದ್ದಾರೆಯೇ? ಅಲ್ಲಿ ಉಸ್ತುವಾರಿ ಸಚಿವರು ಇಲ್ಲವೆ? ಅವರಿಗೆ ಇದಕ್ಕಿಂತ ಜಾಸ್ತಿ ಏನು ಕೆಲಸವಿದೆ? ಎಷ್ಟೆಷ್ಟು ಜನ ಸತ್ತಿದ್ದಾರೆಂದರೆ, ಬಳ್ಳಾರಿಯಲ್ಲಿ 3, ಕಲಬುರಗಿಯಲ್ಲಿ 3, ಮೈಸೂರಿನಲ್ಲಿ 3, ವಿಜಯಪುರದಲ್ಲಿ 2, ರಾಯಚೂರಿನಲ್ಲಿ 2, ಬೀದರ್‌ನಲ್ಲಿ 1, ಚಿಕ್ಕಮಂಗಳೂರಿನಲ್ಲಿ 1 ಸತ್ತಿರಬೇಕಾದರೆ, ಈ ಮಂತ್ರಿಗಳು ಅಲ್ಲಿಗೆ ಹೋಗಿ ಭೇಟಿ ಮಾಡುವುದಕ್ಕೂ ಪುರುಸೊತ್ತ ಇಲ್ಲವೆಂದರೆ ಏಕೆ ಮಂತ್ರಿಗಳಾಗಿರಬೇಕೆಂಬುದು ನನ್ನ ಪ್ರಶ್ನೆ? ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆಯನ್ನು ಮಾಡಿದರು. ಯಾದಗಿರಿ, ಅದರ ಪಕ್ಕದಲ್ಲೇ ಕೊಪ್ಪಳ, ಅದರ ಪಕ್ಕದಲ್ಲಿ ಬಂದರೆ ಜೇವರ್ಗಿ, ಅವರು ಅಲ್ಲಿಗೆ ಹೋಗಲಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, ನೀವು ಮಂತ್ರಿಗಳಾಗಿ ಅಲ್ಲಿಗೆ ಹೋದರೆ ಸ್ವಲ್ಪ ರೈತರಿಗೆ ಆಸೆ ಚಿಗುರುತ್ತದೆ. ಈ ಸರ್ಕಾರ ಬದುಕಿದೆ, ರೈತ ನಾನು ಸತ್ತಿದ್ದರೂ ಕೂಡ ಸರ್ಕಾರ ಬದುಕಿದೆ ಎನ್ನುವಂತಹ ಭಾವನೆ ರೈತನಿಗೆ ಬರುತ್ತದೆ, ಈಗ ಆ ಭಾವನೆ ಎಲ್ಲಿ ಬರುತ್ತದೆ? ರೈತನು ಸತ್ತಿದ್ದಾನೆ, ಸರ್ಕಾರವೂ ಸತ್ತಿದೆ ಎನ್ನುವ ಭಾವನೆ ರೈತನಿಗೆ ಬರುತ್ತದೆ ಎನ್ನುವುದು ನನ್ನ ಪ್ರಶ್ನೆ. ಇದು ನನಗೆ ಹೊಟ್ಟೆ ಉರಿಯುತ್ತಿರುವುದು. ಕೃಷಿ ಮಂತ್ರಿಗಳಾದ ಮಾನ್ಯ ಕೃಷ್ಣಭೈರೇಗೌಡರು ಒಂದು ಜಿಲ್ಲೆಗೆ ಹೋದರು. ಅವರಿಗೆ ಉಳಿದ ಜಿಲ್ಲೆಗಳಿಗೆ ಹೋಗುವುದಕ್ಕೆ ಏನು ತೊಂದರೆ? ಕೃಷಿ ಮಂತ್ರಿಗಳಿಗೆ ಇಂತಹ ಸಂದರ್ಭದಲ್ಲಿ ಬೇರೆ ಏನು ಕೆಲಸ? ಈ ರೀತಿಯಲ್ಲಿ ಎಂಟೆಂಟು ಜಿಲ್ಲೆಗಳಲ್ಲಿ ಆಗಿದೆ. ನನಗೆ ಅಷ್ಟೇ ಅಲ್ಲ. ಅವರು ಹುಟ್ಟಿದಾಗಿನಿಂದಲೂ ಇಷ್ಟೊಂದು ಅಘಾತ ಆಗಿರಲಿಕ್ಕಿಲ್ಲ. ಅನ್ಯಾಯ ಆಗಿರಲಿಕ್ಕಿಲ್ಲ. ಒಂದೊಂದು ವಿಷಯವನ್ನು ನೋಡುತ್ತಾ ಕುಳಿತುಕೊಂಡರೆ ಮತ್ತೆ ಅದೇ ಪರಿಸ್ಥಿತಿ. ಬಾಳೆ ವಿಷಯ ತೆಗೆದುಕೊಂಡರೆ ಏನೇನು ಉಳಿದಿರುವುದಿಲ್ಲ. ಅದು ನೆಲ ಕಚ್ಚಿ ಹೋಗಿದೆ. ಸರ್ಕಾರ ಬದುಕಿದೆ ಎನ್ನುವುದಾದರೆ . . . ಸರ್ಕಾರ ಅಂದರೆ ಏನು? ಮಂತ್ರಿಗಳು ತಾನೆ. ಈ ವಿಷಯವಾಗಿ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿದ್ದೀರಿ. ಚರ್ಚೆ ಮಾಡಿ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ನನಗೆ ಖಂಡಿತವಾಗಿಯೂ ಗೊತ್ತಿಲ್ಲ. ನಿಮ್ಮ ಪ್ರಾಮಾಣಿಕ ಪ್ರಯತ್ನಕ್ಕೆ ಸಚಿವ ಸಂಪುಟ ಚರ್ಚೆ ಮಾಡಿದೆ, ಒಳ್ಳೆಯ ಪರಿಹಾರ ಕೊಡುತ್ತದೆ ಎಂದು ನಂಬಿಕೆಯಿಂದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನು ಹೇಳಲಿಕ್ಕೆ ಹೊರಟಿರುವುದು ಸಹ ಅದೇ ವಿಷಯ. ಯಾರೋ ಮನೆಯಲ್ಲಿ ಸತ್ತಾಗ ಅವರ ಮನೆಗೆ ನಾವು ಏತಕ್ಕೆ ಹೋಗಬೇಕು? ಬರಿ

ಓಟು ಎಂದು ಸತ್ತ ಮನೆಗೆ ಹೋಗುತ್ತೇವೆಯೇ? ಮಾನವೀಯತೆಯಿಂದ ಹೋಗುತ್ತೇವೆ ತಾನೆ? ಮಾನವೀಯತೆಯ ಪ್ರಶ್ನೆ ಈ ಸರ್ಕಾರಕ್ಕೆ ಇಲ್ಲವೇ? ಏನೇನು ಹೋಗಿದೆ ಎಂದು ಪಟ್ಟಿ ಕೊಡಬಹುದು. ಇದನ್ನು ಮಾನ್ಯ ಸಚಿವರಾದ ಶ್ರೀಯುತ ಶ್ರೀನಿವಾಸ್ ಪ್ರಸಾದ್‌ರವರು ಗಮನಿಸಬೇಕು. ಒಂದಲ್ಲ ಮಾವು, ದಾಳಿಂಬೆ, ದ್ರಾಕ್ಷಿ, ಇದೆಲ್ಲವೂ ಹಾಳಾಗಿ ಹೋಗಿದೆ, ಏನೇನೂ ಉಳಿದಿಲ್ಲ.

**ಸಭಾಪತಿಯವರು:–** ಒಂದು ನಿಮಿಷ. ಇದು ಬಹಳ ಗಂಭೀರವಾದಂತಹ ವಿಷಯ. ಬಹಳ ಸ್ಪಷ್ಟವಾಗಿ ಪ್ರಸ್ತಾಪ ಮಾಡುತ್ತಿದ್ದೀರಿ. ಈಗ ನೀವು ಚರ್ಚೆಗೆ ಕೇಳಿರುವುದು ನಿಲುವಳಿ ಸೂಚನೆಯನ್ನು ನಿಯಮ 59 ರಡಿಯಲ್ಲಿ ಕೇಳಿದ್ದೀರಿ. ನಿಯಮ 59 ರಡಿಯಲ್ಲಿ ನಮ್ಮ ಸದನದಲ್ಲಿ ಎಂದೂ ಸಹ ಚರ್ಚೆ ಮಾಡಿದ್ದು ನನಗೆ ನೆನಪಿಲ್ಲ, ಮಾಡುವುದಕ್ಕಾಗುವುದಿಲ್ಲ. ಆದರೆ, ಈ ವಿಷಯವಾಗಿ ಸರ್ಕಾರ ಏನು ಹೇಳುತ್ತದೆ ಎಂದು ಕೇಳಿ, ಈ ಚರ್ಚೆಗೆ ಯಾವ ರೀತಿ ಅವಕಾಶವನ್ನು ಕೊಟ್ಟರೆ, ಈ ಚರ್ಚೆಯಿಂದ ನಮ್ಮ ರಾಜ್ಯದ ತೊಂದರೆಯಲ್ಲಿ ಇರತಕ್ಕಂತಹ ರೈತರಿಗೆ ಅನುಕೂಲವಾಗುತ್ತದೆನ್ನುವುದನ್ನು ನಾನು ತೀರ್ಮಾನ ಹೇಳಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, ಈ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂದು ಈಗ ಕೇಳೋಣ. ಯಾವ ರೀತಿ ಮಾಡೋಣ ಎಂದು ಸರ್ಕಾರ ಹೇಳಿದರೆ ಅನುಕೂಲವಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧಪಕ್ಷದ ಸದಸ್ಯರು ಬಹಳಷ್ಟು ವಿವರವಾಗಿ ಹೇಳಿದ್ದಾರೆ. ವಿಜಯಪುರ, ಕೊಪ್ಪಳ, ರಾಯಚೂರು, ಬಳ್ಳಾರಿ, ಕಲಬುರಗಿ, ಯಾದಗಿರಿ, ಬೀದರ್ ಜಿಲ್ಲೆ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಅಕಾಲಿಕ ಮಳೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ರೈತರು ತಮ್ಮ ಬೆಳೆಯನ್ನು ಹಾಳು ಮಾಡಿಕೊಂಡಿದ್ದಾರೆ. ಬಹುತರವಾಗಿ ಅವರು ಒಂದು ಎಕರೆ ಭೂಮಿಯಲ್ಲಿ ಸಾಗುವಳಿ ಮಾಡಲಿಕ್ಕೆ ಸುಮಾರು 25 ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ, ಅದು ಬೀಜದ್ದು ಇರಬಹುದು, ಗೊಬ್ಬರದ್ದು ಇರಬಹುದು. ಆ ದೃಷ್ಟಿಯಿಂದ ಬಹಳಷ್ಟು ಹಾನಿಯಾಗಿದೆ. ಭತ್ತದ ಬೆಳೆಯ ಕಾಳುಗಳು ನೆಲಕ್ಕೆ ಬಿದ್ದು, ಹಾನಿಯಾಗಿದೆ. ಇನ್ನು 8 ದಿವಸಗಳು ಕಳೆದಿದ್ದರೂ ಸಹ ರೈತರಿಗೆ ಯಾವುದೇ ತೊಂದರೆಯಾಗುತ್ತಿರಲಿಲ್ಲ. ತಾನು ಏನು ಕಷ್ಟಪಟ್ಟು, ಹಗಲು–ರಾತ್ರಿ, ಹಸಿವು, ನೀರಡಿಕೆಯಿಂದ, ಬಿಸಲು–ಗಾಳಿಯನ್ನು ಲೆಕ್ಕಿಸದೇ ಗಂಡ–ಹೆಂಡತಿ–ಮಕ್ಕಳು ಎಲ್ಲರೂ ದುಡಿದು, ಕೈಗೆ ಬಂದ ತುತ್ತು ಬಾಯಿಗೆ ಬಾರದಾಗಿದ್ದು, ಈ ಬಗ್ಗೆ ಅವರು ಹೇಳಿದಂತಹ ಮಾತುಗಳನ್ನು ನಾವು ಒಪ್ಪಿಕೊಂಡಿದ್ದೇವೆ. ಈಗಾಗಲೇ ಕೃಷಿ ಸಚಿವರು, ನಮ್ಮ ಗೌರವಾನ್ವಿತ ಮುಖ್ಯಮಂತ್ರಿಗಳು, ಶ್ರೀಮಾನ್ ಶಿವರಾಜ್ ತಂಗಡಗಿಯವರು, ಡಾ॥ ಶರಣ ಪ್ರಕಾಶ್ ಪಾಟೀಲ್‌ರವರು, ಇನ್ನು ಬಹಳಷ್ಟು ಸಚಿವರು ಮುಖ್ಯಮಂತ್ರಿಗಳಾದಿಯಾಗಿ ವೈಮಾನಿಕ ಸರ್ವೆ ಮಾಡುವುದರ ಮೂಲಕ ಸ್ವತ: ರೈತರಿಗೆ ಭೇಟಿಯಾಗಿ ಸಾಂತ್ವನವನ್ನು ಹೇಳಿದ್ದಾರೆ. ಸಹಾನುಭೂತಿಯನ್ನು ವ್ಯಕ್ತ ಮಾಡಿದ್ದಾರೆ. ರೈತರು ಅಕಾಲಿಕ

ಮಳೆಯಿಂದ, ಆಲಿಕಲ್ಲು ಮಳೆಯಿಂದ ರೈತರ ಬೆಳೆ ಹಾನಿಯಾಗಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ಮೊನ್ನೆ ನಡೆದಂತಹ ಸಚಿವ ಸಂಪುಟದ ಸಭೆಯಲ್ಲಿ ಬಹಳಷ್ಟು ಸಹಾನೂಭೂತಿಯನ್ನು ವ್ಯಕ್ತ ಮಾಡಿದ್ದೇವೆ. ಜೊತೆಗೆ ಮಮ್ಮಲ ಮರುಗಿದ್ದೂ ಕೂಡ ಇದೆ. ಪ್ರತಿಯೊಬ್ಬ ಸಚಿವರು ಅಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಭಾಗವಹಿಸಿ, ರೈತರಿಗೆ ಯೋಗ್ಯವಾದ ಪರಿಹಾರವನ್ನು ಕೊಡಬೇಕೆನ್ನುವ ಬಗ್ಗೆ ಕೂಡ ಚರ್ಚೆ ಮಾಡಲಾಗಿದೆ. ಆದ್ದರಿಂದ, ಈ ಬಗ್ಗೆ ಸಕಾರಾತ್ಮಕವಾಗಿ ನಿರ್ಣಯವನ್ನು ಸರ್ಕಾರ ಕೈಗೊಳ್ಳುವುದರಿಂದ, ಸರ್ಕಾರ ರೈತರ ಕಷ್ಟದಲ್ಲಿ, ನೋವಿನಲ್ಲಿ, ದು:ಖದಲ್ಲಿರುವಂತಹ ಈ ಸಂದರ್ಭದಲ್ಲಿ ರೈತರ ಪರವಾಗಿ ನಮ್ಮ ಸರ್ಕಾರ ನಿಶ್ಚಿತವಾಗಿ ಸ್ಪಂದಿಸುತ್ತದೆ ಎನ್ನುವ ಮಾತನ್ನು ಹೇಳುವುದರ ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರಡಿಯಲ್ಲಿ ಈ ವಿಚಾರವನ್ನು ನಿಲುವಳಿ ಸೂಚನೆ ಮೂಲಕ ತಂದಿದ್ದಾರೆ. ಇದು ರೈತರಿಗೆ ಸಂಬಂಧಿಸಿದ ಮಹತ್ವದ ವಿಷಯವಾಗಿದೆ. ರೈತರ ಪರವಾಗಿರುವಂತಹ ನಮ್ಮ ಸರ್ಕಾರ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಸರ್ಕಾರ ಸ್ವಾಗತ ಮಾಡುತ್ತದೆ. ಆದರೆ, ನಿಯಮ 68 ರಡಿಯಲ್ಲಿ ಚರ್ಚೆ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಈಗ ವಿಷಯದ ಗಾಂಭೀರ್ಯತೆ ಮತ್ತು ನಮ್ಮ ಇಡೀ ರಾಜ್ಯದ ಜನ ನಮ್ಮ ಸದನದ ಕಡೆ ನೋಡುತ್ತಿದ್ದಾರೆ. ನಮಗೆ ಏನಾದರೂ ಪರಿಹಾರ ಸಿಕ್ಕುತ್ತದೆಯೇ, ನಮ್ಮ ಬಗ್ಗೆ ಏನು ಚರ್ಚೆಯಾಗುತ್ತಿದೆ ಎನ್ನುವುದನ್ನು ಗಮನಿಸುತ್ತಿದ್ದಾರೆ. ಇಂತಹ ಒಂದು ಗಂಭೀರವಾದಂತಹ ವಿಷಯವನ್ನು ನಾನು ನಿಯಮ 59 ರಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡಲಿಕ್ಕೆ ಸಾಧ್ಯವಿಲ್ಲ. ನಿಯಮ 68 ರಡಿಯಲ್ಲಿ ಚರ್ಚೆ ಮಾಡಲು ಸರ್ಕಾರ ಒಪ್ಪಿರುವ ಹಿನ್ನೆಲೆಯಲ್ಲಿ ನಿಯಮ 68 ರಡಿಯಲ್ಲಿ ಈ ಚರ್ಚೆಯನ್ನು ಮಾಡಲಿಕ್ಕೆ ಈಗ ಪ್ರಾರಂಭ ಮಾಡೋಣ. ಈಗ ನಿಯಮ 68 ರಡಿಯಲ್ಲಿ ಕೂಡಲೇ ಚರ್ಚೆ ಪ್ರಾರಂಭ ಮಾಡೋಣ. ಅಮೇಲೆ ಸರ್ಕಾರದಿಂದ ಉತ್ತರ. ಮತ್ತೆ, ಇದರ ಮೇಲೆ ಯಾವ ಯಾವ ಸದಸ್ಯರು ಮಾತನಾಡುತ್ತಾರೋ ಅವರಿಗೆ ಅವಕಾಶ ಕೊಡೋಣ. ಎಲ್ಲರಿಗೂ ಮಾತನಾಡಲಿಕ್ಕೆ ಎಂದರೆ 25 ಜನ ಮಾತನಾಡುತ್ತೇವೆಂದರೆ ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಡಲಿಕ್ಕೆ ಆಗುವುದಿಲ್ಲ. ಆ ಭಾಗದ ಸದಸ್ಯರುಗಳು ಅಲ್ಲಿ ನೇರವಾಗಿ ಹೋಗಿ ಬಂದಂತಹ ಸದಸ್ಯರುಗಳು, ಮತ್ತೆ ಕೆಲವು ಪ್ರಮುಖರು, ತಮ್ಮ ತಮ್ಮ ತಂಡದ ನಾಯಕರುಗಳು, ಈ ರೀತಿಯಲ್ಲಿ ಕೆಲವರು ಮಾತನಾಡಲಿಕ್ಕೆ ಅಪೇಕ್ಷೆ ಪಟ್ಟರೆ ನೋಡಿ, ಅವರುಗಳಿಗೆ ಅವಕಾಶ ಕೊಡೋಣ. ಎಲ್ಲರಿಗೂ ಅವಕಾಶ ಬೇಡ. ಆ ಭಾಗದ ಸದಸ್ಯರುಗಳು ಯಾರು ಇದ್ದಾರೆ, ಅವರು ಮಾತನಾಡುವುದು ಸೂಕ್ತ. ನನಗೂ ಸಮಯದ constraint ಇರುತ್ತದೆ. ಈಗ ಚರ್ಚೆಯನ್ನು ಪ್ರಾರಂಭ ಮಾಡೋಣ. ಈಗ ಶ್ರೀಯುತ ಹಾಲಪ್ಪ ಅಚಾರ್‌ರವರು ಚರ್ಚೆಯನ್ನು

ಪ್ರಾರಂಭ ಮಾಡುತ್ತಾರೆ. ಈ ದಿಸೆಯಲ್ಲಿ ತಾವುಗಳು ಒಂದು ಕೆಲಸ ಮಾಡಬೇಕು. ತಮ್ಮ ತಮ್ಮ ಪಕ್ಷದ ವತಿಯಿಂದ 4–5 ಹೆಸರುಗಳನ್ನು ನಿಮ್ಮ ಮುಖ್ಯ ಸಚೇತಕರುಗಳ ಕಡೆಯಿಂದ ಕಳುಹಿಸಿ ಕೊಡಿ. ಆಗ ನಾನು ಎರಡು ಕಡೆ ಮ್ಯಾನೇಜ್ ಮಾಡಲಿಕ್ಕೆ ಅನುಕೂಲವಾಗುತ್ತದೆ. ಹಾಗೆಯೇ ಮಾನ್ಯ ಹಿರಿಯ ಸದಸ್ಯರಾದ ಶ್ರೀಯುತ ಬಸವರಾಜ ಹೊರಟ್ಟಿಯವರು ಸದನದಲ್ಲಿ ಇರುವುದಿಲ್ಲ. ಅವರು ಏತಕ್ಕೆ ಸದನಕ್ಕೆ ಬಂದಿಲ್ಲವೆಂದು ಗೊತ್ತಿಲ್ಲ. ಅವರ ಬದಲಿಗೆ ಮಾನ್ಯ ಸದಸ್ಯರಾದ ಶ್ರೀಯುತ ಮರಿತಿಬ್ಬೇಗೌಡರವರು ತಮ್ಮ ಪಕ್ಷದ ವತಿಯಿಂದ 4–5 ಹೆಸರುಗಳನ್ನು ಕಳುಹಿಸಿಕೊಟ್ಟರೆ ನಾನು ಮ್ಯಾನೇಜ್ ಮಾಡಲಿಕ್ಕೆ ಅನುಕೂಲವಾಗುತ್ತದೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಮಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳುತ್ತಾ, ಬಹುಶ: ಇಡೀ ರಾಜ್ಯದಲ್ಲಿ ತಾರೀಖು 12–13 ರಂದು ಅಕಾಲಿಕ ಮಳೆಯಿಂದಾಗಿ ರೈತರಿಗೆ ಆಗಿರತಕ್ಕಂತಹ ತೊಂದರೆಯ ಬಗ್ಗೆ ಇವತ್ತು ತಂದಿರುವಂತಹ ನಿಲುವಳಿ ಚರ್ಚೆಯಲ್ಲಿ ಭಾಗವಹಿಸಲು ಸರ್ಕಾರ ಇದಕ್ಕೆ ಮೊದಲ ಅದ್ಯತೆಯನ್ನು ಕೊಡಬೇಕಾಗಿತ್ತು. ಇವತ್ತು ಏನು ಅಧಿವೇಶನವನ್ನು ಕರೆದಂತಹ ಸಂದರ್ಭದಲ್ಲಿ ಸರ್ಕಾರ ಅದನ್ನು ಕಣ್ಣಾರೆ ಕಂಡರೂ ಸಹ ಇದಕ್ಕೆ ಮೊದಲನೆಯ ಸಮಯವನ್ನಿಟ್ಟು ಇವತ್ತು ಚರ್ಚೆಗೆ ಅವಕಾಶ ಮಾಡಿಕೊಟ್ಟು, ಇದಕ್ಕೆ ಏನಾದರೂ ಪರಿಹಾರವನ್ನು ಕೊಡುವುದರಲ್ಲಿ ಮುಂದಾಗಿದ್ದರೆ ಸರ್ಕಾರವನ್ನು ನಾವು ಇವತ್ತು ಅಭಿನಂದಿಸುತ್ತಿದ್ದೆವು. ಇವತ್ತು ನಷ್ಟಕ್ಕೆ ತುತ್ತಾಗಿರುವಂತಹ 5 ಜಿಲ್ಲೆಗಳ ರೈತರ ಭವಣೆಯನ್ನು ನೋಡಿಕೊಂಡು ಇವತ್ತು ಅವರ ಬೆನ್ನಿಗೆ ನಿಲ್ಲಬೇಕಾದುದು ಇಡೀ ಸರ್ಕಾರದ ಮತ್ತು ಎಲ್ಲಾ ಪಕ್ಷಗಳ ಜವಾಬ್ದಾರಿಯೂ ಹೌದು. ಇದೇ ತಿಂಗಳು 12–13ನೇ ತಾರೀಖಿನಂದು ಆದಂತಹ ಮಳೆ ಇವತ್ತು ಕೇವಲ ತುಂಗಭದ್ರಾ ಪ್ರಾಜೆಕ್ಟ್ ಏರಿಯಾದಲ್ಲಿ ಮಾತ್ರವಲ್ಲ, ಕಾವೇರಿ ಪ್ರಾಜೆಕ್ಟ್ ಏರಿಯಾದಲ್ಲಿ ಮಾತ್ರವಲ್ಲ, ಇವತ್ತು ಇಡೀ ರಾಜ್ಯದ 8 ಜಿಲ್ಲೆಗಳಲ್ಲಿ ಇವತ್ತು ಕೃಷಿ ಬೆಳೆ ಇರಬಹುದು, ತೋಟಗಾರಿಕೆ ಬೆಳೆ ಇರಬಹುದು, ಇನ್ನುಳಿದಂತಹ ಬೆಳೆಗಳಿಗೆ ಆಗಿರುವಂತಹ ನಷ್ಟವನ್ನು ಸರ್ಕಾರ ಈಗಾಗಲೇ ಕೆಲವು ಅಂದಾಜಿನ ಮೂಲಕ ಇವತ್ತು ಪ್ರಕಟಿಸಿರುವುದನ್ನು ಕೂಡ ನಾನು ಈ ಸಭೆಯ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇವತ್ತು ಉದಾಹರಣೆಗೆ ಹೇಳುವುದಾದರೆ ಕೊಪ್ಪಳ ಜಿಲ್ಲೆಯಲ್ಲಿ ಅಲ್ಲಿನ ಪ್ರಾಜೆಕ್ಟ್ ಏರಿಯಾದಲ್ಲಿ ಆಗಿರುವಂತಹ ಅನಾಹುತಗಳನ್ನು ನೋಡಿ. ಅಲ್ಲಿ ಕೃಷಿ ಮಾಡಿ ಬೆಳೆದಿರುವಂತಹ ಭತ್ತದ ವಿಚಾರವಾಗಿ ಸರ್ಕಾರ ಈಗಾಗಲೇ ತನ್ನ ಸಮೀಕ್ಷೆಯ ಮೂಲಕ ಅಂದಾಜು ಮಾಡಿರುವುದು 26,962 ಹೆಕ್ಟೇರ್ ಪ್ರದೇಶ. ಇವತ್ತು CRF ಮಾರ್ಗಸೂಚಿ ಪ್ರಕಾರ 3639 ಲಕ್ಷ ರೂ.ಗಳನ್ನು ಕೊಡಬೇಕೆಂದು ಹೇಳುತ್ತದೆ. ಇವತ್ತು CRF ಬಗ್ಗೆ ಕೂಡ ಕೇಂದ್ರ ಸರ್ಕಾರ ಮೊನ್ನೆ ದಿನಾಂಕ: 1–4–2015 ರಿಂದ ಹೊಸ ಮಾರ್ಗಸೂಚಿ ಪ್ರಕಾರ ಮಾನ್ಯ

ಹಿರಿಯ ಸದಸ್ಯರು ಹೇಳಿದ ಹಾಗೆ ಒಂದು ಹೆಕ್ಟೇರ್ ಇದ್ದುದನ್ನು 2 ಹೆಕ್ಟೇರ್ ಮಾಡಿ, ಇವತ್ತು 9 ಸಾವಿರ ರೂಪಾಯಿಗಳು ಇದ್ದುದನ್ನು 2 ಹೆಕ್ಟೇರ್‌ಗೆ 13 ಸಾವಿರ ರೂಪಾಯಿಗಳನ್ನು ಮಾಡಿದ್ದಾರೆ. 50% ಲುಕ್ಸಾನು ಆಗಿದ್ದರೆ ಕೊಡಬೇಕೆನ್ನುವುದನ್ನು ಕೂಡ ಇವತ್ತು ಕೇಂದ್ರ ಸರ್ಕಾರ ರೈತರ ಪರವಾಗಿಯೇ ಬದಲಾವಣೆ ಮಾಡಿರುವುದನ್ನು ನೆನಪು ಮಾಡಿಕೊಡಬೇಕಾಗಿದೆ. ಇವತ್ತು 33% ಹಾಳಾಗಿದ್ದರೂ ಕೂಡ ಅದನ್ನು ಪರಿಗಣನೆಗೆ ತೆಗೆದುಕೊಂಡು ಇವತ್ತು CRF ಫಂಡ್‌ನಲ್ಲಿ ಮಾರ್ಗ ಸೂಚಿ ಪ್ರಕಾರ ಹಣ ಕೊಡಬೇಕೆನ್ನುವ ವಿಚಾರ ಈಗಾಗಲೇ ನಮಗೆಲ್ಲಾ ಗೊತ್ತಿರುವ ವಿಚಾರ. ಅದನ್ನು ನೀವು ಕೊಟ್ಟೇ ಕೊಡುತ್ತೀರಿ. ಆದರೆ, ಅಲ್ಲಿ ಆಗಿರುವಂತಹ ವಾಸ್ತವಿಕತೆಯನ್ನು ಇವತ್ತು ಕಣ್ಣಾರೆ ಕಂಡಾಗ ಇಲ್ಲಿ ಡಾ॥ ಶರಣ ಪ್ರಕಾಶ್ ಇರಬಹುದು, ವಿರೋಧ ಪಕ್ಷದ ನಾಯಕರಾದ ಶ್ರೀಯುತ ಕೆ.ಎಸ್. ಈಶ್ವರಪ್ಪನವರು ಸ್ವತ: ಅಲ್ಲಿಗೆ ಬಂದಾಗ ಅವರ ಜೊತೆ ನಾವುಗಳು ಪ್ರತಿಯೊಂದು ಗ್ರಾಮಕ್ಕೂ ಹೋಗಿ ಬಂದಿದ್ದೇವೆ. ಸುಮಾರು 50–60–70 ರಷ್ಟು ಬೆಳೆಯನ್ನು ಕೊಡುತ್ತಿದ್ದಂತಹ ಪ್ರದೇಶದಲ್ಲಿ ಇವತ್ತು ಏನೂ ಉಳಿದಿಲ್ಲ.

(4.30 ಗಂಟೆ)

ನೆಲದಲ್ಲಿ ನೋಡುವುದಕ್ಕೆ ಭತ್ತ ಕಾಣುತ್ತದೆ. ಆದರೆ ಆ ಭತ್ತದಲ್ಲಿ ಒಂದು ಕಾಳೂ ಕೂಡ ಇಲ್ಲ. ಆಲಿಕಲ್ಲು ಮಳೆಗೆ ಭತ್ತ ಅಷ್ಟೂ ನೆಲ ಕಚ್ಚಿ ಹೋಗಿದೆ. ಬಿತ್ತನೆ ಮಾಡಿರತಕ್ಕಂತಾದ್ದು ಏನು ಇದೆ ಅದೂ ಕೂಡ ಪೂರ್ತಿ ಗಾಳಿಗೆ ಮಲಗಿ ಬಿಟ್ಟಿದೆ. ಅದರಲ್ಲಿ ಅವರಿಗೆ ಯಾವುದೇ ಒಂದು ಪರಿಹಾರ ಸಿಗದೆ ಇರುವಂತಾಗಿದೆ. ಒಂದೊಂದು ಎಕರೆಗೆ ಸುಮಾರು 30 ರಿಂದ 50 ಸಾವಿರ ರೂಪಾಯಿಯವರೆಗೆ ಈ ದುಬಾರಿ ಮಾನದಲ್ಲಿ ಖರ್ಚು ಮಾಡತಕ್ಕಂಥ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿಯೊಳಗೆ ಅವರಿಗೆ 5–6 ಚೀಲ ಭತ್ತ ಬಂದರೆ ಇದರಿಂದ ಯಾವುದಕ್ಕೂ ಆಗದೇ ಇರುವಂತಹ ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ಅಲ್ಲಿ ಇರತಕ್ಕಂತಹ ಹಾರ್ವೆಸ್ಟಿಂಗ್ ಮೆಷಿನ್‌ಗಳಿಂದಲೂ ಕೂಡ ಈ ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇಂತಹ ಸಂದರ್ಭದೊಳಗೆ ಅಲ್ಲಿನ ಪರಿಸ್ಥಿತಿಯನ್ನು ನಾನು ಹೇಳಲೇಬೇಕಾಗುತ್ತದೆ. ನೀವು ಅಂದರೆ ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ ಎಲ್ಲರಿಗೂ ಅನುಕೂಲವನ್ನು ಮಾಡಿಕೊಡುತ್ತೀರಿ. ಆದರೆ ನಮ್ಮ ದೇಶದ ಬೆನ್ನೆಲುಬಾಗಿರುವ ರೈತ ಸಮುದಾಯಕ್ಕೆ ಇಂತಹ ಸಂದರ್ಭದೊಳಗೆ ಸರ್ಕಾರ ಸಹಾಯಕ್ಕೆ ಬರದಿದ್ದರೆ ನಮ್ಮ ಆಡಳಿತ ವ್ಯವಸ್ಥೆ ಇದ್ದೂ ಇಲ್ಲದ ಹಾಗಾಗುತ್ತದೆ ಎಂದು ಹೇಳಬಯಸುತ್ತೇನೆ. ಸಿ.ಆರ್.ಎಫ್. ಮೇಲೆ ಡಿಪೆಂಡ್ ಆಗದೆಯೇ ರಾಜ್ಯ ಸರ್ಕಾರ ಸಂಕಷ್ಟದಲ್ಲಿರುವ ಆ ರೈತರ ನೆರವಿಗೆ ಬರಬೇಕಾಗುತ್ತದೆ. ಪ್ಯಾಕೇಜ್ ರೂಪದಲ್ಲಿ ಒಂದು ಎಕರೆಗೆ ಕನಿಷ್ಠ 30,000 ರೂಪಾಯಿಯನ್ನು ಪರಿಹಾರವನ್ನಾಗಿ ಕೊಡಬೇಕಾಗುತ್ತದೆ. ಹಿಂದೆ ಬೇಕಾದಷ್ಟು ಕೊಟ್ಟಿದ್ದು ಇದೆ. ಕಳೆದ 3–4 ವರ್ಷಗಳಲ್ಲಿ ತೋಟಗಾರಿಕಾ ಬೆಳೆ

ಇದೇ ಆಲಿಕಲ್ಲು ಮಳೆಗೆ ತುತ್ತಾದಂತಹ ಸಂದರ್ಭದಲ್ಲಿ ಈ ರಾಜ್ಯ ಸರ್ಕಾರ ಅವರ ಸಹಾಯಕ್ಕೆ ಬಂದಿತ್ತು. ಬಹುಶ: ಈ ವಿಚಾರವನ್ನು ಬಹಳಷ್ಟು ಜನ ಸದಸ್ಯರು ಮರೆತಿರಲಿಕ್ಕಿಲ್ಲ. ಆ ರೀತಿಯಲ್ಲಿ ಇಡೀ 8 ಜಿಲ್ಲೆಯಲ್ಲಿನ ಕೃಷಿ ಬೆಳೆ ನಷ್ಟವಾಗಿರಬಹುದು. ಬಿಜಾಪುರ, ಬಾಗಲಕೋಟೆ, ಮತ್ತು ಹಿಂದುಳಿದಂತಹ ಬಯಲು ಪ್ರದೇಶಗಳಾದ ಕೊಪ್ಪಳ, ಗುಲ್ಬರ್ಗಾ ಜಿಲ್ಲೆಯಲ್ಲಿನ ತೋಟಗಾರಿಕೆ ಇರಬಹುದು ಇಲ್ಲಿ ಕೂಡ ಆಲಿಕಲ್ಲು ಮಳೆಯಿಂದಾಗಿ ಈ ಎಲ್ಲಾ ಬೆಳೆಗಳೂ ಸಂಪೂರ್ಣವಾಗಿ ನಾಶವಾಗಿವೆ. ತೋಟಗಾರಿಕಾ ಬೆಳೆಯಾದ ಮಾವು ಬೆಳೆ ಏನು ಇದೆ ಇದೂ ಕೂಡ ಈ ಆಲಿಕಲ್ಲು ಮಳೆಯಿಂದಾಗಿ ಸ್ಪಷ್ಟವಾಗಿ ಅರ್ಧಕ್ಕಿಂತ ಕಡಿಮೆ ಬೆಳೆ ತೆಗೆಯುವ ಪರಿಸ್ಥಿತಿ ಇದೆ. ಈ ಮಾವು ಬೆಳೆಯನ್ನು ಕಟಾವಿಗೆ ಕೊಟ್ಟಿರತಕ್ಕಂತಹವರು ಅಲ್ಲಿಂದ ಜಾಗವನ್ನು ಖಾಲಿ ಮಾಡಿದ್ದಾರೆ. ಇಂತಹ ಸಂದರ್ಭದೊಳಗೆ ನಮ್ಮ ಸರ್ಕಾರ ಮತ್ತು ನಾವೆಲ್ಲರೂ ಕೂಡ ರೈತರ ನೆರವಿಗೆ ಬರುವುದನ್ನು ನಾವ್ಯಾರೂ ಮರೆಯುವುದಕ್ಕಾಗುವುದಿಲ್ಲ. ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಭಾನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಆ ಕಡೆ ಬಂದಾಗ ಕಣ್ಣಾರೆ ನೋಡಿದ್ದಾರೆ. ನೀವು ರೈತರನ್ನು ಏನಾದರೂ ಅಲಕ್ಷ್ಯ ಮಾಡುವುದೇ ಆದರೆ ಬಹುಶ: ರೈತರು ನಿಮ್ಮನ್ನು ಮತ್ತು ನಮ್ಮನ್ನು ಕ್ಷಮಿಸುವುದಿಲ್ಲ. ಆ ಭಾಗದ ಜನ ಪ್ರತಿನಿಧಿಗಳನ್ನಂತೂ ಆ ಭಾಗದ ಜನರು ಕ್ಷಮಿಸುವುದಕ್ಕಾಗುವುದಿಲ್ಲ. ಈ ಹಿಂದೆ ರೈತರು ಒಂದೇ ಒಂದು ಬಂದ್‌ಗೆ ಕರೆಯನ್ನು ಕೊಟ್ಟಂತಹ ಸಂದರ್ಭದಲ್ಲಿ ಇಡೀ ತಾಲ್ಲೂಕಿನ ಜನರು ತಮ್ಮ ಇಡೀ ವ್ಯವಹಾರಗಳನ್ನು ಬಂದ್ ಮಾಡಿ, ರಸ್ತೆಗಳನ್ನು ಬಂದ್ ಮಾಡಿ ಇಡೀ ರಾಜ್ಯದಲ್ಲಿ ಆಗಿರತಕ್ಕಂತಹ ಅನಾಹುತಗಳನ್ನು ಮಾಧ್ಯಮದ ಮೂಲಕ ತಾವೆಲ್ಲರೂ ನೋಡಿದ್ದೀರಿ. ಜನರು ಎಷ್ಟೊಂದು ರೋಸಿ ಹೋಗಿದ್ದಾರೆ ಎಷ್ಟೊಂದು ಕಷ್ಟಕ್ಕೆ ಈಡಾಗಿದ್ದಾರೆ ಎನ್ನುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ತೋಟಗಾರಿಕಾ ಬೆಳೆ ಮತ್ತು ದನಕರುಗಳು ಕೂಡ ಸಾವಿಗೀಡಾಗಿದ್ದು ಇದರಿಂದ ಕೂಡ ಆ ರೈತರು ನಷ್ಟವನ್ನು ಅನುಭವಿಸಿದ್ದಾರೆ. ಸರ್ಕಾರ ಜಾನುವಾರುಗಳ ರಕ್ಷಣೆಗೂ ಬರಬೇಕಾಗುತ್ತದೆ. ಇನ್ನು ಉಳಿದಿರತಕ್ಕಂತಹ ಹುಲ್ಲನ್ನು ಕಟಾವು ಮಾಡಿದ ಮೇಲೆ ಸರ್ಕಾರ ಇವೆಲ್ಲವನ್ನೂ ತಮ್ಮ ಹಿಡಿತದಲ್ಲಿ ತೆಗೆದುಕೊಂಡು ಸಬ್ಸಿಡಿ ರೂಪದಲ್ಲಿ ಕೊಡುತ್ತೀರೋ ಇನ್ನೊಂದು ರೀತಿಯಲ್ಲಿ ಪರಿಹಾರವನ್ನು ಕೊಡುತ್ತೀರೋ ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಆ ಹುಲ್ಲನ್ನು ಕಟಾವು ಮಾಡಿಕೊಂಡು ಆ ರೈತರನ್ನು ಉಳಿಸಬೇಕಾಗುತ್ತದೆ. ಈ ರೈತರಿಗೆ ಆರ್ಥಿಕ ನೆರವನ್ನು ಪರಿಹಾರದ ರೂಪದಲ್ಲಿ ನೀಡಬೇಕಾಗುತ್ತದೆ. ಇನ್ನು ಬ್ಯಾಂಕಿನಲ್ಲಿ ಈ ರೈತರು ಸಾಕಷ್ಟು ಸಾಲವನ್ನು ಮಾಡಿದ್ದಾರೆ. ಈ ಸಾಲಗಳನ್ನು ಮರುಪಾವತಿ ಮಾಡುವುದಕ್ಕೆ ಆ ರೈತರಿಗೆ ಶಕ್ತಿ ಇಲ್ಲದಂತಾಗಿದೆ. ಈ ಸಂದರ್ಭದಲ್ಲಿ ಈ ಸಾಲ ಮರು ಪಾವತಿ ಮಾಡುವಂತಹ ಸಂದರ್ಭದಲ್ಲಿ ಅವರು ಪಡೆದಿರುವ ಸಾಲಗಳನ್ನು ದೀರ್ಘಾವಧಿಯ ಸಾಲವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಆದೇಶವನ್ನು ಎಲ್ಲಾ

ಬ್ಯಾಂಕುಗಳಿಗೆ ಸೂಕ್ತ ಆದೇಶವನ್ನು ಸರ್ಕಾರ ಕೊಡಿಸಬೇಕಾಗುತ್ತದೆ. ಇಂತಹ ಕೆಲಸ ಮಾಡಿದ್ದೇ ಆದರೆ ಮಾತ್ರ ನಾವು ರೈತರನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ಪರಿಸ್ಥಿತಿಯೊಳಗೆ ಸರ್ಕಾರ ಮುಂದೆ ಬರಬೇಕು. ಇವತ್ತು ಬಿ.ಬಿ.ಎಂ.ಪಿ. ಎಷ್ಟು ತುರ್ತು ಇದೆಯೋ ಅದೆಲ್ಲಕ್ಕಿಂತಲೂ ಮಾನವೀಯತೆಯ ದೃಷ್ಟಿಯಿಂದ ಸಂಕಷ್ಟದಲ್ಲಿರುವ ಈ ರೈತರ ನೆರವಿಗೆ ಸರ್ಕಾರ ಬರಬೇಕಾಗುತ್ತದೆ. ಇದಕ್ಕಾಗಿಯೇ ನೀವು ವಿಶೇಷ ಅಧಿವೇಶನವನ್ನು ಕರೆದಿದ್ದರೂ ಕೂಡ ನಾಡಿನ ಜನ ಅದನ್ನು ಮೆಚ್ಚಿಕೊಳ್ಳುತ್ತಿದ್ದರು. ಯಾವುದಾದರೂ ಒಂದು ಪ್ಯಾಕೇಜಿನ ಮೂಲಕ ಸರ್ಕಾರ ರೈತರ ನೆರವಿಗೆ ಬರಬೇಕಾಗುತ್ತದೆ. ಆ ಮೂಲಕ ರೈತರು ಮುಂದೆ ಬೆಳೆಯನ್ನು ಬೆಳೆಯುವುದಕ್ಕೆ ತಾವು ಅನುಕೂಲವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸೋಮಣ್ಣ ಮ. ಬೇವಿನ ಮರದ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮೊನ್ನೆ ಆದಂತಹ ಅಕಾಲಿಕ ಮಳೆಯಿಂದಾಗಿ ರಾಜ್ಯದ ಸುಮಾರು 9 ಜಿಲ್ಲೆಗಳಲ್ಲಿ ಬಹಳಷ್ಟು ರೈತರು ಬೆಳೆದಂತಹ ಕೊಯ್ಲು ಅಂದರೆ ಉತ್ಪನ್ನ ಕೈಗೆ ಬರುವಂತಹ ಸಮಯದಲ್ಲಿ ಆಲಿಕಲ್ಲು ಮಳೆ ಬಂದು ಬಹಳಷ್ಟು ಹಾನಿಯಾಗಿರುವಂಥಾದ್ದು ತಮಗೆಲ್ಲರಿಗೂ ಗೊತ್ತಿರುವಂತಹ ವಿಷಯವಾಗಿದೆ. ಸರ್ಕಾರ ಇಂದು ಯಾವ ಒಂದು ವಿಚಾರವನ್ನು ಇಟ್ಟುಕೊಂಡು ಈ ತುರ್ತು ಅಧಿವೇಶನವನ್ನು ಕರೆದಿದ್ದಾರೆಯೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇಲ್ಲಿ ಹಿರಿಯ ಸಚಿವರು ಕುಳಿತಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ ಮಳೆ ಬಂದು ಬೆಳೆ ನಷ್ಟವಾಗಿ 6–7 ತಿಂಗಳು ಕಳೆದರೂ ಕೂಡ ಯಾವ ರೈತರಿಗೆ ಪರಿಹಾರದ ಮೂಲಕವಾಗಿ ಸಿಗಬೇಕಾದ ಅನೇಕ ಸವಲತ್ತುಗಳ ಬಗ್ಗೆ ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡುವಂತಹ ಅವಕಾಶಗಳು ದೊರೆತಂತಹ ಉದಾಹರಣೆಗಳು ಬಹಳಷ್ಟು ಇವೆ. ಆದರೆ ಇದೇ ತಿಂಗಳ 11ನೇ ತಾರೀಖಿನಿಂದ 4 ದಿನಗಳ ಕಾಲ ಸತತವಾಗಿ ನಿರೀಕ್ಷೆಗೂ ಮೀರಿ ಮಳೆ ಏನು ಯಾವ ಭಾಗದಲ್ಲಿ ಬಿದ್ದಿದೆ ಅಲ್ಲಿ ಲಕ್ಷಾಂತರ ಹೆಕ್ಟೇರಿಗೂ ಹೆಚ್ಚು ಭತ್ತ, ಗೋಧಿ, ಮೆಕ್ಕೆಜೋಳ, ಗೋವಿನ ಜೋಳ ಮತ್ತು ಮಾವು ಬೆಳೆದಂತಹ ಅನೇಕ ರೈತರಿಗೆ ಬಹಳವಾಗಿ ನಷ್ಟವಾಗಿದೆ. ಗುಲ್ಬರ್ಗಾ ಜಿಲ್ಲೆಯ ಸಿರಿವಾರ ಗ್ರಾಮದಲ್ಲಿ ನಾವು ಈ ರೈತರ ಬವಣೆಯನ್ನು ಕಣ್ಣಾರೆ ಕಂಡಿದ್ದೇನೆ. ಅಲ್ಲಿ ಅವರು ಬಹಳಷ್ಟು ತೊಂದರೆಗೆ ಈಡಾಗಿದ್ದನ್ನು ಕಂಡಿದ್ದೇನೆ. ನಾನು ಸಿರಿವಾರ ಗ್ರಾಮಕ್ಕೆ ಹೋದಾಗ ಸರ್ಕಾರದ ಕಾರ್ಯದರ್ಶಿಯವರು ಮತ್ತು ಜಿಲ್ಲಾಧಿಕಾರಿಗಳು ಆ ಹೊಲಕ್ಕೆ ಹೋಗಿದ್ದರು. ಇದನ್ನು ನಾವು ಕೂಡ ನೋಡಿದ್ದೇವೆ. ಇದನ್ನು ಕಂಡ ಆ ರೈತ ಏನು ಹೇಳಿದ ಅಂದರೆ "ನೋಡ್ರಿ ಸಾಹೇಬರೆ, ನೀವು ಇಲ್ಲಿ ಬಂದಿದ್ದೀರಿ, ನಮ್ಮ ಹೊಲ ಎಷ್ಟು ಲುಕ್ಸಾನಾಗಿದೆ ಎಂದು ಉದಾಹರಣೆ ಕೊಡುತ್ತೇನೆ ನೀವು ಹೇಗೆ ಇದನ್ನು ಸರ್ವೆ ಮಾಡುತ್ತೀರಿ ಎಂದು ಅಲ್ಲಿಗೆ ಬಂದಂತಹ ಒಬ್ಬ ಎ.ಡಿ. (ಅಸಿಸ್ಟೆಂಟ್ ಡೈರೆಕ್ಟರ್) ಅವರನ್ನು ಕೇಳಿದರೆ, ಅವರು ಇಲ್ಲಾ

ಇನ್ನೂ 15–20 ದಿವಸವಾದರೂ ಇದನ್ನು ಸರ್ವೆ ಮಾಡುವುದಕ್ಕೆ ಆಗುವುದಿಲ್ಲ ನಮ್ಮಲ್ಲಿ ಇರತಕ್ಕಂತಹ ಸಿಬ್ಬಂದಿಯೇ ಇಷ್ಟು. ನಾವು ದಿನಕ್ಕೆ ಬಹಳ ಅಂದರೆ 25 ರಿಂದ 50 ಹೆಕ್ಟೇರ್ ಸರ್ವೆ ಮಾಡಬಹುದೇ ಹೊರತಾಗಿ ಅದಕ್ಕಿಂತ ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು." 11ನೇ ತಾರೀಖಿನಿಂದ 4 ದಿನಗಳ ಕಾಲ ಮಳೆಯಾಗಿದೆ ಇವತ್ತು 17ನೇ ತಾರೀಖಿನಲ್ಲಿ ಇದ್ದೇವೆ, ಇವತ್ತಿನ ತನಕ ನೀವು ಮಳೆಯಿಂದ ಹಾನಿಗೊಳಗಾದ ಎಷ್ಟು ಎಕರೆ ಪ್ರದೇಶಗಳನ್ನು ಸರ್ವೆ ಮಾಡಿದ್ದೀರಿ ಎಂದು ಕೇಳಿದಾಗ, ಇಲ್ಲಿಯವರೆಗೆ 1430 ಎಕರೆ ನಾವು ಸರ್ವೆ ಮಾಡಿದ್ದೇವೆಂದು ಹೇಳಿದರು. 1430 ಹೆಕ್ಟೇರ್ ಅಲ್ಲ. 1430 ಎಕರೆ ಸರ್ವೆ ಮಾಡಿದ್ದಾರೆ. ಅಲ್ಲಿ ಒಬ್ಬ ರೈತನು ನೀವು ಯಾವ ರೀತಿ ಇದನ್ನು ಸರ್ವೆ ಮಾಡಿದ್ದೀರಿ ನಮಗೆ ಎಷ್ಟು ಹಣವನ್ನು ಪರಿಹಾರವಾಗಿ ಕೊಡುತ್ತೀರಿ ಎಂದು ಕೇಳಿದ್ದಕ್ಕೆ ಇಲ್ಲಾ ಒಂದು ಎಕರೆ ಎಂದು ಏನು ಇದೆಯಲ್ಲಾ ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಲುಕ್ಸಾನಾಗಿದ್ದರೆ ಒಂದು ಎಕರೆಗೆ ಇಷ್ಟು ಹಣವನ್ನು ಕೊಡುತ್ತೇವೆಂದು ಹೇಳಿದರು. ಇಡೀ ಹೊಲವೇ ಹಾಳಾಗಿದೆ, ಅಂಥಾದ್ದರಲ್ಲಿ ನೀವು ಅರ್ಧ, ಅರ್ಧಕ್ಕಿಂತ ಹೆಚ್ಚು ಹಾಳಾಗಿದೆ ಎಂದು ಹೇಗೆ ಸರ್ವೆ ಮಾಡುತ್ತೀರಿ ಎಂದು ರೈತ ಆ ರಸ್ತೆಯ ಬದಿಯಲ್ಲಿಯೇ ಚರ್ಚೆಯಾಯಿತು. ಆ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಹೇಳಿದ್ದೆವು. ಅನೇಕ ಬಾರಿ ರೈತರು ನಮ್ಮ ದೇಶದ ಬೆನ್ನೆಲುಬು ಎಂದು ಹೇಳುತ್ತೇವೆ. ಅವನು ಬಿತ್ತಿದರೆ ದೇಶ ಉಳಿಯುತ್ತದೆ, ಅವನು ಬೆಳೆ ಬೆಳೆದರೆ ದೇಶ ಉಳಿಯುತ್ತದೆಂದು ಹೇಳುತ್ತೇವೆ. ನಾವು ಯಾವುದೇ ಒಂದು ವಿಷಯವನ್ನು ತೆಗೆದುಕೊಂಡಾಗ ಬಹಳಷ್ಟು ಅಭಿವೃದ್ಧಿ ಕಾರ್ಯಗಳ ಬಗ್ಗೆ ಹೇಳುತ್ತಿರುತ್ತೇವೆ. ಕಾರ್ಖಾನೆಗಳು ಸುಟ್ಟರೆ ಇಲ್ಲವೇ ಲುಕ್ಸಾನ್ ಆದರೆ ಅದಕ್ಕೆ ಪರಿಹಾರವನ್ನು ಕೊಡುತ್ತಾರೆ. ಆದರೆ ಈ ರೈತನಿಗೆ ನುಕ್ಸಾನಾಗಿ 9 ದಿನಗಳಾದರೂ ಕೂಡ ಬೇರೆ ಬೇರೆ ರೀತಿಯಲ್ಲಿ ಒದ್ದಾಡುತ್ತಿದ್ದರೂ ಪರಿಹಾರ ಸಿಕ್ಕಿಲ್ಲ. ರಾಯಚೂರು ಜಿಲ್ಲೆಯ ಮಾನ್ವಿ ಮುಂತಾದ ಭಾಗಗಳಲ್ಲಿ 250 ರಿಂದ 300 ಮನೆಗಳು ಹಾಳಾದವು. ಆ ರೈತ ಕುಟುಂಬ ಮತ್ತು ಕೂಲಿಕಾರರ ಕುಟುಂಬಗಳು ಬೀದಿಗಿಳಿದು ಅಲ್ಲಿಯೇ ಗುಡಾರಗಳನ್ನು ಹಾಕಿಕೊಂಡು ಅಡಿಗೆ ಮಾಡಿಕೊಂಡು ಊಟ ಮಾಡುತ್ತಿದ್ದಾರೆ. ಅವರುಗಳಿಗೆ ಸರ್ಕಾರ ಇವತ್ತಿನವರೆಗೂ ಕೂಡ ಯಾವುದೇ ರೀತಿಯ ಸವಲತ್ತುಗಳನ್ನು ಕೊಟ್ಟಿಲ್ಲ. ಅಲ್ಲಿ ಅನಾಹುತವಾಗಿ 15 ಜನರು ಸತ್ತಿದ್ದಾರೆ. ಆ ಕುಟುಂಬಕ್ಕೆ ಸಾಂತ್ವನ ಹೇಳಿಲ್ಲ. ಭತ್ತ ಮತ್ತು ತೋಟಗಾರಿಕಾ ಬೆಳೆಗಳು ಏನು ನಷ್ಟವಾಗಿವೆ ಅಲ್ಲಿ ಸರಿಯಾದ ಸರ್ವೆ ಆಗಿಲ್ಲ. ಮಳೆ ಅನಿರೀಕ್ಷಿತವಾಗಿ ಎಷ್ಟು ಬೀಳಬೇಕಾಗಿತ್ತೋ ಅದಕ್ಕಿಂತ ಸಾವಿರ ಪಟ್ಟು ಹೆಚ್ಚು ಬಿದ್ದಿದೆ ಎಂದು ಹೇಳಿದಾಗ ಎಲ್ಲಾ ರೀತಿಯ ಅನಾಹುತಗಳು ಈ 8 ಜಿಲ್ಲೆಗಳಲ್ಲಿ ಆಗಿದೆ. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ರೈತರಿಗೆ ಪರಿಹಾರವನ್ನು ಕೇಂದ್ರ ಸರ್ಕಾರದಿಂದ ಕೊಡಿಸುತ್ತೀರೋ, ರಾಜ್ಯ ಸರ್ಕಾರದಿಂದ ಕೊಡಿಸುತ್ತೀರೋ ಗೊತ್ತಿಲ್ಲ. ಆದರೆ ನನ್ನ ಕಳಕಳಿಯ ವಿನಂತಿ ಏನೆಂದರೆ ನೀವು ಯಾವಾಗ ಎಷ್ಟು ಹಣವನ್ನು ರೈತರಿಗೆ ಕೊಡುತ್ತೀರಿ ಎನ್ನುವುದನ್ನು ನಾನು ಇಂದು ಸ್ಪಷ್ಟವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಅಲ್ಲಿನ

ಹೊಲಗಳಿಗೆ ಹೋಗಿ ನೋಡಿದ್ದೇವೆ. ನಾವು ನೋಡಿದ ಪ್ರಕಾರ ಅಲ್ಲಿಯ ರೈತರಿಗೆ ಒಂದು ಕಾಳು ಸಹ ಸಿಗುವುದಿಲ್ಲ. ನಮ್ಮ ಕಡೆ ಚಾಪೆ ಹಾಸಿದ ಹಾಗೆ ಆಗಿದೆ ಎಂದು ಹೇಳುತ್ತಾರೆ, ಆ ರೀತಿಯಲ್ಲಿ ಹೊಲಗಳು ಆಗಿವೆ. ಬೆಳೆಗಳು ಎತ್ತರವಾಗಿ 35–40–45 ಕ್ವಿಂಟಾಲ್ ಬೆಳೆಗಳನ್ನು ಹೊಲದಲ್ಲಿ ಬೆಳೆಯುತ್ತಾರೆ. ಬೇಸಿಗೆಯ ಪೀಕ್ ಆ ಕಡೆ ಸುಮಾರು 75 ಚೀಲ ಬರುತ್ತದೆಂದು ಹೇಳುತ್ತಾರೆ. ಆದರೆ ಆ ಪೀಕ್ ಸಂಪೂರ್ಣವಾಗಿ ಹಾಸಿ ಹೋಗಿದೆ. ಹೊಲದಲ್ಲಿ ಕಾಲು ಇಟ್ಟರೆ ಮೊಣಕಾಲಿನಷ್ಟು ನೀರು ಇದೆ. ಅಲ್ಲಿ ಕೊಳೆತು ಗಬ್ಬು ನಾರುತ್ತದೆ. ಅಲ್ಲಿ ಅಂತಹ ಪರಿಸ್ಥಿತಿಯಲ್ಲಿ ರೈತರು ಇದ್ದಾರೆ. ನಾನು ಹಾವೇರಿ ಜಿಲ್ಲೆಯಿಂದ ಸುಮಾರು 620 ಕಿ.ಮೀ ದೂರದ ಗುಲಬರ್ಗಾಕ್ಕೆ ಹೋಗಿ ನೋಡಿದ್ದೇನೆ. ಅಲ್ಲಿನ ಜನ ಬಹಳಷ್ಟು ಒದ್ದಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರಿಗೆ ಮತ್ತು ಸರ್ಕಾರಕ್ಕೆ ನಾನು ವಿನಂತಿ ಮಾಡುವುದೇನೆಂದರೆ ನೀವು ಎಷ್ಟು ಕೊಡಬೇಕೆನ್ನುವ ನಿರ್ಣಯ ನಂತರ ಮಾಡಿ ಆದರೆ ಮೊದಲು ಸಾಯುತ್ತಿರುವ ರೈತರಿಗೆ, ರಸ್ತೆಯಲ್ಲಿದ್ದವರಿಗೆ, ದನಕರುಗಳನ್ನು ಕಳೆದುಕೊಂಡಂತಹವರಿಗೆ, ಮಕ್ಕಳನ್ನು ರಸ್ತೆಯಲ್ಲಿ ಬಿಟ್ಟಂಥವರಿಗೆ, ಮನೆ ಬಿದ್ದಂಥವರಿಗೆ, ಏನು ಆಶ್ರಯ ಕೊಡುತ್ತೀರಿ ಅದನ್ನು ಬೇಗ ಕೊಡಿ ಎಂದು ನನ್ನ ವಿನಂತಿ ಇದೆ. ಅದರ ಜೊತೆಗೆ ಬಹಳಷ್ಟು ಮಳೆಯಾದಾಗ ಹಿಂದೆ ಗಂಜಿ ಕೇಂದ್ರಗಳನ್ನು ತೆಗೆಯುತ್ತಿದ್ದರು. ಅದಕ್ಕಾಗಿ ಕೂಡಲೇ ರಾಯಚೂರು ಜಿಲ್ಲೆಯ ಮಾನ್ವಿ, ಕಲಬುರಗಿ ಜಿಲ್ಲೆಯ ಶಿರವಾರ, ಇಂತಹ ಎರಡು ಮೂರು ಊರುಗಳನ್ನು ಗುರುತಿಸಿ ಗಂಜಿ ಕೇಂದ್ರಗಳನ್ನು ತೆಗೆಯಬೇಕು ಅದರಿಂದ ಸಧ್ಯಕ್ಕೆ ಅಲ್ಲಿನ ಕುಟುಂಬಗಳು ಬದುಕುತ್ತವೆ ಎಂದು ಹೇಳಬಯಸುತ್ತೇನೆ. ತಾವೇನು ವೈಮಾನಿಕ ಪರೀಕ್ಷೆ ಮಾಡುವವರಿದ್ದೀರಿ ಅದನ್ನು ಮಾಡಿ. ಆದರೆ ನೆಲದ ಮೇಲೆ ಹೋಗುವಂಥವರು, ಸೈಕಲ್ ಮೋಟರ್ ತೆಗೆದುಕೊಂಡು ಹೋಗುವಂಥವರು ಹೋಗಿ ನೋಡಿದಾಗ ಅಲ್ಲಿಯ ಜೀವನ ಪರಿಸ್ಥಿತಿ ಗೊತ್ತಾಗುತ್ತದೆ. ನಾನು ಅಲ್ಲಿಗೆ ಹೋದಾಗ ಅಲ್ಲಿನ ಫೋಟೊ, ಅಲ್ಲಿನ ಜನ ಜೀವನದ ಬಗ್ಗೆ ಪತ್ರಿಕೆಯಲ್ಲಿ ಬಂದಂಥ ಫೋಟೊಗಳನ್ನು ಕೂಡ ತೆಗೆದುಕೊಂಡು ಬಂದಿದ್ದೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಶಿರವಾರ ಕಲಬುರಗಿ ಜಿಲ್ಲೆಯಲ್ಲಿ ಬರುವುದಿಲ್ಲ. ಅದು ರಾಯಚೂರು ಜಿಲ್ಲೆಯಲ್ಲಿ ಬರುತ್ತದೆ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ನಾನು ಸ್ವತಃ ಮಾನ್ವಿ ತಾಲ್ಲೂಕಿನ ಶಿರವಾರಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅದು ರಾಯಚೂರು ಅಥವಾ ಕಲಬುರಗಿ ಇರಲಿ ಆದರೆ ನಾನು ಅಲ್ಲಿ ಸ್ವತಃ ಹೋಗಿ ಬಂದಿದ್ದೇನೆ. ನನಗೆ ಊರು ಹೊಸದು. ಆದರೆ ರಾಜ್ಯದ ಪ್ರಧಾನ ಕಾರ್ಯದರ್ಶಿಯಾಗಿ ಅಲ್ಲಿ ಏನಾಗಿದೆ ಎಂದು ನೋಡಿದ್ದು ನಿಜ ಇದೆ. ಆ ಊರು ತಪ್ಪು ಆಗಿದ್ದರೆ ತಿದ್ದುಪಡಿ ಮಾಡಿಕೊಳ್ಳಿ ನನ್ನದೇನು ತಕರಾರು ಇಲ್ಲ.

**ಸಭಾಪತಿಯವರು:–** ಆಯಿತು ಮುಂದಕ್ಕೆ ಹೋಗಿ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಒಟ್ಟು ಹೈದ್ರಾಬಾದ್ ಕರ್ನಾಟಕದಲ್ಲಿ ಆ ಊರು ಇದೆ. ಆದರೆ ಅದು ಶಿರವಾರ, ಶಿರಿಯೂರು ಗೊತ್ತಿಲ್ಲ. ಅದು ಯಾವುದೇ ಜಿಲ್ಲೆ ಇರಲಿ.

**ಸಭಾಪತಿಯವರು:–** ಆಯಿತು ಮುಂದಕ್ಕೆ ಹೋಗಿ. ಅದರ ಬಗ್ಗೆ ಚರ್ಚೆ ಬೇಡ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ,

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಜಿಲ್ಲಾ ಉಸ್ತುವಾರಿ ಸಚಿವರು ಹೋಗದೆ ಇರುವಂಥ ಜಾಗಕ್ಕೆ ಇವರು ಹೋಗಿ ಬಂದಿದ್ದಾರೆಂದು ಸಂತೋಷ ಪಡಿ. ಜಿಲ್ಲೆ ಯಾವುದು ಎಂದು ಚರ್ಚೆ ಮಾಡುವುದಕ್ಕೆ ಹೋಗಬೇಡಿ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಜನಜೀವನದ ಪರಿಸ್ಥಿತಿ ನಿಭಾಯಿಸಬೇಕೆಂದರೆ ನಿಮಗೆ ಕಳಕಳಿ ಇದ್ದರೆ, ರೈತರು ಸತ್ತ ಮೇಲೆ ಮಾಲೆ ಹಾಕುವುದಕ್ಕಿಂತ ಪೂರ್ವದಲ್ಲಿ, ಅವರು ವಿಷ ತೆಗೆದುಕೊಂಡು ಸಾಯುವುದಕ್ಕಿಂತ ಪೂರ್ವದಲ್ಲಿ ದಯಮಾಡಿ ನೀವು ಹೋಗಿ ಏನು ಸಾಧ್ಯವಿದೆ ಆ ಪರಿಹಾರವನ್ನು ಕೊಡಿ. ಆದರೆ ಅಧಿಕಾರಿಗಳ ಮೇಲೆ ಬಿಡಬೇಡಿ. ಅಧಿಕಾರಿಗಳು ನಿನ್ನ ಹೊಲ ಇಷ್ಟು ಇತ್ತೇನು? ನಿನ್ನ ಸರ್ವೆ ನಂಬರ್ ಯಾವುದು, ನಿನ್ನ ಉತಾರ್ ಯಾವುದು, ಈ ರೀತಿ ತೆಗೆದುಕೊಳ್ಳುವುದರ ಬದಲು ಸ್ವತಃ ತಾವೇ ಜಿಲ್ಲಾಧಿಕಾರಿಗಳನ್ನು, ತಹಸೀಲ್ದಾರರನ್ನು ಕರೆದುಕೊಂಡು ಆ ಊರಿಗೆ ಹೋಗಿ ಅವರಿಗೆ ಪರಿಹಾರವನ್ನು ಕೊಟ್ಟರೆ ಅವರು ಬದುಕಬಹುದು ಎಂದು ನನ್ನ ವಿಚಾರ. ಆದ್ದರಿಂದ ಯಾವ ಕುಟುಂಬಗಳು ಬೀದಿ ಪಾಲಾಗಿವೆ ಅವುಗಳನ್ನು ಸಂರಕ್ಷಣೆ ಮಾಡುವಂಥದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅವರನ್ನು ತಾವು ಎತ್ತಿ ಹಿಡಿಯಬೇಕು. ಅದರ ಜೊತೆಗೆ ತಾವು ಅವರಿಗೆ ಏನು ಕೃಷಿ ಸಾಲವನ್ನು ಕೊಟ್ಟಿದ್ದೀರಿ ಅದನ್ನು ಮನ್ನಾ ಮಾಡಿದರೆ ಆ ರೈತರು ನಿಮ್ಮ ಫೋಟೊ ಇಟ್ಟುಕೊಂಡು ನಿಮಗೆ ಪೂಜೆ ಮಾಡುತ್ತಾರೆ. ಈ ಸರ್ಕಾರ ಬಹಳಷ್ಟು ಒಳ್ಳೆಯ ಕೆಲಸ ಮಾಡಿದೆ, ನಮ್ಮ ಸಾಲ ಮನ್ನಾ ಮಾಡಿದೆ, ಇನ್ನು ಹೊಸದಾಗಿ ಸಾಲ ಕೊಡುತ್ತಾರೆ ಎಂದು ಹೇಳುತ್ತಾರೆ. ಈ ಕೆಲಸವನ್ನು ಸರ್ಕಾರ ಬಹಳಷ್ಟು ಶೀಘ್ರದಲ್ಲಿಯೇ ಮಾಡುತ್ತಾರೆಂದು ಈ ಸಂದರ್ಭದಲ್ಲಿ ಬಹಳಷ್ಟು ನೋವಿನಿಂದ ಹೇಳುತ್ತ ತಾವು ಪರಿಹಾರವನ್ನು ಬೇಗ ಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ರಾಜ್ಯದಲ್ಲಿ ಅಕಾಲಿಕ ಮಳೆಯಾಗಿದೆ. ಅತಿ ಮುಖ್ಯವಾಗಿ ತುಂಗಭದ್ರಾ ಅಚ್ಚುಕಟ್ಟು ಪ್ರದೇಶವಾದ ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಲ್ಲಿ ಮತ್ತು ಕೃಷ್ಣಾ ಅಚ್ಚುಕಟ್ಟು ಪ್ರದೇಶಗಳಾದ ಯಾದಗಿರಿ ಜಿಲ್ಲೆಯಲ್ಲಿ ಹೆಚ್ಚಿನ ರೈತರ ಬೆಳೆ ಹಾನಿಯಾಗಿದೆ. ಈ ರೀತಿಯ ಬೆಳೆ ನಾಶವನ್ನು ರೈತರು ಯಾವೊತ್ತು ನೋಡಿರಲಿಲ್ಲ. ತುಂಗಭದ್ರಾ ಪ್ರದೇಶದ ರೈತರು ಶೇಕಡ 90ರಷ್ಟು ಪ್ಯಾಡಿಯನ್ನು ಹಾಕಿದ್ದರು. ನದಿ ಪಕ್ಕದಲ್ಲಿ ನೀರು ಸಿಕ್ಕಿರತಕ್ಕಂಥ ಶೇಕಡ ಒಂದರಷ್ಟು ರೈತರು ಒಂದು ಎಕರೆಗೆ ಸುಮಾರು 45–50 ಚೀಲಗಳ ಬೆಳೆಗಳನ್ನು ತೆಗೆಯುತ್ತಾರೆ. ಆದರೆ ಶೇಕಡ 99ರಷ್ಟು ರೈತರು ಕೆನಾಲ್ ಆಧಾರಿತವಾಗಿದ್ದು ಇನ್ನು 8–10 ದಿನಗಳಲ್ಲಿ ಹಾರ್ವೆಸ್ಟ್ ಪ್ರಾರಂಭವಾಗುವ ಸ್ಥಿತಿಯಲ್ಲಿದ್ದರು. ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಪೋತನಾಳ ಗ್ರಾಮದ ಸುತ್ತ ಮುತ್ತಲಿನ ನಾಲ್ಕೈದು ಗ್ರಾಮಗಳಲ್ಲಿ ಇದು ಪ್ರಾರಂಭವಾಯಿತು. ಆಗ ನಾನು ಇಲ್ಲಿ ಬೆಂಗಳೂರಿನಲ್ಲಿದ್ದೆ. ಅಲ್ಲಿನ ಸುಮಾರು 210 ಮನೆಗಳ ಮೇಲಿನ ಟಿನ್‌ಶೀಟ್‌ಗಳು ಬಿದ್ದು ಹೋಗಿವೆ. ಅದಾದ ತಕ್ಷಣ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮಾತನಾಡಿ ರಾತ್ರೋರಾತ್ರಿ ಇಲ್ಲಿಂದ ಬಿಟ್ಟು ರಾಯಚೂರಿಗೆ ಹೋಗಿ ಅಲ್ಲಿನ ಲೋಕಲ್ ಶಾಸಕರೊಂದಿಗೆ ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ. ಅಲ್ಲಿನ ನಾಲ್ಕು ಗ್ರಾಮಗಳಲ್ಲಿ ಪೂರ್ತಿ ಬೆಳೆ ನಾಶವಾಗಿರುವುದನ್ನು ನಾವು ಕಂಡಿದ್ದೇವೆ. ಆ ರೈತರ ಜೊತೆ ನಾವು ಮಾತನಾಡಿದ್ದೇವೆ. ಮತ್ತು ಅದೇ ದಿವಸ ಸಾಯಂಕಾಲಕ್ಕೆ ಬೇರೆ ಬೇರೆ ಪ್ರದೇಶಗಳಲ್ಲಿ ಮಾನ್ವಿ, ಸಿಂಧನೂರು, ಗಂಗಾವತಿ ಮತ್ತು ಇತರ ಪ್ರದೇಶಗಳಲ್ಲಿಯೂ ಸಹಿತ ಮಳೆ ಮತ್ತು ಗಾಳಿಯಿಂದ ಬೆಳೆ ನಾಶವಾಗಿದೆ. ಸಹಜವಾಗಿ ಎಲ್ಲರೂ ಅದರ ಬಗ್ಗೆ ಗಮನವನ್ನು ಸೆಳೆದಿದ್ದಾರೆ. ಅದರ ಬಗ್ಗೆ ನಾವು ಜಿಲ್ಲಾಧಿಕಾರಿಯವರ ಮತ್ತು ಕೃಷಿ ಅಧಿಕಾರಿಗಳ ಗಮನವನ್ನು ಸೆಳೆದು ಕೂಡಲೇ ಸರ್ಕಾರಕ್ಕೆ ವರದಿ ಮಾಡಬೇಕೆಂದು ಹೇಳಿದ್ದೇವೆ. ಆದರೆ ವರದಿ ಮಾಡಲು ಸಾಕಷ್ಟು ತೊಂದರೆಯಾಗುತ್ತಿರುವ ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಅಲ್ಲಿನ ಬೆಳೆ ಎಲ್ಲಾ ನೆಲಸಮ ಆಗಿದೆ. ಕೆಳಗಡೆ ನೀರು ಇದೆ. ಅಲ್ಲಿನ ಬೆಳೆ ರಿಕವರಿ ಆಗದ ಪರಿಸ್ಥಿತಿಯಲ್ಲಿದ್ದಾರೆ. ಆ ಸಂದರ್ಭದಲ್ಲಿ ದಿನಾಂಕ 14ನೇ ತಾರೀಖು ಡಾ: ಬಾಬಾಸಾಹೇಬ್ ಅಂಬೇಡ್ಕರ್‌ರವರ ಜಯಂತಿ ಅಂಗವಾಗಿ ಜಿಲ್ಲಾ ಸಚಿವರು ಅಲ್ಲಿಗೆ ಆಗಮಿಸಿದ್ದರು. ಅವರು, ನಾನು, ಅಲ್ಲಿನ ಶಾಸಕರು, ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆಯ ಅಧಿಕಾರಿಗಳು, ಕೃಷಿ ಇಲಾಖೆಯ ಅಧಿಕಾರಿಗಳೆಲ್ಲಾ ಸೇರಿ ಮೊದಲನೆಯ ಬಾರಿ ಯಾವ ಪ್ರದೇಶದಲ್ಲಿ ಆಗಿದೆ ಆ ಪ್ರದೇಶಕ್ಕೆ ಭೇಟಿ ಕೊಟ್ಟು ಅಲ್ಲಿನ ರೈತರ ಜೊತೆ, ಜನರ ಜೊತೆ ಮಾತನಾಡಿ ಆವೊತ್ತೇ ಅಲ್ಲಿ ಆಗಿರತಕ್ಕಂಥ 210 ಮನೆಗಳಿಗೂ 2300 ರೂಪಾಯಿಯಂತೆ ಮಂತ್ರಿಗಳ ಮೂಲಕ ಚೆಕ್ ವಿತರಣೆ ಮಾಡುವಂಥ ಪ್ರಯತ್ನ ಮಾಡಿದ್ದೇವೆ. ಅದು ಮುಂದುವರೆದು ಅದೇ ದಿವಸ ಸಾಯಂಕಾಲಕ್ಕೆ ಬೇರೆ ಬೇರೆ ಪ್ರದೇಶಗಳಲ್ಲಿ ಮಾನ್ವಿ, ಸಿಂಧನೂರು, ಗಂಗಾವತಿ ಮತ್ತು

ಇತರ ಪ್ರದೇಶಗಳಲ್ಲಿಯೂ ಸಹಿತ ಮಳೆ ಮತ್ತು ಗಾಳಿಯಿಂದ ಬೆಳೆ ನಾಶವಾಗಿದೆ. ಅದು ಕೂಡ ಸರ್ಕಾರದ ಗಮನಕ್ಕೆ ಬಂದಿದೆ. 15ನೇ ತಾರೀಖು ಕೃಷಿ ಸಚಿವರು ಕೂಡ ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದಾರೆ ನಾವು ಸ್ಥಳೀಯ ಶಾಸಕರೊಂದಿಗೆ ಅವರೊಂದಿಗೆ ಮಾತನಾಡಿ ಇರತಕ್ಕಂಥ ಪರಿಸ್ಥಿತಿಯನ್ನು ಅವರ ಗಮನಕ್ಕೆ ತಂದಿದ್ದೇವೆ. ಅವರು ಕೂಡ ಅಧಿಕಾರಿಗಳನ್ನು ಕರೆದು ಬೆಳೆ ನಾಶದ ಬಗ್ಗೆ ಯಾವ ರೀತಿ ವರದಿ ಮಾಡಬೇಕೆಂದು ಮನವರಿಕೆ ಮಾಡಿ ಕೊಟ್ಟಿದ್ದಾರೆ. ಅದಾದ ನಂತರ ಜಿಲ್ಲಾ ಸಚಿವರು, ಶಾಸಕರು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದಾಗ ತಪ್ಪದೆ ಆ ಭಾಗಕ್ಕೆ ಬರುತ್ತೇನೆಂದು ಹೇಳಿದರು. ಅದಾದ ನಂತರ ಆ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಕೂಡ ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆ ಮಾಡಿದರೆ ಒಳ್ಳೆಯದು ಎಂದು ಹೇಳಿದ್ದರು. ಅದು ಪತ್ರಿಕೆಗಳಲ್ಲಿ ಬಂದಿತ್ತು. ಮರುದಿವಸ ನಾನು, ಮುಖ್ಯಮಂತ್ರಿಗಳು, ಶಿವರಾಜ ತಂಗಡಗಿಯವರು ಮೂವರು ಸೇರಿ ಕೊಪ್ಪಳಕ್ಕೆ ಹೋಗಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಒಂದು ತಾಸು ನಲವತ್ತೈದು ನಿಮಿಷಗಳ ಕಾಲ ನಾಲ್ಕು ಜಿಲ್ಲೆಗಳಲ್ಲಿ ವೈಮಾನಿಕ ಸಮೀಕ್ಷೆಯನ್ನು ಮಾಡಿದ್ದಾರೆ. ಮಾನ್ಯ ಸಭಾಪತಿಯವರೆ, ಆ ಸಂದರ್ಭದಲ್ಲಿ ನಮ್ಮ ಸನ್ಮಾನ್ಯ ಹಾಲಪ್ಪ ಆಚಾರ್‌ರವರು ಅಲ್ಲಿರತಕ್ಕಂತಹ ಶ್ರೀ ಕರಡಿ ಸಂಗಣ್ಣನವರು ಸಂಬಂಧಪಟ್ಟಂತಹ ಎಲ್ಲಾ ಶಾಸಕರುಗಳು ಮತ್ತು ಮಂತ್ರಿಗಳು ಭಾಗವಹಿಸಿದ್ದರು. ಅಲ್ಲಿ ಎಲ್ಲಾ ಪತ್ರಿಕಾ ಸ್ನೇಹಿತರು, ರೈತರುಗಳು, ಅಲ್ಲಿ ವೈಜ್ಞಾನಿಕ ಸರ್ವೇ ಮಾಡುವುದಕ್ಕೆ ಎರಡು ಭಾಗಕ್ಕೆ ಹೋಗಿ ನೋಡಿಕೊಂಡು ಬರಬೇಕೆಂದು ನಮ್ಮ ಭಾಗದ ರೈತರು ಹೇಳಿದಾಗ ಕಾರಿನಲ್ಲಿ ಮೊಟ್ಟಮೊದಲ ಎರಡು ಭಾಗದಲ್ಲಿ ಗಂಗಾವತಿಯಲ್ಲಿ ಅತೀ ಹೆಚ್ಚು ತೊಂದರೆಯಾಗಿರುವುದರಿಂದ ಎರಡು ಭಾಗಕ್ಕೆ ರೈತರು ಹೇಳಿರುವಂತಹ ಜಾಗಕ್ಕೆ ಹೋಗಿ ಜನಪ್ರತಿಗಳು ಮತ್ತು ರೈತರ ಸಮ್ಮುಖದಲ್ಲಿ ಮಾತನಾಡಿ, ಬೆಳೆ ನಾಶವಾಗಿರುವಂಥದ್ದು, ಆಗಿರುವಂತಹ ಅನಾಹುತವನ್ನು ಮಾನ್ಯ ಮುಖ್ಯಮಂತ್ರಿಗಳು ನೋಡಿ, ಅವರಿಗೆಲ್ಲಾ ಧೈರ್ಯ ಹೇಳಿ, ತಕ್ಷಣ ಇವತ್ತಿನ ದಿವಸವೇ ಕ್ಯಾಬಿನೆಟ್ ಇದೆ. ಕ್ಯಾಬಿನೆಟ್‌ನಲ್ಲಿ ಈ ವಿಷಯವನ್ನು ಚರ್ಚೆ ಮಾಡುತ್ತೇನೆ. ಮತ್ತೆ ಮುಂದೆ ಯಾವ ರೀತಿಯಾಗಿ ಜನರಿಗೆ ನಾವು ಸಹಾಯ ಮಾಡಬೇಕು ಅದನ್ನೆಲ್ಲಾ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟು ಬಂದಿದ್ದಾರೆ. ಇವತ್ತು ಅದು ಮುಂದುವರೆದ ನಂತರ ಈಗಾಗಲೇ ರಾಯಚೂರು ಜಿಲ್ಲೆಯಲ್ಲಿ ಸಮೀಕ್ಷೆಯಾಗಿದೆ. ನನಗೆ ಬಂದಿರತಕ್ಕಂತಹ ಮಾಹಿತಿಯ ಪ್ರಕಾರವಾಗಿ 18,000 ಹೆಕ್ಟೇರ್ ಪ್ರದೇಶದಲ್ಲಿ ಪೂರ್ಣ ಬೆಳೆ ನಾಶವಾಗಿದೆ ಎಂದು ವರದಿ ಬಂದಿದೆ. ಈಗಾಗಲೇ 8 ಜಿಲ್ಲೆಗಳಿಂದ 60,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಾಶವಾಗಿದೆ ಎಂದು ಕಂದಾಯ ಇಲಾಖೆಯವರು ಹೇಳುತ್ತಿದ್ದಾರೆ. ಒಟ್ಟಾರೆ ಹೇಳಬೇಕಾದರೆ ಈಗ ಆಗಿರತಕ್ಕಂತಹ ಅನಾಹುತ ಸರ್ಕಾರದ ಗಮನಕ್ಕೆ ಬಂದಿದೆ. ತಕ್ಷಣ ಇದರ ಬಗ್ಗೆ ಜನರಿಗೆ ಒಂದು Special Component ಆಗಿ ಯಾವುದಾದರು ವಿಶೇಷ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು. ಈಗಾಗಲೇ

ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಕೇಂದ್ರ ಸರ್ಕಾರ ಈ ಸಿಆರ್‌ಎಫ್ ರೂಲ್ಸ್ ಅನ್ನು ಬದಲಾವಣೆ ಮಾಡಿ 9,000 ರೂಪಾಯಿಗಳನ್ನು ಒಂದು ಹೆಕ್ಟೇರ್‌ಗೆ ಕೊಡುತ್ತಿದ್ದಂತಹ ಬೆಳೆ ಪರಿಹಾರವನ್ನು 13,000 ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದ್ದಾರೆ. ಕೇವಲ ಒಂದು ಹೆಕ್ಟೇರ್ ಬೆಳೆ ನಾಶಕ್ಕೆ ಕೇವಲ 13,000 ರೂಪಾಯಿಗಳ ಪರಿಹಾರವನ್ನು ಕೊಡುವುದರಿಂದ ರೈತರಿಗೆ ಏನು ಅನುಕೂಲವಾಗುವುದಿಲ್ಲ. ನಾನು ಒಬ್ಬ ರೈತನಾಗಿದ್ದೇನೆ. ನಾನು ಕೂಡ ಭತ್ತವನ್ನು ಬೆಳೆಯುತ್ತೇನೆ. ಕನಿಷ್ಠ ಒಂದು ಹೆಕ್ಟೇರ್‌ಗೆ 35,000 ರೂಪಾಯಿಗಳನ್ನು ರೈತರು ಖರ್ಚು ಮಾಡಿದ್ದಾರೆ. ಆ ದಿಸೆಯಲ್ಲಿ ಇವತ್ತು 13,000 ರೂಪಾಯಿಗಳನ್ನು ಹೆಕ್ಟೇರ್‌ಗೆ ಕೊಟ್ಟರೆ ಕೆಲವರಿಗೆ ಏಳೆಂಟು ಸಾವಿರ ರೂಪಾಯಿಗಳು ಮಾತ್ರ ಪರಿಹಾರದ ಹಣವಾಗಿ ಬರುತ್ತದೆ. ಅದರಲ್ಲಿ ಏನೂ ಅಗುವುದಿಲ್ಲ. ಅದುದರಿಂದ 2009ನೇ ಇಸವಿಯಲ್ಲಿ ಇದೇ ರೀತಿಯಾದಂತಹ ಒಂದು ದೊಡ್ಡ ವಿಪತ್ತು ನಮ್ಮ ತುಂಗಾಭದ್ರ ಅಚ್ಚುಕಟ್ಟಿನಲ್ಲಿ ಮತ್ತು ಕೃಷ್ಣ ಅಚ್ಚುಕಟ್ಟಿನಲ್ಲಿ ಬಂದಿತ್ತು. ಕೃಷ್ಣ ಮತ್ತು ತುಂಗಾದಲ್ಲಿ ಅತೀ ಹೆಚ್ಚು ನೀರು ಬಂದಿದ್ದರಿಂದ 4.5 ಲಕ್ಷ ಕ್ಯೂಸೆಕ್ಸ್ ನೀರು ಬಂದಿದ್ದರಿಂದ ರಾಯಚೂರು ಮತ್ತು ಬಳ್ಳಾರಿಯ ಎರಡೂ ಭಾಗದಲ್ಲಿ ಸಾಕಷ್ಟು ತೊಂದರೆಯಾಗಿ ಆನೇಕ ಗ್ರಾಮಗಳು ಮುಳುಗಡೆಯಾಗಿತ್ತು. ಅವತ್ತಿನ ದಿವಸ ವಿರೋಧ ಪಕ್ಷದ ನಾಯಕರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಕೂಡ ನಮ್ಮ ಭಾಗಕ್ಕೆ ಬಂದಿದ್ದರು. ಅನೇಕ ಟ್ರಾನ್ಸ್‌ಫಾರ್ಮರ್‌ಗಳು ಪೂರ್ಣ ಬಿದ್ದು ಹೋಗಿರತಕ್ಕಂತಹ ಸಂದರ್ಭದಲ್ಲಿ ಅವರು ಬಂದಾಗ ತಕ್ಷಣ ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರು. ಅಂತಹ ಸಂದರ್ಭದಲ್ಲಿ ರಾಷ್ಟ್ರದ ಪ್ರಧಾನ ಮಂತ್ರಿಯಾಗಿದ್ದಂತಹ ಶ್ರೀ ಮನಮೋಹನ್ ಸಿಂಗ್‌ರವರು UPA Chairman ಅಗಿರತಕ್ಕಂತಹ ಶ್ರೀಮತಿ ಸೋನಿಯಗಾಂಧಿಯವರು 10 ಜಿಲ್ಲೆಗಳಲ್ಲಿ ಏರಿಯಲ್ ಸರ್ವೇಯನ್ನು ಮಾಡಿ, ಕೊನೆಗೆ ರಾಯಚೂರಿನಲ್ಲಿ ಲ್ಯಾಂಡ್ ಅಗಿ ಅಲ್ಲಿ ರಾಜ್ಯ ಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಸಭೆ ನಡೆಸಿದ್ದು ಅದರಲ್ಲಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮತ್ತು ಕಂದಾಯ ಇಲಾಖೆಯ, ಕೃಷಿ ಇಲಾಖೆಯ ಕಾರ್ಯದರ್ಶಿಗಳು ಕೂಡ ಭಾಗವಹಿಸಿದ್ದರು. ಅದರ ಜೊತೆಯಲ್ಲಿ ಜನ ಪ್ರತಿನಿಧಿಗಳಾದ ಎಂ.ಪಿ.ಗಳು ಮತ್ತು ಸಚಿವರುಗಳು ಕೂಡ ಭಾಗವಹಿಸಿದ್ದರು. ಒಟ್ಟಾರೆ ಒಂದೂವರೆ ಗಂಟೆಗಳ ಕಾಲ ಮೀಟಿಂಗ್ ಮಾಡಿ 1,000 ಕೋಟಿ ರೂಪಾಯಿಗಳನ್ನು ಯುಪಿಎ ಸರ್ಕಾರದಿಂದ ತಕ್ಷಣ ಮಂಜೂರಾತಿ ಮಾಡಿ ಶ್ರೀ ಮನಮೋಹನಸಿಂಗ್‌ರವರು ಕರ್ನಾಟಕದಲ್ಲಿ ಅಗಿರತಕ್ಕಂತಹ ಅನಾಹುತಕ್ಕೆ 2009ನೇ ಇಸವಿಯಲ್ಲಿ ಸಹಾಯ ಮಾಡಿರುವಂತಹ ವಿಷಯ ನಮ್ಮ ಮುಂದೆ ಇದೆ. ಅದಾದ ನಂತರ ವರದಿಗಳೆಲ್ಲಾ ಹೋದ ಮೇಲೆ 1,000 ಕೋಟಿ ರೂಪಾಯಿಗಳ ಬದಲಾಗಿ 1620 ಕೋಟಿ ರೂಪಾಯಿಗಳಿಗೆ ಸಹಾಯಧನವನ್ನು ಹೆಚ್ಚು ಮಾಡಿದರು. ಇದು ನಮ್ಮ ಮುಂದಿದೆ. ಹಾಗಾಗಿ ಇದನ್ನು ಕೇವಲ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಎನ್ನದೇ ಎರಡು ಸರ್ಕಾರಗಳು ಸೇರಿ ತಕ್ಷಣ ರೈತರಿಗೆ ಸರಿಯಾದಂತಹ ರೀತಿಯಲ್ಲಿ ಒಂದು

ಸ್ಪೆಷಲ್ ಪ್ಯಾಕೇಜ್ ಅನ್ನು ಅನೌನ್ಸ್ ಮಾಡಬೇಕಾದಂತಹ ಪರಿಸ್ಥಿತಿ ಇವತ್ತು ನಮ್ಮೆಲ್ಲರ ಮೇಲಿದೆ. ಹೀಗಾಗಿ ಇವತ್ತು ಏನು ಅನಾಹುತಕ್ಕೆ ಒಳಪಟ್ಟಿರತಕ್ಕಂತಹ ರೈತರಿಗೆ ಈ ಸಂದರ್ಭದಲ್ಲಿ ನಮ್ಮ ಭಾಗದಲ್ಲಿ ಅಂತೂ ಸಚಿವರು, ಶಾಸಕರುಗಳು, ಅಧಿಕಾರಿಗಳು ಮತ್ತು Disaster Management Secretary ಶ್ರೀ ರಿತೇಶ್ ಕುಮಾರ್‌ಸಿಂಗ್‌ರವರು ಸಹಿತ intensive ಆಗಿ ಅಲ್ಲಿ ಟೂರ್ ಮಾಡಿದ್ದಾರೆ. ನಮ್ಮ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಆಗಿರತಕ್ಕಂತಹ ಶ್ರೀ ವಿಜಯಭಾಸ್ಕರ್‌ರವರು ಕೂಡ ಆ ಸಂದರ್ಭ ಬಂದಿದ್ದರು. ಜಿಲ್ಲಾಧಿಕಾರಿಗಳು ಎಲ್ಲರೂ ಕೂಡ ಮಾತನಾಡಿ ಹೋಗಿದ್ದಾರೆ. ಇವತ್ತು ವರದಿ ಕೂಡ ಬಂದಿದೆ. ಈಗ ಮುಂದೆ ಸರ್ಕಾರ ಕ್ರಮವನ್ನು ತೆಗೆದುಕೊಂಡು ಪರಿಹಾರವನ್ನು ಕೊಡಬೇಕಾದಂತಹ ಸಂದರ್ಭ ನಮ್ಮ ಮುಂದಿದೆ. ಹಾಗಾಗಿ ಇವತ್ತು ಏನು ರಾಜ್ಯದಲ್ಲಿರುವಂತಹ ವಿರೋಧ ಪಕ್ಷ ಕೇಂದ್ರದಲ್ಲಿರುವಂತಹ ಆಡಳಿತ ಪಕ್ಷ ಅವರೂ ಸಹಿತ ಇದರಲ್ಲಿ ಹೆಚ್ಚಿನ ಪ್ರಯತ್ನವನ್ನು ಮಾಡಿ, ಈ ಭಾಗದ 8 ಜಿಲ್ಲೆಗಳಲ್ಲಿ ರೈತರಿಗೆ ಆಗಿರುವಂತಹ ತೊಂದರೆಯನ್ನು ನಿರ್ವಹಿಸುವುದಕ್ಕೆ ಅತೀ ಹೆಚ್ಚಾಗಿ ಸಹಾಯ ಮಾಡಬೇಕಾದಂತಹ ಸಂದರ್ಭದಲ್ಲಿ ನಾನು ನಮ್ಮ ಸಭಾಪತಿಯವರ ಮುಖಾಂತರ ಎಲ್ಲಾ ನಮ್ಮ ಸದಸ್ಯರುಗಳಿಗೆ ಮತ್ತು ಹಿರಿಯ ನಾಯಕರಿಗೆ ವಿನಂತಿಯನ್ನು ಮಾಡಿ, ಈಗಾಗಲೇ ಸಣ್ಣ ಪುಟ್ಟ partially damage ಆಗಿರತಕ್ಕಂತಹ ರೈತರು ಕೂಡ ಇದರಲ್ಲಿ ಅವರಿಗೂ ಸಹಿತ ಇವತ್ತು ಹಣವನ್ನು ಪಾವತಿ ಮಾಡತಕ್ಕಂಥದ್ದು ಅದರ ಜೊತೆಯಲ್ಲಿ ಪ್ರಾಣ ಹಾನಿಯಾಗಿರುವಂಥವರಿಗೆ ಹಿಂದೆ ಒಂದು ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತಿತ್ತು, ಈಗ ಅದನ್ನು ನಾಲ್ಕು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ನೀಡಿ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಘೋಷಣೆ ಮಾಡಿದ್ದಾರೆ. ಹಾಗಾಗಿ ಈ ಎಲ್ಲಾ ವಿಷಯವನ್ನು ಗಮನಿಸಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡು ಸರ್ಕಾರಗಳು ಸೇರಿ ವಿಶೇಷವಾದಂತಹ ಒಂದು ಪ್ಯಾಕೇಜ್ ಮುಖಾಂತರ ಈಗ ಆಗಿರತಕ್ಕಂತಹ ನಷ್ಟವನ್ನು ತುಂಬಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ವಿಶೇಷ ಸಂದರ್ಭ ಬಿಬಿಎಂಪಿ ಒಂದು ಅಧಿಸೂಚನೆ ಅಥವಾ ಅಮೆಂಡ್‌ಮೆಂಟ್ ಅನ್ನು ತರತಕ್ಕಂತಹ ಸಂದರ್ಭದಲ್ಲಿ ನಡೆಯತಕ್ಕಂತಹ ಈ ಅಧಿವೇಶನದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾಗಿರತಕ್ಕಂತಹ ಶ್ರೀ ಕೆ.ಎಸ್. ಈಶ್ವರಪ್ಪನವರು ಮತ್ತು ನಾವು ಹಲವಾರು ಸದಸ್ಯರುಗಳು ಅಕಾಲಿಕ ಮಳೆಯಿಂದ ತೊಂದರೆಗೆ ಒಳಗಾಗಿರತಕ್ಕಂತಹ ರೈತರ ಪರವಾಗಿ ಧ್ವನಿ ಎತ್ತತಕ್ಕಂತಹ

ಕೆಲಸವನ್ನು ಮಾಡುತ್ತಿದ್ದೇವೆ. ರಾಜ್ಯದ ಸುಮಾರು 8 ಜಿಲ್ಲೆಗಳಲ್ಲಿ ವಿಶೇಷವಾಗಿ ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ಧಾರವಾಡ, ಕಲಬುರಗಿ, ವಿಜಯಪುರ, ಕೊಡಗು, ಹಾಸನ ಜಿಲ್ಲೆಗಳಲ್ಲಿ ಅಕಾಲಿಕ ಮಳೆಯಿಂದ ಆಗಿರುವಂತಹ ವಿಚಾರ ಸಲುವಾಗಿ ಅನೇಕ ಗೌರವಾನ್ವಿತ ಸದಸ್ಯರುಗಳು ಇದರ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುವುದೇನೆಂದರೆ, ಹವಾಮಾನ ವೈಪರೀತ್ಯ ಎನ್ನತಕ್ಕಂತಹ ವಿಚಾರ ಇವತ್ತು ಬಹಳ ರೈತರನ್ನು ಕಂಗಾಲಾಗಿ ಮಾಡಿದೆ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಏಕೆಂದರೆ ಆನೇಕ ಸಂದರ್ಭಗಳಲ್ಲಿ ಯಾವ ರೈತ ಕಷ್ಟಪಟ್ಟು ಆರು ತಿಂಗಳುಗಳು, ಒಂದು ವರ್ಷ ತಾನು ಬೆಳೆದಂತಹ ಬೆಳೆಗೆ ಒಂದು ಬೆಲೆ ಸಿಗುತ್ತದೆ ಎನ್ನುವಂತಹ ನಿರೀಕ್ಷೆಯಲ್ಲಿ ಇದ್ದಂತಹ ಸಂದರ್ಭದಲ್ಲಿ ಅವನ ಬೆಳೆ ಇಂತಹ ಹವಾಮಾನ ವೈಪರೀತ್ಯದಿಂದಾಗಿ ಅವನು ಬೆಳೆದಂತಹ ಬೆಳೆ ಕೈಗೆ ಬರುವುದಿಲ್ಲ. ಯಾವ ಹಣದ ಮೇಲೆ ಅವನು ನಿರೀಕ್ಷೆ ಇಟ್ಟುಕೊಂಡಿರುತ್ತಾನೆ, ಆ ಹಣ ಅವನ ಕೈಗೆ ಬರುವುದಿಲ್ಲ. ಈ ವಿಚಾರವಾಗಿ ಬೆಳಗಾವಿ ಜಿಲ್ಲೆಯಲ್ಲಿ ಮಾರ್ಚ್ ತಿಂಗಳಿನಲ್ಲಿ ಆದಂತಹ ಮಳೆಯಿಂದ ಪ್ರಮುಖವಾಗಿರುವಂತಹ ಅಥಣಿ, ರಾಯಬಾಗ್, ಚಿಕ್ಕೋಡಿ ತಾಲ್ಲೂಕುಗಳಲ್ಲಿ ಆಗಿರತಕ್ಕಂತಹ ಅಕಾಲಿಕ ಮಳೆಯಿಂದ ಒಂದೇ ವಾರದಲ್ಲಿ ಮೂರು ಭಾರಿ ದೊಡ್ಡ ಮಳೆಯಿಂದ ಅಲ್ಲಿ ಆ ಭಾಗದಲ್ಲಿ ಆಗಿರುವಂತಹ ನಷ್ಟ, ವಿಶೇಷವಾಗಿ ಆ ಭಾಗದಲ್ಲಿತರಕ್ಕಂತಹ ವಾಣಿಜ್ಯ ಬೆಳೆಯಾದ ದ್ರಾಕ್ಷಿ ಬೆಳೆ ಸಂಪೂರ್ಣವಾಗಿ ಹಾಳಾಗಿದೆ. ಮಳೆ ಆಗುವುದೇ ಬಹಳ ವಿರಳ. ಮಳೆ ಆಶ್ರಿತವಾಗಿರುವಂತಹ ಬೆಳೆಗೆ ಅವಲಂಬಿತವಾಗಿರುವಂತಹ ರೈತ ಬೋರ್‌ವೆಲ್‌ಗಳನ್ನು ಕೊರೆಸಿ, ವಾಣಿಜ್ಯ ಬೆಳೆಯಾಗಿರುವಂತಹ ದ್ರಾಕ್ಷಿಯನ್ನು ಬೆಳೆಯುತ್ತಿದ್ದಾನೆ. ಯಾವ ದ್ರಾಕ್ಷಿ ಬೆಳೆದು ನಿಂತು ಮಾರುಕಟ್ಟೆಯಲ್ಲಿ ಅವನಿಗೆ ಲಭ್ಯವಾಗಿರುವಂತಹ ಒಳ್ಳೆಯ ಬೆಲೆ ಸಿಗುತ್ತದೆ ಎನ್ನುವಂತಹ ನಿರೀಕ್ಷೆಯಲ್ಲಿದ್ದರೂ ಸಹಿತ ದಿನಾಂಕ: 11.03.2015 ಸತತವಾಗಿ ಮೂರು ಭಾರಿ ಆ ತಿಂಗಳಿನಲ್ಲಿ ಮಳೆಯಾಗಿ ಬೆಳೆ ಹಾನಿಯಾಗಿದೆ. ವಿಜಯವಾಣಿ ಪತ್ರಿಕೆಯಲ್ಲಿ ಇದರ ಬಗ್ಗೆ ಆ ಸಂದರ್ಭದಲ್ಲಿ ವರದಿ ಕೂಡ ಆಗಿದೆ. ಅನೇಕ ದಿನ ಪತ್ರಿಕೆಗಳಲ್ಲಿಯೂ ಕೂಡ ಇದರ ಬಗ್ಗೆ ವರದಿಯಾಗಿದೆ. ಅಲ್ಲಿ ದ್ರಾಕ್ಷಿ ಬೆಳೆ ಸಂಪೂರ್ಣವಾಗಿ ಹಾಳಾಗಿದ್ದನ್ನು ತಮ್ಮ ಮುಖಾಂತರ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ನನ್ನ ಮುಖ್ಯವಾದ ಬೇಡಿಕೆ ಏನೆಂದರೆ ಸರ್ವೇ ಕಾರ್ಯ ವಿಳಂಬವಾಗಬಾರದು. ಏಕೆಂದರೆ ಯಾವ ಬೆಳೆ ಯಾವ ಸಂದರ್ಭದಲ್ಲಿ ಹಾಳಾಗಿರುತ್ತದೆ, ಅದನ್ನು ಕೂಡಲೇ ಸರ್ವೇ ಮಾಡಿದಾಗ ಮಾತ್ರ ಆ ಬೆಳೆ ಯಾವ ರೀತಿಯಾಗಿ ಹಾಳಾಗಿದೆ ಮತ್ತು ಆರ್ಥಿಕವಾಗಿರತಕ್ಕಂತಹ ನಷ್ಟ ಯಾವ ರೀತಿಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬರುವುದಕ್ಕೆ ಸಾಧ್ಯವಿದೆ. ಒಂದು ವೇಳೆ ಸರ್ಕಾರ ಅದಕ್ಕೆ ಪರಿಹಾರವನ್ನು ಘೋಷಣೆ ಮಾಡತಕ್ಕಂತಹ ಸಂದರ್ಭದಲ್ಲಿ ಸರ್ವೇ ಕಾರ್ಯ ಒಂದು ವೇಳೆ ವಿಳಂಬವಾದರೆ ಹಾಳಾದಂತಹ ಬೆಳೆಯನ್ನು ತನ್ನ ಹೊಲದಲ್ಲಿ

ಇಡಬೇಕೋ ತೆಗೆಯಬೇಕೋ ಎನ್ನುವ ವಿಚಾರ ಇವತ್ತು ರೈತರಿಗೆ ತೊಂದರೆಯಾಗುತ್ತಿದೆ. ಆ ಸಂದರ್ಭದಲ್ಲಿ ಬೆಳೆದಂತಹ ಜೋಳ ಹಾಳಾಗಿದೆ. ಗೋವಿನ ಜೋಳ ಹಾಳಾಗಿದೆ. ಮಾರ್ಚ್ ತಿಂಗಳಿನಲ್ಲಿ ಬೆಳೆದಂತಹ ಅನೇಕ ಬೆಳೆಗಳು ಹಾಳಾಗಿದೆ. ರೈತರು ಬಂದು ನಮ್ಮನ್ನು ಎಷ್ಟು ದಿವಸಗಳಲ್ಲಿ ಸರ್ವೇ ಆಗುತ್ತದೆ, ನಾವು ಬೆಳೆದಂತಹ ಬೆಳೆ ಹಾಳಾಗಿರುವುದನ್ನು ಹೊಲದಿಂದ ತೆಗೆಯಬೇಕೋ, ಸರ್ವೇ ಕಾರ್ಯ ಪ್ರಾರಂಭವಾಗುವವರೆಗೆ ಆ ಬೆಳೆಯನ್ನು ಹೊಲದಲ್ಲಿಯೇ ಇಟ್ಟುಕೊಳ್ಳಬೇಕೋ ಎನ್ನುವಂತಹ ಪ್ರಶ್ನೆಗಳನ್ನು ಕೇಳಿದರು. ನಮ್ಮ ಪಕ್ಷದ ಕಾರ್ಯಕರ್ತರು ಸಂಬಂಧಪಟ್ಟಂತಹ ತಹಸೀಲ್ದಾರ್‌ರವರಿಗೆ ಹೋಗಿ ಮನವಿಯನ್ನು ಕೊಟ್ಟರು. ಆದಷ್ಟು ಬೇಗ ಸರ್ಕಾರ ಸರ್ವೇ ಕಾರ್ಯವನ್ನು ಪ್ರಾರಂಭ ಮಾಡಬೇಕು, ಕೂಡಲೇ ಆ ಬೆಳೆ ನಷ್ಟವಾಗಿರುವುದಕ್ಕೆ ಬೆಳೆ ಪರಿಹಾರವನ್ನು ಘೋಷಣೆ ಮಾಡಬೇಕು ಎನ್ನುವ ಮನವಿ ಕೊಟ್ಟರು. ಆದರೆ 15 ದಿವಸದವರೆಗೂ ಯಾವುದೇ ಅಧಿಕಾರಿಗಳು ಹೊಲಗಳಿಗೆ ಬರಲೇ ಇಲ್ಲ.

(5–00 ಗಂಟೆ)

ನಾನು ಈ ಸಂದರ್ಭದಲ್ಲಿ ಕೇಳುವುದಿಷ್ಟೆ, ಯಾವುದೇ ಅಕಾಲಿಕ ತೊಂದರೆಯಾದಂತಹ ಸಂದರ್ಭದಲ್ಲಿ ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್‌ನ್ನು ನೀಡಬೇಕಾಗುತ್ತದೆ. ಮಾನ್ಯ ಕಂದಾಯ ಸಚಿವರಿಗೆ ತಮ್ಮ ಮುಖಾಂತರ ಹೇಳಬಯಸುವುದೇನೆಂದರೆ, ಇಂತಹ ಅಕಾಲಿಕ ಮಳೆಯಾದಂತಹ ಸಂದರ್ಭದಲ್ಲಿ ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳು ಸಂಬಂಧಪಟ್ಟಂತಹ ಆ ತಾಲ್ಲೂಕಿನ ತಹಶೀಲ್ದಾರರಿಗೆ ದಯಮಾಡಿ ಒಂದು ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್‌ನ್ನು ನೀಡಿ, ಕೂಡಲೇ ಸಂಬಂಧಪಟ್ಟಂತಹ ರೈತರ ಹೊಲಗಳಿಗೆ ಭೇಟಿ ಕೊಡಬೇಕು, ಏಕೆಂದರೆ ಹಾನಿಯಾದಂತಹ ಬೆಳೆಯ ಪ್ರಮಾಣ ಎಷ್ಟೆಂಬುದು ಆ ದಿನ ಅಥವಾ ನಂತರದ ಎರಡು–ಮೂರು ದಿನಗಳಲ್ಲಿ ಸರ್ವೆ ಆದರೆ ಮಾತ್ರ ಸರ್ಕಾರಕ್ಕೆ ನಿಖರವಾದಂತಹ ಮಾಹಿತಿ ದೊರಕುತ್ತದೆ. ಒಂದು ವೇಳೆ ಸರ್ಕಾರದ ಆದೇಶವಾಗುವುದು 15 ರಿಂದ 20 ದಿವಸವಾದರೆ ಹಾಳಾದಂತಹ ಬೆಳೆ ಸಂಪೂರ್ಣವಾಗಿ ನಾಶವಾಗಿರುತ್ತದೆ. ಹಾಗಾಗಿ ಆ ಹಾಳಾದಂತಹ ಬೆಳೆಯನ್ನು ಹೊಲದಿಂದ ತೆರವುಗೊಳಿಸಲಾಗಿರುತ್ತದೆ. ಹೀಗಾಗಿ ಅಲ್ಲಿ ಆದಂತಹ ಬೆಳೆಹಾನಿಯ ಬಗ್ಗೆ ಮಾಹಿತಿಯೇ ಇಲ್ಲದಂತಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಆ ರೈತರಿಗೆ ಬೆಳೆಹಾನಿಯ ಪರಿಹಾರವನ್ನು ಕೊಡುವುದಿಲ್ಲ ಎನ್ನುವುದಾದರೆ ಆ ರೈತ ಆಘಾತಕ್ಕೊಳಗಾಗುತ್ತಾನೆ. ಆದ್ದರಿಂದ ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಬಯಸುತ್ತೇನೆ. ಇಂತಹ ವಿಶೇಷವಾದಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳು ಮತ್ತು ತಾಲ್ಲೂಕಿನ ಮುಖ್ಯಸ್ಥರಾದ

ತಹಶೀಲ್ದಾರರು ಕೂಡಲೇ ಸರ್ವೇ ಕಾರ್ಯವನ್ನು ನಡೆಸುವಂತಹ ಒಂದು ವ್ಯವಸ್ಥೆಯಾಗಬೇಕೆನ್ನುವಂತಹ ಒತ್ತಾಯವನ್ನು ಮಾಡುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ಒಣ ಬೇಸಾಯ ಕ್ರಮದ ಆಧಾರದಲ್ಲಿ ದ್ರಾಕ್ಷಿ ಬೆಳೆಯನ್ನೇನು ಬೆಳೆಯಲಾಗುತ್ತಿದೆ ಆ ರೈತರು ಮಾರ್ಚ್ ತಿಂಗಳಿನಲ್ಲಿ ಬಿದ್ದಂತಹ ಅಕಾಲಿಕ ಮಳೆಯಿಂದ ಆ ಭಾಗದಲ್ಲಿನ ದ್ರಾಕ್ಷಿ ಬೆಳೆಗಾರರಿಗೆ ಏನು ತೊಂದರೆಯಾಗಿದೆ ಅದಕ್ಕೂ ಸಹ ಪರಿಹಾರವನ್ನು ಕೊಡಬೇಕು, ದ್ರಾಕ್ಷಿಯ ಜೊತೆಗೆ ಇನ್ನುಳಿದ ಬೆಳೆಗಳಿಗೆ ಏನು ತೊಂದರೆಯಾಗಿದೆ ಎಂಬ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಸರ್ವೇ ವರದಿ ಬಂದಿರಬಹುದು, ಏಕೆಂದರೆ ಅಕಾಲಿಕ ಮಳೆಯಿಂದ ಆಗಿರುವಂತಹ ಬೆಳೆಹಾನಿಗೆ ಸಂಬಂಧಿಸಿದಂತೆ ಸರ್ವೇ ಮಾಡಿ ಸರ್ಕಾರಕ್ಕೆ ವರದಿಯನ್ನು ನೀಡಬೇಕೆಂದು ನಾವು ಈಗಾಗಲೇ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರಿಗೆ ಮನವಿ ಮಾಡಿದ್ದೇವೆ. ಈ ಸಂದರ್ಭದಲ್ಲಿ ಕೂಡ ನಾನು ತಮ್ಮ ಮುಖಾಂತರ ವಿನಂತಿ ಮಾಡುವುದರ ಜೊತೆಗೆ ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳ ಹೇಳಿಕೆಯನ್ನು ಸಹ ನಾನು ಗಮನಿಸಿದ್ದೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಷ್ಟೇ ಅಲ್ಲ, ಇಡೀ ಭಾರತದಾದ್ಯಂತ ಅಕಾಲಿಕ ಮಳೆಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ನಾವು ಸಂಬಂಧಪಟ್ಟಂತಹ ರಾಜ್ಯಗಳಿಗೆ ನಿರ್ದೇಶನವನ್ನು ಕೊಟ್ಟಿದ್ದೇವೆ, ಸಂಬಂಧಪಟ್ಟಂತಹ ರಾಜ್ಯಗಳು ಸಂಪೂರ್ಣವಾಗಿರುವಂತಹ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಬೇಕು ಎನ್ನುವಂತಹ ಹೇಳಿಕೆಯನ್ನು ಸಹ ನಾನು ನೋಡಿದ್ದೇನೆ. ಅದಕ್ಕೆ ನಮ್ಮ ರಾಜ್ಯದ ಮುಖಾಂತರ ಬೇಡಿಕೆಯನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ವೇಳೆಯಲ್ಲಿ ಇಂತಹ ಅಕಾಲಿಕ ಮಳೆಯಾಗಿದೆ, ಇದರಿಂದ ರೈತ ತೊಂದರೆಯನ್ನು ಅನುಭವಿಸಿದ್ದಾನೆ, ನಾನು ತಮ್ಮ ಮುಖಾಂತರ ಮನವಿ ಮಾಡುವುದೇನೆಂದರೆ, ಇಂತಹ ವರದಿಯನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ಒಂದು ಕಾಂಪ್ರೆಹೆನ್ಸೀವ್ ರಿಪೋರ್ಟ್‌ನ್ನು ಕೇಂದ್ರಕ್ಕೆ ಸಲ್ಲಿಸಬೇಕೆನ್ನುವಂತಹ ಒಂದು ಒತ್ತಾಯವನ್ನು ಮಾಡುತ್ತಿದ್ದೇನೆ. ಇಂತಹ ಅಕಾಲಿಕ ಮಳೆಯಿಂದಾಗಿ ರೈತರಿಗೆ ಆಗಿರುವಂತಹ ನಷ್ಟಕ್ಕೆ ಏನು ಪರಿಹಾರವನ್ನು ನೀಡಲಾಗುತ್ತದೆ ಎನ್ನುವುದು ಆಮೇಲೆ, ಆದರೆ ಸರ್ವೆ ಮಾಡುವಂತಹ ಸಂದರ್ಭದಲ್ಲಿ ಅವರು ಸರ್ಕಾರದ ಆದೇಶಕ್ಕೆ ಕಾಯದೆ ಕೂಡಲೇ ಸರ್ವೇ ಕಾರ್ಯ ಆಗಬೇಕೆನ್ನುವುದು ನನ್ನ ಮುಖ್ಯವಾದ ಒತ್ತಾಯ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಅವಕಾಶಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅಲ್ಲಮ ಪ್ರಭುಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿರುವ ವಿಚಾರದಲ್ಲಿ ಸಂಪೂರ್ಣ ಸತ್ಯಾಂಶ ಇದೆ ಎನ್ನುವುದನ್ನು ನಾವೆಲ್ಲರೂ ಅರಿತುಕೊಂಡಿದ್ದೇವೆ. ಆದರೆ ವಿಶೇಷವಾದಂತಹ ಒಂದು ಅಂಶವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ನಮ್ಮ ಕಲಬುರಗಿ ಜಿಲ್ಲೆಯಲ್ಲಿ 3 ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಣೆಯಾಗಿವೆ. ಇಂತಹ ಸಂದರ್ಭದಲ್ಲಿ ಎಲ್ಲವನ್ನೂ ಸರ್ವೇ ಮಾಡಿ ರಾಜ್ಯ ಸರ್ಕಾರದ ವತಿಯಿಂದ ಕೇಂದ್ರ ಸರ್ಕಾರಕ್ಕೆ ವರದಿಯೊಂದನ್ನು ನೀಡಿದ್ದು, ಕೇಂದ್ರದ ಒಂದು ತಂಡ ರಾಜ್ಯಕ್ಕೆ ಆಗಮಿಸಿದ ಸಂದರ್ಭದಲ್ಲಿ ನಮ್ಮ ಜಿಲ್ಲೆಯ 3 ತಾಲ್ಲೂಕುಗಳಿಗೂ ಭೇಟಿ ಕೊಟ್ಟು, ಅಲ್ಲಿ ಆಗಿರುವಂತಹ ಹಾನಿಯ ಬಗ್ಗೆ ಮಳೆ ಇಲ್ಲದೆ ಅಲ್ಲಿ ತೊಗರಿ, ಹತ್ತಿ ಇನ್ನಿತರ ಬೆಳೆಗಳು ಹಾನಿಗೆ ಒಳಗಾಗಿರುವುದನ್ನು ಗಮನಿಸಿ ವರದಿಯನ್ನು ಕೊಟ್ಟರೂ ಸಹ ಇಲ್ಲಿಯವರೆಗೆ ಯಾವುದೇ ರೀತಿಯಿಂದ ಪರಿಹಾರ ಬಂದಿರುವುದಿಲ್ಲ. ಮೊನ್ನೆ ಒಂದು ಜಿಲ್ಲೆಗೆ 17 ಕೋಟಿ ರೂಪಾಯಿ ಮಾತ್ರ ಬಂದಿದೆ. ಹಿಂದಿನ ಇತಿಹಾಸವನ್ನು ಗಮನಿಸಿದರೆ ಯಾವುದೇ ರೀತಿಯಿಂದ ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯ ಸರ್ಕಾರದಿಂದ ವರದಿ ಸಲ್ಲಿಸಿದ ನಂತರ, ಕೇಂದ್ರದ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಎಲ್ಲ ಪಕ್ಷಗಳ ಪಾರ್ಲಿಮೆಂಟ್ ಸದಸ್ಯರು ಕೇಂದ್ರ ಸರ್ಕಾರದ ಗಮನಕ್ಕೆ ತಂದರೂ ಸಹ ಇಲ್ಲಿಯವರೆಗೆ ಒಂದು ಪರಿಹಾರ ಸಿಗದಿರುವಂತಹ ಪರಿಸ್ಥಿತಿ ಇತ್ತು, ನಮ್ಮ ಭಾಗದ ಜನರು ಒತ್ತಡ ಹಾಕಿದ ನಂತರ ಈಗ 17 ಕೋಟಿ ರೂಪಾಯಿಗಳ ಪರಿಹಾರ ಮೊತ್ತ ನಮ್ಮ ಜಿಲ್ಲೆಗೆ ಬಂದಿದೆ. ಇಂತಹ ಸಂದರ್ಭದಲ್ಲಿ ಇದನ್ನು ಸಹಿಸಿಕೊಳ್ಳದಿರುವಂತಹ ಪರಿಸ್ಥಿತಿಯಲ್ಲಿ ಮತ್ತೆ ಜೇವರಗಿ ತಾಲ್ಲೂಕು ಒಂದರಲ್ಲಿಯೇ 1627 ಎಕರೆ ಪ್ರದೇಶ, ಯಾದಗಿರಿ ಮತ್ತು ಸುರಪುರ ತಾಲ್ಲೂಕಿನಲ್ಲಿ, ಜೇವರಗಿಯ ಯಡ್ರಾಮಿ ಹೋಬಳಿ ಒಂದರಲ್ಲಿಯೇ 1796 ಹೆಕ್ಟೇರ್‌ನಲ್ಲಿ ಬೆಳೆಯಲಾಗಿದ್ದ ಭತ್ತದ ಬೆಳೆ ಹಾನಿಯಾಗಿದೆ. ಸುರಪುರ, ಶಹಾಪುರ, ಯಾದಗಿರಿ ಈ ಮೂರು ತಾಲ್ಲೂಕುಗಳು ಸೇರಿ 1627.03 ಹೆಕ್ಟೇರ್‌ನಲ್ಲಿ ಸಂಪೂರ್ಣ ಭತ್ತದ ಫಸಲು ಹಾಗು ದ್ರಾಕ್ಷಿ, ಬಾಳೆ ಈ ಎಲ್ಲ ಬೆಳೆಗಳು ಸಹ ಆಲಿಕಲ್ಲು ಮಳೆಯಿಂದಾಗಿ ಸಂಪೂರ್ಣವಾಗಿ ಹಾನಿಯಾಗಿವೆ. ಈಗಾಗಲೇ ಅಲ್ಲಿ ಬರಗಾಲದ ಪರಿಸ್ಥಿತಿಯಿಂದಾಗಿ ಕೂಡ ಬಹಳಷ್ಟು ಹಾನಿಯಾಗಿದೆ. ಈ ಬಗ್ಗೆ ನಮ್ಮ ಸಭಾನಾಯಕರು ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದು, ಅವರ ಒಂದು ಮಾರ್ಗದರ್ಶನದಲ್ಲಿ ನಡೆದಂತಹ ಸಭೆಯಲ್ಲಿ, ಬಹಳಷ್ಟು ಸಲ ಚರ್ಚೆಗಳನ್ನು ನಡೆಸಿದ ಹಿನ್ನೆಲೆಯಲ್ಲಿ 15 ದಿನಗಳಿಗೊಮ್ಮೆ ಕೃಷ್ಣ ಮೇಲ್ದಂಡೆ ಯೋಜನೆಯಿಂದ ಪಾಳಿ ಆಧಾರದ ಮೇಲೆ ನೀರನ್ನು ಬಿಡುವಂತಹ ವ್ಯವಸ್ಥೆಯಾದ್ದರಿಂದ ಕಳೆದ ಸುಮಾರು ಮೂರು-ನಾಲ್ಕು ವರ್ಷಗಳಿಂದ ಒಂದೇ ಬೆಳೆ ಬೆಳೆಯುತ್ತಿದ್ದ ಆ ಭಾಗದ ರೈತರು ಎರಡು ಬೆಳೆಗಳನ್ನು ತೆಗೆದುಕೊಂಡರು. ಈ ಬಾರಿ ಸಹ ಹಿಂದೆ ಎಂದೂ ಕಂಡರಿಯದಂತಹ ರೀತಿಯಲ್ಲಿ ಅವರ ಕೈಗೆ ಫಸಲು ಸಿಗುತ್ತಿತ್ತು, ಆದರೆ

12ನೇ ತಾರೀಖಿನಿಂದೀಚೆಗೆ ನಮ್ಮ ಭಾಗದಲ್ಲಿ ದೊಡ್ಡ ದೊಡ್ಡ ಆಲಿಕಲ್ಲಿನಿಂದ ಕೂಡಿದ ಭಾರೀ ಮಳೆ ಬಿದ್ದ ಪರಿಣಾಮವಾಗಿ ಭತ್ತದ ತೆನೆಗಳು ನೀರಿನಲ್ಲಿ ಮುಳುಗಿದ್ದರಿಂದ ಭತ್ತದ ಬೆಳೆ ಯಾವುದೇ ರೀತಿಯಲ್ಲಿಯೂ ಉಪಯೋಗಕ್ಕೆ ಬಾರದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ನಮ್ಮ ಭಾಗದ ರೈತರು ಬಹಳ ಕಷ್ಟಕ್ಕೆ ಒಳಗಾಗಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಈ ಅಕಾಲಿಕ ಮಳೆಯ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆಯ 3 ಜನ ರೈತರು ಸಿಡಿಲಿಗೆ ಬಲಿಯಾದರು. ಜೇವರಗಿ ತಾಲ್ಲೂಕಿನ ಅಂಕಲಿಗಿ ಹೋಬಳಿಯಲ್ಲಿ ಸಾಕಷ್ಟು ಎತ್ತುಗಳು, ಕುರಿಗಳು ಕೂಡ ಸಿಡಿಲಿಗೆ ಬಲಿಯಾಗಿವೆ. ರೈತರಿಗೆ ಇಷ್ಟೆಲ್ಲಾ ಹಾನಿಯಾಗಿರುವಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ರೀತಿಯಿಂದ ಸಹಾಯ ಸಲ್ಲಿಸಬೇಕೋ ಅದನ್ನು ಮಾಡಬೇಕಾಗುತ್ತದೆ. ನನ್ನ ಕಳಕಳಿಯ ವಿನಂತಿ ಎಂದರೆ, ಕೃಷಿ ಸಚಿವರಿಗೆ ಸಹ ಬಹಳಷ್ಟು ಸಂದರ್ಭಗಳಲ್ಲಿ ತಿಳಿಸಿದ್ದೇನೆ. ಇಲ್ಲಿಯವರೆಗೆ ಸಾಕಷ್ಟು ಹಣವನ್ನು ನಮ್ಮ ಕೃಷ್ಣ ಗ್ರಾಮೀಣ ಬ್ಯಾಂಕ್ ಮತ್ತು ಬೇರೆ ಬೇರೆ ಬ್ಯಾಂಕ್‌ಗಳಿಂದ ಸಾಲವನ್ನು ತೆಗೆದುಕೊಂಡಂತಹ ಸಂದರ್ಭದಲ್ಲಿ ಇನ್‌ಶೂರೆನ್ಸ್ ಹಣವನ್ನೇನು ಕಟಾಯಿಸಿಕೊಳ್ಳುತ್ತಾರೆ, ಆ ಇನ್‌ಶೂರೆನ್ಸ್ ಮೊತ್ತವನ್ನು ಈ ರೀತಿ ಬೆಳೆ ಹಾನಿಯಾದಂತಹ ಸಂದರ್ಭದಲ್ಲಿ ಏಕೆ ಕೊಡುವುದಿಲ್ಲ? ಹಾಗಾದರೆ ರೈತರ ಸಾಲದ ಹಣದಲ್ಲಿ ಇನ್‌ಶೂರೆನ್ಸ್ ಮುರಿದುಕೊಳ್ಳುವಂತಹ ಉದ್ದೇಶವಾದರೂ ಏನು? ಆ ಇನ್‌ಶೂರೆನ್ಸ್ ಹಣದ ಬಗ್ಗೆ ನಮ್ಮ ಸರ್ಕಾರದ ಕೃಷಿ ಇಲಾಖೆಯವರಾಗಲಿ, ಕಂದಾಯ ಇಲಾಖೆಯವರಾಗಲಿ ಸಾಕಷ್ಟು ಚರ್ಚೆ ಮಾಡಿ ಬೆಳೆ ಹಾನಿಯಿಂದಾಗಿ ರೈತರಿಗೆ ಆಗಿರುವಂತಹ ನಷ್ಟವನ್ನು ಭರಿಸಬೇಕಾಗುತ್ತದೆ. ಬರಗಾಲ ಘೋಷಣೆಯಾಗಿರುವಂತಹ ಸಂದರ್ಭದಲ್ಲಿ ಬೆಳೆ ಹಾನಿಗೆ ಪರಿಹಾರ ಕೊಡುವುದರ ಜೊತೆಗೆ ಇನ್‌ಶೂರೆನ್ಸ್ ಮೊತ್ತವನ್ನು ಸಹ ಬಿಡುಗಡೆಗೊಳಿಸಿದರೆ ರೈತರಿಗೆ ಬದುಕಲು ಬಹಳ ಅನುಕೂಲವಾಗುತ್ತದೆ. ಎಲ್ಲೆಲ್ಲಿ ಬರಗಾಲ ಬಿದ್ದಿದೆ, ಬೆಳೆಹಾನಿಯಾಗಿದೆ, ರೈತರು ಕಂಗಾಲಾಗಿದ್ದಾರೆ, ಆಲಿಕಲ್ಲು ಮಳೆಯಿಂದಾಗಿ ಭತ್ತದ ಬೆಳೆ ಏನು ಹಾಳಾಗಿದೆ ಅದಕ್ಕೆ ಪರಿಹಾರ ಕೊಡುವಂತಹ ಮಾತು ಬೇರೆ, ಆದರೆ ಇನ್‌ಶೂರೆನ್ಸ್ ಬಗ್ಗೆ ದಯಮಾಡಿ ಸರ್ಕಾರ ವಿಚಾರ ಮಾಡಬೇಕೆಂದು ನಾನು ಮಾನ್ಯ ಕೃಷಿ ಸಚಿವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ಅವರು ಮಾತನಾಡುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿದೆ ಎನ್ನುವಂತಹ ವಿಚಾರವನ್ನು ತಿಳಿಸಿದರು. ಆದರೆ ಕೇಂದ್ರ ಸರ್ಕಾರ ಪರಿಹಾರವನ್ನು ಕೊಟ್ಟಿಲ್ಲ, ಹಿಂದಿನ ಎಷ್ಟೋ ಇತಿಹಾಸವನ್ನು ಗಮನಿಸಿದಾಗ ಈ ಬಾರಿ ಬಹಳ ತಡವಾಗಿ ಪರಿಹಾರವನ್ನು ಕೊಟ್ಟಿದೆ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಬಹಳ

ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ದಯಮಾಡಿ ತಾವು ಸಹ ಒಂದು ಶಕ್ತಿಯನ್ನು ಪ್ರಯೋಗ ಮಾಡಿ ಕೇಂದ್ರ ಸರ್ಕಾರದಿಂದ ನಮ್ಮ ಭಾಗದ ರೈತರ ಬಗ್ಗೆ ಬಹಳ ಕಳಕಳಿಯನ್ನು ವ್ಯಕ್ತಪಡಿಸಿರುವುದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಷ್ಟೇ ಕಳಕಳಿಯಿಂದ ಅವರು ಕೇಂದ್ರ ಸರ್ಕಾರದ ಮೇಲೆ ಸಹ ಒತ್ತಡವನ್ನು ಹಾಕಿ ಅಲ್ಲಿಂದ ಬರುವಂತಹ ಪರಿಹಾರದ ಹಣವನ್ನು ರೈತರಿಗೆ ಬಳುವಳಿಯಾಗಿ ತಂದುಕೊಟ್ಟು ರೈತರನ್ನು ಬದುಕಿಸುವಂತಹ ಕೆಲಸವನ್ನು ಮಾಡಬೇಕೆಂದು ಸನ್ಮಾನ್ಯ ಸಭಾಪತಿಯವರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಮಾನ್ಯ ಶರಣಪ್ರಕಾಶ ಪಾಟೀಲ್‌ರವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಸಲ್ಲಿಸುತ್ತೇನೆ, ಅವರು ಸಹ ನಮ್ಮ ಭಾಗದ ರೈತರ ಸಮಸ್ಯೆಗಳನ್ನು ಆಲಿಸಿ ಬಂದಿದ್ದಾರೆ, ಅದರ ಸಂಪೂರ್ಣ ವರದಿಯನ್ನು ರಾಜ್ಯ ಸರ್ಕಾರದಿಂದ ಕ್ಯಾಬಿನೆಟ್‌ನಲ್ಲಿ ಚರ್ಚೆಯಾದ ನಂತರ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದೆ. ಕೇಂದ್ರ ಸರ್ಕಾರದಲ್ಲಿ ಮತ್ತೊಮ್ಮೆ ಹಿಂದೆ, ಏನು ಬರಗಾಲ ಘೋಷಣೆಯಾಗಿ ಕೇಂದ್ರದಿಂದ ಬಂದಂತಹ ತಂಡ ವರದಿಯನ್ನು ಸಲ್ಲಿಸಿದೆ, ಆ ವರದಿಯ ಜೊತೆಗೆ ಈಗ ಅಕಾಲಿಕವಾಗಿ ಸುರಿದಂತಹ ಆಲಿಕಲ್ಲು ಮಳೆಯಿಂದಾಗಿ ಸುರಪುರ, ಯಾದಗಿರಿ ಮತ್ತು ಶಹಾಪುರ ತಾಲ್ಲೂಕುಗಳಲ್ಲಿ ಸುಮಾರು ರೂ. 3,49,80,000/– ರಷ್ಟು ಹಾನಿಯಾಗಿದೆ. ಜೇವರಗಿ ತಾಲ್ಲೂಕಿನ ಯಡ್ರಾಮಿ ಎನ್ನುವಂತಹ ಒಂದೇ ಹೋಬಳಿಯಲ್ಲಿ ಆಗಿರುವಂತಹ ಬೆಳೆಹಾನಿಯಿಂದಾಗಿ ಸುಮಾರು 3 ಕೋಟಿಗೂ ಮೇಲ್ಪಟ್ಟು ನಷ್ಟವಾಗಿದೆ. ಸುಮಾರು 3 ಜನರು ಕಲಬುರಗಿ ಜಿಲ್ಲೆಯಲ್ಲಿ ಮರಣ ಹೊಂದಿದ್ದಾರೆ. ಆದಕಾರಣ ಇಷ್ಟೆಲ್ಲಾ ಹಾನಿಯಾಗಿರುವಂತಹ ರೈತರ ನೆರವಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬರಬೇಕು, ಬೆಳೆ ವಿಮೆಗೆ ಸಂಬಂಧಿಸಿದ ಇನ್‌ಶ್ಯೂರೆನ್ಸ್ ಮೊತ್ತ ಕೂಡ ರೈತರಿಗೆ ಸಿಗುವಂತಹ ವ್ಯವಸ್ಥೆಯಾಗಬೇಕು. ಏಕೆಂದರೆ ಬ್ಯಾಂಕ್‌ನಲ್ಲಿ ನಮ್ಮ ರೈತರ ಹಣವನ್ನು ಮುರಿದುಕೊಂಡಿರುತ್ತಾರೆ, ಅವರ ಬಳಿ ಜಮಾ ಇರುತ್ತದೆ. ಜಮಾ ಇಟ್ಟಿರುವಂತಹ ವಿಮಾ ಮೊತ್ತ ಕೂಡ ರೈತರಿಗೆ ಸಿಗುತ್ತಿಲ್ಲ. ಆದ್ದರಿಂದ ಸರ್ಕಾರ ಆ ವಿಮಾ ಹಣ ಸಹ ರೈತರಿಗೆ ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ತಮ್ಮ ಮೂಲಕ ಸರ್ಕಾರವನ್ನು ಕಳಕಳಿಯಿಂದ ವಿನಂತಿಸಿಕೊಂಡು ಸನ್ಮಾನ್ಯ ವಿರೊಧ ಪಕ್ಷದ ನಾಯಕರು ಸಹ ಕೇಂದ್ರದ ಮೇಲೆ ಒತ್ತಡ ಹೇರಿ ನಷ್ಟವನ್ನು ಹೊಂದಿರುವಂತಹ ರೈತರಿಗೆ ಪರಿಹಾರವನ್ನು ಒದಗಿಸಿಕೊಡಬೇಕೆಂದು ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಕರ್ನಾಟಕದಲ್ಲಿ ವಿಶೇಷವಾಗಿ ನಮಗೆ ತಿಳಿದಂತೆ ಒಂದು ದಿವಸದ ಅಧಿವೇಶನ ನಡೆದಿರುವುದು ಇದೇ ಮೊದಲು. ಪ್ರಾರಂಭದಲ್ಲಿ ಸದಸ್ಯರಾದಂತಹ ಶ್ರೀ ರಾಮಕೃಷ್ಣರವರು ಈ ಅಧಿವೇಶನ ಕರೆಯುವುದಕ್ಕೆ ಇರುವಂತಹ ವಿಷಯವಾದರು ಏನು ಎಂದು ಕೇಳಿದರು. ಆದರೂ ನಮಗೆ ಇನ್ನೂ ವಿಷಯ ಅರ್ಥವಾಗಿಲ್ಲ. ಈ ದಿವಸ ವಿಶೇಷ ಅಧಿವೇಶನವನ್ನು ಕರೆದಿದ್ದಾರೆ ಅದರಲ್ಲಿ ಮೊನ್ನೆ ದಿವಸ ಬಿದ್ದಂತಹ ಮಳೆಯನ್ನು ಅಕಾಲಿಕ ಮಳೆಯೆನ್ನುವ ಬದಲಾಗಿ ಪ್ರಕೃತಿ ವಿಕೋಪ ಎನ್ನುವುದು ಬಹಳ ಸೂಕ್ತವಾಗುತ್ತದೆ. ಕೊಪ್ಪಳ, ಗಂಗಾವತಿ ಆ ಏರಿಯಾದಲ್ಲಿ ಭತ್ತದ ಬೆಳೆಗೆ ಹಾನಿಯಾಗಿರುವುದರ ಬಗ್ಗೆ ಬಹಳ ವಿವರವಾಗಿ ಚರ್ಚೆಯಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಕೆ.ಎಸ್. ಈಶ್ವರಪ್ಪನವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಎರಡು ಮೂರು ಜಿಲ್ಲೆಗಳಿಗೆ ಸಮೀಕ್ಷೆ ನಡೆಸಿದ್ದಾರೆ. ಅಲ್ಲಿಯ ಉಸ್ತುವಾರಿ ಸಚಿವರು ಸಹ ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿಯ ಬೆಳೆ ಹಾನಿಯ ಬಗ್ಗೆ ಲೆಕ್ಕಾಚಾರ ಮಾಡಿದ್ದಾರೆ. ಆದರೆ ಅಷ್ಟೇ ಪ್ರಮಾಣದಲ್ಲಿ ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ, ಬಾಗೇವಾಡಿ, ಇಂಡಿ ಮತ್ತು ಸಿಂಧಗಿ ಭಾಗದಲ್ಲಿ ತೋಟಗಾರಿಕೆ ಬೆಳೆಗಳು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿವೆ. ತಮಗೆ ತಿಳಿದಂತೆ ಸಿಂಧಗಿ ಪಟ್ಟಣದಲ್ಲಿ ಮನೆಯ ಮೇಲ್ಛಾವಣಿಯ ಮೇಲೆ ಹಾಕಿದ್ದಂತಹ ಸೌರಶಕ್ತಿಯ ಪ್ಯಾನಲ್‌ಗಳು ಶೇಕಡ 80ರಷ್ಟು ಹಾಳಾಗಿವೆ ಎಂದು ವರದಿಯಾಗಿದೆ. ಜೊತೆಗೆ ಇಂಡಿ ತಾಲ್ಲೂಕಿನಲ್ಲಿ 27 ಟ್ರಾನ್ಸ್‌ಫಾರ್ಮರ್‌ಗಳು ಮತ್ತು ವಿದ್ಯುತ್ ತಂತಿಗಳು ಹರಿದು ನೆಲಕ್ಕೆ ಬಿದ್ದಿವೆ. ಅಂದರೆ ಪ್ರಕೃತಿ ವಿಕೋಪ ಯಾವ ಮಟ್ಟಿಗೆ ಆಗಿರಬಹುದೆಂದು ತಿಳಿಯಬಹುದು. ನಾನು ಸಹ ಆ ಸ್ಥಳಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಅಲ್ಲಿದ್ದಂತಹ ಹಿರಿಯರು ಹೇಳುತ್ತಿದ್ದರು ಇಂತಹ ಒಂದು ಆಲಿಕಲ್ಲು ಮಳೆ ಸುಮಾರು 50 – 60 ವರ್ಷದ ಹಿಂದೆ ಬಿದ್ದಿದ್ದನ್ನು ನಾವು ನೋಡಿದ್ದೇವೆ. ಅಂದರೆ ಒಂದೊಂದು ಆಲಿಕಲ್ಲು ಸುಮಾರು 4 ರಿಂದ 5 ಕೆ.ಜಿ. ದಪ್ಪ ಇರುವಂತಹ ಆಲಿಕಲ್ಲು ಬಿದ್ದಿದ್ದವಂತೆ. ಆಲಿಕಲ್ಲು ರಾತ್ರಿ ಸಮಯದಲ್ಲಿ ಬಿದ್ದಿದ್ದರಿಂದ ಅಷ್ಟೊಂದು ಜೀವ ಹಾನಿಯಾಗಿಲ್ಲ. ಆದರೆ ಇಂಡಿ ಹಾಗೂ ಸಿಂಧಗಿಯಲ್ಲಿ ಒಬ್ಬೊಬ್ಬರ ಜೀವಹಾನಿಯಾಗಿದೆ. ಅದರ ಜೊತೆಗೆ ಮುಖ್ಯವಾಗಿ ತೊಟಗಾರಿಕೆ ಬೆಳೆಗಳಾದ ದ್ರಾಕ್ಷಿ, ನಿಂಬೆ, ದಾಳಿಂಬೆ ಇವುಗಳಿಗೆ ತುಂಬಾ ಹಾನಿಯಾಗಿದೆ. ನಿಂಬೆ ಗಿಡ ಫಸಲು ನೀಡಬೇಕೆಂದರೆ ಗಿಡ ನೆಟ್ಟು ಐದು ವರ್ಷಗಳ ನಂತರ ಫಸಲು ಕೊಡುತ್ತದೆ. ಈ ರೀತಿ ಇರುವಾಗ ಫಸಲು ಹಾಳಾಗುವುದಲ್ಲದೆ ಆಲಿಕಲ್ಲಿನ ಹೊಡೆತಕ್ಕೆ ಗಿಡಗಳು ಮುರಿದು ಬಿದ್ದಿವೆ. ಅಂದರೆ ರೈತ ಆ ಗಿಡವನ್ನು ಬೆಳೆಸಬೇಕೆಂದರೆ ಸುಮಾರು ನಾಲ್ಕೈದು ವರ್ಷಗಳು ಬೇಕಾಗುತ್ತದೆ. ಅಂತಹ ಗಿಡಗಳ ಟೊಂಗೆಗಳು ಮುರಿದು ಗಿಡ ಮುರಿದು ಬಿದ್ದಿದೆ. ದಾಳಿಂಬೆ ಗಿಡಗಳು ಮುರಿದು ಬಿದ್ದಿವೆ. ಅದರ ಜೊತೆಗೆ ದ್ರಾಕ್ಷಿ ಬೆಳೆ ಕೂಡ ಸಾಕಷ್ಟು ಹಾನಿಯಾಗಿದೆ. ಆದಕಾರಣ ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುವುದೇನೆಂದರೆ, ಅಲ್ಲಿಗೆ ಯಾವ ಉಸ್ತುವಾರಿ ಸಚಿವರು

ಬಂದಿಲ್ಲ, ಸರ್ವೆ ಕಾರ್ಯಗಳು ನಡೆದಿಲ್ಲ. ಅದಕ್ಕೆ ಇಂಡಿ, ಸಿಂಧಗಿ, ಮುದ್ದೇಬಿಹಾಳ ಮತ್ತು ಬಾಗೇವಾಡಿ ಭಾಗದಲ್ಲಿ ರೈತರ ತೊಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ ಅದರ ಸಮೀಕ್ಷೆ ನಡೆಯಬೇಕು ಮತ್ತು ಅದಕ್ಕೆ ಸೂಕ್ತವಾದಂತಹ ಪರಿಹಾರ ಸರ್ಕಾರ ಒದಗಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ವಿಧಾನ ಸಭಾಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ದೇಶದ ಬೆನ್ನೆಲುಬು ರೈತರು. ಪರಿಸರ ವಿಕೋಪದಿಂದ ಪದೇ ಪದೇ ಗ್ರಾಮೀಣ ಭಾಗದ ರೈತರು ಇವತ್ತು ಕಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಇದಕ್ಕೆ ಹಲವಾರು ಕಾರಣಗಳಿವೆ. ಅದರಲ್ಲೂ ವಿಶೇಷವಾಗಿ ಪರಿಸರ ನಾಶ ಮಾಡುವಂತಹ, ಅರಣ್ಯವನ್ನು ನಾಶ ಮಾಡುವಂತಹ ಪ್ರವೃತ್ತಿ ಜಾಸ್ತಿಯಾಗಿರುವಂತಹ ಹಿನ್ನೆಲೆಯಲ್ಲಿ ಯಾವಾಗ ಮಳೆರಾಯ ಬರುತ್ತಾನೆ, ಯಾವಾಗ ಬರುವುದಿಲ್ಲವೆಂದು ಹೇಳುವುದಕ್ಕೆ ಕಷ್ಟ ಸಾಧ್ಯವಾಗುವಂತಹ ಸ್ಥಿತಿ ಇವತ್ತು ಕಾಣುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಿಯವರೆಗೂ ಈ ರಾಷ್ಟ್ರದಲ್ಲಿ ರೈತನ ಬದುಕನ್ನು ಹಸನು ಮಾಡುವಂತಹ, ರೈತನ ಜೀವನಕ್ಕೆ ಒತ್ತನ್ನು ಕೊಡುವಂತಹ ಪ್ರಯತ್ನ ಎಲ್ಲಿಯವರೆಗೂ ನಡೆಯುವುದಿಲ್ಲವೋ ಅಲ್ಲಿಯವರೆಗೂ ಬಹುಶಃ ರಾಜ್ಯವಾಗಲಿ ಅಥವಾ ರಾಷ್ಟ್ರವಾಗಲಿ ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯತೆ ಇಲ್ಲ. ಒಂದು ಕಡೆ ರೈತನ ಜಮೀನನ್ನು ಬೇರೆ ಬೇರೆ ಕಾರಣಗಳಿಗೆ ಕಸಿದುಕೊಳ್ಳುವಂತಹ ಪ್ರಯತ್ನಗಳು ನಡೆಯುತ್ತಿವೆ. ರಾಷ್ಟ್ರ ಮಟ್ಟದಲ್ಲಿ ರೈತನ ಜಮೀನನ್ನು ಪಡೆಯುವಂಥದ್ದರಲ್ಲಿ ಆಕ್ಟ್ ಇರಲಿ, ಇದಕ್ಕೆ ಆರ್ಡಿನೆನ್ಸ್ ಅನ್ನು ತರುವಂತಹ ಸ್ಥಿತಿಗೆ ನಾವು ಹೋಗಿದ್ದೇವೆ. ಬಹುಶಃ ಆರ್ಡಿನೆನ್ಸ್ ಅನ್ನು ತರುವುದರ ಮೂಲಕ ನಮ್ಮ ಮೈಂಡ್‌ಸೆಟ್ ಯಾವ ರೀತಿ ಇದೆ ಎಂಬುದನ್ನು ನಾವು ಗಮನಿಸಬಹುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ರೈತರ ಭೂಮಿಯನ್ನು ಖರೀದಿ ಮಾಡುವುದಕ್ಕೂ, ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾಗಿರುವುದಕ್ಕೂ ಏನು ಸಂಬಂಧ? ಮಾನ್ಯ ಸದಸ್ಯರು ಯಾವ ರೀತಿ ಮಾತನಾಡುತ್ತಿದ್ದಾರೆ? ರೈತರ ಬೆಳೆ ನಾಶದ ಬಗ್ಗೆ ಮಾತನಾಡಿ ಎಂದರೆ ರಾಷ್ಟ್ರದ ಬಗ್ಗೆ ಮಾತನಾಡುವುದಕ್ಕೆ ಹೋಗಿದ್ದಾರೆ. ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆಯೆಂದು ಏನು ಬೇಕಾದರು ಮಾತನಾಡಬಹುದೆ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ ನಿನ್ನೆ ದಿವಸ ನಮ್ಮ ರಾಷ್ಟ್ರದ ರಾಜಧಾನಿಯಲ್ಲಿ ನಮ್ಮ ಎ.ಐ.ಸಿ.ಸಿ. ಅಧ್ಯಕ್ಷರ ನಾಯಕತ್ವದಲ್ಲಿ ಈ ದೇಶದಲ್ಲಿ ನಡೆಯುತ್ತಿರುವಂತಹ ರೈತ ವಿರೋಧಿ ಪ್ರವೃತ್ತಿ ವಿರುದ್ಧ ಒಂದು ದೊಡ್ಡ ಹೋರಾಟವನ್ನು ಮಾಡಿರುವಂಥದ್ದನ್ನು ಗಮನಿಸಬೇಕಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ರೈತರಿಗೆ ಬೆಳೆಹಾನಿಯಿಂದ ಉಂಟಾಗಿರುವ ನಷ್ಟಕ್ಕೆ ಪರಿಹಾರ ಕೊಡುವ ಬಗ್ಗೆ ಮಾತನಾಡಿ. ಅದರ ಬಗ್ಗೆ ಮಾತನಾಡುವುದಕ್ಕೆ ಆಗುವುದಿಲ್ಲವೆ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ರೈತರಿಗೆ ಆಗುತ್ತಿರುವಂತಹ ವಿಚಾರವನ್ನು ಹೇಳಿದ ಕೂಡಲೆ ಇವರ ಮೈಂಡ್‌ಸೆಟ್ ಎಷ್ಟರ ಮಟ್ಟಿಗೆ ಇದೆ ಎಂದು ತಿಳಿಯುತ್ತಿದೆ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನೀವು ಮಾತನಾಡುತ್ತಿರುವುದನ್ನು ನೋಡಿದರೆ ನಿಮ್ಮ ಮೈಂಡ್‌ಸೆಟ್ ಯಾವ ರೀತಿ ಇದೆ ಎಂದು ತಿಳಿಯುತ್ತಿದೆ. ಅಕಾಲಿಕ ಮಳೆಯಿಂದಾಗಿ ರೈತರಿಗೆ ಉಂಟಾಗಿರುವಂತಹ ಬೆಳೆ ನಾಶಕ್ಕೆ ಪರಿಹಾರ ಕೊಡುವುದರ ಬಗ್ಗೆ ಮಾತನಾಡುವುದು ಬಿಟ್ಟು ಲ್ಯಾಂಡ್ ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ರೈತರ ಜಮೀನು ಕಸಿದುಕೊಳ್ಳುತ್ತಿದ್ದಾರೆ ಎಂದು ಹೇಳಿದ ಕೂಡಲೆ ಇವರಿಗೆ ಸ್ವಲ್ಪವೂ ತಾಳ್ಮೆಯೇ ಇಲ್ಲವೆಂದರೆ ರೈತರ ಬಗ್ಗೆ ಇವರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೋ ಅಥವಾ ನಿಜಕ್ಕೂ ಇವರು ರೈತರ ಪರವಾಗಿ ಇದ್ದಾರೆಯೇ ಎಂದು ಕೇಳಬಯಸುತ್ತೇನೆ.

**ಶ್ರೀ ಆಚಾರ್ ಹಾಲಪ್ಪ:–** ರೈತರ ಬಗ್ಗೆ ಎಷ್ಟು ಕಾಳಜಿ ಇದೆ ಎಂಬುದು ನಿಮ್ಮ ಮಾತೇ ಸಾಕ್ಷಿ ಅದಕ್ಕೆ. ನಿಮಗೆ ರಾಜಕೀಯ ಮಾಡುವುದಕ್ಕಷ್ಟೇ ಕಾಳಜಿ ಇರುವುದು, ರೈತರ ಬಗ್ಗೆ ನಿಮಗೆ ಕಾಳಜಿ ಇಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಅಕಾಲಿಕ ಮಳೆಯಿಂದಾಗಿ ತೊಂದರೆಯಾಗಿದೆ ಎಂದರೆ ತರಾತುರಿಯಲ್ಲಿ ಅದರ ಬಗ್ಗೆ ಆರ್ಡಿನೆನ್ಸ್ ತರುವುದಾಗಲಿ ಅಥವಾ ಅದರ ಬಗ್ಗೆ ಇನ್ನೇನಾದರು ಬದಲಾವಣೆ ತರುವುದರ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ಮಾಡುವುದಿಲ್ಲ. ಆದರೆ ಯಾರು ಇವತ್ತು ಇಂಡಸ್ಟ್ರಿಯಲಿಸ್ಟ್ ಇವರ ಪರವಾಗಿದ್ದಾರೆ ಅವರ ಪರವಾಗಿ ಆರ್ಡಿನೆನ್ಸ್ ತರುತ್ತಾರೆ. ಇದರ ಬಗ್ಗೆ ಚಿಂತನೆ ಮಾಡುವುದಿಲ್ಲ. ಈಗ ಇಲ್ಲಿ ಮೊಸಳೆ ಕಣ್ಣೀರು ಸುರಿಸುವಂತಹ ಪ್ರಯತ್ನ ನನ್ನ ಸನ್ಮಿತ್ರರು ಏನು ಮಾಡುತ್ತಿದ್ದಾರೆ ಇದರ ಬಗ್ಗೆ ಈ ರಾಜ್ಯದ ಜನತೆ ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಒಬ್ಬ ರೋಗಿ ವೈದ್ಯರ ಬಳಿ ಹೋಗಿ ಅವನು ಇನ್ನು 15 ದಿವಸದಲ್ಲಿ ಸತ್ತುಹೋಗುತ್ತೇನೆಂದು ಹೇಳುತ್ತಾನೆ. ನಾಳೆ ಸಾಯುವುದರ ಬಗ್ಗೆ ಮಾತನಾಡಬೇಡಿ, ಇವತ್ತು ಸತ್ತಿರುವಂಥವರ ಬಗ್ಗೆ ಹೇಳಿ. ನಾಳೆ ಸಾಯುತ್ತಾರೋ ಇಲ್ಲವೋ ಗೊತ್ತಿಲ್ಲ, ನಾಳೆ ಸಾಯುವಂಥವರಿಗೆ ಇವತ್ತು ಇಲ್ಲಿ ಮಾತನಾಡುವುದರಲ್ಲಿ ಅರ್ಥವಿಲ್ಲ. ಈಗ ರೈತರು ಸಾಯುತ್ತಿದ್ದಾರೆ. ರೈತ ರೈತನಾಗಿಯೇ ಉಳಿದರೆ ಅವನು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ನಾವೆಲ್ಲರೂ ರೈತರಾಗಿಯೇ ಇದ್ದಿದ್ದರೆ ಹಾಗೆಯೇ ಇರುತ್ತಿದ್ದೆವು, ನಾವು ರೈತರ ಕೆಲಸ ಬಿಟ್ಟು ಹೊರಗಡೆ ಬಂದಿದ್ದಕ್ಕೆ ಬದುಕಿರುವುದು. ಮೊನ್ನೆ ಮಳೆ ಬಂದಾಗ ನಮ್ಮ ಮಾವಿನ ತೋಟದಲ್ಲಿ ಬೆಳೆದಿದ್ದಂತಹ ಎಲ್ಲಾ ಮಾವಿನ ಕಾಯಿಗಳು ಉದುರಿ ಹೋದವು. ಕಳೆದ ವರ್ಷ ನಾನು ಮಾವಿನ ಫಸಲನ್ನು 6 ಲಕ್ಷ ರೂಪಾಯಿಗೆ ಮಾರಾಟ ಮಾಡಿದ್ದೆ. ಆದರೆ ಇವತ್ತಿನ ದಿವಸ ಅದನ್ನು 50 ಸಾವಿರಕ್ಕೂ ಸಹ ಕೇಳುವವರಿಲ್ಲ. ಆ ರೀತಿಯಾಗಿದೆ. ಇವತ್ತಿನ ದಿವಸ ರೈತನ ಕೆಲಸ ಮಾಡುವುದಕ್ಕೇ ಆಗುವುದಿಲ್ಲ. ರೈತ ಭೂಮಿಯನ್ನು ಕೊಟ್ಟರೆ ಕಡೇ ಪಕ್ಷ ಕೆಲಸವಾದರು ಸಿಗುತ್ತದೆ. ಬೇಕಾದರೆ ಅದರ ಬಗ್ಗೆ ಇನ್ನೊಮ್ಮೆ ಮಾತನಾಡೋಣ. ಆದರೆ ನಾಳೆ ಸಾಯುವವರ ಬಗ್ಗೆ ಮಾತನಾಡುವುದನ್ನು ಬಿಟ್ಟು ಇವತ್ತು ಸಾಯುತ್ತಿರುವವರ ಬಗ್ಗೆ ದಯವಿಟ್ಟು ಮಾತನಾಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಅಂದರೆ ನಾಳೆ ಸಾಯುವವರು ಸಾಯಲಿ ಎಂಬ ಪ್ರವೃತ್ತಿ ನನ್ನ ಸನ್ಮಿತ್ರರಲ್ಲಿ ಕಾಣುತ್ತಿದೆ. ಆದರೆ preventive measure ಅನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ನಮ್ಮ ಬದ್ಧತೆ ಏನೆಂದರೆ, ಎಲ್ಲಿಯೂ ಸಹ ರೈತರು ಸಾಯಬಾರದು, ಆತ್ಮಹತ್ಯೆ ಮಾಡಿಕೊಳ್ಳಬಾರದು. ಸನ್ಮಾನ್ಯ ಮನಮೋಹನ ಸಿಂಗ್‌ರವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಹಾರಾಷ್ಟ್ರ, ಕರ್ನಾಟಕ ಮತ್ತು ಇನ್ನಿತರ ಜಿಲ್ಲೆಗಳಲ್ಲಿ ವಿಶೇಷ ಪರಿಹಾರದ ಪ್ಯಾಕೇಜನ್ನು ನೀಡಿದ್ದನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದು. 2009ರ ಸೆಪ್ಟೆಂಬರ್‌ನಲ್ಲಿ ನಮ್ಮ ರಾಜ್ಯದಲ್ಲಿ ಪ್ರಕೃತಿಯ ವಿಕೋಪದಿಂದ ಬಾಗಲಕೋಟೆ, ಬಿಜಾಪುರ, ಕೊಪ್ಪಳ ರಾಯಚೂರು ಹೀಗೆ 9–10 ಜಿಲ್ಲೆಗಳು...

**ಶ್ರೀ ಈ. ಕೃಷ್ಣಪ್ಪ:–** ಮಾನ್ಯ ಸಭಾಪತಿಗಳೇ, ಈಗ ಚರ್ಚೆ ಮಾಡಬೇಕಾಗಿರುವುದು ನಿನ್ನೆ ಮೊನ್ನೆ ಬಿದ್ದಂತಹ ಮಳೆಯಿಂದಾದ ಹಾನಿಯ ಬಗ್ಗೆ, ಹಿಂದಿನ ಹರಿಕಥೆ ಈಗ ಬೇಡ. ಇದೆಲ್ಲವೂ ಸಹ ಗೊತ್ತಿರುವ ವಿಚಾರ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸದನದಲ್ಲಿ ಮಾತನಾಡುವುದಕ್ಕೆ ಒಂದು ವಿಧಾನ, ಕಾಯಿದೆ ಏನೂ ಇಲ್ಲವೇ? ಏನೆಂದರೆ ಅದನ್ನು ಮಾತನಾಡಬಹುದೇ? ಸಂವಿಧಾನದಲ್ಲಿರುವುದನ್ನೆಲ್ಲ ಹೇಳುವ ಉಗ್ರಪ್ಪನವರಿಗೆ ಇದು ಅನ್ವಯ ಆಗುವುದಿಲ್ಲವೇ?

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ನಿಯಮ 68ರ ಅಡಿಯಲ್ಲಿ ಯಾವ ವಿಚಾರ ಮಾತನಾಡಬಹುದು ಅದನ್ನೇ ನಾನು ಮಾತನಾಡುತ್ತಿದ್ದೇನೆ. ನನಗೆ ಈ ವಿಚಾರಗಳ ಬಗ್ಗೆ ಮಾತನಾಡಲು ಹಕ್ಕಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಇಲ್ಲಿ ಅಕಾಲಿಕ ಮಳೆಯ ಬಗ್ಗೆ ಮಾತ್ರ ಮಾತನಾಡಬೇಕು.

**(ಗೊಂದಲ)**

**ಶ್ರೀ ಅರುಣ್ ಶಹಾಪೂರ:–** ಕೇಂದ್ರ ಸರ್ಕಾರ ಏನು ಮಾಡಬೇಕು ಎನ್ನುವುದನ್ನು ಇಲ್ಲಿ ಎಷ್ಟು ಮಾತನಾಡಿದರೂ ಅಷ್ಟೆ, ರಾಜ್ಯ ಸರ್ಕಾರ ಏನು ಮಾಡುತ್ತದೆ ಎನ್ನುವುದನ್ನು ಹೇಳಿ. ವಿನಾಕಾರಣ ರೈತರ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೇ, ಸದನದಲ್ಲಿ ಗಂಭೀರವಾದ ವಿಚಾರದ ಬಗ್ಗೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಉಗ್ರಪ್ಪನವರು ದಾರಿ ತಪ್ಪಿಸುತ್ತಿದ್ದಾರೆ. ದಯಮಾಡಿ ರೈತರ ವಿಚಾರದ ಬಗ್ಗೆ ಮಾತನಾಡಲು ಹೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, 2009ರಲ್ಲಿ ಸೆಪ್ಟೆಂಬರ್ 27, 28, 29ನೇ ತಾರೀಖಿನಂದು ಪ್ರವಾಹ ಬಂದು ಆ ಭಾಗದ ಜನರ ಜೀವನ ದುಸ್ಥರ ಆದಂತಹ ಸಂದರ್ಭದಲ್ಲಿ ನಮ್ಮ ರಾಷ್ಟ್ರೀಯ ಪಕ್ಷದ ಅಧ್ಯಕ್ಷಿಣಿ ಶ್ರೀಮತಿ ಸೋನಿಯಾ ಗಾಂಧಿಯವರು ಯುಪಿಎ ಛೇರ್ಮನ್ ಆಗಿ ಮತ್ತು ಅಂದು ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಮನಮೋಹನ ಸಿಂಗ್‌ರವರು ವೈಮಾನಿಕ ಸಮೀಕ್ಷೆಯನ್ನು ಮಾಡಿ, ರಾಯಚೂರಿನಲ್ಲಿ ಲ್ಯಾಂಡ್ ಆಗಿ ಅಲ್ಲಿ 1000 ಕೋಟಿ ರೂಪಾಯಿಗಳನ್ನು ಡಿಕ್ಲೇರ್ ಮಾಡಿರುವುದು ಒಂದು ಇತಿಹಾಸ. ಇದು ಈ ದೇಶದ ಇತಿಹಾಸದಲ್ಲಿಯೇ ಮೊದಲನೆಯದು.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಅದರಲ್ಲಿ ಎಷ್ಟು ಹಣ ಬಂದಿದೆ ಎನ್ನುವುದನ್ನು ಹೇಳಿ.

**(ಗೊಂದಲ)**

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಗಳೇ, ಇದನ್ನೆಲ್ಲ ಉಗ್ರಪ್ಪನವರು ಹೇಳಬೇಕೆಂದು ಹೇಳುತ್ತಿಲ್ಲ. ಏಕೆಂದರೆ ಅವರಿಗೆ ಆತ್ಮವಂಚನೆಯನ್ನು ಮಾಡಿಕೊಳ್ಳುವುದಕ್ಕೆ ಇಷ್ಟವಿಲ್ಲ. ಆದರೂ ಹೇಳುತ್ತಿದ್ದಾರೆ, ದಯಮಾಡಿ ಕೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಅದು ಅವರ ಪ್ರವೃತ್ತಿ ಏನು ಮಾಡುವುದಕ್ಕೆ ಆಗುವುದಿಲ್ಲ. ನನಗೆ ತಿಳಿದಿರುವ ಮಾಹಿತಿಯ ಪ್ರಕಾರ ರಾಯಚೂರು, ಯಾದಗಿರಿ, ಬೀದರ್, ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ, .. . .

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ಅವರ ಪಾಯಿಂಟ್ ಆಫ್ ಆರ್ಡರ್ ಅನ್ನು ಎಸ್ಟಾಬ್ಲಿಷ್ ಮಾಡುವುದಕ್ಕೆ ಹೇಳಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ರೈತರ ಸಮಸ್ಯೆಯ ಬಗ್ಗೆ ಚರ್ಚೆ ಮಾಡುವಾಗ ಪಾಯಿಂಟ್ ಆಫ್ ಆರ್ಡರ್ ಏಕೆ ಬರುತ್ತದೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನನ್ನ ಪಾಯಿಂಟ್ ಆಫ್ ಆರ್ಡರ್ ಇರುವುದು ರೈತರ ಸಮಸ್ಯೆಗಳ ಬಗ್ಗೆ ಅಲ್ಲ, ಉಗ್ರಪ್ಪನವರ ಬಗ್ಗೆ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೇ, ಅತ್ಯಂತ ಜರೂರಾದ ಸಾರ್ವಜನಿಕ ಮಹತ್ವ ವಿಚಾರದ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ನೀಡಿದ್ದೇವೆ. ಅದನ್ನು ನಿಯಮ 68ರಡಿಯಲ್ಲಿ ಚರ್ಚೆ ಮಾಡಬೇಕೆಂದು ಪರಿವರ್ತಿಸಿ ಪೀಠ ಆದೇಶ ನೀಡಿದೆ. ಇಲ್ಲಿ ವಿಷಯದ ಬದಲಾವಣೆ ಆಗಿಲ್ಲ. ಯಾವ ನಿಯಮದಡಿಯಲ್ಲಿ ವಿಚಾರವನ್ನು ಚರ್ಚೆ ಮಾಡಬೇಕೆನ್ನುವುದು ಮಾತ್ರ ಬದಲಾವಣೆ ಆಗಿದೆ. ನಮ್ಮ ವಿಚಾರ ಇದ್ದದ್ದು ಅತ್ಯಂತ ಜರೂರಾದ ಅಕಾಲಿಕ ಮಳೆಯ ಹಾನಿಯಿಂದ ಉಂಟಾದ ರೈತರ ಸಮಸ್ಯೆ ಬಗ್ಗೆ, ಅದರ ಬಗ್ಗೆ ಮಾತನಾಡುವುದನ್ನು ಬಿಟ್ಟು ಹಿಂದಿನ ಕೇಂದ್ರ ಸರ್ಕಾರಗಳು ಏನೆಲ್ಲಾ ಮಾಡಿದ್ದವು ಎಂದು ಹೇಳುವ ಅಗತ್ಯ ಇಲ್ಲ. ಅವರು ಅಕಾಲಿಕ ಮಳೆಯಿಂದ 8 ಜಿಲ್ಲೆಗಳಲ್ಲಿ ರೈತರಿಗೆ ಆಗಿರುವ ಹಾನಿಯ ಬಗ್ಗೆ ಮತ್ತು ಅದಕ್ಕೆ ನೀಡಬೇಕಾದ ಪರಿಹಾರದ ಚರ್ಚೆ ಮಾಡಬೇಕು. ಅದನ್ನು ಬಿಟ್ಟು ಬೇರೆ ಲ್ಯಾಂಡ್ ರಿಫಾರ್ಮ್ ಮತ್ತು ಅಕ್ವಿಸಿಷನ್ ನಂತಹ ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಇಲ್ಲಿ

ಅವಕಾಶವೇ ಇಲ್ಲ. ಆದ್ದರಿಂದ ವಿಷಯ ಬಿಟ್ಟು ಮಾತನಾಡುವುದಕ್ಕೆ ಅವರಿಗೆ ಅವಕಾಶ ನೀಡಬಾರದೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಸಭಾಪತಿಗಳೇ, ಈ ವಿಷಯ ಬಿಟ್ಟು ಅವರು ಬೇರೆ ಮಾತನಾಡಬಾರದು. ತಾವು ರೂಲಿಂಗ್ ನೀಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, is there any point to be considered by the Chair? ನಾನು ಏನನ್ನು ಹೇಳಲಿಕ್ಕೆ ಬಯಸುತ್ತೇನೆಂದರೆ, ನನ್ನ ಸ್ನೇಹಿತರು ಹೇಗೆ ಎಂದರೆ, ಯಾವಾಗಲೂ ಸತ್ಯ ಕಠೋರವಾಗಿರುತ್ತದೆ. ಆದರೆ ಆ ಸತ್ಯವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವರು ಸಿದ್ಧರಿಲ್ಲ. ಬಹುಶಃ ಅವರು ಗುಜರಾತಿನ ರೈತರ ರೀತಿಯಲ್ಲಿಯೇ ಇಲ್ಲಿಯೂ ಎಂದು ತಿಳಿದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಕರ್ನಾಟಕದ ರೈತರು ಬಹಳ ಪ್ರಭುದ್ಧರಿದ್ದಾರೆ. ಮೊಸಳೆ ಕಣ್ಣೀರನ್ನು ಸುರಿಸುವವರ ಬಗ್ಗೆ ಅವರು ಅರ್ಥ ಮಾಡಿಕೊಳ್ಳುತ್ತಾರೆ. ನಮ್ಮ ರಾಜ್ಯದಲ್ಲಿ ಜನವರಿಯಿಂದ ಏಪ್ರಿಲ್ ತಿಂಗಳಿನವರೆಗೆ ವಾಡಿಕೆ ಮಳೆ ಸುಮಾರು 25 ಎಂ.ಎಂ ಬೀಳಬೇಕಾಗಿತ್ತು. ಆದರೆ ಈ ಸಲ ಸುಮಾರು 150 ಎಂ.ಎಂ. ಹೆಚ್ಚು ಮಳೆ ಬಿದ್ದಿದೆ. ಇದರಿಂದ ಸುಮಾರು 14 ಜನರ ಜೀವಹಾನಿ ಆಗಿದೆ. 90 ಜಾನುವಾರುಗಳಿಗೆ ಹಾನಿಯಾಗಿದೆ. 774 ಮನೆಗಳು ನಾಶವಾಗಿವೆ. 55,405 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. 1433 ಹೆಕ್ಟೇರ್‌ಗಳಲ್ಲಿ ತೋಟಗಾರಿಕೆ ಬೆಳೆ ನಾಶವಾಗಿದೆ.

**(5.30 ಗಂಟೆ)**

ಬೆಳೆಹಾನಿಯ ನಷ್ಟ ಸುಮಾರು 359 ಕೋಟಿ ರೂ.ಗಳಿಗಿಂತಲು ಹೆಚ್ಚು ಎಂದು ಸಂಬಂಧಪಟ್ಟ ಇಲಾಖೆಯವರು ಅಸೆಸ್ ಮಾಡಿದ್ದಾರೆ. ತೋಟಗಾರಿಕೆಯ ನಷ್ಟ ಸುಮಾರು 15 ಕೋಟಿ ರೂ.ಗಳು ಸುಮಾರು 365 ಕೋಟಿ ರೂ.ಗಳ ಬೆಳೆ ಹಾನಿಯಾಗಿದೆ. ಇದಕ್ಕೆ ಪರಿಹಾರ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು.

**ಶ್ರೀ ಆಚಾರ ಹಾಲಪ್ಪ:–** ಮಾನ್ಯ ಸಭಾಪತಿಗಳೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ನಾನು ಡಿಸಿಯವರ ಹತ್ತಿರ ಮಾತನಾಡಿದಾಗ ಇನ್ನು ಪೂರ್ತಿ ಸಮೀಕ್ಷೆಯಾಗಿಲ್ಲ ಎಂದು ಹೇಳಿದ್ದಾರೆ. ತಾವು ಅಂದಾಜು ಹೇಳುತ್ತಿದ್ದೀರಾ ಅಥವಾ ಪೂರ್ತಿ ಸಮೀಕ್ಷೆಯ ವಿವರವನ್ನು ಕೊಡುತ್ತಿದ್ದೀರಾ?

**(ಗೊಂದಲ)**

**ಉಪಸಭಾಪತಿಯವರು:–** ಅವರು ಸರ್ಕಾರದಿಂದ ಉತ್ತರವನ್ನು ಕೊಡುತ್ತಿಲ್ಲ. ಅವರಿಗೆ ಇರುವ ಮಾಹಿತಿಯನ್ನು ಹೇಳುತ್ತಿದ್ದಾರೆ. ಹೇಳಲಿ ಬಿಡಿ. ನೀವು ಏಕೆ ಮಧ್ಯೆ ಮಾತನಾಡುತ್ತೀರಿ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ನನಗೆ ಜಿಲ್ಲಾವಾರು ಮಾಹಿತಿ ಇದೆ. ನನಗೆ ಇರುವ ಮಾಹಿತಿ ಪ್ರಕಾರ ಇನ್ನು ಒಂದು ವಾರದಲ್ಲಿ ನಿಖರವಾದ ಮಾಹಿತಿ ಸಿಗುತ್ತದೆ. ಆದರೆ ಜಿಲ್ಲಾವಾರು ಇಲ್ಲಿಯವರೆಗೆ ಅಂದಾಜು ಮಾಡಿರುವುದು over all ತೆಗೆದುಕೊಂಡಾಗ ಇದು ಆ ಭಾಗದಲ್ಲಿ ಆದರೆ ಕೋಲಾರ, ತುಮಕೂರು, ಚಿತ್ರದುರ್ಗ ಈ ಭಾಗದಲ್ಲಿಯು ಸಹ ವಿಶೇಷವಾಗಿ ತೋಟಗಾರಿಕೆಯಲ್ಲಿ ಮಾವಿನ ಬೆಳೆ ನಾಶವಾಗಿದೆ. ಇದೆಲ್ಲವನ್ನು ಲೆಕ್ಕ ಹಾಕಿದರೆ ಸುಮಾರು 500 ಕೋಟಿ ರೂ.ಗಳಷ್ಟು ನಷ್ಟವಾಗುತ್ತದೆ ಎನ್ನುವ ಬಗ್ಗೆ ಸರ್ಕಾರ ಗಮನಹರಿಸಿದೆ ಎಂದು ನಾನು ಅಂದುಕೊಳ್ಳುತ್ತೇನೆ. ಈ ಹಿನ್ನೆಲೆಯಲ್ಲಿ ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆಯನ್ನು ಕೈಗೊಂಡಿದ್ದಾರೆ. ಮಾನ್ಯ ಕೃಷಿ ಸಚಿವರು ಕೆಲವು ಭಾಗಗಳಿಗೆ ಭೇಟಿ ನೀಡಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳಬಯಸುವುದು, ಪ್ರತಿಯೊಂದು ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ–ತಮ್ಮ ಜಿಲ್ಲೆಗಳಲ್ಲಿ ಸಂಚರಿಸಿ ಬೆಳೆ ಹಾನಿ ಬಗ್ಗೆ ....

**ಶ್ರೀ ಅರುಣ ಶಹಾಪೂರ:–**ಮಾನ್ಯ ಸಭಾಪತಿಗಳೆ, ಪಾಯಿಂಟ್ ಆಫ್ ಆರ್ಡರ್.

**ಶ್ರೀ ವಿ.ಎಸ್. ಉಗ್ರಪ್ಪ:–** ಮಂತ್ರಿಗಳು ತಮ್ಮ ಜಿಲ್ಲೆಗಳಿಗೆ ಭೇಟಿ ನೀಡಬೇಕು ಎನ್ನುವುದು ಪಾಯಿಂಟ್ ಆಫ್ ಆರ್ಡರ್ ಆಗುತ್ತದೆಯೇ? ಏನು ನಿಮ್ಮ ಪಾಯಿಂಟ್ ಆಫ್ ಆರ್ಡರ್?

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಗಳೇ, ನಿಯಮ 68ರ ಅಡಿಯಲ್ಲಿ ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ನಿಯಮ 69ರಲ್ಲಿ ಬಹಳ ಸ್ಪಷ್ಟವಾಗಿ ಇದೆ, ಇದಕ್ಕೆ ಸಮಯ ನಿಗದಿಪಡಿಸುವಲ್ಲಿ ಒಂದು ಗಂಟೆಗೆ ಮೀರದಂತೆ ಸಮಯವನ್ನು ನಿಗದಿಪಡಿಸಬಹುದು ಎಂದು ಇದೆ. ಈಗಾಗಲೆ ಒಂದು ಗಂಟೆಗಿಂತ ಹೆಚ್ಚು ಸಮಯವಾಗಿದೆ. ಆ ಕಾರಣಕ್ಕೆ ಈ ಚರ್ಚೆಯನ್ನು ಎಷ್ಟು ಅವಧಿಯಲ್ಲಿ ಮುಕ್ತಾಯಗೊಳಿಸಲಾಗುತ್ತದೆ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಈ ನಾಡಿನ ಜನರಿಗೆ ಅನ್ನವನ್ನು ಕೊಡುವಂತಹ ರೈತನ ಸಮಸ್ಯೆ ಇದು. ಈ ವಿಚಾರವನ್ನು ಚರ್ಚೆ ಮಾಡಲು ಒಂದೇ ಗಂಟೆ ಸಮಯ ಎನ್ನುವುದು ನಿಮ್ಮ ಸಂಕುಚಿತ ಭಾವನೆಯನ್ನು ತೋರಿಸುತ್ತದೆ.

**ಉಪಸಭಾಪತಿಯವರು:–** ಅರುಣ್‌ರವರೆ, ನೀವು ಮಧ್ಯೆ ಮಾತನಾಡಬೇಡಿ. ಇನ್ನು ಐದು ನಿಮಿಷದಲ್ಲಿ ಉಗ್ರಪ್ಪನವರು ಮಾತನಾಡಿ ಮುಗಿಸುತ್ತಾರೆ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ನೀವು ಎಷ್ಟು ಮಾತನಾಡುತ್ತೀರಿ, ಅಷ್ಟೇ ವಿಸ್ತಾರವಾಗಿ ಸರ್ಕಾರ ಉತ್ತರ ಕೊಡುತ್ತದೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಉಗ್ರಪ್ಪನವರು ಆಳುವ ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳುವ ರೀತಿ ಅದ್ಭುತವಾಗಿದೆ. ಅದರಲ್ಲಿಯ ಸರಿ ತಪ್ಪು ಬೇರೆ. ಇಂತಹ ಅಭ್ಯರ್ಥಿಯನ್ನು ಮುಂದಿನ ಸಾರಿಯಾದರು ಗಮನಿಸಬೇಕು ಎನ್ನುವ ವಿನಂತಿಯನ್ನು ಕೆ.ಪಿ.ಸಿ.ಸಿ ಅಧ್ಯಕ್ಷರಲ್ಲಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋ. ಮಧುಸೂದನ್:–** ಕೆ.ಪಿ.ಸಿ.ಸಿ ಅಧ್ಯಕ್ಷರಿಗೇ ಅನ್ಯಾಯವಾಗಿದೆ.

**ಶ್ರೀ ಎನ್.ಎಸ್. ಭೋಸರಾಜ್:–** ಇದೇ ರೀತಿ ಮಾತನಾಡಿ ಸಮಯವನ್ನು ಕಳೆಯುತ್ತಿದ್ದಾರೆ. ರೈತರ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಚರ್ಚೆಯ ದಾರಿಯನ್ನು ತಪ್ಪಿಸುತ್ತಿದ್ದಾರೆ. ರೈತರ ಬಗ್ಗೆ ಮಾತನಾಡಿದರು ದಾರಿ ತಪ್ಪಿಸುತ್ತಾರೆ, ಮಾತನಾಡಬೇಡಿ ಎಂದು ಆರ್ಡಿನೆನ್ಸ್ ಮಾಡುತ್ತಾರೆ. ಬಹಿಷ್ಕಾರ ಮಾಡುತ್ತೀರಿ, ರೈತರ ಬಗ್ಗೆ ಮಾತನಾಡಲು ತಾವು ತಯಾರಿಲ್ಲ.

**ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ:–** ನಾನು ದಾರಿ ತಪ್ಪಿಸುವಂತಹ ಕೆಲಸವನ್ನು ಮಾಡುತ್ತಿಲ್ಲ. **"**ವಂಚನೆಗೆ ಒಳಗಾದವ ಮಾತ್ರ ವಂಚಿತನಿಗೆ ನ್ಯಾಯ ಕೊಡಬಲ್ಲ**"** ಎನ್ನುವ ಮಾತು ಇದೆ. ಹೀಗಾಗಿ ನಾನು ಕೆ.ಪಿ.ಸಿ.ಸಿ. ಅಧ್ಯಕ್ಷರಲ್ಲಿ ವಿನಂತಿ ಮಾಡಿದೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ಪ್ರತಿಯೊಂದು ಜಿಲ್ಲಾ ಉಸ್ತುವಾರಿ ಸಚಿವರು ಯುದ್ಧೋಪಾದಿಯಲ್ಲಿ ತಮ್ಮ ಜಿಲ್ಲೆಗಳಿಗೆ ಭೇಟಿ ಮಾಡಿ ಬೆಳೆ, ಜಾನುವಾರು, ಮನೆಗಳು ನಷ್ಟವಾಗಿರುವ ಮಾಹಿತಿಯನ್ನು ಪಡೆದು ಯುದ್ಧೋಪಾದಿಯಲ್ಲಿ ಅವರಿಗೆ ಪರಿಹಾರವನ್ನು ಒದಗಿಸುವಂತಹ ಕೆಲಸಕ್ಕೆ ಮುಂದಾಗಬೇಕು. ಅದೇ ರೀತಿ ಜಿಲ್ಲಾಧಿಕಾರಿಗಳು ಮತ್ತು ಇದಕ್ಕೆ ಸಂಬಂಧಪಟ್ಟಂತಹ ಕಾರ್ಯದರ್ಶಿಗಳು ಸಹ ಇದರ ಬಗ್ಗೆ ಗಮನಹರಿಸಿ ಪ್ರತಿಯೊಂದು ಜಿಲ್ಲೆಗಳಿಗೆ ಹೋಗಿ ನೋಡಬೇಕು. 22ನೇ ತಾರೀಖಿನಂದು ಸರ್ಕಾರ ಸರ್ವಸದಸ್ಯರ ನಿಯೋಗವನ್ನು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಕರೆದುಕೊಂಡು ಹೋಗುತ್ತಿದೆ ಎನ್ನುವುದನ್ನು ಮಾಧ್ಯಮಗಳಲ್ಲಿ ಕೇಳಿದ್ದೇನೆ. ದಯಮಾಡಿ ಮಾನ್ಯ ಈಶ್ವರಪ್ಪನವರು, ಕಾರ್ಣಿಕ್‌ರವರು ಮತ್ತು ಇತರೆ ನನ್ನ ಸ್ನೇಹಿತರು ತಮಗೆ ಕೇಂದ್ರದಲ್ಲಿ ಇರುವ ಪ್ರಭಾವವನ್ನು ಬಳಸಿಕೊಂಡು, ಹೇಗೆ 2009ರಲ್ಲಿ ಅಂದಿನ ಪ್ರಧಾನ ಮಂತ್ರಿಗಳು ಭೇಟಿ ಮಾಡಿದಾಗ 1000 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಕೊಟ್ಟಿದ್ದರು, ಫೈನಲ್ ಆಗಿ 1620 ಕೋಟಿ ರೂ.ಗಳನ್ನು ಕೊಟ್ಟಿದ್ದರು. ದಯಮಾಡಿ ಈ ರಾಜ್ಯದ ಬಡವರ ಪರವಾಗಿ, ರೈತರ ಪರವಾಗಿ ಈ ಸದನದ

ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಮ್ಮ ಪ್ರಭಾವವನ್ನು ಬೀರಿ ರಾಜ್ಯಕ್ಕೆ ಕನಿಷ್ಠ 500 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಮಾನ್ಯ ಮನಮೋಹನ ಸಿಂಗ್‌ರವರ... ಕ್ಷಮಿಸಿ. ಮಾನ್ಯ ಮೋದಿಯವರ ಮೂಲಕ ತರಬೇಕು. ಏಕೆ ಮನಮೋಹನ ಸಿಂಗ್‌ರವರ ಹೆಸರು ಬಂತು ಎಂದರೆ, 2009ರಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ವಿಧಾನಸಭೆಯಲ್ಲಿ ಮಾನ್ಯ ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ನಾವು ಬೇಡಿಕೆ ಇಟ್ಟಾಗ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಮನಮೋಹನ ಸಿಂಗ್‌ರವರು 1000 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಕೊಟ್ಟರು. ಹಾಗೆಯೇ ಇವತ್ತು ಇಲ್ಲಿ ಮಾನ್ಯ ಈಶ್ವರಪ್ಪನವರು ವಿರೋಧ ಪಕ್ಷದ ನಾಯಕರಾಗಿ, ವಿಧಾನಸಭೆಯಲ್ಲಿ ಮಾನ್ಯ ಜಗದೀಶ್ ಶೆಟ್ಟರವರು ವಿರೋಧ ಪಕ್ಷದ ನಾಯಕರಾಗಿ ಮತ್ತು ರಾಜ್ಯದಿಂದ ಕೇಂದ್ರಕ್ಕೆ ಹೋಗಿ ಅಲ್ಲಿ ಮಂತ್ರಿಗಳಾಗಿರುವವರು ರಾಜ್ಯದ ರೈತನ ಪರವಾಗಿ ಬೇಡಿಕೆಯನ್ನು ಇಟ್ಟು ತಮ್ಮ ಪ್ರಭಾವವನ್ನು ಬಳಸಿ ಕನಿಷ್ಠ 500 ಕೋಟಿ ರೂ.ಗಳ ಅನುದಾನವನ್ನು ಕೊಡಿಸುವಂತಹ ಕೆಲಸವನ್ನು ಮಾನ್ಯ ಬಿಜೆಪಿ ಯವರು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಧನ್ಯವಾದಗಳು.

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಗಳೆ, 2012–13ರಲ್ಲಿ ಆಗಿರುವಂತಹ ಅಕಾಲಿಕವಾದ ದೊಡ್ಡ–ದೊಡ್ಡ ಆಲಿಕಲ್ಲು ಮಳೆಯಿಂದಾಗಿ ಸುಮಾರು 8 ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆ ಹಾನಿಯಾಗಿರುವ ವಿಚಾರವನ್ನು ಎಲ್ಲರೂ ತಿಳಿದುಕೊಂಡಿದ್ದೇವೆ. ಸಾವಿರಾರು ಹೆಕ್ಟೇರ್ ಜಮೀನಿನಲ್ಲಿ ಭತ್ತದ ಬೆಳೆ, ಜಾನುವಾರುಗಳ ಹಾನಿಯಾಗಿದೆ, ಮನೆಗಳು ಬಿದ್ದಿವೆ. ರೈತ ಬಹಳಷ್ಟು ಸಂಕಷ್ಟದಲ್ಲಿದ್ದಾನೆ. ಆಕಸ್ಮಿಕ ಮಳೆಯಿಂದ ಆಗಿರುವ ಹಾನಿಗೆ ಪ್ರಭುದ್ಧವಾದ ಪ್ರತಿಯೊಂದು ಸರ್ಕಾರವು ತಕ್ಷಣ ಸಹಾಯ ಹಸ್ತವನ್ನು ನೀಡಬೇಕಾಗುತ್ತದೆ. ಅದು ಎಷ್ಟು ವಿಳಂಬವಾಗುತ್ತದೆ, ಅಷ್ಟು ಸಂಕಷ್ಟ ಹೆಚ್ಚಾಗುತ್ತದೆ. ಹೀಗಾಗಿ ಆದಷ್ಟು ಬೇಗ ಈ ಕೆಲಸಗಳು ಆಗಬೇಕೆಂದು ಸರ್ಕಾರದಲ್ಲಿ ನಾನು ಆಗ್ರಹಿಸುತ್ತೇನೆ. ಭತ್ತದ ಬೆಳೆ ಕೇವಲ ಕೊಪ್ಪಳ, ಗಂಗಾವತಿ ಭಾಗದಲ್ಲಿ ಆದರೂ ಸಹಿತ, ತುಮಕೂರಿನಲ್ಲಿ ಹೆಚ್ಚು ಭತ್ತ ಬೆಳೆಯುವುದಿಲ್ಲ ಆದರೂ ಸಹಿತ ಸುಮಾರು 150 ಭತ್ತದ ಕಾರ್ಖಾನೆಗಳು ತುಮಕೂರಿನಲ್ಲಿವೆ. ಆ ಕಾರ್ಖಾನೆಗಳು ಕೊಪ್ಪಳ ಮತ್ತು ಗಂಗಾವತಿ ಭಾಗದಲ್ಲಿ ಬೆಳೆಯುವ ಭತ್ತದ ಮೇಲೆ ಅವಲಂಬಿತವಾಗಿವೆ. ರೈತರಿಗೆ ಆಗುವ ಹಾನಿ ಇಡೀ ರಾಜ್ಯದ ಮೇಲೆ ಪರಿಣಾಮವಾಗುತ್ತಿದೆ. ಆಹಾರದ ಮೇಲೆ ಪರಿಣಾಮವಾಗುತ್ತಿದ್ದು, ಮುಂಬರುವ ಬೆಳೆಗಳಿಗೆ ಸಹಾಯಾರ್ಥ ನೀಡಬೇಕಾಗುತ್ತದೆ. ಪ್ರಕೃತಿ ವಿಕೋಪಗಳು, ಅಕಾಲಿಕ ಮಳೆ, ಪ್ರವಾಹ, ಭೂಕಂಪ ಇತ್ಯಾದಿಗಳು ಯಾರ ನಿಯಂತ್ರಣದಲ್ಲಿ ಇರುವುದಿಲ್ಲ. ಹಾನಿಗೊಳಗಾದ ಸಮಯದಲ್ಲಿ ಸಹಾಯ ಮಾಡುವ ವಿಶಾಲ ಗುಣ ಪ್ರಬುದ್ಧ ಸರ್ಕಾರಕ್ಕೆ ಇರಬೇಕಾಗುತ್ತದೆ. ಆ ಸಂಕಷ್ಟವನ್ನು ಯಾವ ರೀತಿ ನಿಭಾಯಿಸುತ್ತದೆ ಎನ್ನುವುದರ ಮೇಲೆ ಸಹಾಯಾರ್ಥ ಮುಟ್ಟುತ್ತದೆ. ಆ ದಿಸೆಯಲ್ಲಿ ಆ ಭಾಗದಲ್ಲಿ ಎಷ್ಟು ಹಾನಿಯಾಗಿದೆ ಎಂದು ಸರ್ವೆ

ಮಾಡಬೇಕು. ಕೇವಲ ರೈತರ ಹಾನಿಯಲ್ಲದೇ ಮನೆ ಮತ್ತು ಜಾನುವಾರುಗಳನ್ನು ಕಳೆದುಕೊಂಡವರ ಸಮೀಕ್ಷೆ ಮಾಡಬೇಕು ಮತ್ತು ಕೇಂದ್ರ ಸರ್ಕಾರದ ಸಹಾಯ ಬರುವವರೆಗೆ ಕಾಯದೇ ರಾಜ್ಯ ಸರ್ಕಾರ ತಕ್ಷಣ ಅವರ ಸಹಾಯಕ್ಕೆ ಧಾವಿಸಿ ಸಹಾಯ ಮಾಡಬೇಕು. ಎಕರೆಗೆ ಕನಿಷ್ಟವೆಂದರೂ ರೂ. 25 ರಿಂದ 30 ಸಾವಿರ ಹಣ ನೀಡಿದರೆ ಆದಂತಹ ಹಾನಿಗೆ ಸ್ವಲ್ಪಮಟ್ಟಿಗೆ ಪರಿಹಾರ ಕೊಟ್ಟಂತೆ ಆಗುತ್ತದೆ. ಆ ದಿಸೆಯಲ್ಲಿ ಸರ್ಕಾರ ತಕ್ಷಣ ಕಾರ್ಯತತ್ಪರರಾಗಬೇಕೆಂದು ಆಗ್ರಹಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದು, ಆ ಭಾಗದಲ್ಲಿ ವಿಶೇಷವಾಗಿ ಹೈದರಾಬಾದ್–ಕರ್ನಾಟಕದ ಜಿಲ್ಲೆಗಳಲ್ಲಿ ಆಲಿಕಲ್ಲಿನ ಮಳೆಯಾಗುತ್ತಿದ್ದು, ಆ ನಿಟ್ಟಿನಲ್ಲಿ ಮಾನ್ಯ ಕಂದಾಯ ಸಚಿವರಿಗೆ ಹಲವಾರು ಬಾರಿ ವಿನಂತಿಸಿದ್ದೇನೆ. ಇದರ ಸರಿಯಾದ ಸಮೀಕ್ಷೆ ಆಗುತ್ತಿಲ್ಲ. ಇಲಾಖೆಯವರು ಮಾಡುತ್ತಿಲ್ಲ ಎಂದು ಸಾಕಷ್ಟು ಬಾರಿ ಪತ್ರಿಕೆಗಳಲ್ಲಿ ರಾಜ್ಯದ ಮತ್ತು ಜನರ ಎದುರು ಬಂದಿದೆ. ಆ ನಿಟ್ಟಿನಲ್ಲಿ ಕಳೆದ ಅಧಿವೇಶನದಲ್ಲಿ ಕಳೆದ 3 ವರ್ಷಗಳಿಂದ ಆಲಿಕಲ್ಲಿನ ಮಳೆಯಿಂದ ಆದ ಹಾನಿ ಸರ್ಕಾರದ ಗಮನದಲ್ಲಿ ಇದೆಯೇ ಎಂದು ಕೇಳಿದಾಗ, ಯಾವುದೂ ಗಮನದಲ್ಲಿ ಇಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆ ನಿಟ್ಟಿನಲ್ಲಿ ನಾನು ವಿನಂತಿಸುವುದೇನೆಂದರೆ, ಸಮೀಕ್ಷೆಗಳು ನಿಖರವಾಗಿ ಸರಿಯಾಗಿ ಆಗಬೇಕು. ವಿಶೇಷವಾಗಿ 6 ಜಿಲ್ಲೆಗಳಲ್ಲಿ ಹಾನಿಗೊಳಗಾದ ರೈತರ ಸಮೀಕ್ಷೆಯನ್ನು ಇಲಾಖೆಯವರು ಕಾಲಮಿತಿಯೊಳಗೆ ಸರಿಯಾಗಿ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಕಾಲಿಕ ಮಳೆಯಿಂದ ರೈತರು ಸಂಕಷ್ಟಕ್ಕೆ ಈಡಾಗಿದ್ದು, ವಿಶೇಷವಾಗಿ ಉತ್ತರ ಕರ್ನಾಟಕದ ಭತ್ತದ ಬೆಳೆ ನೆಲಕಚ್ಚಿ ಅವರು ಆತಂಕದ ಸ್ಥಿತಿಯಲ್ಲಿದ್ದು, ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಮೂಲಕ ತಂದಿದ್ದಾರೆ. ನಾನು ಪ್ರಾರ್ಥನೆ ಮಾಡುವುದೇನೆಂದರೆ, ಈ ಪರಿಹಾರಕ್ಕೆ ಒಂದು ಕಾಲಮಿತಿ ಫಿಕ್ಸ್ ಮಾಡಬೇಕು. ಪರಿಹಾರವನ್ನು ಯಾವ ಹಂತದಲ್ಲಿ ಕೊಡಬೇಕು ಎನ್ನುವುದರ ಬಗ್ಗೆ ಚರ್ಚೆಯಾಗಬೇಕು. ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ರೂಪದಲ್ಲಿ ರೈತರನ್ನು ನಡೆಸಿಕೊಳ್ಳುತ್ತಿದ್ದು, ರೂ. 1 ಲಕ್ಷ ಬೆಳೆ ಹಾನಿಗೆ ರೂ. 2,500ಗಳನ್ನು ಕೊಡುತ್ತಿದ್ದಾರೆ. ಇದರ ಬಗ್ಗೆ ಮಾತನಾಡಿದಾಗ Calamity Relief Fund ಪ್ರಕಾರ ಅಷ್ಟೇ ಕೊಡುವುದಕ್ಕೆ ಆಗುತ್ತದೆ ಮತ್ತು ಪರಿಷ್ಕರಣೆ ಮಾಡಿಲ್ಲ ಎನ್ನುವ ಮಾತುಗಳು ಬರುತ್ತದೆ. ರೈತರ ಸಂಕಷ್ಟವೆಂದರೆ ಎಲ್ಲಾ ಭಾಗದ ರೈತರೂ ಒಂದೇ. ಮಾನ್ಯ ಉಗ್ರಪ್ಪನವರು ಪ್ರಸ್ತಾಪಿಸಿದಂತೆ ಮೊನ್ನೆ ಮಾವಿನ ಬೆಳೆಗಾರರ ಬಗ್ಗೆ ಹೋದ ವರ್ಷ ಇದೇ ಜೂನ್ ಅಧಿವೇಶನದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ತುಮಕೂರು ಭಾಗದಲ್ಲಿ ಬೆಳೆಯುತ್ತಿರುವ ರೈತರಿಗೆ ಮಳೆ

ಹಾನಿಯಿಂದ ಪರಿಹಾರ ಕೊಡಬೇಕು ಎಂದು ಪ್ರಸ್ತಾಪ ಮಾಡಿ 10 ತಿಂಗಳಾದರೂ ಒಂದು ರೂಪಾಯಿ ಪರಿಹಾರ ಕೊಟ್ಟಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಒಂದು ಸಭೆ ಮಾಡಿ ಸಮೀಕ್ಷೆ ಮಾಡುವ ಮಟ್ಟಕ್ಕೂ ಹೋಗಲಿಲ್ಲ. ಇದರ ಬಗ್ಗೆ ಶೀಘ್ರವಾಗಿ ಪರಿಹಾರ ಕೊಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಮೂಲಕ ತಂದು ಆಗ್ರಹ ಮಾಡುತ್ತಿದ್ದಾರೆ. ಅವರು ಆತಂಕದಲ್ಲಿದ್ದಾಗ ಪರಿಹಾರ ಕೊಡದೇ ಎಲ್ಲವನ್ನು ಕಳೆದುಕೊಂಡು ಬೀದಿಗೆ ಬಂದಾಗ ಪರಿಹಾರವನ್ನು ಕೊಡುತ್ತಾರೆಯೇ? ಎಲ್ಲಾ ವ್ಯವಸ್ಥೆಗೂ ಒಂದು ಕಾಲಮಿತಿ ಇದ್ದು ರೈತರಿಗೆ ಮಾತ್ರ ಒಂದು ಕಾಲಮಿತಿ ಇಲ್ಲ. ರೈತರ ಗೋಳು ಯಾರು ಕೇಳುತ್ತಾರೆ? ಡಿಸೆಂಬರ್‌ನಲ್ಲಿ ಚರ್ಚೆ ಮಾಡಿ, ಮಾವಿನ ಮರಗಳ ಹಾನಿಯ ಸಮೀಕ್ಷೆ ಮಾಡುವಂತೆ ಕೇಳಿದ್ದರೂ ಸಮೀಕ್ಷೆಗೆ ತಂಡವನ್ನು ಮಾಡಲಿಲ್ಲ. ಇಲ್ಲಿ ವಿಷಯ ಎತ್ತಿ ಚರ್ಚೆ ಮಾಡಿ ಭರವಸೆ ಕೊಡುತ್ತಾರೆ, ಸುಮ್ಮನೆ ಮನೆಗೆ ಹೋಗುತ್ತಾರೆ. ಆದರೆ ರಿಸಲ್ಟ್ ಮಾತ್ರ zero ಆಗಿದೆ. ಸರ್ಕಾರ ಬಂದಾಗ probationary period ಆಗಿದ್ದು, ಇನ್ನೂ ಸಮಯ ಬೇಕು ಎಂದು ಕೇಳುತ್ತಿದ್ದರು. ಇವತ್ತು ಸರ್ಕಾರ ಬಂದು ಎರಡು ವರ್ಷ ಆಗಿದೆ. ಮಾನ್ಯ ಪರಮೇಶ್ವರ್‌ರವರು ಸದನದಲ್ಲಿ ಇದ್ದಾರೆ. ಅವರ ಶಾಸಕಾಂಗ ಪಕ್ಷದಲ್ಲಿ ಏನೇನಾಗುತ್ತದೆ ಎಂದು ಎಲ್ಲವೂ ನಮಗೆ ಗೊತ್ತಾಗುತ್ತದೆ. ಮಂತ್ರಿಗಳ ಕಾರ್ಯವೈಖರಿ ಬಗ್ಗೆ ಚರ್ಚೆಯಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಚಾಟಿ ಬೀಸಿ ಸಮೀಕ್ಷೆ ಮಾಡುವುದಕ್ಕೆ ಹೇಳಲಿ, ರೈತರ ಬವಣೆ ಕೇಳುವುದಕ್ಕೆ ಹೇಳಲಿ. ರೈತರ ಸಂಕಷ್ಟವನ್ನು ಅರಿತು ಪರಿಹಾರ ಕೊಡುವುದಕ್ಕೆ ಹೇಳಬೇಕಲ್ಲವೇ? ನಾವು ಸುಮ್ಮನೆ ಕಂಠ ಶೋಷಣೆಗೋಸ್ಕರ ಪ್ರಶ್ನೆ ಕೇಳಿ, ಪ್ರಶ್ನೆಗೆ ಉತ್ತರವಾಗಿ ಭರವಸೆ ಕೊಡುವುದು, ಮನೆಗೆ ಹೋಗುವುದೇ? ಇದನ್ನು ನಾವು ಕೇಳಬೇಕಾಗುತ್ತದೆ. ಅಲ್ಲಿ ಸಾವಿರಾರು ಕೋಟಿ ನಷ್ಟವಾಗಿರಬೇಕಾದರೆ ಮಂತ್ರಿಗಳು ಕಾಳಜಿ ವಹಿಸಬೇಕಲ್ಲವೇ? ಮಾನ್ಯ ವಿಪಕ್ಷ ನಾಯಕರು ನಾಲ್ಕು ಜನ ಮಂತ್ರಿಗಳು ಕಾಳಜಿ ವಹಿಸಿದ್ದು, ಆ ನಾಲ್ಕು ಜನ ಎಲ್ಲಿದ್ದಾರೆ ಎಂದು ಕೇಳಿದರು. ಅದನ್ನು ಮಾನ್ಯ ಪರಮೇಶ್ವರ್‌ರವರು ಕೇಳಬೇಕು, ನಾವು ಕೇಳುವುದಕ್ಕಾಗುವುದಿಲ್ಲ. ಅವರ ಸರ್ಕಾರ ಜನರಿಗೆ ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದಿದೆ, ಅವರಿಗೆ ಜವಾಬ್ದಾರಿ ಇದೆ. ಒಬ್ಬ ಜಿಲ್ಲಾ ಉಸ್ತುವಾರಿ ಸಚಿವರು ಕೆಡಿಪಿ ಸಭೆ ಮಾಡಬೇಕು, ತಾಲ್ಲೂಕುಗಳಿಗೆ ಹೋಗಿ ರಿವ್ಯೂ ಮಾಡಬೇಕು, ಬರ ಮತ್ತು ಅತಿವೃಷ್ಟಿ ಬಂದಾಗ ಸಮೀಕ್ಷೆ ಮಾಡಬೇಕು. ಅವರು ಹೋಗದಿದ್ದಾಗ ಯಾರ ಮಾತು ಕೇಳುತ್ತಾರೆ? ಅಧಿಕಾರಿಗಳಿಗೆ ಚಾಟಿ ಬೀಸಬೇಕಾದರೆ ಮಂತ್ರಿಗಳು ಸರಿಯಾಗಿ ಇರಬೇಕಲ್ಲವೇ? ಮಾನ್ಯ ಸಭಾನಾಯಕರು ಇದರ ಬಗ್ಗೆ ಸಮಿತಿ ಮಾಡಿ, ಸಭೆ ಮಾಡಿ ಸಮೀಕ್ಷೆ ಮಾಡಿಸುತ್ತೇವೆ ಎಂದು ಉತ್ತರ ಕೊಡುತ್ತಾರೆ. ಆದರೆ ಐದು ತಿಂಗಳಾದರೂ ಸಮೀಕ್ಷೆ ಮಾಡಿಲ್ಲ. ಹೋದ ವರ್ಷ ಶ್ರೀ ಕೃಷ್ಣ ಭೈರೇಗೌಡರು, ತೋಟಗಾರಿಕೆ ಸಚಿವರು ಮತ್ತು ಸಭಾನಾಯಕರು ಸಭೆ ಮಾಡಿ ಅತಿವೃಷ್ಟಿಯಿಂದ ತೊಂದರೆಗೊಳಗಾದ ಆ ಭಾಗದ ಜನರಿಗೆ ಪರಿಹಾರ ಕೊಡಿಸುವ ಬಗ್ಗೆ ಹೇಳಿ ಕೊಟ್ಟಿಲ್ಲ. ಈ ಭತ್ತದ ಬೆಳೆಗಾರರ ಪರಿಸ್ಥಿತಿ ಆ ರೀತಿ

ಆಗುತ್ತದೆಯೇ ಎಂಬ ಆತಂಕ ನನ್ನನ್ನು ಕಾಡುತ್ತಿದೆ. ಬರೀ ಆಶ್ವಾಸನೆಗೋಸ್ಕರ ಸದನ ಏಕೆ ನಡೆಯಬೇಕು? ಮಾನ್ಯ ವೀರಣ್ಣ ಮತ್ತಿಕಟ್ಟಿಯವರು, ರೈತರು ದೇವರಿದ್ದಂತೆ, ಅವರಿಗೆ ಪರಿಹಾರ ಕೊಡುತ್ತೇವೆ ಎಂದು ಹೇಳುತ್ತಾರೆ. ಏನು ಪರಿಹಾರ ಕೊಡುತ್ತಿದ್ದಾರೆ, ಏನು ಮಾಡುತ್ತಿದ್ದಾರೆ? ನಾವು ಸುಮ್ಮನೆ ಒಬ್ಬರ ಮೇಲೊಬ್ಬರು ಕೆಸರು ಎರಚಿಕೊಳ್ಳುತ್ತಿದ್ದೇವೆ. ಮಾನ್ಯ ಉಗ್ರಪ್ಪನವರು ಮಾತನಾಡಬೇಕಾದರೆ ಅದನ್ನು ದಾರಿ ತಪ್ಪಿಸಿ, ನಾವು–ನೀವು ಇಷ್ಟಿಷ್ಟು ಎಂಬ ಮಟ್ಟಿಗೆ ಮಾತನಾಡಿದರು. ನಾವೆಲ್ಲರೂ ರೈತರ ಪರವಾಗಿ ನಿಲ್ಲದಿದ್ದರೆ ರೈತರು ಬೀದಿಗೆ ಬರುತ್ತಾರೆ ಮತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆತ್ಮಹತ್ಯೆ ಮಾಡಿಕೊಂಡ ಮೇಲೆ ಮಾನ್ಯ ಸೋಮಣ್ಣ ಬೇವಿನಮರದರವರು ಹೇಳಿದಂತೆ ಹೂವಿನ ಹಾರ ಹಾಕುವುದೇ? ಈ ಅಧಿವೇಶನ ರೈತರಿಗಾಗಿ ನಡೆಸುವುದಲ್ಲವೇ? ಮಾನ್ಯ ಹಿರಿಯ ಕಂದಾಯ ಸಚಿವರು ಇಲ್ಲಿಯೇ ಇದ್ದಾರೆ. Natural Calamities Relief Fund guidelines ಪ್ರಕಾರ ಕೊಟ್ಟರೆ ಏನೇನೂ ಪ್ರಯೋಜನವಾಗುವುದಿಲ್ಲ. ಅವರಿಗೆ ವಿಶೇಷವಾದ ಪ್ಯಾಕೇಜ್ ಕೊಡಬೇಕಾಗುತ್ತದೆ. ಒಂದು ಎಕರೆ ಭತ್ತ ಅಥವಾ ಮಾವು ಬೆಳೆಯಬೇಕಾದರೆ ಗೊಬ್ಬರ ಎಲ್ಲವೂ ಸೇರಿ ಕನಿಷ್ಟ ಅಸಲು ರೂ. 20 ರಿಂದ 25 ಸಾವಿರ ಖರ್ಚಾಗಿರುತ್ತದೆ. ಇವರು ಒಂದು ಹೆಕ್ಟೇರ್‌ಗೆ ರೂ. 13 ಸಾವಿರ ಎಂದರೆ ರೂ. 4 ಸಾವಿರ ಕೊಟ್ಟಂತೆ ಆಗುತ್ತದೆ. ಅವರು ಬಡ್ಡಿ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸಂಕಷ್ಟಕ್ಕೆ ಈಡಾಗಿರುವ ರೈತರು ಮತ್ತು ಬ್ಯಾಂಕ್‌ನಲ್ಲಿ ಲೋನ್ ಮಾಡಿಕೊಂಡಿರುವವರ ಸಮಗ್ರ ಲೋನ್ ಮನ್ನಾ ಮಾಡಬೇಕು. ಸಮರೋಪಾದಿಯಲ್ಲಿ ಸಮೀಕ್ಷೆ ಮಾಡಿಸಿ, actual loss ಏನಾಗಿದೆ ಅದನ್ನು ಕಟ್ಟಿಕೊಡುವ ನಿಟ್ಟನಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇವೆರಡನ್ನೂ ಮಾಡಲು ಕಾಲಮಿತಿ ನಿಗದಿ ಮಾಡಬೇಕು. ಅದನ್ನು ಬಿಟ್ಟು ಮುಂದಿನ ಬೆಳೆ ಬೆಳೆದ ನಂತರ ಹಣ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಮುಂದಿನ ಬೆಳೆ ಬೆಳೆಯಲು ನೇಗಿಲು ಉಳುವುದಕ್ಕೆ ಅವರ ಹತ್ತಿರ ಕಾಸು ಇರುವುದಿಲ್ಲ. ಏಕೆಂದರೆ ತೆಗೆದುಕೊಂಡಿರುವ ಹಣ ಕೊಡುವುದಕ್ಕೆ ಆಗುವುದಿಲ್ಲ. ಭತ್ತ ನಾಶವಾಗಿದೆ. ಇನ್ಯಾರೂ ಬೇರೆಯವರು ಅವರಿಗೆ ಮರುಪಾವತಿ ಮಾಡಲು ಶಕ್ತಿ ಇಲ್ಲ ಎಂದು ಅವರನ್ನು ನಂಬುವುದಿಲ್ಲ. ತೋಟಗಾರಿಕೆ ಬೆಳೆ ಬೆಳೆಯುವವರಿಗೆ ಅನ್ಯಾಯವಾಗುತ್ತದೆ. ಆ ಭಾಗಗಳಲ್ಲಿ ತೇವಾಂಶ ಕಡಿಮೆಯಾಗಿ 30 ಪರ್ಸೆಂಟ್ ಮರಗಳು ಒಣಗಿ ಹೋಗಿವೆ. ಇದು ಮಾನ್ಯ ಕೃಷ್ಣಭೈರೇಗೌಡರಿಗೆ ಗೊತ್ತಿದೆ. ಅವರ ತೋಟದಲ್ಲಿ ಮರಗಳು ಒಣಗಿ ಹೋಗಿವೆ. ಈ ರಾಜ್ಯದಲ್ಲಿ ಧಾರವಾಡ ಬಿಟ್ಟರೆ ಅತೀ ಹೆಚ್ಚಿನ ಮಾವಿನ ಬೆಳೆಯನ್ನು ನಮ್ಮ ಭಾಗದಲ್ಲಿ ಬೆಳೆಯುತ್ತಾರೆ. ಅಲ್ಲಿ 30 ಪರ್ಸೆಂಟ್ ಮರಗಳು ಒಣಗಿ ಹೋಗಿದ್ದು, ಇನ್ನು ಒಂದು ವರ್ಷಕ್ಕೆ ಎಲ್ಲಾ ಮರಗಳು ಒಣಗಿ ಹೋಗುತ್ತವೆ. ಇಂತಹ ಸಂದರ್ಭದಲ್ಲಿ ಆದಷ್ಟು ಬೇಗ ಪರಿಹಾರವನ್ನು ಕೊಡದೇ, alternative methods or measures suggest ಮಾಡದೇ ಅವರ ನೆರವಿಗೆ ಹೋಗದಿದ್ದರೆ ಅವರು ಎಲ್ಲಿ ಹೋಗಬೇಕು? ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡಬೇಕು.

ಮಾನ್ಯ ಸಭಾಪತಿಯವರು ಇದಕ್ಕೆ ಆದೇಶ ಕೊಡಬೇಕು. ಏಕೆಂದರೆ ಸುಮ್ಮನೆ ಮಾತನಾಡಿದಂತೆ ಆಗಬಾರದು. ನಾನು ಆಗಲೇ ಮಾತನಾಡುವುದು ಬೇಡ ಎಂದುಕೊಂಡೆನು. ಒಂದು ವರ್ಷದ ಹಿಂದೆ ಮಾತನಾಡಿದ್ದಕ್ಕೆ ಪರಿಹಾರವನ್ನು ಕೊಡದಿದ್ದ ಮೇಲೆ ಇವತ್ತು ಮಾತನಾಡಿದ್ದಕ್ಕೆ ಯಾವತ್ತು ಪರಿಹಾರವನ್ನು ಕೊಡುತ್ತಾರೆ? ಅವರ ಕೈಲಿ ಅಧಿಕಾರದ ಚುಕ್ಕಾಣಿ ಇದ್ದು, ಚಾಟಿ ಬೀಸಬೇಕು. ಸಮೀಕ್ಷೆ ಮಾಡಿ ವರದಿ ತರಿಸಿಕೊಂಡು ಅವರ ಕೈಲಿ ಎಷ್ಟಾಗುತ್ತದೋ, ಅಷ್ಟು ಪರಿಹಾರವನ್ನು ಕೊಡಬೇಕು. ಉಳಿದಿರುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆಯಲಿ. ಆ ರೀತಿ ಮಾಡಿದರೆ ಮಾತ್ರ ರೈತರು ನಮ್ಮನ್ನು ನಂಬುತ್ತಾರೆ. ಇಲ್ಲದಿದ್ದರೆ ರೈತರು ಇವರೆಲ್ಲರೂ ಒಂದೇ ಎನ್ನುವ ಮಟ್ಟಕ್ಕೆ ಬರುತ್ತಾರೆ. ರೈತರ ಶಾಪ ತಟ್ಟುತ್ತದೆ. ಸನ್ಮಾನ್ಯ ಸಭಾಪತಿಯವರೇ, ರೈತರ ಶಾಪ ನಮಗೆ ತಗಲುತ್ತದೆ. ಆ ಭಾಗದಲ್ಲಿರುವ ಭತ್ತದ ಬೆಳೆಗಾರರು, ತೋಟಗಾರಿಕಾ ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದಾರೆ. ನಮ್ಮ ಭಾಗದಲ್ಲಿ ಮಾವಿನ ಬೆಳೆಗಾರರು ಮತ್ತು ದ್ರಾಕ್ಷಿ ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದಾರೆ. ಸರ್ಕಾರ ಅವರೆಲ್ಲರ ನೆರವಿಗೆ ಬರಬೇಕಾಗಿದೆ. ಪರಿಹಾರ ನೀಡುವುದಕ್ಕೆ ಇರುವಂತಹ ಮಾರ್ಗಸೂಚಿಯನ್ನು ಬದಲಾವಣೆ ಮಾಡಬೇಕಾಗಿದೆ. ಈ ಸರ್ಕಾರ ಎಲ್ಲರಿಗೂ ಉದಾರವಾಗಿ ಎಲ್ಲ ಭಾಗ್ಯಗಳನ್ನು ಕೊಡುತ್ತಿದೆ. ಅದೇ ರೀತಿಯಲ್ಲಿ ರೈತರಿಗೆ ಬೆಳೆ ನಷ್ಟ ಪರಿಹಾರ ಭಾಗ್ಯವನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರ ಸಮೀಕ್ಷೆಗಳ ಮೂಲಕ ಮಳೆ ಹಾನಿಯಿಂದ ಸುಮಾರು 8 ಜಿಲ್ಲೆಗಳಲ್ಲಿ ಸಾಕಷ್ಟು ಬೆಳೆ ಹಾನಿ, ಪ್ರಾಣ ಹಾನಿ ಮತ್ತು ಮನೆ ಹಾನಿಯಾಗಿದೆ ಎನ್ನುವ ಮಾಹಿತಿಯನ್ನು ಪಡೆದುಕೊಂಡಿದೆ. ಇದರ ಬಗ್ಗೆ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ವರದಿಯಾಗಿದೆ. ಈಗಾಗಲೇ ಮಾತನಾಡಿರುವ ಗೌರವಾನ್ವಿತ ಸದಸ್ಯರು ಇದರ ಬಗ್ಗೆ ಸಾಕಷ್ಟು ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ. ಪ್ರತಿ ವರ್ಷ ಅತಿವೃಷ್ಟಿಯಿಂದ ಮತ್ತು ಆಲಿಕಲ್ಲು ಮಳೆಯಿಂದಾಗಿ ಹಾನಿಗಳಾಗುತ್ತಿವೆ ಮತ್ತು ಅನಾಹುತಗಳಾಗುತ್ತಿವೆ. ಆದರೆ, ಪ್ರತಿ ಬಾರಿಯೂ ಸರ್ಕಾರ ರೈತರಿಗೆ ಪರಿಹಾರ ಕೊಡುವಾಗ ವಿಳಂಬವಾಗುವುದು, ಅತ್ಯಂತ ಕಡಿಮೆ ಪರಿಹಾರವನ್ನು ನೀಡುವುದು ಹಾಗೂ ಸಮೀಕ್ಷೆಯಲ್ಲಿ ದೋಷ ಕಂಡುಬರುವುದು ನಿರಂತರವಾಗಿ ನಡೆಯುತ್ತಿದೆ. ಇದರಿಂದಾಗಿ ನಮ್ಮ ರಾಜ್ಯದ ಯಾವೊಬ್ಬ ರೈತನ ಮುಖದಲ್ಲಿಯೂ ಸಹ ನಗು ಇರುವುದಿಲ್ಲ. ಹಬ್ಬ ಹರಿದಿನಗಳಲ್ಲಿ ಕೂಡ ರೈತನ ಮನೆಯಲ್ಲಿ ಖುಷಿ ಮತ್ತು ಸಂತೋಷವನ್ನು ಕಾಣುವುದಕ್ಕೆ ಸಾಧ್ಯವಾಗಿಲ್ಲ. ಈ ಶಾಸನ ಸಭೆಯಲ್ಲಿರುವ ನೂರಕ್ಕೆ ತೊಂಭತ್ತು ಭಾಗದಷ್ಟು ಸದಸ್ಯರು ಕೃಷಿ ಆಧಾರಿತ ರೈತರ ಮಕ್ಕಳೇ ಆಗಿದ್ದೇವೆ. 'ಭಾರತದ ಬೆನ್ನೆಲುಬು ರೈತ' ಎಂದು ನಾವೆಲ್ಲರೂ ಹೇಳುತ್ತೇವೆ. ಆದರೆ, ಯಾವೊಬ್ಬ ರೈತರ ಮೊಗದಲ್ಲೂ ನಗು ಎನ್ನುವುದನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಆತನ ಮೊಗದಲ್ಲಿ ನಗು ಕಾಣುವ ಕಾರ್ಯಕ್ರಮಗಳನ್ನು

ಯಾವ ಸರ್ಕಾರದವರೂ ಇಲ್ಲಿಯವರೆಗೆ ಜಾರಿಗೆ ತರುವುದಕ್ಕೆ ಸಾಧ್ಯವಾಗಿಲ್ಲ. ಅಕಾಲಿಕ ಮಳೆಯಿಂದಾಗಿ ಬಹಳ ಗಂಭೀರವಾಗಿರುವ ಸಮಸ್ಯೆ ಉಂಟಾಗಿದೆ. ಜನ ಮತ್ತು ಜಾನುವಾರುಗಳ ಪ್ರಾಣ ಹಾನಿಯಾಗಿದೆ. ರೈತರು ಮನೆಗಳನ್ನು ಕಳೆದುಕೊಂಡಿದ್ದಾರೆ. ತೋಟಗಾರಿಕೆ ಬೆಳೆಗಳಾದ, ದ್ರಾಕ್ಷಿ, ಬಾಳೆ, ಮಾವು ಮತ್ತು ಪಪ್ಪಾಯಿ ಬೆಳೆಗಳು ಹಾಳಾಗಿವೆ. ಕೊಪ್ಪಳ, ರಾಯಚೂರು, ವಿಜಯಪುರ, ಬೆಳಗಾವಿ ಮತ್ತು ಬಾಗಲಕೋಟೆ ಈ ಭಾಗಗಳಲ್ಲಿ ಸಾಕಷ್ಟು ಭತ್ತದ ಬೆಳೆ ಹಾನಿಗೊಳಗಾಗಿದೆ. ಇದರಿಂದ ರೈತರು ಬಹಳ ತೊಂದರೆಗೊಳಗಾಗಿದ್ದಾರೆ. ಈಗಾಗಲೇ ಸಮೀಕ್ಷೆ ಮಾಡಿ ಕೆಲವರಿಗೆ ಪರಿಹಾರವನ್ನು ನೀಡಲಾಗಿದೆ ಎನ್ನುವ ಉತ್ತರವನ್ನು ಸರ್ಕಾರ ಕೊಟ್ಟಿದೆ. ಇದರ ಬಗ್ಗೆ ವರದಿ ತರಿಸುವುದಕ್ಕೂ ಸಹ ಸರ್ಕಾರ ಮುಂದಾಗಿದೆ. ಸರ್ಕಾರ ಸಮೀಕ್ಷೆ ಮತ್ತು ವರದಿಯ ಬಗ್ಗೆ ಗಮನಹರಿಸಿರುವುದಕ್ಕೆ ನಾನು ಸಂತೋಷವನ್ನು ವ್ಯಕ್ತಪಡಿಸುತ್ತಿದ್ದೇನೆ. ಅದಕ್ಕಾಗಿ ನಾನು ಕಂದಾಯ ಸಚಿವರು, ಕೃಷಿ ಸಚಿವರು ಮತ್ತು ಈ ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಪ್ರತಿ ಬಾರಿ ಇಂತಹ ಸಂದರ್ಭಗಳು ಬಂದಾಗ ಪರಿಹಾರವನ್ನು ಕೊಡುವಂತಹ ಸಂದರ್ಭದಲ್ಲಿ ಮತ್ತು ಸಮೀಕ್ಷೆ ಮಾಡುವುದರಲ್ಲಿಯೇ ಅನೇಕ ಲೋಪದೋಷಗಳುಂಟಾಗಿವೆ. ಕೃಷಿ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಸಮರ್ಪಕವಾದ ವರದಿಯನ್ನು ಕೊಡುವುದಿಲ್ಲ. ಇದರಿಂದಾಗಿ ಬಹಳಷ್ಟು ಮಂದಿ ರೈತರಿಗೆ ಸೂಕ್ತವಾದ ಪರಿಹಾರ ದೊರೆಯುತ್ತಿಲ್ಲ. ಕೇಂದ್ರ ಸರ್ಕಾರ ಓಬಿರಾಯನ ಕಾಲದಲ್ಲಿ ನಿಗದಿ ಮಾಡಿರುವ ಪರಿಹಾರ ಮೊತ್ತದ ಪ್ರಕಾರ ರೈತರಿಗೆ 1 ರೂಪಾಯಿ 50 ಪೈಸೆಗಳ ಪರಿಹಾರವನ್ನು ನೀಡಲಾಗುತ್ತಿದೆ. ಇಂತಹ ವಿಚಾರದ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಪರಿಹಾರ ಮೊತ್ತವನ್ನು ಪರಿಷ್ಕರಣೆ ಮಾಡುವುದಕ್ಕೆ ಒತ್ತಾಯ ಮಾಡಬೇಕಾಗುತ್ತದೆ ಮತ್ತು ರಾಜ್ಯ ಸರ್ಕಾರವೂ ಸಹ ವಿಶೇಷವಾಗಿ ಇಂತಹ ಸಂದರ್ಭಗಳಲ್ಲಿ ರೈತರಿಗೆ ಹೆಚ್ಚಿನ ಪರಿಹಾರವನ್ನು ಕೊಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುತ್ತಾ, ಯಾವ ರೈತರ ಬೆಳೆ ಹಾನಿಯಾಗಿದೆ ಆ ರೈತರು ಸಹಕಾರಿ ಸಂಘ ಅಥವಾ ಬ್ಯಾಂಕ್‌ಗಳಲ್ಲಿ ತೆಗೆದುಕೊಂಡಿರುವ ಬೆಳೆ ಸಾಲವನ್ನು ಸರ್ಕಾರವೇ ಕಟ್ಟಿಕೊಡುವ ತೀರ್ಮಾನವನ್ನು ಮಾಡಬೇಕು ಮತ್ತು ಸೂಕ್ತವಾದ ಪರಿಹರವನ್ನು ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಇವತ್ತು ಶೌಚಾಲಯ ಕಟ್ಟುವುದಕ್ಕೆ ಸರ್ಕಾರ 15000 ರೂಪಾಯಿಗಳನ್ನು ನೀಡುವುದಾಗಿ ಘೋಷಣೆ ಮಾಡಿದೆ. ಆದರೆ, ಮನೆ ಕಳೆದುಕೊಂಡಿರುವವರಿಗೆ, ಗೋಡೆ ಬಿದ್ದಿರುವುದಕ್ಕೆ, ಸೂರು ಹಾಳಾಗಿದೆ ಎಂದರೆ 5000 ರೂಪಾಯಿಗಳ ಪರಿಹಾರವನ್ನು ನೀಡುವುದು ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಯಾಗಿದೆ. ಒಂದು ಗುಡಿಸಲು ಅಥವಾ ಒಂದು ಶೆಡ್ ಕಟ್ಟಿಕೊಳ್ಳುವುದಕ್ಕೆ 5000 ರೂಪಾಯಿಗಳು ಸಾಕಾಗುವುದಿಲ್ಲ ಇವರು ನೀಡುವ 5000 ರೂಪಾಯಿಗಳಲ್ಲಿ

ಗುಡಿಸಲು ಕಟ್ಟಿಕೊಂಡರೆ, ಮತ್ತೆ ಅದು ಜನರ ಮೇಲೆ ಬಿದ್ದು ಪ್ರಾಣಹಾನಿಯಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಗಮನಹರಿಸಬೇಕಾಗುತ್ತದೆ.

**(ಈ ಸಂದರ್ಭದಲ್ಲಿ ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಶ್ರೀ ಮರಿತಿಬ್ಬೇಗೌಡರ ಮಾತುಗಳನ್ನು ಕೇಳಿ ನಗುತ್ತಿದ್ದರು.)**

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು 5000–10000 ಪರಿಹಾರ ನೀಡುವ ವಿಚಾರಕ್ಕೆ ಯಾಕೆ ನಗುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಎಲ್ಲ ಪಕ್ಷದ ಸರ್ಕಾರಗಳು ಈ ರಾಜ್ಯವನ್ನು ಆಳಿವೆ. ಜೆಡಿ(ಎಸ್) ಮತ್ತು ಬಿ.ಜೆ.ಪಿ. ಪಕ್ಷದ ಸರ್ಕಾರಗಳು ಈ ರಾಜ್ಯವನ್ನು ಆಳ್ವಿಕೆ ಮಾಡಿವೆ. ಅವರುಗಳು ಯಾಕೆ ಈ ರಾಜ್ಯದಲ್ಲಿ ಸುಧಾರಣೆ ತರುವುದಕ್ಕೆ ಸಾಧ್ಯವಾಗಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ರೈತರ ಬಗ್ಗೆ ಅಪಾರವಾದ ಕಾಳಜಿ ಇದೆ ಎಂದು ಹೇಳಿದವರು ಗಂಭೀರವಾಗಿ ಕುಳಿತುಕೊಳ್ಳಬೇಕು.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದ ಸರ್ಕಾರ ಸುಮಾರು 40 ವರ್ಷಗಳ ಕಾಲ ಆಳ್ವಿಕೆ ಮಾಡಿದೆ.

**ಶ್ರೀ ನಾರಾಯಣ ಸಾ. ಬಾಂಡಗೆ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರದಲ್ಲಿ ಮನೆ ಹಾನಿಗೊಳಗಾದರೆ ಒಂದು ಮನೆಗೆ 35,000 ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ. ಫೈಲ್ ತೆಗೆದು ನೋಡಲಿ. ಈಗ ಈ ಸರ್ಕಾರ 5000 ರೂಪಾಯಿಗಳನ್ನು ಭಿಕ್ಷೆಯ ರೂಪದಲ್ಲಿ ನೀಡಬಾರದು.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, 2008–09ನೇ ಸಾಲಿನಲ್ಲಿ ರೈತರು ಸಂಕಟಕ್ಕೆ ಒಳಗಾದಾಗ ಇವರೆಲ್ಲ ಏನು ಮಾಡಿದರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಯಾರ್‍ಯಾರು ಯಾವ ಯಾವ ರೆಸಾರ್ಟ್‌ನಲ್ಲಿ ಹೋಗಿ ಕುಳಿತಿದ್ದರು ಎನ್ನುವುದು ಗೊತ್ತಿದೆ. ಸುಮ್ಮನೆ ಮೊಸಳೆ ಕಣ್ಣೀರು ಹಾಕುವ ಮಾತುಗಳನ್ನು ಆಡುವುದು ಬೇಡ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ಈ ರೀತಿ ಮಾಡುತ್ತಿದೆ ಎಂದು ನಾನು ಹೇಳುತ್ತಿಲ್ಲ. ಎಲ್ಲ ಸರ್ಕಾರಗಳು ರೈತರಿಗೆ ಪರಿಹಾರ ಕೊಡುವಂತಹ ಸಂದರ್ಭದಲ್ಲಿ ಇದೇ ನೀತಿಯನ್ನು ಅನುಸರಿಸಿಕೊಂಡು ಬಂದಿವೆ. ರೈತರ ಸಮಸ್ಯೆಯ ಬಗ್ಗೆ ಈ ಸರ್ಕಾರವಾದರೂ ತನ್ನ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಸರಿಯಾದ ರೀತಿಯಲ್ಲಿ ಸಮೀಕ್ಷೆಯಾಗಬೇಕು, ಸೂಕ್ತವಾದ ಪರಿಹಾರ ಹಾನಿಗೊಳಗಾದ ರೈತರಿಗೆ ಸಿಗಬೇಕು ಮತ್ತು ರೈತರು ಸಹಕಾರ ಸಂಘಗಳಲ್ಲಿ ತೆಗೆದುಕೊಂಡಿರುವ ಸಾಲಗಳನ್ನು ಸರ್ಕಾರವೇ ಕಟ್ಟಿಕೊಡಬೇಕು ಮತ್ತು ನಿರ್ದಿಷ್ಟ

ಕಾಲಾವಧಿಯಲ್ಲಿ ಹಾನಿಗೊಳಗಾಗಿರುವ ರೈತ ಸಮುದಾಯಕ್ಕೆ ಸೂಕ್ತ ಪರಿಹಾರಗಳು ಅವರ ಮನೆ ಬಾಗಿಲಿಗೆ ತಲುಪುವಂತಹ ಕೆಲಸವನ್ನು ಈ ಸರ್ಕಾರ ತಕ್ಷಣವೇ ಮಾಡಬೇಕೆಂದು ನಮ್ಮೆಲ್ಲರ ಒಕ್ಕೊರಲಿನ ಒತ್ತಾಯವಾಗಿದೆ. ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಘನ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಅತ್ಯಂತ ಮಹತ್ವಪೂರ್ಣವಾಗಿರುವ ವಿಚಾರವನ್ನು ವಿರೋಧ ಪಕ್ಷದ ಮತ್ತು ಆಡಳಿತ ಪಕ್ಷದ ಸದಸ್ಯರು ಕೂಲಂಕಷವಾಗಿ ಚರ್ಚೆ ಮಾಡಿದ್ದಾರೆ. ಈ ದೇಶದಲ್ಲಿ ರೈತ ಮಾತ್ರ ಅತ್ಯಂತ ದುರಾದೃಷ್ಟಕರವಾದ ಪರಿಸ್ಥಿತಿಯಲ್ಲಿದ್ದಾನೆ. ಈ ಮಾತನ್ನು ಮಾನ್ಯ ರಾಮಚಂದ್ರಗೌಡರು ಒಪ್ಪುತ್ತಾರೆ. ಪ್ರತಿಯೊಬ್ಬರಿಗೂ ನಿಶ್ಚಿತ ಆದಾಯ ಎನ್ನುವುದು ಇರುತ್ತದೆ. ರೈತನಿಗೆ ಮಾತ್ರ ನಿಶ್ಚಿತ ಆದಾಯ ಎನ್ನುವುದು ಇರುವುದಿಲ್ಲ.

**(6–00 ಗಂಟೆ)**

ರೈತ ಬರಗಾಲ ಬಂದರೂ, ಹೆಚ್ಚು ಮಳೆಯಾದರೂ ಸಹ ಸಂಕಷ್ಟಕ್ಕೀಡಾಗುತ್ತಾನೆ. ತನ್ನ ಇಡೀ ಕುಟುಂಬ ಆ ಭೂಮಿಯಲ್ಲಿ ಕೆಲಸವನ್ನು ಮಾಡಿಕೊಂಡು ಬರತಕ್ಕಂಥ ಉತ್ಪನ್ನದ ಆಸೆಯ ಮೇಲೆ ಬದುಕುತ್ತಿರುತ್ತಾನೆ. ಇವತ್ತು ಹಲವಾರು ಸಲ ಬೇರೆ ಬೇರೆ ಕಾಲದಲ್ಲಿಯೂ ಸಹ ಕರ್ನಾಟಕ ರಾಜ್ಯದಲ್ಲಿ ಮಳೆ, ಅನಿಶ್ಚಿತವಾದಂಥ ಬರಗಾಲ ಹಾಗೂ ಭೀಕರ ಪ್ರವಾಹವಾಗಿರುವುದರಿಂದ ರೈತ ಸಂಕಷ್ಟಕ್ಕೀಡಾಗುತ್ತಾನೆ. ಇಲ್ಲಿ ಎರಡು ವಿಚಾರಗಳನ್ನು ನಾವು ಅತ್ಯಂತ ಸೂಕ್ಷ್ಮವಾಗಿ ಪ್ರತಿಪಾದನೆ ಮಾಡಲೇಬೇಕಾಗುತ್ತದೆ. ಒಂದು ಕೇವಲ ರಾಜ್ಯ ಸರ್ಕಾರ ಅಷ್ಟೇ ಹೊಣೆ ಅಲ್ಲ, ರೈತ ಸಂಕಷ್ಟಕ್ಕೊಳಗಾದಾಗ ಎರಡೂ ಸರ್ಕಾರಗಳು ಸ್ಪಂದಿಸಬೇಕಾಗುತ್ತದೆ. ಆ ವಿಚಾರವನ್ನು ಮಾನ್ಯ ಮರಿತಿಬ್ಬೇಗೌಡರು, ಹಲವು ಜನ ಶಾಸಕರು ಮತ್ತು ನಮ್ಮ ಭಾಗದ ಸದಸ್ಯರು ಸಹ ಹೇಳಿದರು. ಇಲ್ಲಿ ಎರಡೂ ಸರ್ಕಾರಗಳ ಜವಾಬ್ದಾರಿ ಇದೆ. ತಮಗೆಲ್ಲಾ ಗೊತ್ತಿರುವ ಹಾಗೆ 2009ನೇ ಇಸವಿಯಲ್ಲಿ ಭೀಕರವಾದಂಥ ಪ್ರವಾಹ ಬಂದಿತ್ತು. ಸುಮಾರು 13 ಜಿಲ್ಲೆಗಳಲ್ಲಿ ಕನಿಷ್ಠ 11 ಲಕ್ಷಕ್ಕಿಂತಲೂ ಹೆಚ್ಚು ಜನ ತೊಂದರೆಗೊಳಗಾದರು. ಅವರುಗಳು ಮನೆ–ಮಠಗಳನ್ನು ಕಳೆದುಕೊಂಡರು. ಅವರು ಬೆಳೆದಂಥ ಬೆಳೆಯೇ ನಾಶವಾಯಿತು ಮತ್ತು ಭೂಮಿಯೇ ಕೊಚ್ಚಿ ಹೋಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಯಿತು. ಆಗ ತಕ್ಷಣವೇ ಇಲ್ಲಿ ನಮ್ಮ ರಾಜ್ಯದಲ್ಲಿ ಸನ್ಮಾನ್ಯ ಯಡಿಯೂರಪ್ಪನವರ ನಾಯಕತ್ವದ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು ಮತ್ತು ಕೇಂದ್ರದಲ್ಲಿ ಶ್ರೀಮತಿ ಸೋನಿಯಾ ಗಾಂಧೀಯವರ ಮಾರ್ಗದರ್ಶನದ ಶ್ರೀ ಮನಮೋಹನ್ ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಂಥ ಯುಪಿಎ ಸರ್ಕಾರವಿತ್ತು. ಆವತ್ತು ಅಂದಿನ ಪ್ರಧಾನ ಮಂತ್ರಿಗಳು ಹಾಗೂ ಯುಪಿಎ ಛೇರ್ಮನ್‌ರವರು ನೇರವಾಗಿ ಸಂಕಷ್ಟಕ್ಕೊಳಗಾದಂಥ ರೈತರ ಮನೆ ಬಾಗಿಲಿಗೆ ಬಂದರು. ಆ ಕೆಲಸ

ಆಗಬೇಕು. ಅದನ್ನು ತಾವೆಲ್ಲರೂ ಒಪ್ಪುತ್ತೀರಿ ಎಂದು ಭಾವಿಸುತ್ತೇನೆ. ಅದೇ ರೀತಿ ನಮ್ಮ ಸರ್ಕಾರದ ಹಲವರು ಸಚಿವರು ಆ ಭಾಗದ ಸನ್ಮಾನ್ಯ ಕೃಷಿ ಸಚಿವರಾದ ಕೃಷ್ಣ ಭೈರೇಗೌಡರು ಕೊಪ್ಪಳ, ರಾಯಚೂರು ಭಾಗಗಳಿಗೆ ಭೇಟಿ ನೀಡಿದರು. ರಾಯಚೂರು ಜಿಲ್ಲೆಯ ಉಸ್ತುವಾರಿ ಸಚಿವರಾದ ಸನ್ಮಾನ್ಯ ಡಾ|| ಶರಣಪ್ರಕಾಶ್ ಪಾಟೀಲರು ಹಾಗೂ ನಮ್ಮ ಹಿರಿಯ ಸದಸ್ಯರಾದ ಸನ್ಮಾನ್ಯ ಬೋಸರಾಜುರವರು ಹಾಗೂ ಇನ್ನುಳಿದ ಆ ಭಾಗದ ಶಾಸಕರೆಲ್ಲಾ ಜನರ ಸಂಕಷ್ಟಗಳಿಗೆ ತಕ್ಷಣವೇ ಸ್ಪಂದಿಸಿದರು. ಅಲ್ಲಿಯ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಆ ಕೆಲಸವಾಯಿತು. ಇದು ಆಗಬೇಕು. ಯಾವುದೇ ಒಂದು ಸರ್ಕಾರವಿರಲಿ, ಸರ್ಕಾರಿ ಅಧಿಕಾರಿಗಳ ಮೇಲೆ ನಿಯಂತ್ರಣವನ್ನಿಟ್ಟುಕೊಂಡು ತೀವ್ರವಾಗಿ ಸ್ಪಂದಿಸಬೇಕು. ಅವರು ಸಮೀಕ್ಷೆಯ ಬಗ್ಗೆಯೂ ಸಹ ಹೇಳಿದರು. ನಿಶ್ಚಿತವಾದ ಸಮೀಕ್ಷೆಯಾಗಬೇಕು. ಇಲ್ಲಿ ಏನಾಗಿದೆ ಎಂದರೆ ಒಂದು ಭಾವನೆ ಇದೆ. ರೈತರು ಎಂದ ಕೂಡಲೇ ನಿಶ್ಕಾಳಜಿ ಮಾಡತಕ್ಕಂಥಾದ್ದು ಎಲ್ಲಾ ಅಧಿಕಾರಿಗಳ, ಅಧಿಕಾರಿಶಾಹಿಯ ಭಾವನೆ ಇರುತ್ತದೆ. ಅಂತಹ ವಿಚಾರದಲ್ಲಿ ನಾವೇನು ಜನಪ್ರತಿನಿಧಿಗಳಿದ್ದೇವೆ, ನಮ್ಮ ಕರ್ತವ್ಯ ಬಹಳ ಮುಖ್ಯವಾಗುತ್ತದೆ. ಆ ರೀತಿಯಾಗಿ ನಿರ್ಲಕ್ಷಕ್ಕೆ ಒಳಗಾಗದೇ ನಾವು ತೀವ್ರಗತಿಯಿಂದ ನಿಗಾ ಇಟ್ಟು ಆ ಕೆಲಸವನ್ನು ಮಾಡಬೇಕಾಗುತ್ತದೆ. ಹಿಂದೆಯೂ ಸಹ ನಾನು ಹೇಳಿದ್ದೆ. Distress Committee ಗಳು ಜಿಲ್ಲಾ ಮಟ್ಟದಲ್ಲಿ ಕ್ರಿಯಾಶೀಲವಾಗಿ ಕೆಲಸವನ್ನು ಮಾಡಬೇಕು. ಆ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜೊತೆಗೆ ಪ್ರತಿ ಜಿಲ್ಲೆಗೆ ಒಬ್ಬ ಹಿರಿಯ ಐಎಎಸ್ ಅಧಿಕಾರಿಯನ್ನು ನಾವು ಜಿಲ್ಲಾ ಉಸ್ತುವಾರಿ ಸಚಿವರ ಕಾರ್ಯದರ್ಶಿಯನ್ನಾಗಿ ಮಾಡಿರುತ್ತೇವೆ. ಅವರು ಆ ಕೆಲಸವನ್ನು ಮಾಡಬೇಕು. ಈ ದೃಷ್ಟಿಯಲ್ಲಿ ಕೆಲಸವಾಗಬೇಕು. ಇಲ್ಲಿ ಎರಡು ವಿಚಾರಗಳಿವೆ. ರಾಯಚೂರು, ಯಾದಗಿರಿ, ಕೊಪ್ಪಳ, ಬೀದರ್, ಕಲಬುರಗಿ ಹಾಗೂ ಬಳ್ಳಾರಿ ಜಿಲ್ಲೆಯ ಜನರು ತೀವ್ರತರವಾದ ಹಾನಿಗೆ ಒಳಗಾಗಿದ್ದಾರೆ. ಅಲ್ಲಿ ಒಂದು ಎಕರೆ ಭತ್ತವನ್ನು ಬೆಳೆಯಬೇಕಾದರೆ ಕನಿಷ್ಟ 25,000 ರೂಪಾಯಿ ಕೃಷಿ ವೆಚ್ಚ ಬರುತ್ತದೆ. ಆ ದೃಷ್ಟಿಯಿಂದ ಈಗ ಒಂದು ಹೆಕ್ಟೇರ್‌ಗೆ 13,500 ರೂಪಾಯಿ ಪರಿಹಾರ ಕೇಂದ್ರ ಸರ್ಕಾರದ ನಿರ್ದೇಶನದ ಪ್ರಕಾರ ಇದೆ. ಅದನ್ನು ನಾವು ಹೆಚ್ಚು ಮಾಡಬೇಕು. ಇಂತಹದ್ದರಲ್ಲಿ ಹೆಚ್ಚಿನ ಕೆಲಸವಾಗುವುದರ ಜೊತೆಗೆ ನಾನು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಏನು ಆ ಭಾಗದ ರೈತರು ಸಾಲವನ್ನು ಮಾಡಿದ್ದಾರೆ, ಅದನ್ನು ತೀವ್ರಗತಿಯಿಂದ ಸರ್ಕಾರವೇ ಮಾಫ್ ಮಾಡತಕ್ಕಂಥ ಕೆಲಸ ಆಗಬೇಕು ಮತ್ತು ಮುಂದಿನ ವರ್ಷದಲ್ಲಿ ಪುನಃ ವ್ಯವಸಾಯವನ್ನು ಮಾಡುವುದಕ್ಕೆ ಅವರಿಗೆ ಬಡ್ಡಿ ಇಲ್ಲದೇ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆ ಆಗಬೇಕೆಂಬ ಮಾತನ್ನು ಹೇಳಿ, ವೇಳೆ ಬಹಳ ಆಗಿರುವುದರಿಂದ ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ. ರೈತರ ವಿಚಾರ ಬಂದಾಗ ಈ ಸದನದ ಎಲ್ಲಾ ಸದಸ್ಯರು ಅಷ್ಟೇ ಅಲ್ಲ, ಎಲ್ಲಾ ಪ್ರಜಾ ಪ್ರತಿನಿಧಿಗಳು, ಎಲ್ಲಾ ಜನ

ಪ್ರತಿನಿಧಿಗಳು ಕ್ರಿಯಾಶೀಲರಾಗಿ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

5. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 20–04–2015ರಂದು 2015ನೇ ಸಾಲಿನ ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ."

6. ನಿಯಮ 68 ರಡಿಯಲ್ಲಿ ಮುಂದುವರೆದ ಚರ್ಚೆ

**ವಿಷಯ:– ಅಕಾಲಿಕ ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರ ಬಗ್ಗೆ.**

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ರೈತರ ಸಮಸ್ಯೆಯನ್ನು ಅಷ್ಟು ಸುಲಭವಾಗಿ ಅರ್ಥ ಮಾಡಿಕೊಳ್ಳುವುದು ಕಷ್ಟ. ಒಂದು ಉದಾಹರಣೆಯನ್ನು ಕೊಡುತ್ತೇನೆ. ರೈತ ಒಂದು ಲಕ್ಷ ರೂಪಾಯಿಯ ಸಾಲವನ್ನು ಮಾಡಿದರೆ ಎತ್ತು, ಹಗ್ಗ ಎಲ್ಲವನ್ನು ಕೊಂಡುಕೊಂಡು ಬರುತ್ತಾನೆ. ಕೊಂಡುಕೊಂಡು ಬಂದು ಹೊಲ ಉಳುವುದಕ್ಕೆ ಹೋಗುತ್ತಾನೆ. ಆತ ಹೊಲವನ್ನು ಉಳಬೇಕೆಂದರೆ ಮಳೆಯೇ ಬರುವುದಿಲ್ಲ. ಮಳೆ ಬಂದರೆ ವಿಪರೀತವಾಗಿ ಮಳೆ ಬರುತ್ತದೆ. ಬೆಳೆಯಾದರೆ ಹುಳ ಬಿದ್ದು ಹೋಗುತ್ತದೆ. ಹುಳ ಬಿದ್ದು ಹೋದರೆ ಬೆಳೆಗೆ ಔಷಧಿಯನ್ನು ಹೊಡೆಯುತ್ತಾನೆ, ಔಷಧಿ ಹೊಡೆದರೆ ಬೆಳೆ ವಿಪರೀತವಾಗಿ ಬಂದುಬಿಡುತ್ತದೆ. ಮಾರುಕಟ್ಟೆಗೆ ಹೋದರೆ ರೈತ ಬೆಳೆದ ಬೆಳೆಗೆ ಬೆಲೆ ಸಿಗುವುದಿಲ್ಲ. ರೈತ ಒಂದು ಲಕ್ಷ ರೂಪಾಯಿಯ ಸಾಲವನ್ನು ಮಾಡಿದರೆ ಅವನಿಗೆ ದುಡ್ಡು ಬರುವುದಿಲ್ಲ. ಆಕಸ್ಮಾತ್ ಬಂದರೆ ಒಂದು ವರ್ಷ ಕಳೆದ ನಂತರ ಹಣ ಬರುತ್ತದೆ. My point is, the frequency of utility of money of the farmer is only once in a year. ರೈತ ಸಾಲ ಮಾಡಿದಂತಹ ಹಣ ಒಂದು ವರ್ಷದಲ್ಲಿ ಒಂದೇ ಸಲ ಉಪಯೋಗಿಸುವುದಕ್ಕಾಗುತ್ತದೆ. ಬೀಡಿ ವ್ಯಾಪಾರವನ್ನು ಮಾಡುವವರು ಇವತ್ತು ಬೀಡಿಯನ್ನು ವ್ಯಾಪಾರ ಮಾಡಿದರೆ ಸಾಯಂಕಾಲ ದುಡ್ಡು ಬರುತ್ತದೆ. ಬೆಳಿಗ್ಗೆ ಪುನಃ ಬೀಡಿಯನ್ನು ತೆಗೆದುಕೊಂಡು ಬಂದು ವ್ಯಾಪಾರ ಮಾಡುತ್ತಾನೆ. ಹೋಟೆಲ್ ವ್ಯಾಪಾರವನ್ನು ಮಾಡುವವರು ಇವತ್ತು ಹೋಟೆಲ್‌ನಲ್ಲಿ ವ್ಯಾಪಾರವನ್ನು ಮಾಡಿದರೆ ಅವನಿಗೆ ಇವತ್ತು ಅಥವಾ ನಾಳೆ ಹಣ ಬರುತ್ತದೆ. The frequency of utility of money for a hotelier is minimum of

fifty times in a year. ಬೀಡಿಯನ್ನು ಮಾರುವವನಿಗೆ it becomes three hundred and sixty times in a year. ಕಾರ್ಖಾನೆಯನ್ನು ನಡೆಸುವ ಉತ್ಪಾದಕರಿಗೆ 2–3 ತಿಂಗಳುಗಳಲ್ಲಿ ಹಣ ಬಂದುಬಿಡುತ್ತದೆ. ಆದರೆ ರೈತನಿಗೆ ಆತ ಹಾಕಿದಂಥ ಹಣ ಅವನಿಗೆ ವಾಪಸ್ ಬರಬೇಕಾದರೆ ಒಂದು ವರ್ಷ ಆದರೂ ಸಹ ಬರುವುದಿಲ್ಲ. ಅದಕ್ಕಾಗಿಯೇ ಸನ್ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ರೈತರಿಗೆ ಏಕೆ ಬಡ್ಡಿ ರಹಿತ ಸಾಲವನ್ನು ಕೊಡಬೇಕು, ಏಕೆ ಆತನ ಸಾಲವನ್ನು ಮನ್ನಾ ಮಾಡಬೇಕು ಎನ್ನುವಂಥ ವಿಚಾರವನ್ನು ತಂದರು. ಅದನ್ನು ನೋಡಿ ಇವತ್ತಿನ ದಿವಸ ಕೇಂದ್ರ ಸರ್ಕಾರದವರು ಸಹ ಅನುಸರಿಸಿದರು. ಇವತ್ತು ರೈತ ಇಷ್ಟು ಕಂಗಾಲಾಗಿದ್ದಾನೆ. ವ್ಯವಸಾಯ ಮಾಡುವುದಕ್ಕೆ ಕೂಲಿ ಆಳುಗಳು ಸಿಗುವುದಿಲ್ಲ, ಬೆಳೆದ ಬೆಳೆಗೆ ಬೆಲೆ ಸಿಗುವುದಿಲ್ಲ. ಬೆಲೆ ಸಿಕ್ಕಿದರೂ ಅವನ ಕೈಗೆ ದಕ್ಕುವುದಿಲ್ಲ. ಮಧ್ಯವರ್ತಿಗಳು ಹೆಚ್ಚಾಗಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ರೈತ ದೇಶದಲ್ಲಿ ಎಲ್ಲಿಯೇ ಆಗಲಿ ಬದುಕಬೇಕಾದರೆ ಬಹಳ ಕಷ್ಟವಾಗುತ್ತದೆ. ರೈತ ತನ್ನ ಕಸುಬನ್ನು ಮುಂದುವರೆಸಬೇಕೆಂದು ಬಹಳಷ್ಟು ಜನರಿಗೆ ಆಸೆ. ಅವನು ಬಡವ, ಅವನು ಬೆಳೆಯದೇ ಹೋದರೆ ನಾವು ಬದುಕುವ ಹಾಗೆಯೇ ಇಲ್ಲ. ಈಗ ರೈತನು ಸಹ ತನ್ನ ಕಸುಬನ್ನು ಬಿಡಬೇಕೆಂದು ಯೋಚನೆ ಮಾಡುತ್ತಿದ್ದಾನೆ. ಬಹಳಷ್ಟು ಜನರು ತಮ್ಮ ಕಸುಬನ್ನು ಬಿಟ್ಟು ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಮಾಡಿದರು, ರಾಜಕಾರಣಿಗಳಾದರು, ದೊಡ್ಡ ಮಾಲೀಕರಾದರು, ಉದ್ದಿಮೆದಾರರಾದರು. ಆದರೆ ವ್ಯವಸಾಯವನ್ನು ಮಾಡುತ್ತಿರುವ ರೈತ ರೈತನಾಗಿಯೇ ಉಳಿದಿದ್ದಾನೆ. ಆತ ಹಾಗೆಯೇ ವ್ಯವಸಾಯವನ್ನು ಮಾಡಬೇಕೆಂದರೆ, ಅವನನ್ನು ಬದುಕಿಸಬೇಕಾದುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಾವು ರೈತನಿಗೆ ಬಡ್ಡಿ ರಹಿತ ಸಾಲವನ್ನು ಕೊಡಬೇಕು, ಒಳ್ಳೆಯ ಬೀಜ ಮತ್ತು ಗೊಬ್ಬರವನ್ನು ಕೊಡಬೇಕು. ಇವತ್ತು ಒಂದು ಲಾರಿ ಲೋಡ್ ಸಗಣಿ ಗೊಬ್ಬರಕ್ಕೆ ಸುಮಾರು 25,000 ರೂಪಾಯಿಯಾಗುತ್ತದೆ. ಸಗಣಿ ಗೊಬ್ಬರವನ್ನು ಹಾಕಿದರೆ ಬೆಳೆ ಬರುತ್ತದೆಂದು ಹೇಳುತ್ತಾರೆ ಎಂಬುದು ನಿಜವಾದ ಸಂಗತಿಯಾಗಿದೆ. ಆದರೆ ಮಳೆ ಬಂದುಬಿಟ್ಟರೆ ಆ ಗೊಬ್ಬರವು ಸಹ ಕೊಚ್ಚಿಕೊಂಡು ಹೋಗಿಬಿಡುತ್ತದೆ. ಅಂತಹ ಒಂದು ಮಳೆ ಬರುತ್ತದೆ. ಉತ್ತರ ಕರ್ನಾಟಕದ ರಾಯಚೂರನ್ನು ಭತ್ತದ ಕಣಜ ಎಂದು ಹೇಳುತ್ತಾರೆ. ನಾನು ಟಿವಿಯಲ್ಲಿ ನೋಡಿದೆ. ಅಂತಹ ಭತ್ತದ ಗದ್ದೆಗಳೆಲ್ಲಾ ಮುದುರಿಕೊಂಡು ನೀರಿನಲ್ಲಿ ಮುಳುಗಿ ಹೋಗಿದೆ. ಹೀಗಾದರೆ ಬೆಳೆ ಬರುವುದಿಲ್ಲ. ಸರ್ಕಾರಕ್ಕೆ ನನ್ನ ಒಂದು ಸಲಹೆ ಏನೆಂದರೆ, ಆದಷ್ಟು ಬೇಗ ರಾಜ್ಯ ಸರ್ಕಾರ ಎಷ್ಟು ನಷ್ಟವಾಗಿದೆ ಎಂಬುದನ್ನು ತಿಳಿದುಕೊಂಡು ನಮಗೆ ಇಷ್ಟು ಹಣ ಬೇಕೆಂದು ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಬೇಕು. ಕೇಂದ್ರ ಸರ್ಕಾರಕ್ಕೆ ನಾವು ಎಷ್ಟು ಬೇಗ ಪ್ರಸ್ತಾವನೆಯನ್ನು ಕಳುಹಿಸುತ್ತೇವೆಯೋ ಅಷ್ಟು ಉಪಯೋಗವಾಗುತ್ತದೆ. ಅವರು ಕೊಡುವುದು ಅಥವಾ ಬಿಡುವುದರ ಬಗ್ಗೆ ಯೋಚಿಸುವುದು ಬೇಡ. ನಾವು ಸಹ ಕೇಂದ್ರ ಸರ್ಕಾರಕ್ಕೆ ಹೇಳಲು ಪ್ರಯತ್ನ ಮಾಡುತ್ತೇವೆ, ನಾವೇನು

ಸುಮ್ಮನೆ ಇರುವುದಿಲ್ಲ. ನಾವೂ ಸಹ ರೈತರ ಪರವಾಗಿಯೇ ಇದ್ದೇವೆ ಮತ್ತು ಸರ್ಕಾರವು ಸಹ ರೈತರ ಪರವಾಗಿಯೇ ಇದೆ. ಸರ್ಕಾರ ರೈತರ ಪರವಾಗಿಲ್ಲವೆಂದು ಯಾರೂ ಸಹ ಹೇಳುವುದಿಲ್ಲ. ಆದರೆ ಯಾರ ಕೈಯಲ್ಲಿಯೂ ಕೆಲಸ ಮಾಡುವುದಕ್ಕಾಗುತ್ತಿಲ್ಲ, ಆ ರೀತಿಯ ಒಂದು ಪರಿಸ್ಥಿತಿ ಬಂದುಬಿಟ್ಟಿದೆ. 'People are kind, in kind but not in cash' ಎಂದು ಹೇಳುವ ಹಾಗೆ, ಮಾತುಗಳಲ್ಲೇ ಮುತ್ತು ಉದುರಿಸಿಬಿಡುತ್ತೇವೆ, ಆದರೆ ಅವರ ಕೈಗೆ ಏನು ತಲುಪಬೇಕೋ ಅದನ್ನು ತಲುಪಿಸುವ ಕೆಲಸ ಮಾಡುವುದಿಲ್ಲ. ಈ ನಿಟ್ಟಿನಲ್ಲಿ ಅಧಿಕಾರಿಗಳೂ ಕೂಡ ಸಹಕರಿಸಬೇಕಾಗುತ್ತದೆ. ರೈತರು ಎಂದರೆ ಅಸಡ್ಡೆ ಮಾಡಬಾರದು. ರಾಜ್ಯ ಸರ್ಕಾರ ಆದಷ್ಟು ಬೇಗ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಕೇಂದ್ರ ಸರ್ಕಾರದ ಅನುದಾನವನ್ನು ತಾವು ಅಪೇಕ್ಷಿಪಟ್ಟರೆ ಬಹಳ ಒಳ್ಳೆಯದಾಗುತ್ತದೆ. ನಷ್ಟ ಅನುಭವಿಸಿರುವವರಿಗೆ ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಒಂದಿಷ್ಟು ಹಣ ಬಿಡುಗಡೆ ಮಾಡಬೇಕು. ಹಣ ಬಿಡುಗಡೆ ಮಾಡುವುದಷ್ಟೇ ಅಲ್ಲ, ಮಾನ್ಯ ಮತ್ತಿಕಟ್ಟಿಯವರು ಹೇಳಿದ ಹಾಗೆ ಸಾಲ ಮನ್ನಾ ಮಾಡಬೇಕು. ಸಾಲ ಮನ್ನಾ ಮಾಡಿ, ಪುನಃ ಕೃಷಿ ಕೆಲಸದಲ್ಲಿ ನಿರತರಾಗುವುದಕ್ಕೆ ಸ್ವಲ್ಪ ದುಡ್ಡು ಕೊಡಬೇಕು. ಇಷ್ಟು ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

## 7. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:–** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

**ಸಭಾಪತಿಗಳು:–** ಮಾನ್ಯ ವಿರೋಧ ಪಕ್ಷದ ನಾಯಕರೆ ನಿಯಮ 68ರ ಅಡಿ ಮಾತನಾಡುತ್ತೀರಾ? ಮಾನ್ಯ ಸಚಿವರು ಅದಕ್ಕೆ ರಿಪ್ಲೈ ಕೊಡುವುದಕ್ಕೆ ತಯಾರಿದ್ದಾರೆ. ರಿಪ್ಲೈ ಕೊಡಿಸಿಬಿಡುತ್ತೇನೆ, ಆಮೇಲೆ ಮಾತನಾಡುತ್ತೀರಾ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಈಗಲೇ ಮಾತನಾಡುತ್ತೇನೆ. ಮುಖ್ಯಮಂತ್ರಿಗಳು ಬರುತ್ತಾರೆಯೇ?

**ಸಭಾಪತಿಗಳು:–** ಕಂದಾಯ ಸಚಿವರು ಉತ್ತರ ಕೊಡುತ್ತಾರೆ . . .

**ಶ್ರೀ ಕೆ.ಎಸ್. ಈಶ್ವರಪ್ಪ:–** ಮೊದಲು ಮಾನ್ಯ ವಿಜಯಶಂಕರ್‌ರವರು ಮಾತನಾಡುತ್ತಾರೆ. . .

**ಸಭಾಪತಿಗಳು:–** ಮಾನ್ಯ ವಿಜಯಶಂಕರ್‌ರವರ ಹೆಸರು ಪಟ್ಟಿಯಲ್ಲಿ ಬಂದಿಲ್ಲದ ಕಾರಣ ನಾನು ಸಮಯವನ್ನು ಅಡ್ಜೆಸ್ಟ್ ಮಾಡಿಲ್ಲ. ಹಾಗಾಗಿ ಮಂತ್ರಿಗಳು ಮಾತನಾಡಿದ ಮೇಲೆ ಅವರಿಗೆ ಅವಕಾಶ ಕೊಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೆ, ತಾವು ಇರಲಿಲ್ಲ. ರಿಕ್ವೆಸ್ಟ್ ಮಾಡಿಕೊಂಡು ಅವರ ಹೆಸರನ್ನೂ ಕಳುಹಿಸಿಕೊಟ್ಟಿದ್ದೇನೆ. ಅವರು ಐದು ನಿಮಿಷ ಮಾತನಾಡುತ್ತಾರೆ. ದಯವಿಟ್ಟು ಅವರಿಗೆ ಅವಕಾಶ ಕೊಡಿ.

**ಸಭಾಪತಿಗಳು:–** ಐದು ನಿಮಿಷ ಮಾತನಾಡುವುದಾದರೆ ಅವಕಾಶ ಕೊಡುತ್ತೇನೆ.

## 8. ನಿಯಮ 68ರಡಿಯಲ್ಲಿ ಮುಂದುವರೆದ ಚರ್ಚೆ

**ವಿಷಯ:– ಅಕಾಲಿಕ ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರ ಬಗ್ಗೆ.**

**ಶ್ರೀ ಸಿ.ಹೆಚ್. ವಿಜಯಶಂಕರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಅಕಾಲಿಕ ಮಳೆ ಬಿದ್ದ ಕಾರಣ ರೈತನ ಬದುಕಿನಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಮಹತ್ತರವಾದ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಹಿಂದಿನ ಪ್ರಧಾನಿಗಳಾದ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಭಾವಚಿತ್ರವನ್ನು ಸದನದಲ್ಲಿ ಹಾಕಿದ್ದೇವೆ. ಅವರು ಪ್ರಧಾನಿಗಳಾದಾಗ 2 ವಿಷಯಗಳಿಗೆ ಮಹತ್ವ ಕೊಟ್ಟರು. ಒಂದು, ಜೈಜವಾನ್, ಇನ್ನೊಂದು ಜೈ ಕಿಸಾನ್. ಅನ್ನ ಬೆಳೆಯುವ ರೈತ, ಗಡಿ ಕಾಯುವಂತಹ ಸೈನಿಕ ಯಾರಿರುತ್ತಾರೋ ಇವರ ಜೀವನಕ್ಕೋಸ್ಕರ ಏನು ಮಾಡಿದರೂ ಕಡಿಮೆ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಯಾರ ಋಣವನ್ನು ಬೇಕಾದರೂ ನಾವು ತೀರಿಸಬಹುದು ಆದರೆ, ಅನ್ನ ಹಾಕಿದ ರೈತನ ಋಣ ತೀರಿಸುವುದಕ್ಕಾಗುವುದಿಲ್ಲ, ಗಡಿಯಲ್ಲಿ ಹಗಲಿರುಳು ನಿಂತು ನಮ್ಮನ್ನು ಕಾಯುತ್ತಿರುವ ಸೈನಿಕನ ಋಣ ತೀರಿಸುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಅವರು ಹೇಳಿದ್ದರು. ಈ ವಿಷಯಗಳಿಗೆ ಸಮಾಜ ಮತ್ತು ಸರ್ಕಾರ ಎಷ್ಟೇ ಮಹತ್ವ ಕೊಟ್ಟರೂ ಸಾಲುವುದಿಲ್ಲ ಎಂದು ಅವರು ಹೇಳಿದ ಮಾತನ್ನು ನಾವು ಇವತ್ತು ನೆನಪಿಸಿಕೊಳ್ಳಬೇಕಿದೆ. ಇವತ್ತು ರೈತನ ಪರಿಸ್ಥಿತಿ ಬಗ್ಗೆ ನಾವು ಇಲ್ಲಿ ಮಾತನಾಡುತ್ತಿದ್ದೇವೆ. ಇಲ್ಲಿ 3 ವಿಚಾರಗಳಿವೆ. ಒಂದು, ಬೆಳೆ ಹಾನಿ. ಇನ್ನೊಂದು, ಜೀವಹಾನಿ. ಇನ್ನೊಂದು, ವಾಸ ಮಾಡುತ್ತಿರುವ ಮನೆಗಳ ಹಾನಿ. ಈ ಮೂರು ವಿಷಯಗಳ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದೆ. ಬೀದಿಯಲ್ಲಿ, ಮಾಳದಲ್ಲಿ ಶೆಡ್ ಹಾಕಿಕೊಂಡು ವಾಸ ಮಾಡುತ್ತಿರುವ ಕುಟುಂಬಕ್ಕೆ ಮೇಲ್ಛಾವಣಿ ಪ್ಲಾಸ್ಟಿಕ್ ಆಗಿರುವುದನ್ನು ನಾವು ಕಂಡಿದ್ದೇವೆ. ರಾತ್ರಿ ಹೊತ್ತು ಆಲಿಕಲ್ಲು ಮಳೆ ಪ್ರಾರಂಭವಾಗುತ್ತದೆ, ಆಲಿಕಲ್ಲು ಮಳೆ ಪ್ರಾರಂಭವಾದ ನಂತರ ಶೆಡ್ ಬಿದ್ದು ಹೋಗುತ್ತದೆ. ಬಿದ್ದು ಹೋಗಿರುವ ಶೆಡ್ಡನ್ನು ಎತ್ತಿ ಕಟ್ಟಬೇಕೆಂದು ಗಂಡ–ಹೆಂಡತಿ ಇಬ್ಬರೂ ರಾತ್ರಿ ಪ್ರಯತ್ನಪಡುತ್ತಾರೆ. ವಿಪರೀತ ಮಳೆ, ಸುಮಾರು 2 ಕೆ.ಜಿ. ಗಾತ್ರದ ಆಲಿಕಲ್ಲು ಮನೆ ಮೇಲೆ ಬೀಳುತ್ತವೆ. ಆ ಸಮಯದಲ್ಲಿ

ವಾಸವಾಗಿದ್ದಂತಹ ಮನೆ ಬಿದ್ದು ಹೋಗುತ್ತದೆ. ಅದನ್ನು ಸರಿ ಮಾಡಬೇಕೆಂದು ಗಂಡ–ಹೆಂಡತಿ ಇಬ್ಬರು ಆಚೆ ಬರುತ್ತಾರೆ. ಬಿದ್ದು ಹೋಗಿರುವುದನ್ನು ಕಟ್ಟುವಂತಹ ಪ್ರಯತ್ನ ಮಾಡುತ್ತಾರೆ. ಒಳಗಡೆ ಒಂದು ಹಸುಗೂಸು ಇರುತ್ತದೆ. ಆ ಹಸುಗೂಸಿನ ಮೇಲೆ ಆಲಿಕಲ್ಲು ಬಿದ್ದು ಹೋಗುತ್ತದೆ. ಶೆಡ್ಡನ್ನು ಸರಿ ಮಾಡುವುದರಲ್ಲಿ ಆ ಮಗು ಸತ್ತು ಹೋಗುತ್ತದೆ. ಎಂತಹ ಕರುಣಾ ಜನಕ ಸ್ಥಿತಿ. ಕತ್ತಲೆಯ ರಾತ್ರಿ, ಮಳೆಯ ಸಮಯ. ಆ ಮಳೆಯನ್ನು ಲೆಕ್ಕಿಸದೇ ಶೆಡ್ಡನ್ನು ಸರಿ ಮಾಡುವ ಪ್ರಯತ್ನ ಮಾಡುತ್ತಿದ್ದಾಗ, ಮನೆಯಲ್ಲಿರುವ ಮಗುವನ್ನು ಕಳೆದುಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗುವಂಥದ್ದು ಆತಂಕಕಾರಿ ಸನ್ನಿವೇಶವಾಗಿದೆ. ಆ ಕುಟುಂಬಕ್ಕೆ ಆ ಘಳಿಗೆಯಲ್ಲಿ ಸ್ಪಂದನೆ ಮಾಡಬೇಕಲ್ಲವೇ? ವಸತಿ ಯೋಜನೆ ಅಡಿ ತಕ್ಷಣ ಮನೆ ಕೊಡಬೇಕಲ್ಲವೇ? ಒಂದು ನಿವೇಶನ ಗುರುತಿಸಬೇಕಲ್ಲವೇ? ಉಸ್ತುವಾರಿ ಸಚಿವರು ಹೋಗಿ ಆ ಕುಟುಂಬವನ್ನು ಕರೆಸಿ ಮಾತನಾಡಬೇಕಲ್ಲವೇ? ಅಲೆಮಾರಿಗಳ ಬದುಕಿಗೆಂದು ನಮ್ಮಲ್ಲಿ ವಿಶೇಷ ಕಾರ್ಯಕ್ರಮ ಇದೆ. ಅಲೆಮಾರಿಗಳ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ವಿಶೇಷ ಯೋಜನೆಗಳಿವೆ. ಸಂಬಂಧಪಟ್ಟ ಅಧಿಕಾರಿಯನ್ನು ಕರೆಸಿ, ಈ ಅಲೆಮಾರಿಗಳನ್ನು ಏಕೆ ಬೀದಿಯಲ್ಲಿ ಬಿಟ್ಟಿದ್ದೀರಿ ಎಂದು ಕೇಳಿ, ಇಂತಹ ಕುಟುಂಬಗಳಿಗೆ 24 ಗಂಟೆಯಲ್ಲಿ ಸ್ಪಂದನೆ ಮಾಡಬೇಕು. ಆ ಮಗು ಮಾತ್ರವಲ್ಲ ಇನ್ನೂ 14 ಜೀವಗಳಿಗೆ ಹಾನಿಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ತಂದ ವಿಷಯದ ಬಗ್ಗೆ ಪ್ರಸ್ತಾಪ ಮಾಡುವ ಸಮಯದಲ್ಲಿ ನನಗೆ, ಇವತ್ತು ಸದನವನ್ನು ಕರೆದಿರುವುದು ಭಗವಂತನ ಇಚ್ಛೆಯಾಗಿದೆ ಎಂದೆನಿಸುತ್ತಿದೆ. ರಾಜ್ಯದ ರೈತನ ಕಷ್ಟಕ್ಕೆ, ಕಣ್ಣೀರಿಗೆ ಸರ್ಕಾರ ಸ್ಪಂದಿಸಬೇಕು ಎನ್ನುವುದು ಭಗವಂತನ ಇಚ್ಛೆಯಾಗಿರುವುದರಿಂದ ಸರ್ಕಾರ ಇವತ್ತು ಸದನ ಕರೆದಿದೆ. ಈ ರೀತಿ ಸನ್ನಿವೇಶ ಸೃಷ್ಟಿಯಾಗಿರುವಂತಹ ಸಮಯದಲ್ಲಿ ಪರಿಹಾರ ಕೊಡಬೇಕೆಂದು ಚರ್ಚೆ ಮಾಡುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಒಂದು ಕಡೆ ತಾತ್ಕಾಲಿಕವಾದ ಪರಿಹಾರ ಕೊಡಿ. ಅಲ್ಲದೇ ದೀರ್ಘಾವಧಿ ಪರಿಹಾರಕ್ಕೂ ಏನಾದರೂ ಕ್ರಮ ಕೈಗೊಳ್ಳಬೇಕು ಅಲ್ಲವೇ? ಬೆಳೆ ವಿಮೆ ಜಾರಿ ಮಾಡಬೇಕೇ ಅಥವಾ ಇಂತಹ ಸನ್ನಿವೇಶ ಸೃಷ್ಟಿಯಾಗುವಂತಹ ಸಮಯದಲ್ಲಿ ಸಮಾಧಾನಕರವಾದ ಪರಿಹಾರ ಕೊಡುವುದಕ್ಕೆ ಸರ್ಕಾರದಲ್ಲಿ ಶಾಶ್ವತವಾದ ಯೋಜನೆ ತಯಾರಾಗಬೇಕು. ಆ ಹಿನ್ನೆಲೆಯಲ್ಲಿ ನಿಯಮಗಳನ್ನು ಅಳವಡಿಸಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಬೇಕು. ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೊಡುವ ಕೆಲಸ ಆಗಬಾರದು. ರೈತನಿಗೆ ಈ ರೀತಿ ಕಷ್ಟ ಬಂದಾಗ ರೈತರ ಪರವಾಗಿ ಮಾತನಾಡುವಂಥದ್ದು ಅಥವಾ ಸರ್ಕಾರ ತನಗೆ ಸಾಧ್ಯವಾದಷ್ಟು ಪರಿಹಾರ ಕೊಡುವಂಥದ್ದು ಯಾವುದೇ ಕಾರಣಕ್ಕೂ ಶೋಭೆಯನ್ನು ತರುವುದಿಲ್ಲ. ಸಕಾಲದಲ್ಲಿ ಪರಿಹಾರ ಸಿಗಬೇಕಾದುದನ್ನು ಕೊಡಿ. ಆದರೆ ಸಮಾಧಾನಕರ ಪರಿಹಾರ ಕೊಡುವುದಕ್ಕೆ ನಿಮ್ಮ ಅವಧಿಯಲ್ಲಿ, ನಿಮ್ಮ ಅನುಭವಕ್ಕೆ ತಕ್ಕಂತೆ ಒಂದು ವ್ಯವಸ್ಥಿತವಾದ ಯೋಜನೆಯನ್ನು ರೂಪಿಸಿ. ನಾನು ಅರಣ್ಯ ಮಂತ್ರಿಯಾದ ಸಮಯದಲ್ಲಿ ಜೀವ ಹಾನಿಗೆ 2 ಲಕ್ಷ ಪರಿಹಾರ ಇತ್ತು. ಒಂದೇ ತಿಂಗಳಲ್ಲಿ ನಾನು ಆ ಮೊತ್ತವನ್ನು

5 ಲಕ್ಷಕ್ಕೆ ಏರಿಸಿದೆ. ಕಾಡಾನೆಗಳಿಂದ ಆಗುತ್ತಿದ್ದ ಹಾವಳಿಯನ್ನು ಶೇಕಡ 50 ರಷ್ಟು ತಡೆಯುವಂತೆ ಮಾಡಿದೆ. ಇದು ಕೇವಲ ರಾಯಚೂರು, ಕಲಬುರಗಿ ಜಿಲ್ಲೆಗಳ ಪ್ರಶ್ನೆಯಲ್ಲ. ರಾಜ್ಯದ 8–10 ಜಿಲ್ಲೆಗಳಲ್ಲಿ ಈ ರೀತಿ ಹಾನಿಯಾಗಿದೆ. ಕೊಡಗು ಜಿಲ್ಲೆಯಲ್ಲೂ ಇತ್ತೀಚಿಗೆ ಆದ ಅಕಾಲಿಕ ಮಳೆಯಿಂದ ಹಾನಿಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಮೈಸೂರು ಜಿಲ್ಲೆಯಲ್ಲೂ ಕೂಡ ಈ ರೀತಿ ಹಾನಿಯಾಗಿರುವುದನ್ನು ನಾವು ಕಾಣುತ್ತೇವೆ. ಗುಂಡ್ಲುಪೇಟೆಯಲ್ಲಿ, ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ಒಂದೇ ಕುಟುಂಬದ 3 ಜನ ಮನೆಗೆ ಹೋಗುತ್ತಿದ್ದಾಗ ಮಳೆ ಪ್ರಾರಂಭವಾಗುತ್ತದೆ. ಮಳೆ ಜಾಸ್ತಿಯಾಯಿತೆಂದು ಒಂದು ಮರದ ಕೆಳಗೆ ನಿಲ್ಲುತ್ತಾರೆ. ಆಗ ಸಿಡಿಲು ಬಡಿದು 3 ಜನರೂ ಸತ್ತು ಹೋಗುತ್ತಾರೆ. ಇದಕ್ಕೆ ತತಕ್ಷಣ ಸ್ಪಂದನೆ ಆಗಲಿಲ್ಲ ಎನ್ನುವುದಾದರೆ ಈ ವ್ಯವಸ್ಥೆಗಳು ಏಕೆ ಬೇಕು? ಈ ರೀತಿ ಜೀವಹಾನಿ ಆಗುವಂತಹ ಸಂದರ್ಭದಲ್ಲಿ 24 ಗಂಟೆ ಒಳಗೆ ಪರಿಹಾರ ಕೊಡುವ ವ್ಯವಸ್ಥೆ ನಮ್ಮಲ್ಲಿ ಜಾರಿಗೆ ಬರಬೇಕು. ಎರಡನೆಯದಾಗಿ, ಯಾರ್‍ಯಾರ ಮನೆ ಹಾನಿಯಾಗಿದೆಯೋ ಅಂಥವರಿಗೆ ಆಶ್ರಯ ಯೋಜನೆ ಅಡಿ ಮನೆ ಕಟ್ಟಿಕೊಡಲು ಆದೇಶ ಮಾಡಿ. ತಕ್ಷಣ ಆದೇಶ ಕೊಟ್ಟರೆ ಇನ್ನು 8 ದಿವಸಗಳಲ್ಲಿ ಮನೆ ಕಟ್ಟಿಸಿಕೊಡುವುದಕ್ಕೆ ಅನುಕೂಲ ಆಗುತ್ತದೆ. ನಾನು ನಿಮ್ಮಲ್ಲಿ ಇನ್ನೊಂದು ಮನವಿ ಮಾಡಿಕೊಳ್ಳಬಯಸುತ್ತೇನೆ. ಶೇಕಡ ನೂರಕ್ಕೆ ನೂರು ಬೆಳೆ ಹಾನಿಯಾಗಿದೆ ಎಂದು ವರದಿಯಲ್ಲಿ ಬಂದು, ಅಂಥವರು ಸಾಲ ಮಾಡಿದ್ದರೆ ಅವರಿಂದ ಒಂದು ಪೈಸೆಯನ್ನೂ ಕಟ್ಟಿಸಿಕೊಳ್ಳಬಾರದು. ಒಂದು ಪೈಸೆ ಕಟ್ಟಿಸಿಕೊಂಡರೂ ಸರ್ಕಾರಕ್ಕೆ ಗೌರವ ಬರುವುದಿಲ್ಲ. ಇಂಥವರಿಗೆ ನೂರಕ್ಕೆ ನೂರು ಸಾಲ ಮನ್ನಾ ಮಾಡಿ. ತಕ್ಷಣವೇ ಬೀಜ ಕೊಡಿ, ಗೊಬ್ಬರ ಕೊಡಿ, ಔಷಧಿಗಳನ್ನು ಕೊಡಿ, ಅವರಿಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡಿ, ಮತ್ತೆ ಹೊಸದಾಗಿ ಬೆಳೆ ಬೆಳೆಯಲು ಅವರಿಗೆ ಧೈರ್ಯ ಕೊಡಿ. ಒಂದು ಕಡೆ ಸಾಲ ಮನ್ನಾ ಮಾಡಿ. ಇನ್ನೊಂದು ಕಡೆ, ಏನೇನು ಅನುಕೂಲತೆ ಮಾಡಿಕೊಡುವುದಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನೂ ಮಾಡಿಕೊಡಿ, ಅಂತಹ ಕುಟುಂಬಗಳಿಗೆ ಅನುಕೂಲ ಮಾಡಿಕೊಡಿ. ಪರಿಹಾರ ಕೊಡುವುದರ ಜೊತೆಯಲ್ಲಿ ಮತ್ತೆ ಹೊಸದಾಗಿ ಬೆಳೆ ಬೆಳೆಯಲು ಅವರಿಗೆ ಧೈರ್ಯ ಕೊಡಿ. ನೂರಕ್ಕೆ ನೂರು ಬೆಳೆ ಹಾನಿಯಾಗಿದೆ ಎಂದು ಗೊತ್ತಾದರೆ ಬೆಳೆಸಾಲದ ಒಂದು ಪೈಸೆ ದುಡ್ಡನ್ನೂ ಕಟ್ಟಿಸಿಕೊಳ್ಳುವ ವ್ಯವಸ್ಥೆ ಆಗಬಾರದು. ಅದು ಸಹಕಾರಿ ಕ್ಷೇತ್ರ ಇರಬಹುದು, ರಾಷ್ಟ್ರೀಕೃತ ಬ್ಯಾಂಕುಗಳಿರಬಹುದು, ಯಾವುದೇ ಮೂಲದಿಂದ ರೈತ ಸಾಲ ಪಡೆದಿದ್ದರೂ ಆ ಸಾಲವನ್ನು ನೂರಕ್ಕೆ ನೂರು ಮನ್ನಾ ಮಾಡಿ. ಸರ್ಕಾರದಿಂದ ಏನೇನು ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನೂ ಮಾಡಿಕೊಡಿ. ಮುಂದುವರೆದು ನಾನು ಇನ್ನೊಂದು ಮನವಿ ಮಾಡಿಕೊಳ್ಳಬಯಸುತ್ತೇನೆ. ಇದು ಕೇವಲ ಕಂದಾಯ ಇಲಾಖೆಯಿಂದ ಸರ್ವೆಯಾದರೆ ಸರಿಹೋಗುವುದಿಲ್ಲ. ಇಲ್ಲಿ 5–6 ಇಲಾಖೆಗಳ ಜಿಲ್ಲಾವಾರು ಜಂಟಿ ಸಮಿತಿಯನ್ನು ಮಾಡಬೇಕು. ಒಂದು ಕಡೆ ಕೃಷಿ ಇಲಾಖೆ, ಒಂದು ಕಡೆ ಕಂದಾಯ

ಇಲಾಖೆ, ಒಂದು ಕಡೆ ತೋಟಗಾರಿಕೆ ಇಲಾಖೆ, ಒಂದು ಕಡೆ ರೇಷ್ಮೆ ಇಲಾಖೆ, ಒಂದು ಕಡೆ ಕಂದಾಯ ಇಲಾಖೆ, ಇನ್ನೊಂದು ಕಡೆ ಪಂಚಾಯತ್ ರಾಜ್ ಇಲಾಖೆ ಮತ್ತು ಇನ್ನೊಂದು ಕಡೆ ನೀರಾವರಿ ಇಲಾಖೆ. ಈ ಎಲ್ಲಾ ಇಲಾಖೆಗಳ ಒಟ್ಟು ಅಧಿಕಾರಿಗಳ ಒಂದು ಜಂಟಿ ಸಮಿತಿಯನ್ನು ಮಾಡಿ. ಎಲ್ಲಾ ಅಧಿಕಾರಿಗಳು ಹೋಗಿ ಸಮಗ್ರವಾಗಿ ಜೊತೆಯಲ್ಲಿ ನಿಂತು ಸರ್ವೆಯನ್ನು ಮಾಡಬೇಕು. ಇಲ್ಲಿ ಒಂದು ಇಲಾಖೆ ಸರ್ವೆ ಮಾಡಿದರೆ ಯಾವುದೇ ಕಾರಣಕ್ಕೂ ವ್ಯವಸ್ಥಿತವಾದ ವರದಿ ಸಿಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇಲ್ಲಿ ಎಲ್ಲಾ ರೀತಿಯ ಬೆಳೆ ಹಾನಿಯಾಗಿದೆ. ಇಲ್ಲಿ ಎಲ್ಲಾ ರೀತಿಯ ಜೀವ ಹಾನಿಯಾಗಿದೆ, ಜಿಲ್ಲೆಯ ವರದಿ ಬರುವಂತಹ ಸಮಯದಲ್ಲಿ ಈ ರೀತಿ ಜಿಲ್ಲಾಧಿಕಾರಿಗಳಿಂದ ಸಮಗ್ರವಾದ ವರದಿ ಬರಬೇಕು. ಸಮಗ್ರವಾದ ವರದಿ ಜಿಲ್ಲಾಧಿಕಾರಿಗಳಿಂದ ಬರಬೇಕಾದರೆ, ಸಮಗ್ರ ಚಿತ್ರಣ ನಮ್ಮ ಕಣ್ಮುಂದೆ ಬರಬೇಕಾದರೆ ಯಾವ ಯಾವ ಹಂತದಲ್ಲಿ ಯಾವ ಯಾವ ರೀತಿಯಲ್ಲಿ ಹಾನಿಯಾಗಿದೆಯೋ ಆ ಎಲ್ಲಾ ಇಲಾಖೆಗಳಲ್ಲೂ ಕೂಡ ಜೊತೆಯಲ್ಲಿ ನಿಂತು ಜಂಟಿಯಾಗಿ ಸರ್ವೆ ಮಾಡುವಂತಹ ವ್ಯವಸ್ಥೆ ಆ ಜಿಲ್ಲೆಯಲ್ಲಿ ಆಗಬೇಕು. ಆ ಹಿನ್ನೆಲೆಯಲ್ಲಿ ನೇರವಾಗಿ ಗ್ರಾಮೀಣ ಬದುಕಿಗೆ, ರೈತನ ಬದುಕಿಗೆ ಸಂಬಂಧಪಟ್ಟಂಥ ಐದಾರು ಪ್ರಮುಖ ಇಲಾಖೆಗಳೇನಿವೆ ಆ ಇಲಾಖೆಗಳ ಅಧಿಕಾರಿಗಳ ಒಂದು ಜಂಟಿ ಸಮಿತಿಯನ್ನು ಮಾಡಿಕೊಂಡು, ಅಗತ್ಯ ಬಿದ್ದರೆ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಕಾರ್ಯಗಳನ್ನು ಬಂದ್ ಮಾಡುವುದಕ್ಕೆ ಹೇಳಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಹಾನಿಯಾಗಿರುವಂತಹ ಎಲ್ಲಾ ಪ್ರದೇಶಗಳಿಗೆ ಈ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಮನೆ ಮನೆಗೆ, ಹಳ್ಳಿ ಹಳ್ಳಿಗಳಿಗೆ ಭೇಟಿ ಕೊಟ್ಟು ಇನ್ನು ಎಂಟು ದಿವಸಗಳಲ್ಲಿ ಒಂದು ವ್ಯವಸ್ಥಿತವಾದ ವರದಿಯನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸುವುದಕ್ಕೆ ಜಂಟಿ ಸಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ಮಾಡಬೇಕು. ಜಂಟಿ ಸಮಿತಿಯ ಮೂಲಕ ಈ ವರದಿಗಳು ಸರ್ಕಾರಕ್ಕೆ ಬರುವುದಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಕೊನೆಯದಾಗಿ ನಾನು ತಮಗೆ ಹೇಳುವುದಕ್ಕೆ ಬಯಸುವುದೇನೆಂದರೆ, ಮಾನ್ಯ ಸಚಿವರೇ, ಇಲ್ಲಿ ಬಹಳಷ್ಟು ಜನ ಮಾತನಾಡುವಂತಹ ಸಂದರ್ಭದಲ್ಲಿ ಬೇರೆ ಬೇರೆ ವಿಷಯಗಳನ್ನು ಮಾತನಾಡಿದ್ದಾರೆ. ನಾನು ಮತ್ತೆ ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ನಾನು ನಿಮ್ಮಲ್ಲಿ ಒಂದು ಮಾತನ್ನು ಕೇಳುವುದೇನೆಂದರೆ, ದಯವಿಟ್ಟು ಈ ಪರಿಹಾರವನ್ನು ಸಕಾಲದಲ್ಲಿ ಕೊಡಿ. ಎರಡನೆಯದಾಗಿ, ಸಮಾಧಾನಕರವಾದ ಪರಿಹಾರವನ್ನು ಕೊಡಿ. ಸಮಾಧಾನಕರವಾದ ಪರಿಹಾರವೆಂದರೆ ರೈತನಿಗೆ ಸಮಾಧಾನ ಅನಿಸಬೇಕು. ಹೌದಪ್ಪ, ಸರ್ಕಾರ ನನ್ನ ಸಮಸ್ಯೆಗೆ ಸ್ಪಂದನೆ ಮಾಡಿದೆ ಎಂದು ರೈತನಿಗೆ ಅನಿಸಬೇಕು. ಸಕಾಲದಲ್ಲಿ ಪರಿಹಾರ, ಮತ್ತೊಂದು ಸಮಾಧಾನಕರವಾದ ಪರಿಹಾರ, ಇವೆರಡು ಸಿಕ್ಕಿಲ್ಲವೆಂದರೆ ನೀವು ಆರು ತಿಂಗಳು ಬಿಟ್ಟು ಪರಿಹಾರ ಕೊಡುತ್ತೇವೆಂದರೆ ಅದು ಯಾವುದೇ ಕಾರಣಕ್ಕೂ ಕೂಡ ಏನು ಪ್ರಯೋಜನವಾಗುವುದಿಲ್ಲ. ಈ

ಹಿನ್ನೆಲೆಯಲ್ಲಿ ನೀವು ಸಮರ್ಥರಿದ್ದೀರಿ, ಮಾನ್ಯ ಕಂದಾಯ ಸಚಿವರು ಸಮರ್ಥರಿದ್ದಾರೆ. ಈ ರೀತಿಯ ಸನ್ನಿವೇಶ ರೈತನ ವಿಚಾರದಲ್ಲಿ ಸೃಷ್ಟಿಯಾಗಿರುವ ಸಂದರ್ಭದಲ್ಲಿ ಈ ನಾಲ್ಕೈದು ಇಲಾಖೆಯ ಅಧಿಕಾರಿಗಳನ್ನು ನೀವೇ ಕೂರಿಸಿಕೊಂಡು, ಇಲಾಖಾ ಮಂತ್ರಿಗಳನ್ನು ಕೂರಿಸಿಕೊಂಡು ಸಮಗ್ರ ವರದಿಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಸಕಾಲದಲ್ಲಿ ನೀವು ವರದಿಯನ್ನು ತಲುಪಿಸುವಂತಹ ಪ್ರಯತ್ನ ಮಾಡಿ. ಕೇಂದ್ರಕ್ಕೆ ನಿಮ್ಮ ಮನವಿ ಹೋದರೆ ಈ ಕಡೆಯಲ್ಲಿ ರಾಮಚಂದ್ರಗೌಡರು ಮಾತನಾಡುತ್ತಾ ಹೇಳಿದ್ದಾರೆ, ನಮ್ಮ ನಾಯಕರು ಕೂಡ ಮಾತನಾಡುತ್ತಾ ಹೇಳಿದ್ದಾರೆ. ಕೇಂದ್ರದಿಂದ ಏನು ಅನುಕೂಲತೆಗಳು ಸಿಗಬೇಕೋ ಆ ಪ್ರಯತ್ನದ ಜೊತೆಗೆ ನಾವು ನಿಮ್ಮ ಜೊತೆಯಲ್ಲಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಅಂತಿಮವಾಗಿ ರಾಜ್ಯ ಸರ್ಕಾರದ ಜವಾಬ್ದಾರಿ ಇದರಲ್ಲಿ ಬಹಳ ಪ್ರಮುಖವಾಗಿದೆ. ಆ ಹಿನ್ನೆಲೆಯಲ್ಲಿ ಅಕಾಲಿಕ ಮಳೆಯಿಂದ ರಾಜ್ಯದಲ್ಲಿ ವಿಶೇಷವಾದ ಸನ್ನಿವೇಶ ರೈತನ ಬದುಕಿನಲ್ಲಿ ಸೃಷ್ಟಿಯಾಗಿದೆ. ರೈತ ಅತಂತ್ರವಾಗಿರುವಂತಹ ಸನ್ನಿವೇಶ ಏನು ಸೃಷ್ಟಿ ಆಗಿದೆ ಆ ಹಿನ್ನೆಲೆಯಲ್ಲಿ ಸಕಾಲದಲ್ಲಿ ಸ್ಪಂದನೆ ಮಾಡುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ನೀವು ಮಾದರಿಯಾಗಿ ನಿಲ್ಲಬೇಕೆನ್ನುವ ಮಾತನ್ನು ಹೇಳಿ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಗಣೇಶ್ ಕಾರ್ಣಿಕ್‌ರವರಿಗೆ ಗೊತ್ತಿದೆ. ಈಗ ಬಹಳ ಗಂಭೀರವಾಗಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳಬೇಕಾದರೆ ಪ್ರತಿ ವರ್ಷ 10–15 ಜನರು ಸಿಡಿಲು ಬಡಿದು ಸಾಯುತ್ತಾರೆ.

**ಸಭಾಪತಿಯವರು:–** ಮಾನ್ಯ ನಗರಾಭಿವೃದ್ಧಿ ಸಚಿವರೇ, ತಾವು ಸಭೆಯ ಮುಂದಿಡುವ ಕಾಗದ ಪತ್ರಗಳನ್ನು ಮಂಡಿಸಿ.

## 9. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ನನ್ನ ಹೆಸರಿನಲ್ಲಿರುವಂತಹ ಈ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ:

**ಕರ್ನಾಟಕ ಸರ್ಕಾರದ ನಡವಳಿಗಳು**

**ನಗರಾಭಿವೃದ್ಧಿ ಸಚಿವಾಲಯ**

**ವಿಷಯ:** ಕರ್ನಾಟಕ ಮುನಿಸಿಫಲ್ ಕಾರ್ಪೋರೇಷನ್ ಅಧಿನಿಯಮ, 1976 ರ ಪ್ರಕರಣ 99ರ ಉಪ ಪ್ರಕರಣ (1) ರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಅನ್ನು ವಿಸರ್ಜಿಸುವ ಬಗ್ಗೆ – ಆದೇಶ.

---

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ.ನಅಇ 117 ಎಂಎನ್‌ಯು 2015, ದಿನಾಂಕ: 19–02–2015.
2. ಅ.ಸ.ಪತ್ರ ಸಂಖ್ಯೆ: ಕೆಎಸ್‌ಟಿ/ಸಿಓ/ಎಂಡಿ/152/2014–15, ದಿನಾಂಕ: 05–03–2015 ರಂದು ಸಲ್ಲಿಸಿರುವ ವರದಿ.
3. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ.ನಅಇ 117 ಎಂಎನ್‌ಯು 2015, ದಿನಾಂಕ: 18–3–2015.
4. ಶ್ರೀ ಪದ್ಮನಾಭರೆಡ್ಡಿ, ಸದಸ್ಯರು, ಕಾಚರಕನಹಳ್ಳಿ, ವಾರ್ಡ್ ನಂ.29, ರವರು ದಿನಾಂಕ: 28–03–2015 ರಂದು ಸಲ್ಲಿಸಿರುವ ಉತ್ತರ.
5. ಶ್ರೀಮತಿ ಎನ್.ಶಾಂತಕುಮಾರಿ, ಮಹಾಪೌರರು, ಬಿ.ಬಿ.ಎಂ.ಪಿ.ರವರು ದಿನಾಂಕ: 30–3–2015 ರಂದು ಸಲ್ಲಿಸಿರುವ ಉತ್ತರ.
6. ಆಯುಕ್ತರು, ಬಿ.ಬಿ.ಎಂ.ಪಿ., ಬೆಂಗಳೂರು ಮತ್ತು ಎಲ್ಲಾ ಸದಸ್ಯರು. ಸಲ್ಲಿಸಿರುವ ದಿನಾಂಕ: 30–03–2015 ರ ಉತ್ತರ.

**ಪ್ರಸ್ತಾವನೆ:**

ಬೆಂಗಳೂರು ಮಹಾನಗರ ಪಾಲಿಕೆಯು ಈ ಹಿಂದೆ ಒಟ್ಟು 225 ಚದರ ಕಿ.ಮೀ. ವಿಸ್ತೀರ್ಣದ ವ್ಯಾಪ್ತಿಯನ್ನು ಹೊಂದಿತ್ತು. ಪಾಲಿಕೆಯ ಸುತ್ತಮುತ್ತಲಿನ ಪ್ರದೇಶಗಳಾದ ಅಂದರೆ 7 ನಗರ ಸಭೆಗಳು, 1 ಪುರಸಭೆ ಹಾಗೂ 110 ಹಳ್ಳಿಗಳನ್ನು ಒಳಗೊಂಡಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ದಿನಾಂಕ: 16–01–2007 ರಂದು ರಚಿಸಲಾಗಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 800 ಚದರ ಕಿ.ಮೀ. ವಿಸ್ತೀರ್ಣದ ವ್ಯಾಪ್ತಿಯನ್ನು ಹೊಂದಿದ್ದು, ಒಟ್ಟು 8 ವಲಯಗಳನ್ನು ಒಳಗೊಂಡಿದೆ. ಪಾಲಿಕೆಯ ಕೌನ್ಸಿಲ್ (ಚುನಾಯಿತ ಪ್ರತಿನಿಧಿಗಳಿಂದ) 2010ನೇ ಸಾಲಿನಿಂದ ಆಡಳಿತವನ್ನು ನಡೆಸುತ್ತಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ರಸ್ತೆಗಳ ಅಸಮರ್ಪಕ ನಿರ್ವಹಣೆ, ಅಸಮರ್ಪಕ ಘನತ್ಯಾಜ್ಯ ವಿಲೇವಾರಿ, ಜಾಹೀರಾತು ವಿಭಾಗದಲ್ಲಿ ಅವ್ಯವಹಾರ, ಟೆಂಡರ್‌ಗಳನ್ನು ನಿಯಮಬಾಹಿರವಾಗಿ ಕರೆದಿರುವುದು, ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಿರುವುದು, ಆಡಳಿತ ಅವ್ಯವಸ್ಥೆ, ಹಣಕಾಸಿನ ಅವ್ಯವಸ್ಥೆ, ಅನಧಿಕೃತ ಫ್ಲೆಕ್ಸ್‌ಗಳ ಪ್ರದರ್ಶನ, ಇತ್ಯಾದಿ ಅನೇಕ ಅಕ್ರಮಗಳು, ಲೋಪದೋಷಗಳ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮತ್ತು ಲೋಕಾಯುಕ್ತ ಸಂಸ್ಥೆಯಿಂದ ಆಕ್ಷೇಪಣೆಗಳು ವ್ಯಕ್ತವಾಗಿದ್ದು ಹಾಗೂ ಪ್ರತಿನಿತ್ಯ ಸಾರ್ವಜನಿಕರಿಂದ ಪಾಲಿಕೆಯ ಬಗ್ಗೆ ಟೀಕೆ, ಟಿಪ್ಪಣಿ ಮತ್ತು ಆಕ್ಷೇಪಣೆಗಳು ಬಂದಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರವು, ಮೇಲ್ಕಂಡ ಲೋಪದೋಷಗಳು ಮತ್ತು ಅವ್ಯವಹಾರಗಳಲ್ಲಿನ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ ತನಿಖೆ ನಡೆಸಿ ವರದಿಯನ್ನು ಸಲ್ಲಿಸಲು ಸರ್ಕಾರಿ ಆದೇಶ ಸಂಖ್ಯೆ: ನಅಇ 117 ಎಂಎನ್‌ಯು 2015, ದಿನಾಂಕ: 19–02–2015 ರಲ್ಲಿ ಶ್ರೀ ರಾಜೇಂದ್ರ ಕುಮಾರ್ ಕಟಾರಿಯಾ, ಭಾಆಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಶ್ರೀ ಶಿವರುದ್ರಪ್ಪ, ಜಂಟಿ ನಿಯಂತ್ರಕರು, ಖಜಾನೆ–2, ರವರುಗಳನ್ನೊಳಗೊಂಡ ಒಂದು ತನಿಖಾ ತಂಡವನ್ನು ರಚಿಸಲಾಗಿತ್ತು.

ಸದರಿ ತನಿಖಾ ತಂಡವು ಮೇಲೆ–(2) ರಲ್ಲಿ ಓದಲಾದ ದಿನಾಂಕ: 05–03–2015 ರ ಪತ್ರದಲ್ಲಿ ವಿವರವಾದ ವರದಿಯನ್ನು ಸಲ್ಲಿಸಿದೆ. ಸದರಿ ವರದಿಯಲ್ಲಿ ಪಾಲಿಕೆಯಲ್ಲಿ ಕಾಮಗಾರಿಗಳಿಗೆ ಸಂಕೇತ ನೀಡುವ ಸಂದರ್ಭದಲ್ಲಿ ಕಾಮಗಾರಿಗಳ ಸಂಖ್ಯೆ ಮತ್ತು ಮೊತ್ತದಲ್ಲಿನ ಅಂಕಿ ಅಂಶಗಳಲ್ಲಿ ವ್ಯತ್ಯಾಸ ಇರುವುದು, ಮರುಹೊಂದಾಣಿಕೆ ಇಲ್ಲದೇ ಹೆಚ್ಚುವರಿ ಕಾಮಗಾರಿ ಸಂಕೇತ ನೀಡಿರುವುದು, ಆಯುಕ್ತರ ಅನುಮೋದನೆ ಇಲ್ಲದೇ ಪಿ.ಓ.ಡಬ್ಲ್ಯೂ. ಮಿಸ್ಸಿಂಗ್ ಎಂದು ನಮೂದಿಸಿ ಕಾಮಗಾರಿ ಸಂಖ್ಯೆ ನೀಡಿರುವುದು, ಕಾಮಗಾರಿಗಳ ಹೆಸರುಗಳನ್ನು ಬದಲಾಯಿಸಿರುವುದು, ಒಂದೇ ಕಾಮಗಾರಿಗೆ ಎರಡು ಕಾಮಗಾರಿ ಸಂಕೇತ ನೀಡಿರುವುದು, ಇತ್ಯಾದಿ ಲೋಪದೋಷಗಳನ್ನು ಲೆಕ್ಕ ಪರಿಶೋಧಕರು ಅವಲೋಕಿಸಿರುವುದನ್ನು ತನಿಖಾ ತಂಡವು ಉಲ್ಲೇಖಿಸಿದೆ.

ಇದಲ್ಲದೇ, ತ್ಯಾಜ್ಯ ವಿಲೇವಾರಿ ನಿರ್ವಹಣೆಯನ್ನು ಅಸಮರ್ಪಕವಾಗಿ ನಿರ್ವಹಿಸುತ್ತಿರುವುದು, ಜಾಹೀರಾತು ವಿಭಾಗದಲ್ಲಿ ಸಾವಿರಾರು ಕೋಟಿಗಳ ಶುಲ್ಕ ವಸೂಲಿ ಮಾಡದೆ ಆರ್ಥಿಕ ನಷ್ಟವನ್ನುಂಟು ಮಾಡಿರುವುದು. ಸುಮಾರು 20,000 ಜಾಹೀರಾತು ಫಲಕಗಳನ್ನು ಅನಧಿಕೃತವಾಗಿ ಆಳವಡಿಸಿಕೊಂಡಿರುವುದರ ಬಗ್ಗೆ ಮಾನ್ಯ ಉಪ ಲೋಕಾಯುಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವುದು, ಓ.ಎಫ್.ಸಿ. ಕೇಬಲ್ ಆಳವಡಿಸುವಲ್ಲಿ ಸಾವಿರಾರು ಕೋಟಿ ಆರ್ಥಿಕ ನಷ್ಟ ಉಂಟಾಗುವಂತೆ ಮಾಡಿರುವುದು, ಪಾಲಿಕೆಯು ಸಾವಿರಾರು ಕೋಟಿಗಳ ಬಿಲ್‌ಗಳನ್ನು ಪಾವತಿಸದೇ ಬಾಕಿ ಉಳಿಸಿಕೊಂಡಿರುವುದು, ಪಾಲಿಕೆಯ ಆಸ್ತಿಗಳನ್ನು ಅಡಮಾನವಿಟ್ಟು ಸಾಲ ಪಡೆದು, ಆರ್ಥಿಕ ಸಂಕಷ್ಟದಲ್ಲಿರುವುದು, ವ್ಯವಸ್ಥಿತವಾಗಿ ಆರ್ಥಿಕ ನಿರ್ವಹಣೆ ನಡೆಸದೆ ಇರುವುದನ್ನು ಸಹ ಉಲ್ಲೇಖಿಸಲಾಗಿದೆ.

ತನಿಖಾ ತಂಡವು ಸಲ್ಲಿಸಿರುವ ವರದಿಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿದ್ದು, ವರದಿಯಲ್ಲಿ ತಿಳಿಸಿರುವ ಅಂಶಗಳು ಮೇಲ್ನೋಟಕ್ಕೆ ಸತ್ಯವೆಂದು ಕಂಡು ಬಂದ ಹಿನ್ನೆಲೆಯಲ್ಲಿ, ತನಿಖಾ ತಂಡದ ವರದಿಯಲ್ಲಿನ ಅಂಶಗಳ ಬಗ್ಗೆ ವಿವರಣೆ ಕೋರಿ ವಿವರವಾದ ಕಾರಣ ಕೇಳುವ ನೋಟೀಸ್‌ನ್ನು ಕರ್ನಾಟಕ ಮುನಿಸಿಫಲ್ ಕಾರ್ಪೋರೇಷನ್ ಅಧಿನಿಯಮ, 1976 ರ ಪ್ರಕರಣ 99 ರಡಿಯಲ್ಲಿ ಮೇಲೆ–(3) ರಲ್ಲಿ ಓದಲಾದಂತೆ ದಿನಾಂಕ: 18.03.2015 ರಂದು ಪಾಲಿಕೆಯ ಮಹಾಪೌರರು, ಎಲ್ಲಾ ಸದಸ್ಯರುಗಳು ಮತ್ತು ಆಯುಕ್ತರು ಹಾಗೂ ಸಂಬಂಧಪಟ್ಟವರೆಲ್ಲರಿಗೂ ಜಾರಿ ಮಾಡಿ, ದಿನಾಂಕ: 30.03.2015 ಕ್ಕಿಂತ ಮುಂಚಿತವಾಗಿ ಲಿಖಿತ ಮೂಲಕವಾಗಲೀ ಅಥವಾ ಮೌಖಿಕವಾಗಿ ಆಗಲೀ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಇವರಿಗೆ ಉತ್ತರ/ಸಮಜಾಯಿಷಿಯನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಸರ್ಕಾರದ ದಿನಾಂಕ: 18.03.2015 ರ ಕಾರಣ ಕೇಳುವ ನೋಟಿಸ್‌ಗೆ ಉತ್ತರವಾಗಿ ಶ್ರೀ. ಪದ್ಮನಾಭರೆಡ್ಡಿ, ಸದಸ್ಯರು, ಕಾಚರಕನಹಳ್ಳಿ, ವಾರ್ಡ್ ನಂ.29, ಇವರು ದಿನಾಂಕ: 28.03.2015 ರಂದು, ಶ್ರೀಮತಿ.ಎನ್.ಶಾಂತಕುಮಾರಿ, ಮಹಾಪೌರರು, ಬಿ.ಬಿ.ಎಂ.ಪಿ., ಇವರು ದಿನಾಂಕ: 30.03.2015ರಂದು ಮತ್ತು ಆಯುಕ್ತರು, ಬಿ.ಬಿ.ಎಂ.ಪಿ., ಮತ್ತು ಎಲ್ಲಾ ಸದಸ್ಯರು ದಿನಾಂಕ: 30.03.2015 ರಂದು ಉತ್ತರವನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡವರು ಸಲ್ಲಿಸಿರುವ ಸಮಜಾಯಿಷಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಶ್ರೀ.ಪದ್ಮನಾಭರೆಡ್ಡಿ ರವರು ನೋಟೀಸ್‌ನ ಜೊತೆ ದಾಖಲೆಗಳನ್ನು ಒದಗಿಸಿರುವುದಿಲ್ಲವೆಂದೂ, ಸದರಿ ದಾಖಲೆಗಳನ್ನು ಒದಗಿಸುವಂತೆ ಉತ್ತರಿಸಿರುತ್ತಾರೆ. ಶ್ರೀಮತಿ ಶಾಂತಕುಮಾರಿ, ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಕಾರಣ ಕೇಳುವ ನೋಟೀಸ್‌ನಲ್ಲಿರುವ ಅಂಶಗಳನ್ನು ಒಪ್ಪಲಾಗುವುದಿಲ್ಲ ಮತ್ತು ಬಲವಾಗಿ ಅಲ್ಲಗಳೆಯಲಾಗಿದೆ ಎಂಬುದಾಗಿ ಉತ್ತರಿಸಿರುತ್ತಾರೆ. ಆಯುಕ್ತರು, ಬಿ.ಬಿ.ಎಂ.ಪಿ. ಮತ್ತು ಇತರೆ ಸದಸ್ಯರುಗಳು ಸಲ್ಲಿಸಿರುವ ಸಮಜಾಯಿಷಿಯಲ್ಲಿ ಸರ್ಕಾರವು ಜಾರಿ ಮಾಡಿರುವ ಕಾರಣ ಕೇಳುವ ನೋಟೀಸ್‌ನಲ್ಲಿ ಉಲ್ಲೇಖಿಸಿರುವ ನ್ಯಾಯಾಲಯದ ಆದೇಶಗಳು, ಸಿ.ಐ.ಡಿ. ವರದಿ, ಪತ್ರಿಕೆಗಳಲ್ಲಿ ಪ್ರಕಟವಾಗಿರುವುದಕ್ಕೆ ಪತ್ರಿಕೆಗಳ ಹೆಸರುಗಳು ಮತ್ತು ದಿನಾಂಕ, ಇತ್ಯಾದಿಗಳನ್ನು ಒದಗಿಸಿಲ್ಲವೆಂದು ತಿಳಿಸಿರುತ್ತಾರೆ. ಸದರಿಯವರುಗಳು ಸಲ್ಲಿಸಿರುವ ಸಮಜಾಯಿಷಿಗಳನ್ನು ಕೂಲಂಕಶವಾಗಿ ಪರಿಶೀಲಿಸಿದಾಗ, ಅದರಲ್ಲಿ ಪರಿಗಣಿಸಬಹುದಾದ ಸಮರ್ಪಕವಾದ ಯಾವುದೇ ಅಂಶಗಳು ಕಂಡು ಬರುತ್ತಿಲ್ಲ.

ಇದಲ್ಲದೆ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ, 1976 ರನ್ವಯ ನಿರ್ವಹಿಸಬೇಕಾದ ಇತರೆ ಕರ್ತವ್ಯಗಳ ಜೊತೆಗೆ ಪ್ರಕರಣ 57 ಮತ್ತು 58 ರಲ್ಲಿ ನಗರ ಸ್ಥಳೀಯ ಸಂಸ್ಥೆ ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಲು ಸ್ಪಷ್ಟಪಡಿಸಲಾಗಿದೆ:

"57. General powers of the Corporation.- (1) Subject to the provisions of this Act, the rules, the regulations and the bye-laws made thereunder, the municipal Government of the City shall vest in the Corporation.

(2) Without prejudice to the generality of the provisions of sub-section (1), it shall be the duty of the Corporation to exercise such powers, perform such functions and discharge such duties as are conferred on it by and under this Act and consider all periodical statements relating to the receipts and disbursements and all progress reports and pass such resolutions thereon, as it thinks fit.

Some of the important Obligatory functions of the Corporation are as follows:

(1) The Watering and cleansing of all public streets and public places in the city and the removal of all sweepings therefrom;

(2) The collection, removal, treatment and disposal of sewage, offensive matter and rubbish and the preparation of compost manure from such sewage, offensive matter and rubbish,

(3) The construction, maintenance and cleaning of drains and drainage works and of public privies, water closets, urinals and similar conveniences, etc."

ಮೇಲ್ಕಂಡಂತೆ ಪಾಲಿಕೆಯು ತನ್ನ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕಾಗಿರುತ್ತದೆ.

ಆದರೆ, ಪಾಲಿಕೆಯು ಬೃಹತ್ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳು/ಕಸ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸದೇ, ಗಂಭೀರ ಪರಿಸ್ಥಿತಿ ಮುಟ್ಟಿದ್ದ ಕಾರಣ ಸಾರ್ವಜನಿಕರಿಂದ ತೀವ್ರ ಟೀಕೆಗೆ ಗುರಿಯಾಗಿ ಸರ್ಕಾರಕ್ಕೆ ಮುಜುಗರ ಉಂಟು ಮಾಡಿದೆ. ಈ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ.24739/2012 ಮತ್ತು ಇತರೆ ದಾವೆಗಳನ್ನು ಸಲ್ಲಿಸಿದ್ದು, ಈ ರಿಟ್ ಅರ್ಜಿಗಳು ಸುಮಾರು ಎರಡು ವರ್ಷಗಳಿಂದಲೂ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ದಿನಾಂಕ: 13.2.2015 ರಂದು ನಡೆದ ವಿಚಾರಣಾ ಸಮಯದಲ್ಲಿ ಮಾನ್ಯ ನ್ಯಾಯಾಲಯವು 5 ತಿಂಗಳಿಂದ ಪೌರಕಾರ್ಮಿಕರಿಗೆ ವೇತನ/ಸಂಭಾವನೆಯನ್ನು ಪಾವತಿಸದೇ ಬಿಲ್ ಬಾಕಿ ಉಳಿಸಿಕೊಂಡಿರುವ ಬಗ್ಗೆ ಗಂಭೀರವಾಗಿ ಪರಿಗಣಿಸಿ, ಪಾಲಿಕೆಯ ಆರ್ಥಿಕ ದುಸ್ಥಿತಿಯ ಬಗ್ಗೆ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತದೆ.

ಆದ್ದರಿಂದ, ಕರ್ನಾಟಕ ಮುನಿಸಿಫಲ್ ಕಾರ್ಪೋರೇಷನ್ ಕಾಯ್ದೆ, 1976 ರ ಅನ್ವಯ ಪ್ರದತ್ತವಾದ ಅಧಿಕಾರ ಮತ್ತು ಕರ್ತವ್ಯಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅನುಷ್ಟಾನಗೊಳಿಸುವಲ್ಲಿ ಸಂಪೂರ್ಣ ವಿಫಲವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಸಮರ್ಪಕ ಆಡಳಿತ ನಿರ್ವಹಣೆ, ಕಾಮಗಾರಿ/ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಅವ್ಯವಹಾರ ಎಸಗಿರುವುದು, ಆರ್ಥಿಕ ನಿರ್ವಹಣೆಯಲ್ಲಿ ಅಶಿಸ್ತು ಎಸಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಕರ್ನಾಟಕ ಮುನಿಸಿಫಲ್ ಕಾರ್ಪೋರೇಷನ್ ಅಧಿನಿಯಮ, 1976 ರ ಕಾಯ್ದೆ ಮತ್ತು ನಿಯಮಗಳನುಸಾರ ಪಾಲಿಕೆಯ ಕೌನ್ಸಿಲ್ ಅದರ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸದೇ ಸಂಪೂರ್ಣವಾಗಿ ವಿಫಲವಾಗಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ಆದ್ದರಿಂದ, ಈ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ. ನಅಇ 117 ಎಂಎನ್‌ಯು 2015,</u>**

**<u>ಬೆಂಗಳೂರು, ದಿನಾಂಕ: 18.4.2015.</u>**

ಮೇಲೆ ಪ್ರಸ್ತಾವನೆಯಲ್ಲಿ ಹೇಳಲಾದ ಕಾರಣಗಳಿಗಾಗಿ, ಪ್ರಸಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ, 1976 ರ ಮೂಲಕ ಮತ್ತು ಮೇರೆಗೆ ಅದಕ್ಕೆ ಪ್ರದತ್ತವಾದಂತಹ ಅಧಿಕಾರಗಳನ್ನು ಚಲಾಯಿಸುವುದು, ಅಂತಹ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಂತಹ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಕಂಡುಬಂದಿಲ್ಲವಾದ್ದರಿಂದ ಮತ್ತು ಆರ್ಥಿಕ ನಿರ್ವಹಣೆಯಲ್ಲಿ ಅಶಿಸ್ತಿನ ನಡವಳಿಕೆ ಎಸಗಿ ಆರ್ಥಿಕ ನಷ್ಟವನ್ನುಂಟು ಮಾಡಿರುವುದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಿತಾಸಕ್ತಿಗೆ ಭಾದಕವಾಗುವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂಬುದಾಗಿ ಘೋಷಿಸುತ್ತದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ, 1976 ರ ಪ್ರಕರಣ 99 ರ ಉಪಪ್ರಕರಣ (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ತಕ್ಷಣದಿಂದ ಜಾರಿಗೆ ಬರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್‌ನ್ನು ವಿಸರ್ಜಿಸಿದೆ.

ಕರ್ನಾಟಕ ಮುನಿಸಿಫಲ್ ಕಾರ್ಪೋರೇಷನ್ ಅಧಿನಿಯಮ, 1976 ರ ಪ್ರಕರಣ 99 ರ ಉಪ ಪ್ರಕರಣ (2)(ಎ) ರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ಪ್ರಕರಣ 99 ರ ಉಪ ಪ್ರಕರಣ (8) ರ ಅನ್ವಯ ಕೌನ್ಸಿಲ್ ಸದಸ್ಯರು ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸುವ ಅರ್ಹತೆಗೆ ಬಾಧಕವಾಗದಂತೆ ಮುಕ್ತಾಯಗೊಳಿಸಲಾಗಿದೆ.

ಮಹಾನಗರ ಪಾಲಿಕೆಯ ಕೌನ್ಸಿಲ್‌ನ ವಿಸರ್ಜಿತ ಅವಧಿಯಲ್ಲಿ ಆಡಳಿತಾಧಿಕಾರಿಗಳು ಕರ್ನಾಟಕ ಮುನಿಸಿಫಲ್ ಕಾರ್ಪೋರೇಷನ್ ಅಧಿನಿಯಮ, 1976 ಮತ್ತು ಇತರೆ ಯಾವುದೇ ಕಾನೂನಿನಲ್ಲಿ ಮಹಾನಗರ ಪಾಲಿಕೆಗೆ ಮತ್ತು ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿಗಳಿಗೆ ಪ್ರದತ್ತವಾದ ಮತ್ತು ಹೊರಿಸಲಾದ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

## 10. ನಿಯಮ 68ರಡಿಯಲ್ಲಿ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ

**ವಿಷಯ:– ಅಕಾಲಿಕ ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರ ಬಗ್ಗೆ.**

**ಸಭಾಪತಿಯವರು:–** ಈವರೆಗೆ ನಿಯಮ 68ರ ಅಡಿಯಲ್ಲಿ ನಡೆದ ಚರ್ಚೆಗೆ ಮಾನ್ಯ ಕಂದಾಯ ಸಚಿವರಿಂದ ಉತ್ತರ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಸುಮಾರು ಎಂಟು ಜಿಲ್ಲೆಗಳಲ್ಲಿ ಇತ್ತೀಚೆಗೆ ಬಿದ್ದಿರುವಂತಹ ಅಕಾಲಿಕ ಮಳೆಯಿಂದ ರೈತರಿಗೆ ಅಪಾರವಾದ ಬೆಳೆ ನಾಶವಾಗಿದೆ. ಮನೆ ಹಾಗೂ ಜಾನುವಾರು ಹಾನಿಗೆ ಸಂಬಂಧಪಟ್ಟಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಈ ಕಡೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರೆಲ್ಲರೂ ಕೂಡ ನಿಯಮ 68ರ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಅವರ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಇದು ಪ್ರಕೃತಿ ವಿಕೋಪದಿಂದ ಹಾನಿಯಾಗಿರುವಂಥದ್ದು. ನಮ್ಮ ಸರ್ಕಾರ ಬಂದ ಮೇಲೆ ಎರಡು ವರ್ಷಗಳಲ್ಲಿ ಇದು ಆರನೇ ಬಾರಿ ಪ್ರಕೃತಿ ವಿಕೋಪಕ್ಕೆ ಹೋಗಿರುವಂಥದ್ದು. ಬರದ ಪರಿಸ್ಥಿತಿಯನ್ನು ಎದುರಿಸಿದ್ದೇವೆ ಮತ್ತು ಪ್ರವಾಹ ಬಂದಿದೆ. ಮಧ್ಯದಲ್ಲಿ ಆಲಿಕಲ್ಲು ಮಳೆ ಕೂಡ ಬಂದಿದೆ. ಮತ್ತೆ ಪ್ರವಾಹ, ಬರದ ಪರಿಸ್ಥಿತಿಯೂ ಕೂಡ ಬಂದಿದೆ. ಇದು ಆರನೇ ಸಲ ಉತ್ತರ ಕರ್ನಾಟಕದಲ್ಲಿ ಅನಿರೀಕ್ಷಿತ ಮಳೆ ಆಗಿರುವಂಥದ್ದು. ಹಾಗಾಗಿ ಬಹುಶಃ ಅನಿರೀಕ್ಷಿತದಲ್ಲಿ ಅನಿರೀಕ್ಷಿತವಾಗಿ ಇಷ್ಟು ಮಳೆ ಆಗಿರುವಂಥದ್ದು. ಈ ವರ್ಷ ಪ್ರಸಕ್ತ ಸಾಲಿನಲ್ಲಿ ಜನವರಿಯಿಂದ ಏಪ್ರಿಲ್‌ವರೆಗೆ ರಾಜ್ಯಾದ್ಯಂತ ವಾಡಿಕೆ ಮಳೆ 25 ಮಿ.ಮೀ. ಬರಬೇಕಾಗಿತ್ತು. ಆದರೆ ವಾಸ್ತವಿಕವಾಗಿ ಬಂದಿರುವಂತಹ ಮಳೆ 60 ಮಿ.ಮೀ ಆಗಿರುತ್ತದೆ. ದಿನಾಂಕ 8 ರಿಂದ 16ನೇ ಏಪ್ರಿಲ್‌ವರೆಗೆ ಈ ರಾಜ್ಯದ ಉತ್ತರ ಕರ್ನಾಟಕದ ಜಿಲ್ಲೆಗಳಾದ ವಿಜಯಪುರ, ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅಕಾಲಿಕ ಮಳೆ ಹಾಗೂ ಆಲಿಕಲ್ಲು ಮಳೆಯಿಂದಾಗಿ ಅಪಾರ ಪ್ರಮಾಣದಲ್ಲಿ ಜೀವಹಾನಿ, ಜಾನುವಾರು ಹಾನಿ, ಮನೆ ಹಾನಿ ಹಾಗೂ ಕೃಷಿ ಮತ್ತು ತೋಟಗಾರಿಕೆ ಬೆಳೆ ಹಾನಿಯಾಗಿದೆ. ಸಾಮಾನ್ಯವಾಗಿ ಏಪ್ರಿಲ್ ತಿಂಗಳಲ್ಲಿ ಈ ಅವಧಿಗೆ ಈ ಭಾಗದಲ್ಲಿ 6 ರಿಂದ 7 ಮಿ.ಮೀ. ರಷ್ಟು ವಾಡಿಕೆ ಮಳೆಯಾಗುತ್ತಿದ್ದು, ಆದರೆ ಪ್ರಸ್ತುತ ಅವಧಿಯಲ್ಲಿ 50–150 ಮಿ.ಮೀ. ಮಳೆಯಾಗಿದ್ದು ಈ ಮಳೆ ಪ್ರಮಾಣವು ವಾಡಿಕೆ ಮಳೆಗೆ ಹೋಲಿಸಿದಾಗ ಬಹಳಷ್ಟು ಹೆಚ್ಚಾಗಿರುತ್ತದೆ. ಈ ಭಾರಿ ಪ್ರಮಾಣದ ಮಳೆಯು ಕೇವಲ 1/2 ಗಂಟೆಯಿಂದ 1 ಗಂಟೆಯ ಅವಧಿಯಲ್ಲಿ ಸುರಿದಿದ್ದು, ಇದರ ತೀವ್ರತೆ ಗಂಟೆಗೆ 50–100 ಮಿ.ಮೀ.ಗಿಂತ ಅಧಿಕವಾಗಿರುತ್ತದೆ. ಕೆಲವಡೆ ಈ ಮಳೆಯೊಂದಿಗೆ ಆಲಿಕಲ್ಲು ಸುರಿದು ಬಹಳ ಹೆಚ್ಚಿನ ಅನಾಹುತ ಆಗಿದೆ. 8 ಜಿಲ್ಲೆಗಳಲ್ಲಿ ಈ ರೀತಿ ಆಗಿದೆ. ಅದರಲ್ಲಿ ಎರಡು ಜಿಲ್ಲೆಗಳಲ್ಲಿ ಸ್ವಲ್ಪ ಕಡಿಮೆ ಇದೆ. ಗದಗ್, ಮುಂಬಯಿ

ಕರ್ನಾಟಕ ಪ್ರಾಂತ್ಯದಲ್ಲಿ ಕಡಿಮೆ ಇದೆ. ಇದು ಹೆಚ್ಚಿಗೆ ಆಗಿರುವಂಥದ್ದು ಕೊಪ್ಪಳ ಜಿಲ್ಲೆ, ರಾಯಚೂರು ಮತ್ತು ಬಳ್ಳಾರಿ. ಈ ಮೂರು ಭಾಗಗಳಲ್ಲಿ ಈ ಸಲ ತುಂಬಾ ಮಳೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಹೇಳುತ್ತಿದ್ದರು. ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲಿ ಶೇಕಡ 80 ರಷ್ಟು ಹಾನಿ ಆಗಿದೆ. ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲೂ ಅದೇ ರೀತಿ ಆಗಿದೆ. ಬಳ್ಳಾರಿ ಜಿಲ್ಲೆಯ ಸಿರಗುಪ್ಪೆಯಲ್ಲಿ ತುಂಬಾ ಹಾನಿಯಾಗಿದೆ. ಈ ಮೂರು ಜಿಲ್ಲೆಗಳ ತಾಲ್ಲೂಕುಗಳಲ್ಲಿ ಪ್ರಮುಖವಾಗಿ ಭತ್ತದ ಬೆಳೆ ತುಂಬಾ ನಷ್ಟ ಆಗಿದೆ. ಇವತ್ತು ರೈತನ ಬದುಕು ಹೇಗಿದೆ ಎಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಅದರಲ್ಲೂ ರೈತನಿಗೆ ಭೂಮಿಯ ಒಡೆಯ ಬೇರೆಯಾಗಿರುತ್ತಾನೆ. ಅದನ್ನು contract basis ನಲ್ಲಿ ತೆಗೆದುಕೊಂಡು, ಅವನು contract enter ಆಗಿರುವುದಿಲ್ಲ, ಮಾತಿನ ಮೂಲಕ ತೆಗೆದುಕೊಂಡು ಅದರಲ್ಲಿ ಬೆಳೆ ಬೆಳದಿರುವಂಥವನು ಆತ ತನ್ನಲ್ಲಿರುವಂತಹ ಎಲ್ಲಾ ಬಂಡವಾಳವನ್ನು ಹೂಡಿ ಶ್ರಮವನ್ನು ಹಾಕಿ, ಇನ್ನೇನು ಬೆಳೆ ಬರುವ ಸಮಯದಲ್ಲಿ ಹಾನಿ ಆಗಿದೆ. ಈಗ ಅವನ compensation ಎಂದು ಕರೆಯುವುದಕ್ಕಿಂತ input subsidy ಎಂದು ಕರೆಯಬಹುದು. Compensation ಎಂದೇ ಕರೆಯೋಣ. ಪರಿಹಾರವನ್ನು ಕೊಡತಕ್ಕಂಥ ರೀತಿಯಲ್ಲಿ ಈಗ ಅವರಲ್ಲಿ ಒಡಂಬಡಿಕೆ ಬಂದು ತೆಗೆದುಕೊಳ್ಳಬೇಕಾಗಿರುವಂಥದ್ದು. ಏಕೆಂದರೆ, ಅದು ಯಾವುದು ಕೂಡ contract ಆಗಿರುವುದಿಲ್ಲ. ಅದನ್ನು ತೆಗೆದುಕೊಂಡ ರೀತಿಯಲ್ಲಿ ಅವರು ಒಪ್ಪಂದ ಮಾಡಿಕೊಂಡು ಅದರಲ್ಲಿ ಯಾರು ಭೂಮಾಲೀಕ ಕೊಟ್ಟಿರುತ್ತಾನೆ, ಅವನಿಗೆ ಬರತಕ್ಕಂಥ ಹಣದಿಂದ ಮಾನವೀಯತೆಯ ದೃಷ್ಟಿಯಲ್ಲಿ ಇಬ್ಬರು ಕೂಡ ಅದನ್ನು ಹಂಚಿಕೊಳ್ಳಬೇಕಾಗಿರತಕ್ಕಂಥ ಪರಿಸ್ಥಿತಿಯನ್ನು ಮಾಡಬೇಕಾಗಿದೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಜಿಲ್ಲಾವಾರು ನಷ್ಟದ ಬಗ್ಗೆ ಹೇಳಬೇಕಾದರೆ, ಕೊಪ್ಪಳ ಜಿಲ್ಲೆಯಲ್ಲಿ ದಿನಾಂಕ 8 ರಿಂದ 16ನೇ ಏಪ್ರಿಲ್‌ವರೆಗೆ ಜಿಲ್ಲೆಯಲ್ಲಿ 6 ಮಿ.ಮೀ. ವಾಡಿಕೆ ಮಳೆಯಾಗಬೇಕಾಗಿದ್ದು, ಆದರೆ 35 ಮಿ.ಮೀ. ವಾಸ್ತವಿಕ ಮಳೆಯಾಗಿದೆ. ಈ ಅವಧಿಗೆ ಗಂಗಾವತಿ ಹಾಗೂ ಕೊಪ್ಪಳ ತಾಲ್ಲೂಕುಗಳಲ್ಲಿ ಅನಿರೀಕ್ಷಿತ ಆಲಿಕಲ್ಲು ಮಳೆಯಿಂದ ಕಟಾವು ಹಂತದಲ್ಲಿದ್ದ ಸುಮಾರು 27012 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆ ಹಾನಿ ಹಾಗೂ 260 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿ ವರದಿಯಾಗಿದೆ. ಈ ಮಳೆಯಿಂದ 26 ಜಾನುವಾರು ಹಾನಿ, 678 ಮನೆ ಹಾನಿಯಾಗಿರುತ್ತದೆ. ರಾಯಚೂರು ಜಿಲ್ಲೆ ದಿನಾಂಕ 8 ರಿಂದ 16ನೇ ಏಪ್ರಿಲ್‌ವರೆಗೆ ಜಿಲ್ಲೆಯಲ್ಲಿ 4 ಮಿ.ಮೀ ವಾಡಿಕೆ ಮಳೆಯಾಗಬೇಕಾಗಿದ್ದು, 26 ಮಿ.ಮೀ ವಾಸ್ತವಿಕ ಮಳೆಯಾಗಿದೆ. ಈ ಅವಧಿಗೆ ಸಿಂಧನೂರು, ಮಾನ್ವಿ, ರಾಯಚೂರು ಹಾಗೂ ದೇವದುರ್ಗ ತಾಲ್ಲೂಕುಗಳಲ್ಲಿ 17529 ಹೆಕ್ಟೇರ್ ಪ್ರದೇಶದಲ್ಲಿ ತೆನೆ ಹಂತ/ಕಟಾವು ಹಂತದಲ್ಲಿದ್ದ ಭತ್ತದ ಬೆಳೆ ಹಾನಿ ಹಾಗೂ 5.60 ಹೆಕ್ಟೇರ್ ತೋಟಗಾರಿಕೆ ಬೆಳೆಹಾನಿ ವರದಿಯಾಗಿದೆ. ಈ ಮಳೆಯಿಂದ 2 ಜೀವಹಾನಿ, 4 ಜಾನುವಾರು ಹಾನಿ, 34 ಮನೆ

ಹಾನಿಯಾಗಿರುತ್ತದೆ. ಕಲಬುರಗಿ ಜಿಲ್ಲೆಯಲ್ಲಿ ದಿನಾಂಕ 8 ರಿಂದ 16ನೇ ಏಪ್ರಿಲ್‌ವರೆಗೆ ಜಿಲ್ಲೆಯಲ್ಲಿ 6 ಮಿ.ಮೀ. ವಾಡಿಕೆ ಮಳೆಯಾಗಬೇಕಾಗಿದ್ದು, 65 ಮಿ.ಮೀ. ವಾಸ್ತವಿಕ ಮಳೆಯಾಗಿದೆ. ಜಿಲ್ಲೆಯಲ್ಲಿ ಜೇವರ್ಗಿ ತಾಲ್ಲೂಕಿನಲ್ಲಿ ಭತ್ತದ ಬೆಳೆ ಕಾಳು ಕಟ್ಟುವ ಹಂತದಿಂದ ಮಾಗುವ ಹಂತದಲ್ಲಿ 2610 ಹೆಕ್ಟೇರ್ ಬೆಳೆ ನಷ್ಟವಾಗಿರುತ್ತದೆ ಹಾಗೂ 310.75 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಈ ಮಳೆಯಿಂದ 3 ಜೀವ ಹಾನಿ, 31 ಜಾನುವಾರು ಹಾನಿಯಾಗಿರುತ್ತದೆ. ಅದೇ ರೀತಿ ಯಾದಗಿರಿ ಜಿಲ್ಲೆಯಲ್ಲಿ ದಿನಾಂಕ: 8 ರಿಂದ 16ನೇ ಏಪ್ರಿಲ್‌ವರೆಗೆ ಮಳೆಯಾಗಿದೆ. ಅದೇ ರೀತಿ ಬಳ್ಳಾರಿ ಜಿಲ್ಲೆಯಲ್ಲೂ ಆಗಿದೆ. ಇದರಿಂದ ಒಟ್ಟು ಆಗಿರುವಂಥದ್ದು ಸುಮಾರು 14 ಜೀವ ಹಾನಿ.

**(6–30 ಗಂಟೆ)**

1433.85 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಕೃಷಿ ಬೆಳೆ ನಷ್ಟ ಅಂದಾಜು ಮೊತ್ತ ಸುಮಾರು 350 ಕೋಟಿ ರೂಪಾಯಿಗಳು. ತೋಟಗಾರಿಕೆ ಬೆಳೆ 15 ಕೋಟಿ ರೂಪಾಯಿಗಳು. ಅದೇ ರೀತಿಯಲ್ಲಿ ಜೀವ ಹಾನಿಯ ಬಗ್ಗೆ ಜಿಲ್ಲಾಧಿಕಾರಿಗಳಿಂದ ಇವತ್ತು ವರದಿಯನ್ನು ತರಿಸಿಕೊಂಡಿದ್ದೇವೆ. ಈಗ NDRF/SDRF norms ಪ್ರಕಾರ ಇವತ್ತು ಅದು ಪರಿಷ್ಕೃತ ಆಗಿರುವುದನ್ನು ನಾವು ಕಾಣುತ್ತಿದ್ದೇವೆ. ಇದು ಬಹಳ ದಿನಗಳ ಬೇಡಿಕೆಯಾಗಿತ್ತು. ಇದನ್ನು ಈ ತಿಂಗಳು, ದಿನಾಂಕ: 1–4–2015 ರಿಂದ effect ಗೆ ಕೊಟ್ಟಿದ್ದಾರೆ. ಹೀಗಾಗಿ, ನಾವು ಕೂಡ ಇದರ ಬಗ್ಗೆ NDRF/SDRF norms ಪ್ರಕಾರ ಬಿಟ್ಟು ಕಳೆದ ಬಾರಿ ಆಲಿಕಲ್ ಮಳೆ ಆದಂತಹ ಸಂದರ್ಭದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ memorandum ಕೊಟ್ಟಾಗ NDRF norms ಪ್ರಕಾರ ನಮಗೆ ಕೊಟ್ಟಿದ್ದು ಕೇವಲ 82 ಕೋಟಿ ರೂಪಾಯಿಗಳು. ಆದರೆ, ನಮ್ಮ ರಾಜ್ಯ ಸರ್ಕಾರ ಅದನ್ನು ವಿಶೇಷ ಪ್ರಕರಣ ಎಂದು ಹೇಳಿ, ಅದು ಕಚ್ಚಾ ಮನೆಗಳು ಇರಬಹುದು, ಅಥವಾ ಬೇರೆ ಬೇರೆ ಕೃಷಿ ಬೆಳೆಗಳು ಇರಬಹುದು, ತೋಟಗಾರಿಕೆ ಬೆಳೆಗಳು ಹಾನಿಯಾಗಿರುವುದು ಇರಬಹುದು, ಇದೆಲ್ಲಕ್ಕೂ ಸಹ ನಾವು ಸಂಪೂರ್ಣವಾಗಿ ಪರಿಹಾರವನ್ನು ಕೊಟ್ಟಿದ್ದೇವೆ. 326 ಕೋಟಿ ರೂಪಾಯಿಗಳನ್ನು ಕೇಳಿದಾಗ ಕೇಂದ್ರ ಸರ್ಕಾರದಿಂದ ನಮಗೆ ಬಂದಿದ್ದು ಕೇವಲ 82 ಕೋಟಿ ರೂಪಾಯಿಗಳು. 5 ಬಾರಿ ನಾವು ಕೇಂದ್ರ ಸರ್ಕಾರಕ್ಕೆ memorandum ಕೊಟ್ಟಿದ್ದೇವೆ. ಇದು 6ನೆಯ ಬಾರಿಯ memorandum ಆಗಿದ್ದು, ಆಗಿರುವಂತಹ detailed estimated loss ನ ಬಗ್ಗೆ ವಿವರವಾಗಿ ಹೇಳಿ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ತಾವು ಮಾತನಾಡುವಾಗ ಎಲ್ಲಾ ಜಿಲ್ಲೆಗಳಿಗೂ ಸಹ ಸಚಿವರು ಹೋಗಬೇಕಾಗಿತ್ತು ಎಂದು ಹೇಳಿದಿರಿ. War footing ನಲ್ಲಿ ಕ್ರಮ ತೆಗದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಎಲ್ಲಾ ಜಿಲ್ಲಾಧಿಕಾರಿಗಳು ಸಹ ಮಳೆ ಬಂದ ತಕ್ಷಣವೇ ಪ್ರತಿಯೊಬ್ಬ ಅಧಿಕಾರಿಗಳಿಗೂ ಸಹ ತಿಳಿಸಿ,

ಸಮೀಕ್ಷೆಯನ್ನು ಮಾಡಿ, ಅಲ್ಲಿ ಆಗಿರುವಂತಹ ಹಾನಿಯ ಬಗ್ಗೆ, ಜೀವಹಾನಿ, ಜಾನುವಾರುಗಳ ಹಾನಿ, ಮನೆಗಳು ಬಿದ್ದಿರುವಂತಹದ್ದಕ್ಕೆಲ್ಲಾ ವ್ಯವಸ್ಥೆಗಳನ್ನು ಮಾಡಿರುತ್ತೇವೆ. ಎಲ್ಲೆಲ್ಲಿ shelter ಗಳು ಬಿದ್ದು, ಅವರುಗಳಿಗೆ ಹಾನಿಯಾಗಿದ್ದು, ಅವರುಗಳೆಲ್ಲರೂ ಹೊರಗಡೆ ಇದ್ದಂತಹ ಸಂದರ್ಭದಲ್ಲಿ ಅವರುಗಳೆಲ್ಲರಿಗೂ ರಕ್ಷಣೆ ಕೊಡುವಂತಹ ಕೆಲಸವನ್ನು ಜಿಲ್ಲಾಧಿಕಾರಿಗಳು ಮಾಡಿದ್ದಾರೆ. ಜೊತೆಗೆ ನಮ್ಮ ಇಲಾಖೆಯ ಕಾರ್ಯದರ್ಶಿಗಳು ಸೇರಿದಂತೆ ಎಲ್ಲಾ ಅಧಿಕಾರಿಗಳು ಅಲ್ಲಿಗೆ ಹೋಗಿ ಅಲ್ಲಿ ಏನಾಗಿದೆ ಎಂದು ಪರಿಶೀಲನೆ ಮಾಡಿದ್ದಾರೆ. ಅಲ್ಲಿಗೆ ಕೃಷಿ ಸಚಿವರು ಕೂಡ ಎಲ್ಲಾ ರೀತಿಯಿಂದಲೂ ಎಲ್ಲಾ ಸ್ಥಳಗಳಿಗೆ ಭೇಟಿ ಕೊಟ್ಟು, ರೈತರ ಕುಂದುಕೊರತೆಗಳನ್ನು ಮತ್ತು ಸ್ಥಳಗಳನ್ನು ಪರಿಶೀಲನೆ ಮಾಡಿದ್ದಾರೆ. ಎಲ್ಲಾ ಸಚಿವರುಗಳು ಅಂದರೆ ಯಾರ್‍ಯಾರು ಜಿಲ್ಲಾ ಉಸ್ತುವಾರಿ ಸಚಿವರು ಇದ್ದಾರೆ, ಅವರೆಲ್ಲರೂ ಸ್ಥಳ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರುಗಳಾದ ಶ್ರೀಯುತ ಶಿವರಾಜ ತಂಗಡಗಿಯವರು, ಡಾ॥ ಶರಣಪ್ರಕಾಶ್ ಪಾಟೀಲ್, ಶ್ರೀಮತಿ ಉಮಾಶ್ರೀಯವರು ಅಲ್ಲಿಗೆ ಹೋಗಿ ಸ್ಥಳ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಶ್ರೀಯುತ ಹೆಚ್.ಕೆ. ಪಾಟೀಲ್‌ರವರ ಜೊತೆ ಈ ಬಗ್ಗೆ ನಾನು ಮಾತನಾಡಿದೆ. ಸ್ವತ: ಮುಖ್ಯಮಂತ್ರಿಗಳು ಸಹ ಅಲ್ಲಿ ಹೋಗಿ ಬಂದಿದ್ದಾರೆ. ಅಲ್ಲಿ aerial survey ಕೂಡ ಮಾಡಿಕೊಂಡು ಬರಲಾಗಿದೆ. ಅದನ್ನು ಈಗ ಕ್ಯಾಬಿನೆಟ್‌ನಲ್ಲಿಟ್ಟು, ಸುಧೀರ್ಘವಾಗಿ ಚರ್ಚೆ ಮಾಡಿ ಇಷ್ಟೊಂದು ಕಷ್ಟಕ್ಕೆ ಒಳಗಾಗಿ, ಅನೀರೀಕ್ಷಿತವಾಗಿ ಮಳೆ ಬಂದಿರುವುದರಿಂದ ರೈತರ ಸಹಾಯಕ್ಕೆ ನಾವು ಹೋಗಬೇಕಾಗಿದೆ. ಇವತ್ತು NDRF/SDRF norms ಪ್ರಕಾರ ಕೇಂದ್ರ ಸರ್ಕಾರ ಹಣವನ್ನು ಕೊಡಲಿ. ನಾವು ಸಹ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ memorandum ಕೊಡುತ್ತಿದ್ದೇವೆ. Detailed memorandum ಸಿದ್ಧವಾಗಿದ್ದು, ಅದನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತಿದ್ದೇವೆ. Detailed estimate ಬರುತ್ತಿದೆ. ಬಂದ ಮೇಲೆ ಅವರು ಅಧ್ಯಯನ ಸಮಿತಿಯನ್ನು ಕಳುಹಿಸುತ್ತಾರೆ. ಬಂದ ಮೇಲೆ ಅದನ್ನು ನಂತರ ನೋಡೋಣ. ನಾವು ರಾಜ್ಯ ಸರ್ಕಾರದಿಂದ ಏನು ಪರಿಹಾರವನ್ನು ಕೊಡಬೇಕಾಗಿದೆ, ಅದನ್ನು ಕೊಡುತ್ತೇವೆ. ಅದಕ್ಕೋಸ್ಕರ ಕೇಂದ್ರ ಸರ್ಕಾರದ ಹಣಕ್ಕೋಸ್ಕರ ನಾವು ಕಾಯುವುದಿಲ್ಲ. ರಾಜ್ಯ ಸರ್ಕಾರದ ವತಿಯಿಂದ ಇವತ್ತು ಏನು ಮಂತ್ರಿಮಂಡಲದಲ್ಲಿ ಚರ್ಚೆ ಮಾಡಿದ್ದೇವೆ, ಮುಖ್ಯಮಂತ್ರಿಗಳೊಂದಿಗೆ ನಾವು ಮಾತನಾಡುತ್ತೇವೆ. NDRF norms ಪ್ರಕಾರ ಆಲಿಕಲ್ ಮಳೆ ಬಂದಂತಹ ಸಂದರ್ಭದಲ್ಲಿ ವಿಶೇಷ ಪ್ರಕರಣ ಎಂದು ಅದಕ್ಕೆ ಹೆಚ್ಚು ಒತ್ತು ಕೊಟ್ಟು, ತೋಟಗಾರಿಕೆ ಬೆಳೆ ಇರಲಿ, ಕೃಷಿ ಬೆಳೆ ಇರಲಿ, ಅದೆಲ್ಲಕ್ಕೂ ಸಹ ನಾವು ಸಂಪೂರ್ಣವಾಗಿ ಪರಿಹಾರ ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಈಗಾಗಲೇ ನಾವು ಸಮೀಕ್ಷೆ ಮಾಡಿಕೊಂಡು ಬಂದಿದ್ದೇವೆ. ಕೃಷಿ ಮತ್ತು ಕಂದಾಯ ಇಲಾಖೆಯವರು ಸಂಪೂರ್ಣವಾಗಿ ಸಮೀಕ್ಷೆ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಸಮೀಕ್ಷೆ ಮಾಡುವ ನಿಟ್ಟಿನಲ್ಲಿ ವಿಳಂಬ ಮಾಡಬೇಡಿ ಎಂದು

ಹಾನಿಯಾದಂತ ಸಂದರ್ಭದಲ್ಲಿಯೇ ತಾವು ಹೋಗಬೇಕೆಂದು ಜಿಲ್ಲಾಧಿಕಾರಿಗಳು, ತಹಶೀಲ್ದಾರ್‌ಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. 15 ದಿನಗಳು, ಒಂದು ತಿಂಗಳು ಆದರೂ ಸಹ ಈ ಒಂದು ಕೆಲಸ ಆಗುತ್ತಿಲ್ಲ.

ಮಾನ್ಯ ಸದಸ್ಯರುಗಳಿಗೆ ಕಳಕಳಿ ಇರುವಂತೆ ನಮಗೂ ಸಹ ಕಳಕಳಿ ಇದೆ. ರೈತರಿಗೆ ತೊಂದರೆಯಾಗಬಾರದು. ರೈತರ ಸ್ಥಿತಿಗತಿಗಳ ಬಗ್ಗೆ ಮಾನ್ಯ ಸದಸ್ಯರು ಬಿಡಿಸಿ ಹೇಳಿದ್ದಾರೆ. ರೈತರ ಪರಿಸ್ಥಿತಿ ನಮಗೆಲ್ಲರಿಗೂ ಗೊತ್ತಿರುವ ವಿಚಾರ. ರೈತ ಬೆಳೆಯನ್ನು ಬೆಳೆಯಬೇಕಾದರೆ, ಎಷ್ಟೊಂದು ಶ್ರಮ, ಎಷ್ಟೊಂದು ಪರಿಶ್ರಮ ಹಾಕುತ್ತಾನೆ, ಎಷ್ಟೊಂದು ಬೆಳೆಯನ್ನು ನಿರೀಕ್ಷೆ ಮಾಡುತ್ತಾನೆ ಎನ್ನುವುದು ನಮಗೆಲ್ಲರಿಗೂ ಗೊತ್ತಿರುವ ವಿಚಾರ. ರೈತ ಸಂಕಷ್ಟದಲ್ಲಿರುವಂತಹ ಸಮಯದಲ್ಲಿ ಮಾನವೀಯತೆಯ ದೃಷ್ಟಿಯಿಂದ ನಾವೆಲ್ಲರೂ ಸ್ಪಂದಿಸಬೇಕಾಗಿದೆ. ನಾವೆಲ್ಲರೂ ಕಣ್ಣಿನಲ್ಲಿ ಕಣ್ಣಿಟ್ಟು ಅವನಿಗೆ ಸಹಾಯ ಮಾಡಬೇಕಾಗಿರುವುದು, ಅವರು ಸಂಕಷ್ಟದಲ್ಲಿರುವಂತಹ ಸಮಯದಲ್ಲಿ ಈ ರೀತಿ ಅನಿರೀಕ್ಷಿತವಾಗಿ ಪ್ರಕೃತಿ ವಿಕೋಪಕ್ಕೆ ಹೋದಂತಹ ಸಮಯದಲ್ಲಿ ನಾವೆಲ್ಲರೂ ಸೇರಿ ಅವನ ಸಂಕಷ್ಟವನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ, ಅವನಿಗೆ ಸರಿಯಾದ ಪರಿಹಾರವನ್ನು ಕೊಡುವಲ್ಲಿ ಸರ್ಕಾರ ಎಲ್ಲಾ ರೀತಿಯಿಂದ ಪುನರ್ ವಸತಿ ನೀಡಿ, ಅವನಿಗೆ ಅನ್ಯಾಯವಾಗದ ರೀತಿಯಲ್ಲಿ ಅವನಿಗೆ ಸೂಕ್ತವಾದ ಪರಿಹಾರವನ್ನು ಕೊಡಲಿಕ್ಕೆ ಸರ್ಕಾರ ಸಿದ್ಧವಾಗಿದೆ. ಕಚ್ಚಾ ಮನೆಗಳು ಹೋಗಿರುವಂತಹದ್ದು ಇರಬಹುದು, ಕೃಷಿ ಬೆಳೆ ನಷ್ಟ ಇರಬಹುದು, ತೋಟಗಾರಿಕೆ ಬೆಳೆ ನಷ್ಟ ಇರಬಹುದು, ಮತ್ತೆ ಯಾವುದೇ ನಷ್ಟವಾಗಿದ್ದರೂ ಸಹ ಅದನ್ನು ಕೊಡುವ ನಿಟ್ಟಿನಲ್ಲಿ ಇವತ್ತು ಸಿದ್ಧತೆಗಳನ್ನು ಮಾಡಿದ್ದೇವೆ. ಅದೆಲ್ಲವೂ ಸಹ ಮಾಡಿರುವಂತಹ ಸಮೀಕ್ಷೆಯ ವರದಿಯಲ್ಲಿ ಬಂದಿದೆ. ಇವತ್ತು ಏನು ಮಾನ್ಯ ಸದಸ್ಯರುಗಳು ರೈತರ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತ ಮಾಡಿದ್ದೀರಿ, ಅದನ್ನು ಅನುಸರಿಸಿ, ರೈತರಿಗೆ ತೊಂದರೆಯಾಗದ ರೀತಿಯಲ್ಲಿ ರೈತನ ಸಂಕಷ್ಟವನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಪ್ರಮಾಣಿಕವಾದ ಪ್ರಯತ್ನವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ತಮಗೆ ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಬೆಳಗಾವಿ ಜಿಲ್ಲೆಯಲ್ಲೂ ಸಹ ಬಹಳ ದೊಡ್ಡ ಅನಾಹುತವಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ದೇವರ ಮೇಲೆ ಆಣೆ ಮಾಡಿ ಹೇಳುತ್ತೇನೆ, ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಕೊನೆಯ ಉತ್ತರವನ್ನು ಓದಿ ನೋಡಿ. "ದಿನಾಂಕ: 8–4–2015 ರಿಂದ ಜಾರಿಗೆ ತಂದಿರುವ ಪರಿಷ್ಕೃತ SDRF/NDRF ಮಾರ್ಗ ಸೂಚಿ ಪ್ರಕಾರ ಪರಿಹಾರ ನೀಡಲಾಗುವುದು. ದಿನಾಂಕ: 17–04–2015 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸದರಿ ಹಾನಿಗೆ ಸಂಬಂಧಪಟ್ಟಂತೆ ಪರಿಹಾರಕ್ಕೆ ಅನುದಾನ ಕೋರಿ ಕೇಂದ್ರ ಸರ್ಕಾರಕ್ಕೆ memorandum ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ memorandum ತಯಾರಿಸುವ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರವಾಗಿ ಅತಿವೃಷ್ಟಿ ಹಾನಿ ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ memorandum ಸಲ್ಲಿಸಲಾಗುವುದು."

**(ಗೊಂದಲ)**

ಇದನ್ನು writing ನಲ್ಲಿ ಕೊಡುವುದಕ್ಕೆ ಗಂಟು ಹೋಗುತ್ತದೆಯೇ? ನಾನು ಇಲ್ಲಿ clarifications ಕೇಳುತ್ತಿದ್ದೇನೆ. ಈ ಒಂದು ಉತ್ತರವನ್ನು ತೆಗೆದುಕೊಳ್ಳುವುದಕ್ಕೋಸ್ಕರ ಬೆಳಿಗ್ಗೆಯಿಂದ ಸಂಜೆಯವರೆಗೆ ಕಾದು ಕುಳಿತುಕೊಳ್ಳಬೇಕೇ? ಸಂಕಷ್ಟದಲ್ಲಿರುವ ರೈತನಿಗೆ ತಕ್ಷಣವೇ ಪರಿಹಾರವನ್ನು ಕೊಡುತ್ತೇವೆಂದು ತಮ್ಮ ಉತ್ತರದಲ್ಲಿ announce ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಇಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ನಾವು ಇಷ್ಟು ಉತ್ತರ ತೆಗೆದುಕೊಳ್ಳುವುದಕ್ಕೆ ಎಲ್ಲರೂ ಅಂದರೆ, ವಿರೋಧ ಪಕ್ಷದವರನ್ನು ಆಡಳಿತ ಪಕ್ಷದವರು ನಿಮ್ಮ ಹತ್ತಿರ ಗಂಟಲು ಹರಿದುಕೊಂಡು ಕೇಳಬೇಕೇ? ಇದು ಏನು ಪರಿಸ್ಥಿತಿ? ಹೌದಪ್ಪಾ, ಮನೆಗಳು ಬಿದ್ದು ಹೋಗಿದೆ, ಇದಕ್ಕೋಸ್ಕರ ವಿಶೇಷವಾಗಿ ರಾಜ್ಯ ಸರ್ಕಾರದಿಂದ ಪರಿಹಾರವಾಗಿ ಇಷ್ಟು ಹಣವನ್ನು ಕೊಡುತ್ತೇವೆ, ಇಷ್ಟು ಬೆಳೆ ಹಾಳಾಗಿ ಹೋಗಿದೆ. ಇಷ್ಟು ತೋಟಗಾರಿಕೆ ಬೆಳೆ ಹಾಳಾಗಿ ಹೋಗಿದ್ದು, ಇದಕ್ಕೆ ಪರಿಹಾರವನ್ನು ಕೊಡುತ್ತೇವೆಂದು ಹೇಳುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಇನ್ನು ತೋಟಗಾರಿಕೆ ಮಂತ್ರಿಗಳ ಉತ್ತರ ಏನು ಅಂದರೆ "ಸುದ್ದಿಗಾರರ ಪ್ರಶ್ನೆಗೆ ಶಾಮನೂರು ಶಿವಶಂಕರಪ್ಪನವರ ಉತ್ತರ" 'ಬೆಳೆ ಹಾನಿ, ಪರಿಹಾರದ ದುಡ್ಡು ಉದುರುತ್ತದೆಯೇ' ತಾವುಗಳು ಈ ವಿಚಾರವನ್ನು ಕೇಳಿ. ನಾಚಿಕೆ ಮಾನ–ಮರ್ಯಾದೆ ಇದ್ದ ಸರ್ಕಾರಕ್ಕೆ shame ಅನ್ನಬಹುದು. ದಯವಿಟ್ಟು ಈ ವಿಚಾರವನ್ನು ಕೇಳಿ.

**(ಗೊಂದಲ)**

ಅವರು ಏನು ಹೇಳಿದ್ದಾರೆಂದು ಪೂರ್ಣವಾಗಿ ಕೇಳಿ. ರೈತರಿಗೆ ಎಷ್ಟು ಹಾನಿಯಾಗಿದೆ, ಎಷ್ಟು ಮೊತ್ತದ ಪರಿಹಾರವನ್ನು ಕೇಳುತ್ತಿದ್ದಾರೆ, ಎಂದು ನನಗೆ ಎಲ್ಲಾ ವಿಷಯವೂ ನನಗೆ ಗೊತ್ತು. ಎಲ್ಲರೂ ಕೇಳಿದ ತಕ್ಷಣ ಪರಿಹಾರ ಕೊಡಲು ದುಡ್ಡು ಏನಾದರೂ ಮೇಲಿಂದ ಉದುರುತ್ತದೆಯೇ? ಅಥವಾ ನನ್ನ ಮನೆಯಿಂದ ಏನಾದರೂ ತಂದು ಕೊಡಬೇಕಾ, ಎಂದು ಹೇಳುತ್ತಾರೆ. ಈ ವಿಚಾರವಾಗಿ ಸಮಜಾಯಿಷಿ ಮಾಡಿಕೊಂಡು ಹೋಗುತ್ತೇವೆಂದರೆ ಮಾಡಿಕೊಳ್ಳಿ. ಅವರು ಏನು ಉತ್ತರವನ್ನು ಕೊಟ್ಟಿದ್ದಾರೆ, ಅದನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಸರ್ಕಾರದ ವತಿಯಿಂದ ಇದನ್ನು ಸರಿಯಾಗಿ ಉತ್ತರ ಕೊಟ್ಟಿದ್ದಾರೆಂದರೆ ಹೇಳಿದರೆ ನಮ್ಮದೇನೂ ಅಭ್ಯಂತರ ಇಲ್ಲ.

**(ಗೊಂದಲ)**

ಇದು ತೋಟಗಾರಿಕೆ ಮಂತ್ರಿಗಳ ಉತ್ತರ. ಇದು ಸರ್ಕಾರದ ಉತ್ತರ ಅಲ್ಲವೆಂದರೆ, ಇವತ್ತು ಸರ್ಕಾರದ ಮಂತ್ರಿಗಳಿಂದ ರಾಜೀನಾಮೆ ತೆಗೆದುಕೊಳ್ಳಿ.

**(ಗೊಂದಲ)**

ಹೊಸ ದಿಗಂತ ಪತ್ರಿಕೆಯಲ್ಲಿ ವಿಚಾರ ಬಂದರೆ ಏನಾಗುತ್ತದೆ? ನೀವು ವಿಷಯವನ್ನು divert ಮಾಡಬೇಡಿ. ನಮಗೂ ಕೂಡ ಆ ರೈತರ ಬಗ್ಗೆ ಕಳಕಳಿ ಇದೆ. ಈ ವಿಚಾರದಲ್ಲಿ ನಾವು ದಯವಿಟ್ಟು ರಾಜಕಾರಣ ಮಾಡಲಿಕ್ಕೆ ಹೋಗುವುದು ಬೇಡ. ಒಬ್ಬ ಜವಾಬ್ದಾರಿಯುತ ಮಂತ್ರಿ ಈ ರೀತಿ ಹೇಳುತ್ತಾರೆಯೇ? ಇವರಿಗೇನಾದರೂ ಹುಚ್ಚು ಹಿಡಿದಿದೆಯೇ?

**ಶ್ರೀ ಬಿ. ರಮಾನಾಥ ರೈ:–** ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಸುಧೀರ್ಘವಾಗಿ ಚರ್ಚೆ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳು ಸ್ವಯಂ ಪ್ರೇರಿತರಾಗಿ ವೈಮಾನಿಕ ಸಮೀಕ್ಷೆಯನ್ನು ಮಾಡಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನಮಗೆ ಮಾತನಾಡುವುದಕ್ಕೂ ಬಿಡುವುದಿಲ್ಲವೆಂದರೆ ಸರಿಯಾಗುವುದಿಲ್ಲ. ನಾವು ಹೇಳುವುದನ್ನು ಸ್ವಲ್ಪ ಕೇಳಿ. ಅವರಿಗೆ ಕೂರುವುದಕ್ಕೆ ಹೇಳಿ. ಇದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:–** ಅವರು ಏನು ಹೇಳುತ್ತಾರೋ ಹೇಳಲಿ.

**ಶ್ರೀ ಬಿ. ರಮಾನಾಥ ರೈ:–** 17ನೇ ತಾರೀಖು ಸಚಿವ ಸಂಪುಟ ಸಭೆಯಲ್ಲಿ ಈ ವಿಚಾರವಾಗಿ ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸ್ವಯಂ ಪ್ರೇರಿತರಾಗಿ ವೈಮಾನಿಕ ಸಮೀಕ್ಷೆಯನ್ನು ಮಾಡಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ತಮಗೆ ಕೈ ಮುಗಿಯುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ. ರಮಾನಾಥ ರೈ:–** ನಾನೂ ಕೂಡ ಕೈಮುಗಿಯುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾನು ಹೇಳುವುದನ್ನು ಸ್ವಲ್ಪ ಕೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರು ನಾನು ಹೇಳುವುದನ್ನು ಪೂರಾ ಕೇಳಬೇಕಲ್ಲವೇ? ಆಮೇಲೆ ಉತ್ತರವನ್ನು ಕೊಡಲಿ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:–** ನಾನು ಉತ್ತರವನ್ನು ಕೊಡುತ್ತೇನೆ ದಯವಿಟ್ಟು ಕುಳಿತುಕೊಳ್ಳಿ. ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಸರಿಯಾಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಇನ್ನೂ ಪೂರ್ತಿಯಾಗಿ ಹೇಳಿಲ್ಲ. ಪೂರ್ತಿಯಾಗಿ ಕೇಳಿ. ನನ್ನ ಕ್ಲ್ಯಾರಿಫಿಕೇಷನ್ನಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಸರಿಯಲ್ಲ. ಈ ಸದನದಲ್ಲಿ ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ವ್ಯವಸ್ಥೆ ಇದೆ ತಾನೇ? ನೀವು ಆಮೇಲೆ ಉತ್ತರವನ್ನು ಕೊಡಿ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಚಿವರು ಹೇಳುವ ಉತ್ತರವನ್ನು ಕೇಳುವುದಕ್ಕೆ ನೀವು ತಯಾರಿಲ್ಲವಲ್ಲಾ?

**(ಗೊಂದಲ)**

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಮುಖ್ಯಮಂತ್ರಿಗಳು ಸಮೀಕ್ಷೆಯನ್ನು ಮಾಡಿ. . . .

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾವು ಏನಾದರೂ ಕೇಳುವುದಕ್ಕೆ ಹೋದರೆ ಒಳ್ಳೆ ಅನೆ ಕೂಗಿದ ಹಾಗೆ ಕೂಗುತ್ತಾರೆ. ನಾವು ಹೇಳುವುದನ್ನು ಹೇಳುವುದಕ್ಕೆ ಬಿಡುವುದಿಲ್ಲ. ಸಂಬಂಧಿಸಿದ ಸಚಿವರಿಗೆ ಉತ್ತರ ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನೀವೇ ಹೇಳಿ.

**(ಗೊಂದಲ)**

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಮಾನ್ಯ . . . . .

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದು ನಿಮ್ಮಂತಹ ಪ್ರಾಣಿ ಅಲ್ಲ. ಆನೆ ನಿಮ್ಮಷ್ಟು ತೊಂದರೆ ಕೊಡುವುದಿಲ್ಲ. ಕಡೇ ಪಕ್ಷ ಸಂಬಂಧಪಟ್ಟ ಸಚಿವರು ಹೇಳುವುದಕ್ಕಾದರೂ ಬಿಡಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕಂದಾಯ ಸಚಿವರು ಹೇಳುತ್ತಾರೆ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:–** ಈಗ ನೀವು ಏನೂ ಪರಿಹಾರವನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಲ್ಲಾ ಅದು ಸರಿಯಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಹಾಗಾದರೆ ಇದು ಯಾರ ಉತ್ತರ? ಮೊದಲು ಇದಕ್ಕೆ ಉತ್ತರವನ್ನು ಕೊಡಿ. ಅದು ಸರ್ಕಾರದ ಉತ್ತರವಲ್ಲವೆಂದು ಹೇಳಿದರೆ ಅವರಿಂದ ರಾಜೀನಾಮೆಯನ್ನು ತೆಗೆದುಕೊಳ್ಳಲಿ.

**(ಗೊಂದಲ)**

**ಶ್ರೀ ವಿ. ಶ್ರೀನಿವಾಸ ಪ್ರಸಾದ್:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಎಸ್.ಡಿ.ಆರ್.ಎಫ್ / ಎನ್.ಡಿ.ಆರ್.ಎಫ್. ಪ್ರಕಾರ ನಾವು ಇದನ್ನು ಕೊಡಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಆದರೆ ಅದಾದ ಮೇಲೂ ಕೂಡ ಎಸ್.ಡಿ.ಆರ್.ಎಫ್ / ಎನ್.ಡಿ.ಆರ್.ಎಫ್. ಪ್ರಕಾರ ಆಲಿಕಲ್ಲಿನ ಮಳೆಗೆ ಏನು ಪರಿಹಾರವನ್ನು ಕೊಟ್ಟಿದ್ದೇವೆ ಎಂಬುದು ತಮಗೆ ಗೊತ್ತಿದೆ. ಅದೇ ರೀತಿಯಲ್ಲಿ ಈಗ ಮಂತ್ರಿ ಮಂಡಲದಲ್ಲಿ ಚರ್ಚೆಯಾಗಿದೆ. ಎಸ್.ಡಿ.ಆರ್.ಎಫ್ / ಎನ್.ಡಿ.ಆರ್.ಎಫ್. ಪ್ರಕಾರ ಈಗ

ಜಿಲ್ಲಾಧಿಕಾರಿಗಳ ಪಿ.ಡಿ. ಅಕೌಂಟಿನಲ್ಲಿ ಏನು ಹಣ ಇದೆ ಅದರಲ್ಲಿನ ಹಣದಿಂದ ಎಲ್ಲಿ ಜೀವ ಹಾನಿ, ಜಾನುವಾರುಗಳ ಹಾನಿಯಾಗಿದೆ ಎಲ್ಲಿ ಮನೆಗಳು ಹೋಗಿವೆ ಇದಕ್ಕೆಲ್ಲಾ ತಕ್ಷಣದಲ್ಲಿಯೇ ಸಾಕಷ್ಟು ಹಣದ ಪರಿಹಾರವನ್ನು ಕೊಟ್ಟಿದ್ದೇವೆ. ಪಿ.ಡಿ. ಅಕೌಂಟಿನಿಂದ ಕೊಡುತ್ತಿದ್ದೇವೆ. ನಾವು ಈ ಬಗ್ಗೆ ಈಗಾಗಲೇ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಈ ಸಮೀಕ್ಷಾ ವರದಿ ಬಂದ ನಂತರ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ವಿಶೇಷವಾದ ಪ್ಯಾಕೇಜ್ ಅನ್ನು ನೀಡಬೇಕೆಂಬ ರೀತಿಯಲ್ಲಿ ತೀರ್ಮಾನವಾಗಿದೆ. ಸಮೀಕ್ಷಾ ವರದಿ ಇನ್ನು ಬಂದಿಲ್ಲ. ಅದು ಏನು ಬರುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ಎಸ್.ಡಿ.ಆರ್.ಎಫ್ / ಎನ್.ಡಿ.ಆರ್.ಎಫ್. ಪ್ರಕಾರ ಪರಿಹಾರ ನೀಡಲಾಗುವುದು. ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಪ್ಯಾಕೇಜಿನಲ್ಲಿ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ಹೇಳಿ ಮುಗಿಸಲಿ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ವಿರೋಧ ಪಕ್ಷದ ನಾಯಕರು ಪತ್ರಿಕೆಯಲ್ಲಿ ಬಂದಂತಹ ಸುದ್ದಿಯ ಬಗ್ಗೆ ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಪ್ಯಾಕೇಜಿನಲ್ಲಿ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ ಎಂದು ಮಾನ್ಯ ಕಂದಾಯ ಸಚಿವರು ಹೇಳುತ್ತಿದ್ದಾರಲ್ಲಾ ಅದಕ್ಕೇನು ಹೇಳುತ್ತೀರಿ? ಅದರ ಬಗ್ಗೆ ಏಕೆ ಮಾತನಾಡುವುದಿಲ್ಲ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಚಿವರು ಉತ್ತರ ಹೇಳುತ್ತಿದ್ದಾರೆ ತಾವು ಕುಳಿತುಕೊಳ್ಳಿ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:–** ಆಲಿಕಲ್ಲು ಮಳೆ ಆದರೆ ಈ ಪರಿಸ್ಥಿತಿಯನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ವಿಶೇಷವಾದ ಪ್ಯಾಕೇಜ್ ಅನ್ನು ನಾವು ಕೊಡುತ್ತಿದ್ದೇವೆ. ಈ ಸಾಲಿನಲ್ಲಿ ಕೂಡ ಸ್ವತ: ಮಾನ್ಯ ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆಯನ್ನು ಮಾಡಿದ್ದು ಮಂತ್ರಿಮಂಡಲದಲ್ಲಿ ಚರ್ಚೆಯಾಗಿ ತೀರ್ಮಾನವಾಗಿದೆ. ಎಸ್.ಡಿ.ಆರ್.ಎಫ್ / ಎನ್.ಡಿ.ಆರ್.ಎಫ್. ಪ್ರಕಾರ ಪರಿಹಾರ ನೀಡಲಾಗುವುದು. ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಪ್ಯಾಕೇಜಿನಲ್ಲಿ ಹೆಚ್ಚು ಹಣದ ಪರಿಹಾರವನ್ನು ಈ ರೈತರಿಗೆ ಕೊಡುತ್ತೇವೆಂದು ಹೇಳಿದ್ದಾರೆ.

**(ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಏನು ಮೇಜು ಕುಟ್ಟಿ ಸ್ವಾಗತಿಸುತ್ತೀರಿ? ಎಂಟಾಣೆ ಪರಿಹಾರ ಕೊಟ್ಟಿಲ್ಲ. ಇವರುಗಳು ಇಲ್ಲಿ ಮೇಜು ಕುಟ್ಟಿ ಸ್ವಾಗತಿಸುತ್ತಿದ್ದಾರೆ. ಈಗ ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದಾರೆ. ಸಂತೋಷ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನನಗೆ ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೀರೋ ಇಲ್ಲವೋ? ದಯವಿಟ್ಟು ತಾವು ತಮ್ಮ ಉತ್ತರದಲ್ಲಿ ಏನು ಕೊಟ್ಟಿದ್ದೀರಿ ಅದನ್ನು ನೋಡಿ. ಈ ರೀತಿ ಮಧ್ಯೆ ಪ್ರವೇಶ ಮಾಡುತ್ತಿದ್ದರೆ ಹೇಗೆ ನಾನು ಮಾತನಾಡಲಿ.

**ಸಭಾಪತಿಯವರು:–** ಮಾತನಾಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಹೇಳುವುದು . . . .

**ಸಭಾಪತಿಯವರು:–** ಮಾತನಾಡಿ. ಅವರು ಮಾತನಾಡುತ್ತಾರೆ ತಾವು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಇವರು ಸಮೀಕ್ಷಾ ವರದಿಯನ್ನು ಕಳುಹಿಸಿಲ್ಲ. ಎಷ್ಟು ಹಣ ಬೇಕು ಎಂದು ಮೆಮೊರ್ಯಾಂಡಮ್ ಅನ್ನು ಕಳುಹಿಸಿಲ್ಲ. ಇಲ್ಲಿ ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆ ದಯವಿಟ್ಟು ನೋಡಿ.

**(ಗೊಂದಲ)**

**ಡಾ: ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮೆಮೊರ್ಯಾಂಡಮ್ ಅನ್ನು ಕಳುಹಿಸಿಲ್ಲವೆಂದು . . . . .

**ಶ್ರೀ ಕೆ.ಎಸ್. ಈಶ್ವರಪ್ಪ:–** ದಯವಿಟ್ಟು ಕುಳಿತುಕೊಳ್ಳಿ. ತಾವು ನಂತರ ಹೇಳುವಿರಂತೆ ಆಯಿತು ಕುಳಿತುಕೊಳ್ಳಿ. ಆಯಿತಪ್ಪಾ ನೀನು ಭಾರಿ ದೊಡ್ಡ ಮನುಷ್ಯ ಕುಳಿತುಕೊ. . . . .

**ಡಾ: ವೀರಣ್ಣ ಮತ್ತಿಕಟ್ಟಿ:–** ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಹೇಳುವುದು ಸರಿಯಲ್ಲ. ನಾನು ಅವರಿಗೆ individual ಆಗಿ ಏನಾದರೂ ಅಂದಿದ್ದೀನಾ? What do you mean? ಮಾನ್ಯ ಶಾಣಪ್ಪನವರೆ ನೀವು ಅವರಿಗೆ ಸ್ವಲ್ಪ ಹೇಳಿ. ನಾಲಿಗೆ ಇದೆ ಎಂದು ಏನಾದರೂ ಮಾತನಾಡಬಹುದಾ?

**ಶ್ರೀ ಕೆ.ಎಸ್. ಈಶ್ವರಪ್ಪ:–** ದಿನಾಂಕ: 17–4–2015 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಸದರಿ ಹಾನಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಮೆಮೊರ್ಯಾಂಡಮ್ ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ ಎಂದು ಮಾನ್ಯ ಕಂದಾಯ ಸಚಿವರು ತಮ್ಮ ಉತ್ತರದಲ್ಲಿ ನೀಡಿದ್ದಾರೆ. ಸಂತೋಷ. ನೀವು ಎಲ್ಲಾ ಜಿಲ್ಲೆಯಲ್ಲೂ ಕೂಡ ಎಷ್ಟೆಷ್ಟು ನಷ್ಟವಾಗಿದೆ ಎಂದು ಮೆನ್ಷನ್ ಮಾಡಿದ್ದೀರಿ.

ಇದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ನಾನು ಹೇಳುತ್ತಿರುವುದು ಬೇರೆ. ಈಗ ಇಷ್ಟಿಷ್ಟು ಬೆಳೆ ನಷ್ಟವಾಗಿದೆ, ಇಷ್ಟು ಮನೆಗಳು ಬಿದ್ದು ಹೋಗಿವೆ, ಇಷ್ಟು ಜಾನುವಾರು ಸತ್ತು ಹೋಗಿವೆ. ಇದೆಲ್ಲವೂ ನಿಮ್ಮ ಸಮೀಕ್ಷೆಯಲ್ಲಿ ಇದೆ. ಇದಕ್ಕೆ ವಿಶೇಷ ಪ್ಯಾಕೇಜ್ ಅನ್ನು ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಖಂಡಿತವಾಗಿ ಇದಕ್ಕೆ ವಿಶೇಷ ಪ್ಯಾಕೇಜ್ ಅನ್ನು ಕೊಡಬೇಕು. ಇದು ನಮ್ಮ ಆಗ್ರಹವಾಗಿದೆ. ಆದರೆ ತುರ್ತು ಪರಿಹಾರವನ್ನು ಕೊಡಬೇಕಲ್ಲವೇ? ಸತ್ತು ಹೋಗಿರುವವರಿಗೆ ಕೂಡಲೇ ಪರಿಹಾರವನ್ನು ಕೊಡಬೇಕಲ್ಲವೇ? ಮಾನ್ಯ ಕೃಷ್ಣಾ ಭೈರೇಗೌಡರವರು ಅಲ್ಲಿಗೆ ಹೋಗಿ ಬಂದಿದ್ದಾರೆ ಅವರನ್ನು ಕೇಳಿ. ನೀವು ಹೋಗಿ ನೋಡಿಕೊಂಡು ಬಂದಿದ್ದೀರಿ. ನಾಳೆ ವಿಶೇಷ ಪ್ಯಾಕೇಜಿನ ಅಡಿಯಲ್ಲಿ ಎಷ್ಟು ಪರಿಹಾರವನ್ನು ಕೊಡುತ್ತೀರೋ ಕೊಡಿ. ನಾನು ಈ ಸಭೆಯಲ್ಲಿ ಹೇಳಬಯಸುತ್ತೇನೆ. ಮಾನ್ಯ ಉಗ್ರಪ್ಪನವರೆ, ಕೇಂದ್ರ ಸರ್ಕಾರದಲ್ಲಿ ಪರಿಹಾರಕ್ಕಾಗಿ ವಿನಂತಿ ಮಾಡೋಣ. ನಾನು ನಿಮ್ಮ ಜೊತೆಯಲ್ಲಿ ಬರುತ್ತೇನೆ. ಈ ಆಲಿಕಲ್ಲಿನ ಮಳೆಯಿಂದಾಗಿರುವ ಅನಾಹುತಕ್ಕೆ ರಾಜ್ಯ ಸರ್ಕಾರ ವಿಶೇಷ ಪ್ಯಾಕೇಜಿನ ಅಡಿಯಲ್ಲಿ ಪರಿಹಾರವನ್ನು ಕೊಡುತ್ತಿದ್ದಾರೆ. ಅದೇ ಮಾದರಿಯಲ್ಲಿ ನೀವೂ ಕೂಡ ಅವರಿಗೆ ಸೂಕ್ತ ಪರಿಹಾರವನ್ನು ಕೊಡಿ ಎಂದು ಕೇಳುತ್ತೇವೆ. ನಾವು ಇಲ್ಲಿ ರಾಜಕಾರಣ ಮಾಡುವುದಕ್ಕೆ ಬಂದು ಕುಳಿತಿಲ್ಲ. ಇವತ್ತು ನೀವಾಗಲೀ ಮಾನ್ಯ ಮುಖ್ಯಮಂತ್ರಿಗಳಾಗಲೀ ಇಲ್ಲಿಗೆ ಬಂದು ಇಷ್ಟೊಂದು ಲಕ್ಷಾಂತರ ಕೃಷಿ ಬೆಳೆಗೆ, ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ. ಜೀವಹಾನಿಯಾಗಿದೆ. ಜನ ಮತ್ತು ಜಾನುವಾರುಗಳಿಗೆ ಹಾನಿಯಾಗಿದೆ. ನೀವು ರಾಜ್ಯ ಸರ್ಕಾರದ ವತಿಯಿಂದ ಸ್ವಲ್ಪ ತಾತ್ಕಾಲಿಕವಾಗಿ ರೂ. 5,000, ರೂ. 10,000 ಕೊಡುತ್ತೀರೋ ರೂ. 20,000 ಕೊಡುತ್ತೀರೋ ಅದನ್ನು ಹೇಳಿ ನಾವು ಇಷ್ಟು ಹಣವನ್ನು ತಾತ್ಕಾಲಿಕವಾಗಿ ಕೊಡುತ್ತಿದ್ದೇವೆ ಖಂಡಿತವಾಗಿ ನೀವು ಉಪವಾಸ ಸಾಯಬೇಡಿ ಗಂಜಿ ಕುಡಿಯಿರಿ ಎಂದು ಹೇಳುತ್ತಾರೆ ಎಂದು ನಾನು ಅಂದುಕೊಂಡಿದ್ದೆನು. ಅದನ್ನು ಬಿಟ್ಟು ನಾವು ಕೇಂದ್ರ ಸರ್ಕಾರಕ್ಕೆ ಮೆಮೊರ್ಯಾಂಡಮ್ ಅನ್ನು ಕೊಡುತ್ತೇವೆಂದು ಇವರೇ ಹೇಳಬೇಕೇನು? ಅವರಿಗೆ ಹೇಳುವುದು ಬೇಡವೆಂದು ನಾನು ಹೇಳುತ್ತಿಲ್ಲ. ಇವತ್ತಿನ ಇಲ್ಲಿನ ಸಮಸ್ಯೆಯ ಬಗ್ಗೆ ರಾಜ್ಯ ಸರ್ಕಾರ ತುರ್ತಾಗಿ ಇಷ್ಟು ಕೊಡುತ್ತಿದ್ದೇವೆ. ಮನೆ ಬಿದ್ದಿರುವವರಿಗೆ ಇಂತಿಷ್ಟು ಕೊಡುತ್ತಿದ್ದೇವೆ ಎಂದು ಹೇಳಬೇಕಾಗಿತ್ತು. ನಾನು ಕೂಡ ನೋಡಿಕೊಂಡು ಬಂದಿದ್ದೇನೆ. ಖಂಡಿತವಾಗಿ ನೀವು ಹೋಗಿ ನೋಡಿಕೊಂಡು ಬಂದಿದ್ದೀರಿ. ಕೊಟ್ಟಿದ್ದೀರಿ ಕೊಟ್ಟಿಲ್ಲವೆಂದು ಹೇಳುವುದಿಲ್ಲ. ದಯವಿಟ್ಟು ನಾನು ಹೇಳುವುದನ್ನು ಅರ್ಥ ಮಾಡಿಕೊಳ್ಳಿ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಮುಖ್ಯಮಂತ್ರಿಗಳು ಸಮೀಕ್ಷೆಯನ್ನು ಮಾಡಿದ್ದಾರೆ. . . .

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನಿಮ್ಮ ಊರಿಗೂ ಆನೆ ಬರುತ್ತದೆ ಸ್ವಲ್ಪ ತಡೆದುಕೊಳ್ಳಿ. ಸ್ವಲ್ಪ ಕುಳಿತುಕೊಳ್ಳಿ. ಇವರಿಗೆ ಏನು ಆಗಿದೆ. ಈ ರೀತಿ ಮಾತನಾಡುತ್ತಿದ್ದಾರೆ? ಆನೆ ಬಹಳ ಒಳ್ಳೆಯ ಪ್ರಾಣಿ

**ಸಭಾಪತಿಯವರು:–** ಮಾನ್ಯ ರಮಾನಾಥ ರೈ ಅವರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಆನೆ ಒಳ್ಳೆಯ ಪ್ರಾಣಿ ಆ ಆನೆ ಕಾಡಿನಿಂದ ಬರುವುದು. ಈ ಆನೆ ಊರಿನಿಂದ ಬಂದಿರುವುದು. ಅದು ಕಾಡಾನೆ. ಇದು ಊರಾನೆ.

**(ಗೊಂದಲ)**

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ.

**ಶ್ರೀ ಬಿ. ರಮಾನಾಥ ರೈ:–** ಆನೆ ಬಹಳ ಗಂಭೀರವಾದ ಮತ್ತು ಒಳ್ಳೆಯ ಪ್ರಾಣಿ. ಏಕೆ ಅದಕ್ಕೆ ಅಪಮಾನ ಮಾಡುತ್ತೀರಿ?

**ಶ್ರೀ ಮರಿತಿಬ್ಬೇಗೌಡ:–** ಏಕೋ ಮಾನ್ಯ ಅರಣ್ಯ ಸಚಿವರು ಇಂದು ಬಹಳ ರೋಧನ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಸಾಕು ಆ ವಿಷಯ ಈಗ ಬೇಡ ಸಾಕು ಕುಳಿತುಕೊಳ್ಳಿ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:–** ಮೆಮೊರ್‍ಯಾಂಡಮ್ ತಯಾರಾಗುತ್ತಿದೆ. ಪೂರ್ಣ ಸಮೀಕ್ಷಾ ವರದಿ ತೆಗೆದುಕೊಂಡು ವಿವರವಾದ ಅಂದಾಜನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಮೆಮೊರ್‍ಯಾಂಡಮ್ ಅನ್ನು ಕೊಡುತ್ತಿದ್ದೇವೆ. ನಂತರ ಅವರು ಅದನ್ನು ಅಧ್ಯಯನ ಸಮಿತಿಗೆ ಕಳಿಸಿ ಮಾಡುವಂತಾದ್ದು ಇದೆ. ಈಗ ಜಿಲ್ಲಾಧಿಕಾರಿಗಳು ಪಿ.ಡಿ. ಅಕೌಂಟಿನಿಂದ ಯಾವುದಕ್ಕೆ ಯಾವ ರೀತಿ ಹಣವನ್ನು ಕೊಡಬೇಕೋ ಅದಕ್ಕೆ ಹಣವನ್ನು ಕೊಟ್ಟಿದ್ದಾರೆ. ಜೀವಹಾನಿ, ಜಾನುವಾರುಗಳ ಹಾನಿ, ಮನೆಗಳು ಬಿದ್ದಿರುವುದಕ್ಕೆ ಹಣವನ್ನು ಕೊಟ್ಟಿದ್ದಾರೆ. ಈಗ ರೈತರು ಬೆಳೆ ನಷ್ಟವನ್ನು ಅನುಭವಿಸುತ್ತಿದ್ದಾರೆ ಸಂಕಷ್ಟದಲ್ಲಿ ಇದ್ದಾರೆ ಅವರಿಗೆ, ಈ ಬೆಳೆ ಹಾನಿಗೆ ಏನಾದರೂ ಪರಿಹಾರವನ್ನು ಕೊಡಬಹುದಿತ್ತು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ನಾವು ಇದನ್ನು ಮಂತ್ರಿ ಮಂಡಲದ ಮುಂದೆ ಇಟ್ಟಿದ್ದು ಮಾನ್ಯ ಮುಖ್ಯಮಂತ್ರಿಗಳು ಚರ್ಚೆ ಮಾಡಿ ಇದಕ್ಕೆ ಏನಾದರೂ ವಿಶೇಷ ಪ್ಯಾಕೇಜ್ ಅನ್ನು ಕೊಡಬೇಕಾಗುತ್ತದೆಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ. ಇನ್ನು ಒಂದೆರಡು ದಿನದಲ್ಲಿ ಪೂರ್ಣ ಸಮೀಕ್ಷೆಯ ವರದಿ ಬರುತ್ತಿದೆ. ಇನ್ನು ಒಂದೆರಡು ದಿನಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ವಿಶೇಷ ಪ್ಯಾಕೇಜ್ ಅನ್ನು ಘೋಷಣೆ ಮಾಡಿ, ಸ್ವಲ್ಪ ಅಲ್ಲ, ಸರಿಯಾದಂತಹ ರೀತಿಯಲ್ಲಿ ರೈತರಿಗೆ ಪರಿಹಾರವನ್ನು ಕೊಡುವ

ತೀರ್ಮಾನವನ್ನು ಶೀಘ್ರದಲ್ಲಿ ತೆಗೆದುಕೊಳ್ಳುತ್ತೇವೆ. ಈ ಸಂಕಷ್ಟದಲ್ಲಿರುವ ರೈತರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಸಧ್ಯದಲ್ಲಿಯೇ ತಕ್ಷಣದಲ್ಲಿಯೇ ಅವರಿಗೆ ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ದಯವಿಟ್ಟು ನಾನು ಏನು ಹೇಳುತ್ತಿದ್ದೇನೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಿ. ನೀವು ಹೋಗಿ ಬಂದಿದ್ದೀರಿ. ಅದನ್ನು ನೋಡಿದ್ದೀರಿ. ಮಾನ್ಯ ಕೃಷ್ಣಾ ಬೈರೇಗೌಡರವರು ಕೂಡ ಹೋಗಿದ್ದರು.

**ಶ್ರೀ ಬಿ. ರಮಾನಾಥ್ ರೈ:–** ಮಾನ್ಯ ಮುಖ್ಯಮಂತ್ರಿಯವರು ವೈಮಾನಿಕ ಸಮೀಕ್ಷೆ . . . .

**ಶ್ರೀ ಕೆ.ಎಸ್. ಈಶ್ವರಪ್ಪ:–** ಸೌತ್ ಕೆನರಾದಲ್ಲಿ ದೇವಸ್ಥಾನಗಳು ಜಾಸ್ತಿ. ಅಲ್ಲಿ ತೀರ್ಥ ಕುಡಿದು ಬರುತ್ತಾರೆ. ಆದರೆ ಯಾವ ತೀರ್ಥ ಕುಡಿದು ಬರುತ್ತಾರೆಯೋ ಗೊತ್ತಿಲ್ಲ.

**ಶ್ರೀ ಕೆ.ಬಿ. ಶಾಣಪ್ಪ:–** ನಿಮಗೆ ಏನಾಗಿದೆ? ಏನು ಗಡ ಬಡ ನಡೆಸುತ್ತೀರಿ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಯಾರಾದರು ತಪ್ಪು ಮಾಡಿದರೆ ಹೇಳಬೇಕಾಗುತ್ತದೆ. ಈ ಸದನದ ನಿಯಮಾವಳಿಗಳಿಗೆ, ಈ ಸದನದ ಗೌರವಕ್ಕೆ ಧಕ್ಕೆ ಬಂದರೆ ನಡೆಯುತ್ತದೆಂದು ತಿಳಿದಿದ್ದೀರಾ? ನಡೆಯುವುದಿಲ್ಲ. ನಾವು ಬಹಳ ಸಹನೆ ಮಾಡಿಕೊಳ್ಳುತ್ತೇವೆ.

**ಸಭಾಪತಿಯವರು:–** ದಯಮಾಡಿ ಎಲ್ಲರು ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹೇಳಿದ್ದು ಅವರಿಗೆಲ್ಲಾ ಅರ್ಥ ಆಗಿದೆ ಎಂದು ತಿಳಿದುಕೊಳ್ಳುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, what is happening here? It is intolerable. ಸರ್ಕಾರದ ಸಚಿವರಾದ ಅವರು ಪದೇ ಪದೇ ಎದ್ದು ನಿಂತರೆ ಹೇಗೆ?

**ಸಭಾಪತಿಯವರು:–** ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಕೃಷ್ಣಬೈರೇಗೌಡರು ಏನೋ ಹೇಳುತ್ತಿದ್ದಾರೆ. ಮೊದಲು ಅದನ್ನು ಕೇಳೋಣ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವ ಬಹುತೇಕ ವಿಚಾರಗಳನ್ನು ನಾವೆಲ್ಲರೂ ಒಪ್ಪಿದ್ದೇವೆ. ಅವರು ಹೇಳಿರುವ ಬಗ್ಗೆ ಸರ್ಕಾರ ಯಾವುದೇ ವಿಷಯವನ್ನು ತಿರಸ್ಕಾರ ಮಾಡಿಲ್ಲ. ವಾಸ್ತವಾಂಶ ಸಹ ಅದೇ ರೀತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಸಹ ಸಂಪುಟ ಸಭೆಯಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಬಹಳ ಮನನೊಂದು ಮಾತನಾಡಿದ್ದಾರೆ. ಖುದ್ದು ಕಣ್ಣಾರೆ ಕೂಡ ನೋಡಿದ್ದಾರೆ. ರೈತರ ಜೊತೆ ಮಾತನಾಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಜವಾಬ್ದಾರಿ ತೆಗೆದುಕೊಂಡು ಕೆಲಸವನ್ನು ಮಾಡಿದ್ದಾರೆ. ದಾಖಲೆ ಅವಧಿಯಲ್ಲಿ ಕೇವಲ ಒಂದು ವಾರದೊಳಗಡೆ ಸರ್ವೆಯನ್ನು ಪೂರ್ಣಗೊಳಿಸುವ ಹಂತದಲ್ಲಿದ್ದೇವೆ. ತಾವು ಕೂಡ ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿದ್ದಂಥವರು ಸಾಮಾನ್ಯವಾಗಿ ನಾವು ಒಂದು ಲೈನ್ ಎಸ್ಟಿಮೇಟ್ ಅನ್ನು ತೆಗೆದುಕೊಂಡು ಅದರ ಬೇಸಿಸ್ ಮೇಲೆ ಮೆಮೊರ್ಯಾಂಡಮ್ ಮಾಡಿ detail ಆಗಿ lossesನ್ನು assess ಮಾಡುತ್ತೇವೆ. ಆದರೆ ಈ ಬಾರಿ ಒಂದು ವಾರದೊಳಗಡೆ ಸರ್ವೆ ನಂಬರ್‌ವಾರು ಸಮೀಕ್ಷೆಯನ್ನು ಮುಗಿಸುತ್ತಿದ್ದೇವೆ. ಅದು ಬಹುತೇಕ ಮುಗಿದಿದೆ. ಶೇಕಡ 98ರಷ್ಟು ಸರ್ವೆ ಮುಗಿದಿದೆ. ನಾನು ಇದನ್ನು ಸುಮ್ಮನೆ ಸಂತೋಷ ಪಡಿಸಲಿಕ್ಕೆ ಹೇಳುತ್ತಿಲ್ಲ. ವಾಸ್ತವಾಂಶ ಹೇಳುತ್ತಿದ್ದೇನೆ. ಶೇಕಡ 98ರಷ್ಟು ರೈತವಾರು, ಸರ್ವೆ ನಂಬರ್‌ವಾರು ಸಮೀಕ್ಷೆ ಮುಗಿದಿದೆ. ಒಂದೆರಡು ದಿನದಲ್ಲಿ ಸಂಪೂರ್ಣವಾದಂಥ ವರದಿ ನಮ್ಮ ಹತ್ತಿರ ಬರುತ್ತಿದೆ. ತಕ್ಷಣ ಯಾವುದೇ ವಿಳಂಬ ಇಲ್ಲದೆ ಕೇಂದ್ರ ಸರ್ಕಾರಕ್ಕೆ ವಿಶೇಷ ಮನವಿಯನ್ನು ಕೊಡುತ್ತೇವೆ. ಕೇಂದ್ರ ಸರ್ಕಾರ ಯಾವೊತ್ತು ಕೊಡುತ್ತದೆ, ಯಾವಾಗ ಕೊಡುತ್ತದೆ, ಎಷ್ಟು ಕೊಡುತ್ತದೆಂದು ನಾವು ಕಾಯುವುದಿಲ್ಲ. ಈ ವರದಿ ಮಾನ್ಯ ಮುಖ್ಯಮಂತ್ರಿಗಳ ಕೈಗೆ ಬಂದ ತಕ್ಷಣ ತೀರ್ಮಾನವನ್ನು ತೆಗೆದುಕೊಂಡು ವಿಶೇಷ ಪ್ಯಾಕೇಜ್ ಅನ್ನು ಘೋಷಣೆ ಮಾಡೋಣ ಎನ್ನುವ ತೀರ್ಮಾನವನ್ನು ಸಚಿವ ಸಂಪುಟದಲ್ಲಿ ಮಾಡಿ ಮುಖ್ಯಮಂತ್ರಿಗಳಿಗೆ ನಾವು ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ತಾವು ರೂ. 2000–5000 ಕೊಡುವ ಬಗ್ಗೆ ಮಾತನಾಡುತ್ತಿದ್ದೀರಿ. ಆದರೆ ನಾವು ನಮ್ಮ ಇತಿಮಿತಿಯನ್ನು ಮೀರಿದ ಪರಿಹಾರವನ್ನು ಕೊಡೋಣ ಎಂದು ಯೋಚನೆ ಮಾಡಿದ್ದೇವೆ. ಇನ್ನು ಜಾನುವಾರು ಹಾನಿಗೆ ಪರಿಹಾರ ವಿತರಣೆ ಪ್ರಾರಂಭ ಮಾಡಿದ್ದೇವೆ. ಮನೆ ಹಾನಿಗೆ ಪರಿಹಾರವನ್ನು ನಾನೇ ನಾನು ಹೋದಂಥ ಸಂದರ್ಭದಲ್ಲಿ ಪ್ರಾರಂಭ ಮಾಡಿಸಿದ್ದೇನೆ. ಯಾರು ನಿರ್ವಸತಿಯಾಗಿದ್ದಾರೆ ಅವರಿಗೆ ವಸತಿ ಕೊಡಬೇಕು. ಮತ್ತು ಅವರಿಗೆ ಬೇಕಾದಂಥ ರೇಶನ್ ಕೊಡುವಂಥ ಕೆಲಸವನ್ನು ಕೂಡ ನಾನು ಹೋಗಿದ್ದ ದಿವಸದಿಂದ ಪ್ರಾರಂಭ ಮಾಡಿದ್ದೇವೆ. ಪ್ರಾಣಹಾನಿಗೆ ಪರಿಹಾರ ಕೊಡುವಂಥದ್ದು ಕೂಡ ಆಗಿದೆ. ಅದರಲ್ಲಿ ಯಾವುದಾದರು ಒಂದೆರಡು ಪ್ರಕರಣಗಳು ಬಾಕಿ ಇದ್ದರೆ ಇನ್ನೆರಡು ದಿನಗಳಲ್ಲಿ ಆಗುತ್ತದೆ. ನನಗೆ ಇರುವ ಮಾಹಿತಿ ಪ್ರಕಾರ ಎಲ್ಲಾ ಪ್ರಾಣಹಾನಿ ಪ್ರಕರಣದಲ್ಲಿ ಪರಿಹಾರ ಪಾವತಿಯಾಗಿದೆ. ಆಗದೆ ಹೋದಂಥ ಸಂದರ್ಭದಲ್ಲಿ ಒಂದೆರಡು ದಿನದಲ್ಲಿ ಜಾನುವಾರು ಮತ್ತು ಪ್ರಾಣಹಾನಿ ಎರಡರಲ್ಲೂ ಸಂಪೂರ್ಣವಾಗಿ

ಪಾವತಿಯನ್ನು ಮಾಡುತ್ತೇವೆ. ಯಾರ ಮನೆ ಹಾನಿಯಾಗಿದೆ ಅವರಿಗೆ ರೇಶನ್ ಬೇಕಾದರೆ ರೇಶನ್, ವಸತಿ ಬೇಕಾಗಿದ್ದರೆ ವಸತಿ ಅದಕ್ಕೆ ಈಗಾಗಲೇ ವ್ಯವಸ್ಥೆಯನ್ನು ಮಾಡಿದ್ದೇವೆ. ತಾತ್ಕಾಲಿಕವಾಗಿ ಬೇಕಾದಂಥ ಪರಿಹಾರ ಕಾರ್ಯವನ್ನು ಖಂಡಿತವಾಗಿ ಕೈಗೊಂಡಿದ್ದೇವೆ. ಒಂದು ವಾರದ ಅವಧಿಯೊಳಗಡೆ ಲೈನ್ ಎಸ್ಟಿಮೇಟ್ ಅಲ್ಲ, ದಾಖಲೆಯ ಡೀಟೇಲ್ಡ್ ಎಸ್ಟಿಮೇಟ್ ತಯಾರಾಗಿದೆ. ರೈತರ ಹೆಸರು ಮತ್ತು ಸರ್ವೆ ನಂಬರ್ ಜೊತೆಗೂಡಿದಂಥ ಸರ್ವೆ ಕೆಲಸ ಆಗಿದೆ. ನಾನು ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಸರ್ವೆ ಬಗ್ಗೆ ಕೆಲವು ರೈತರ ದೂರುಗಳು ಬಂದಾಗ ಜಿಲ್ಲಾಧಿಕಾರಿಗಳನ್ನು, ಉಪವಿಭಾಗಾಧಿಕಾರಿಗಳನ್ನು ರೈತರ ಮುಂದೆ ನಿಲ್ಲಿಸಿ ಯಾವ ರೀತಿ ಸಮರ್ಪಕವಾಗಿ ಸರ್ವೆ ಆಗಬೇಕೆನ್ನುವಂಥದ್ದನ್ನು ರೈತರ ಸಮ್ಮುಖದಲ್ಲಿ ಇತ್ಯರ್ಥ ಮಾಡಿದ್ದೇವೆ. ಜಿಲ್ಲಾಧಿಕಾರಿಗಳನ್ನು ಅವರ ಮುಂದೆ ನಿಲ್ಲಿಸಿ ರೈತರು ಈ ರೀತಿ ದೂರು ಹೇಳುತ್ತಿದ್ದಾರೆ, ಅದಕ್ಕೆ ನೀವು ಉತ್ತರ ಕೊಡಿ ಎಂದು ಹೇಳಿ ಜಿಲ್ಲಾಧಿಕಾರಿಗಳಿಂದ ಉತ್ತರ ಕೊಡಿಸಿ ಸರ್ವೆ ಸರಿಯಾಗಿ ಆಗುವಂತೆ ಮಾಡಿದ್ದೇವೆ. ನೂರಕ್ಕೆ ನೂರು ಸರಿ ಹೋಗದೆ ಇರಬಹುದು. ಅವರು ಹೇಳಿದ ಹಾಗೆ ಸರ್ಕಾರ ಕೊಟ್ಟಿದ್ದು ವಿತರಣೆಯಾಗುವಾಗ ಯಾರದ್ದೋ ಅನರ್ಹರದ್ದು ಸೇರಿರುತ್ತದೆ, ಅರ್ಹತೆ ಇರುವವರದ್ದು ಬಿಟ್ಟು ಹೋಗಿರುತ್ತದೆ. ಇಂತಹ ಪ್ರಕರಣಗಳು ಕೂಡ ಆಗಿವೆ. ಅದನ್ನು ನೂರಕ್ಕೆ ನೂರು ಸರಿ ಮಾಡುವುದಕ್ಕೆ ಆಗದೆ ಹೋದರು ಆದಷ್ಟು ಈ ಬಾರಿ ಸರ್ವೆ ಕೆಲಸ ಸರಿಯಾಗಿ ಆಗಬೇಕೆಂದು ಹೇಳಿ ಮುಖ್ಯಮಂತ್ರಿಗಳು ನಾವೆಲ್ಲರೂ ಸಹ ಅದಕ್ಕೆ ಹೆಚ್ಚು ಒತ್ತು ಕೊಟ್ಟಿದ್ದೇವೆ. ಸರ್ಕಾರ ಕೊಡುವುದನ್ನು ಕೊಡುತ್ತದೆ. ಆದರೆ ನಿಜವಾಗಿ ನಷ್ಟ ಆಗಿರುವವರಿಗೆ ತಲುಪದೆ ಯಾರಿಗೋ ತಲುಪಿದರೆ, ಯಾರಿಗೂ ಸಹ ಅದು ಒಳ್ಳೆಯದಾಗುವುದಿಲ್ಲ. ಹಾಗಾಗಿ ಈ ಪ್ರಕರಣಕ್ಕೆ ಸರ್ಕಾರ ಸಂಪೂರ್ಣವಾಗಿ ಸ್ಪಂದಿಸುತ್ತಿದೆ. ಇದರಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ, ಯೋಚನೆ ಮಾಡುತ್ತೇವೆ ಎನ್ನುವಂಥ ಯಾವುದೇ ವಿಚಾರ ಇಲ್ಲ. ಕಳೆದ ವರ್ಷ ಆಲಿಕಲ್ಲು ಪ್ರಕರಣದಲ್ಲಿ ಒಂದು ವಿಶೇಷ ಪ್ಯಾಕೇಜ್ ಕೇಂದ್ರ ಸರ್ಕಾರ ಕೊಟ್ಟಿದ್ದು ಕೇವಲ 82 ಕೋಟಿಯಾದರು ನಾವು ಒಟ್ಟು 326 ಕೋಟಿಯನ್ನು ಕೊಟ್ಟಿದ್ದೇವೆ. ಹೆಚ್ಚು ಕಡಿಮೆ ಅದೇ ಮಾದರಿಯಲ್ಲಿ ಈ ವರ್ಷ ಸಹ ಈ ವಿಶೇಷ ಪ್ರಕರಣಕ್ಕೆ ಸರ್ಕಾರ ಸ್ಪಂದಿಸುತ್ತದೆ ಅನ್ನುವುದರಲ್ಲಿ ದಯಮಾಡಿ ಯಾವುದೇ ಅನುಮಾನ ಬೇಡ. ಮತ್ತು ತೀರ್ಮಾನ ಯಾವಾಗ ತೆಗೆದುಕೊಳ್ಳುತ್ತೀರಿ ಎನ್ನುವ ಪ್ರಶ್ನೆ ಇಲ್ಲ. ಸಂಪೂರ್ಣ ವರದಿ ಮಾನ್ಯ ಮುಖ್ಯಮಂತ್ರಿಗಳ ಕೈಗೆ ಒಂದೆರಡು ದಿನಗಳಲ್ಲಿ ಬರುತ್ತದೆ. ತಕ್ಷಣ ನಾವು ಒಂದು ತೀರ್ಮಾನವನ್ನು ತೆಗೆದುಕೊಂಡು ಒಂದು ವಿಶೇಷ ಪ್ಯಾಕೇಜ್ ಅನ್ನು ಘೋಷಣೆ ಮಾಡುತ್ತೇವೆ ಎನ್ನುವುದನ್ನು ತಮ್ಮ ಮುಖಾಂತರ ನಾನು ತಮಗೆ ಮನವರಿಕೆ ಮಾಡಿಕೊಡಲಿಕ್ಕೆ ಬಯಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಗೆ ಬಂದಿದ್ದಾರೆ. ತಾವು ಕೃಷ್ಣ ಭೈರೇಗೌಡರು, ಕಂದಾಯ ಸಚಿವರು, ಡಾ: ಶರಣ ಪ್ರಕಾಶ್‌ರವರು, ಉಮಾಶ್ರೀಯವರು ನಾಲ್ಕೈದು ಜನ ಅಲ್ಲಿಗೆ ಹೋಗಿ ಬಂದಿದ್ದೀರಿ. ಅದಕ್ಕೆ ತುಂಬಾ ಸಂತೋಷ. ನಾನು ಅದಕ್ಕಾಗಿ ಅಲ್ಲಿ ಕೂಡ ಸ್ವಾಗತವನ್ನು ಕೋರಿದ್ದೇನೆ. ನಾನು ಕೂಡ ಅಲ್ಲಿ ಹೋಗಿದ್ದೆ, ಅದನ್ನು ನೋಡಿ ತುಂಬಾ ನೋವಾಗಿದೆ. ಸ್ವತಃ ಕೃಷಿ ಸಚಿವರು, ತೋಟಗಾರಿಕೆ ಸಚಿವರು ಹಾಗೂ ಮುಖ್ಯಮಂತ್ರಿಗಳು ಬಂದು ನೋಡಿದಾಗ ಅವರಿಗೆ ಗೊತ್ತಾಗುತ್ತದೆಂದು ಹೇಳಿದ್ದೇನೆ. ತಾವು ಹೋಗಿ ನೋಡಿ ತಮ್ಮ ಮನಸ್ಸಿಗೆ ನೋವಾಗಿದೆ ಎಂದು ಹೇಳಿದ್ದನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಅದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಇನ್ನು ತಾವು ಈಗ ಸಮೀಕ್ಷೆಯ ಬಗ್ಗೆ ಹೇಳುತ್ತಿದ್ದೀರಿ. ಸಮೀಕ್ಷೆಯಲ್ಲಿ ಈಗಿನ ಪ್ರಕಾರ ಪ್ರಾಥಮಿಕ ವರದಿಯಂತೆ 14 ಜೀವಹಾನಿ, 90 ಜಾನುವಾರು, 774 ಮನೆಹಾನಿ, 55,405 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾನಿ, ಇದನ್ನೆಲ್ಲಾ ಮೆನ್‌ಶನ್ ಮಾಡಿದ್ದೀರಿ. ಸಂತೋಷ. ಇದು ಸಮೀಕ್ಷೆ ಮಾಡದೆ ಇದ್ದರೆ ಗೊತ್ತಾಗುತ್ತಿರಲಿಲ್ಲ. ಆದರೆ ನೀವು ಅಂದುಕೊಂಡ ಹಾಗೆ ಶೇಕಡ 90ರಷ್ಟು ಸರ್ವೆ ಕಾರ್ಯ ಆಗಿಲ್ಲ. ಖಂಡಿತ ಆಗಿಲ್ಲ. ಶಾಸಕರುಗಳು ಹೋಗಿ ನೋಡಿಕೊಂಡು ಬಂದಿದ್ದಾರೆ ಅವರಿಗೆ ನೀವು ಹೋಗಿ ಕೇಳಿ ಗೊತ್ತಾಗುತ್ತದೆ. ಈಗ ನಿಮಗೆ ಈ ಮಾಹಿತಿ ಈ ಸಮೀಕ್ಷೆ ಪ್ರಕಾರ ಸಿಕ್ಕಿದೆ. ಇನ್ನುಳಿದ ಸಮೀಕ್ಷೆ ನೀವು ಎರಡು ದಿನಗಳಲ್ಲಿ ಮುಗಿಯುತ್ತದೆಂದು ಹೇಳಿದ್ದೀರಿ ಅದು ಸಾಧ್ಯವಿಲ್ಲ. ನೂರಕ್ಕೆ ನೂರರಷ್ಟು ಸಾಧ್ಯವಿಲ್ಲ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೆ, ನಾನು ಒಂದು ವಾರ ಎಂದು ಹೇಳಿದ್ದೇನೆ. ನಾವು 19ನೇ ತಾರೀಖು ಡೆಡ್‌ಲೈನ್ ಕೊಟ್ಟಿದ್ದೆವು. ಆದರೆ 19ನೇ ತಾರೀಖಿನೊಳಗೆ ಮುಗಿಸುವುದಕ್ಕೆ ಕಷ್ಟ ಆಗುತ್ತದೆಂದು ಹೇಳಿ ನೆಲಮಟ್ಟದ ಅಧಿಕಾರಿಗಳ ಜೊತೆ ಮಾತನಾಡಿದಾಗ ಗೊತ್ತಾಗಿದೆ. ಆಗ ನಾವು ಆಯಿತು ಸಮೀಕ್ಷೆ ಸರಿಯಾಗಿ ಆಗಬೇಕು, 19ರ ನಂತರ ನಿಮಗೆ ಎರಡು ದಿನ, ಮೂರು ದಿನಗಳು ಬೇಕಾದರೆ ತೆಗೆದುಕೊಳ್ಳಿ ಆದರೆ ತರಾತುರಿಯಲ್ಲಿ ತಪ್ಪು ಸಮೀಕ್ಷೆ ಕೊಡಬೇಡಿ, ಆದರೂ ಸಹ ತಾತ್ವಿಕವಾಗಿ ಅವರಿಗೆ ನಿರ್ದೇಶನ ಇರಬೇಕೆಂದು ಹೇಳಿ 19ನೇ ತಾರೀಖಿನ ಗಡುವನ್ನು ಕೊಟ್ಟಿದ್ದೆವು. ಎರಡು ದಿನದಲ್ಲಿ ಹೆಚ್ಚು ಕಡಿಮೆ ವರದಿ ತಯಾರಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾನು ಹೇಳುವುದಕ್ಕೆ ಹೊರಟಿದ್ದೇನೆಂದರೆ ನಿಮ್ಮ ಈಗಿನ ಸಮೀಕ್ಷೆಯ ವರದಿಯ ಪ್ರಕಾರ ಸುಮಾರು 350 ಕೋಟಿಯಷ್ಟು ಕೃಷಿ ಬೆಳೆ ಹಾನಿ ಹಾಗೂ ಉಳಿದ ಹಾನಿಯಾಗಿದೆ. ನಿಮ್ಮ ವಿವರವಾದ ಸಮೀಕ್ಷೆಯ ಪ್ರಕಾರ ಅದು ಎಷ್ಟಕ್ಕೆ ಹೋಗುತ್ತದೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೋಗಿ ನೋಡಿಕೊಂಡು ಬಂದಿದ್ದಾರೆ, ಈಗ ಇಲ್ಲಿಯೇ ಇದ್ದಾರೆ ಆದ್ದರಿಂದ ಅವರಲ್ಲಿ ನನ್ನ ಮನವಿ ಏನೆಂದರೆ ಅವರಿಗೆ ತಾತ್ಕಾಲಿಕವಾಗಿ ಏನಾದರು ಪರಿಹಾರ ಕೊಡಿ. ಒಂದು ವೇಳೆ ಅದನ್ನು ತಾವು ಮಾಡಲಿಲ್ಲವೆಂದರೆ ಖಂಡಿತವಾಗಿ ಅವರ ಬಾಳು ಸಮಾಧಿಯಾಗುತ್ತದೆ. ಅವರು ಬಹಳ ತೊಂದರೆಯಲ್ಲಿದ್ದಾರೆ. ನೀವು ಅದನ್ನು ನೋಡಿಕೊಂಡು ಬಂದಿದ್ದೀರಿ. ಆ ಬೆಳೆ ಪೂರ್ತಿಯಾಗಿ ಮಲಗಿ ಹೋಗಿರುವಂಥ ಸಂದರ್ಭದಲ್ಲಿ ಆ ಬೆಳೆಯನ್ನು ಯಂತ್ರಗಳ ಮೂಲಕ ಕಟ್ ಮಾಡಬೇಕಾದಂಥ ಪರಿಸ್ಥಿತಿ ಇದೆ. ಈಗ ಆ ಯಂತ್ರದ ಓನರ್‌ಗಳು ಹೆಚ್ಚಿನ ದುಡ್ಡನ್ನು ಬೇಡಿಕೆ ಮಾಡಲು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಏನು ಮಾಡಬೇಕೆಂದು ಗಮನಿಸಿ. ಆ ಜನರು ಮುಖ್ಯಮಂತ್ರಿಗಳು ತಾತ್ಕಾಲಿಕವಾದಂಥ ಪರಿಹಾರ ಏನು ಕೊಡುತ್ತಾರೆಂದು ಕಾಯುತ್ತಿದ್ದಾರೆ. ಅವರಿಗೆ ಇನ್ನೊಂದು ವಾರಕ್ಕೆ ವಿಶೇಷ ಪ್ಯಾಕೇಜ್ ಅನ್ನು ಕೊಡಿ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ತಾತ್ಕಾಲಿಕವಾಗಿ ಈ ರೂ. 350 ಕೋಟಿಗೆ ರೂ. 100 ಕೋಟಿ ಬಿಡುಗಡೆ ಮಾಡಬಹುದಾ? ಪೂರ್ಣ ಪ್ರಮಾಣದ ಸಮೀಕ್ಷೆಯ ನಂತರ ನೀವು ಪೂರ್ಣ ಪ್ರಮಾಣದ ಪರಿಹಾರವನ್ನು ಕೊಡಿ. ನಾವು ನಾಳೆ, ನಾಡಿದ್ದು ದೆಹಲಿಗೆ ಹೋಗುತ್ತಿದ್ದೇವೆ, ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡುತ್ತಿದ್ದೇವೆ. ಆಗ ಅವರಿಗೆ ನೋಡಿ ನಮಗೆ ತಾತ್ಕಾಲಿಕವಾಗಿ ಇಷ್ಟು ನಷ್ಟ ಆಗಿದೆ, ನಮ್ಮ ರಾಜ್ಯ ಸರ್ಕಾರದಿಂದ ಇಷ್ಟು ದುಡ್ಡು ಕೊಟ್ಟಿದ್ದೇವೆ. ನೀವು ಕೂಡ ವಿಶೇಷ ಪ್ಯಾಕೇಜ್ ಅನ್ನು ಕೊಡಿ ಎಂದು ಕೇಳುವುದಕ್ಕೆ ನಮಗೆ ಅಧಿಕಾರ ಬರುತ್ತದೆ. ಇಲ್ಲದಿದ್ದರೆ ನೀವು ಏನು ಕೊಟ್ಟಿದ್ದೀರೆಂದು ಕೇಳಿದರೆ ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಮಾರ್ಗಸೂಚಿಯ ಪ್ರಕಾರ ಪರಿಹಾರ ನೀಡಲಾಗುವುದು ಎನ್ನುವ ಉತ್ತರವನ್ನು ಅವರಿಗೆ ಕೊಡುತ್ತೀರಾ? ಈ ಉತ್ತರ ಕೇಂದ್ರ ಸರ್ಕಾರಕ್ಕೆ ಕೊಟ್ಟರೆ ಸರಿ ಹೋಗುತ್ತದೆಯೇ? ನಾವು ಇಷ್ಟು ಕೊಡುತ್ತಿದ್ದೇವೆಂದು ದಯಮಾಡಿ ಇಂದು ಘೋಷಣೆ ಮಾಡಬೇಕು. ಇಷ್ಟು ನಾವು ತಾತ್ಕಾಲಿಕವಾಗಿ ಕೊಡುತ್ತೇವೆ, ಉಳಿದಿದ್ದನ್ನು ಪೂರ್ಣ ಸಮೀಕ್ಷೆಯಾದ ನಂತರ ಕೊಡುತ್ತೇವೆಂದು ಹೇಳಿ. ನಾವು ನಿಮ್ಮ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುವುದಿಲ್ಲ. ಉತ್ತರ ಕೊಡುವಂಥ ಸಂದರ್ಭದಲ್ಲಿ ಇದೇ ಉತ್ತರವನ್ನು ಮತ್ತೆ ಕೊಟ್ಟರೆ ನಿಮ್ಮ ಪ್ರಾಮಾಣಿಕತೆಯ ಬಗ್ಗೆ ಅನುಮಾನ ಬರುತ್ತದೆ.

**(7–00 ಗಂಟೆ)**

ನಾನು ಅದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರುವ ಪ್ರಕಾರವಾಗಿ ಇಷ್ಟರಮಟ್ಟಿಗೆ ನಾನು ಹುಟ್ಟಿದ್ದಾಗಿನಿಂದಲೂ ಯಾವತ್ತು ಕೂಡ ಇಷ್ಟೊಂದು ಅನಾಹುತವಾಗಿಲ್ಲ. ಇದು ನಿಮಗೂ ಕೂಡ ಗೊತ್ತಿದೆ. ಅದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳು ರೈತರ ಪರವಾಗಿದ್ದಾರೆಂದು ತೀರ್ಮಾನವಾಗಬೇಕಾದರೆ, ಈಗ ಬೆಳೆ ಹಾನಿಯಾಗಿರುವುದಕ್ಕೆ ನಾವು ತಾತ್ಕಾಲಿಕವಾಗಿ ಇಷ್ಟು ಹಣವನ್ನು ಕೊಡುತ್ತಿದ್ದೇವೆಂದು ಘೋಷಣೆ ಮಾಡಬೇಕು. ಎರಡನೆಯದಾಗಿ ಆನೇಕ ಮಂತ್ರಿಗಳು ಸ್ಥಳಕ್ಕೆ ಭೇಟಿಯನ್ನು ನೀಡಿದ್ದಾರೆ. ರೈತರುಗಳಿಗೆ ಸಮಾಧಾನವನ್ನು ಹೇಳಿ ಬಂದಿದ್ದಾರೆ. ಆದರೆ ಸರ್ಕಾರದ ತೋಟಗಾರಿಕೆ ಮಂತ್ರಿಗಳು ಏನು ಹೇಳಿದ್ದಾರೆಂದರೆ **"ಎಲ್ಲರೂ ಕೇಳಿದ ತಕ್ಷಣ ಪರಿಹಾರವನ್ನು ನೀಡುವುದಕ್ಕೆ ದುಡ್ಡು ಏನಾದರು ಮೇಲಿಂದ ಉದುರುತ್ತದೆಯೇ ಅಥವಾ ನನ್ನ ಮನೆಯಿಂದ ಏನಾದರು ತಂದು ಕೊಡಬೇಕಾ?"** ಎಂದು. ಇನ್ನು ಮುಂದುವರೆದು ತೋಟಗಾರಿಕೆ ಸಚಿವರು ಹೇಳಿರುವಂಥದ್ದು ಪತ್ರಕರ್ತರುಗಳ ಕೇಳಿದ ಪ್ರಶ್ನೆಗೆ **"ನನ್ನ ಮನೆಯಿಂದ ಹಣವನ್ನು ತೆಗೆದುಕೊಂಡು ಬಂದು ನಿಮ್ಮ ಮನೆ ಬಾಗಿಲಿಗೆ ತಂದು ಕೊಡುವುದಕ್ಕಾಗುತ್ತದೆಯೇ?"** ಒಬ್ಬ ತೋಟಗಾರಿಕೆಯ ಸಚಿವರು ಯಾವ ಸಂಬಂಧಪಟ್ಟ ರೈತರ ಪರವಾಗಿ ಸುದ್ಧಿಗಾರರು ಪ್ರಶ್ನೆಗಳನ್ನು ಕೇಳಿದರೆ, ಉಳಿದ ಸಚಿವರುಗಳೆಲ್ಲರೂ ಉತ್ತರವನ್ನು ಸರಿಯಾಗಿ ಕೊಟ್ಟು ಬಂದಿದ್ದಾರೆ. ಖಂಡಿತ ನಿಮಗೆಲ್ಲಾ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಕೇಳುವುದೇನೆಂದರೆ, ಮಂತ್ರಿ ಮಂಡಲದಲ್ಲಿ ಇಂತಹ ಮಂತ್ರಿಯನ್ನು ಇಟ್ಟುಕೊಳ್ಳುತ್ತೀರಾ? ತೋಟಗಾರಿಕಾ ಸಚಿವರು ರಾಜಿನಾಮೆಯನ್ನು ಕೊಡಬೇಕೆಂದು ನಮ್ಮಗಳ ಒತ್ತಾಯ. ಒಂದು ವೇಳೆ ಅವರು ರಾಜೀನಾಮೆಯನ್ನು ನೀಡದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ತೋಟಗಾರಿಕೆ ಸಚಿವರ ರಾಜೀನಾಮೆಯನ್ನು ತೆಗೆದುಕೊಳ್ಳಬೇಕು. ನಮ್ಮ ಇಡೀ ಸದನದ ಎಲ್ಲಾ ಪ್ರಮುಖ ಸದಸ್ಯರ ಬೇಡಿಕೆ ಏನೆಂದರೆ, ಒಂದು ತಾತ್ಕಾಲಿಕವಾಗಿ 100 ಕೋಟಿ ರೂಪಾಯಿಗಳನ್ನೋ, 150 ಕೋಟಿ ರೂಪಾಯಿಗಳನ್ನೋ ಪರಿಹಾರಕ್ಕಾಗಿ ಇವತ್ತೇ ಬಿಡುಗಡೆ ಮಾಡಬೇಕು. ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಬಿಟ್ಟಿದ್ದು. ಅದನ್ನು ಇವತ್ತು ಘೋಷಣೆ ಮಾಡಬೇಕು. ಎರಡನೆಯದಾಗಿ ಈ ರೀತಿಯಾಗಿ ಬೇಜವಾಬ್ದಾರಿಯ ಹೇಳಿಕೆ, ಈ ಸದನದಲ್ಲಿ ಬಳಸುವಂತಹ ಪದ ಅದು. ಹೊರಗಡೆಯಾದರೆ ಬೇರೆ ಪದವನ್ನು ಬಳಸಬಹುದು. ಈ ರೀತಿ ಬೇಜವಾಬ್ದಾರಿಯಾಗಿ ವರದಿಗಾರರಿಗೆ ತೋಟಗಾರಿಕೆ ಸಚಿವರು ರೈತರ ಪರವಾಗಿ ಹೇಳಿಕೆಯನ್ನು ಕೊಡುತ್ತಾರಲ್ಲಾ ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಒಪ್ಪಿಗೆ ಇದೆಯೇ? ಈ ಮಾತುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಅವರ ಮಾತುಗಳೆಂದು ಒಪ್ಪಿಕೊಳ್ಳುತ್ತಾರೆಯೇ? ಇಂತಹ ಸಚಿವರನ್ನು ಕೈಬಿಡಬೇಕೆಂದು ತಮ್ಮ ಮುಖಾಂತರ

ಒತ್ತಾಯವನ್ನು ಮಾಡುತ್ತಿದ್ದೇನೆ. ಇವೆರಡು ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದಲ್ಲಿ 12ನೇ ತಾರೀಖಿನಿಂದ 16ನೇ ತಾರೀಖಿನವರೆಗೆ ಅಕಾಲಿಕ ಮಳೆಯಾಗಿರತಕ್ಕಂಥದ್ದು. ಅದು ಆಲಿಕಲ್ಲು ಮಳೆ ಮತ್ತು ಗಾಳಿ ಇವೆಲ್ಲಾ ಬಂದಿದ್ದರಿಂದ ಬಹುಶಃ ನಾನು ಕೂಡ ಇಷ್ಟೊಂದು ರೈತರ ಬೆಳೆ ನಾಶವಾಗಿ ನಷ್ಟವಾಗಿರುವುದನ್ನು ನಾನು ಹುಟ್ಟಿದಾಗಿನಿಂದ ನೋಡಿರಲಿಲ್ಲ. ನಾನು ಮೊದಲನೆಯ ಬಾರಿಯೇ ಇಷ್ಟೊಂದು ನಷ್ಟ/ಹಾನಿ ಆಗಿರುವುದನ್ನು ನೋಡಿರುವುದು. ನಾವು ಕೂಡ ಭತ್ತವನ್ನು ಬೆಳೆಯುತ್ತೇವೆ. ಈ ರೀತಿ ಇಷ್ಟೊಂದು ಬೆಳೆ ನಾಶವಾಗಿರುವುದನ್ನು ನೋಡಿರಲಿಲ್ಲ. ನಾನು ಸ್ವಂತಃ ಹೋಗಿ ಏರಿಯಲ್ ಸರ್ವೇಯನ್ನು ಕೂಡ ಮಾಡಿದೆ. ಸ್ಥಳ ಪರಿಶೀಲನೆಯನ್ನು ಕೂಡ ಮಾಡಿದೆ. ಕೆಳಗಡೆ ಇಳಿದು ನಾನು ಕೃಷಿ ಸಚಿವರಾದ ಶ್ರೀ ಕೃಷ್ಣಭೈರೇಗೌಡ, ಶ್ರೀ ಶಿವರಾಜ ಸಂಗಪ್ಪ ತಂಗಡಗಿ ಮತ್ತು ಅಲ್ಲಿಯ ಭಾಗದ ಎಂಎಲ್ಎ ಗಳು ಎಲ್ಲಾ ಒಟ್ಟಿಗೆ ಹೋಗಿ ನೋಡಿಕೊಂಡು ಬಂದೆವು. ಅಲ್ಲಿ ನಷ್ಟವಾಗಿದೆ. ಆದರೆ ಈಗಾಗಲೇ ಕೃಷಿ ಸಚಿವರಾದ ಶ್ರೀ ಕೃಷ್ಣಭೈರೇಗೌಡರು ಹೇಳಿದಂತೆ 19ನೇ ತಾರೀಖಿನೊಳಗೆ ಜಂಟಿ ಸರ್ವೇ ಮಾಡಿ ವರದಿಯನ್ನು ಕೊಡಬೇಕು. ನಾವು ಈಗಾಗಲೇ ಸಚಿವ ಸಂಪುಟದಲ್ಲಿ ಇದರ ಬಗ್ಗೆ ಒಂದು ಸಾರಿ ಚರ್ಚೆಯನ್ನು ಮಾಡಿದ್ದೇವೆ. ಚರ್ಚೆ ಮಾಡಿ ನನಗೆ authorize ಮಾಡಿದ್ದಾರೆ. ವರದಿ ಬಂದ ಮೇಲೆ ಒಂದು ಪ್ಯಾಕೇಜ್ ಅನ್ನು ಏನು ಅನೌನ್ಸ್ ಮಾಡಬೇಕು ಎನ್ನುವುದರ ಬಗ್ಗೆ ಇಡೀ ಸಚಿವ ಸಂಪುಟ ನನಗೆ authorize ಮಾಡಿದ್ದಾರೆ. I am waiting for the report of the Joint Survey Committee. The Committee is conducting joint survey. Agriculture Department, Revenue Department, Horticulture Department. ಈ ಎಲ್ಲಾ ಇಲಾಖೆಯವರು ಜಾಯಿಂಟ್ ಸರ್ವೇ ಮಾಡುತ್ತಿದ್ದಾರೆ. ಸರ್ವೇ ವರದಿ ಬಂದ ತಕ್ಷಣ ನಾವು ಹಿಂದೆ ಆಲಿಕಲ್ಲು ಮಳೆ ಬಿದ್ದಂತಹ ಭಾಗದಲ್ಲಿ ಕಬ್ಬು, ಭತ್ತ, ಬೇರೆ ಬೇರೆ ಬೆಳೆಗಳೆಲ್ಲಾ ಹಾಳಾಯಿತು. ತೋಟಗಾರಿಕೆ ಬೆಳೆಗಳೆಲ್ಲಾ ಹಾಳಾಯಿತು. ಆಗ ಮೊದಲ ಬಾರಿಗೆ ಕೇಂದ್ರ ಸರ್ಕಾರ ನಮಗೆ 82 ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ನಾವು ಅದರ ಜೊತೆಗೆ ಇಷ್ಟೊಂದು ಹಣವನ್ನು ಸೇರಿಸಿ 326 ಕೋಟಿ ರೂಪಾಯಿಗಳನ್ನು ನಾವು ರಾಜ್ಯ ಸರ್ಕಾರ ಪರಿಹಾರವನ್ನು ರೈತರಿಗೆ ಕೊಟ್ಟಿದ್ದೇವೆ. ರೈತರಿಗೆ ಯಾವ್ಯಾವಾಗ ಅನ್ಯಾಯವಾಗುತ್ತದೆ ಆಗ ನಮ್ಮ ಸರ್ಕಾರ ಕೈ ಕಟ್ಟಿಕೊಂಡು ಕುಳಿತುಕೊಳ್ಳುವುದಿಲ್ಲ. ರೈತರ ಸಹಾಯಕ್ಕೆ ನಾವು ಹೋಗುತ್ತೇವೆ. ನಾನು ಅವತ್ತು ಕೂಡ ಭೇಟಿ ನೀಡಿದಾಗ ಹೇಳಿದ್ದೇನೆ. ಜಾಯಿಂಟ್ ಸರ್ವೇ ಎಲ್ಲಾ ಮುಗಿದು ವರದಿ ಬಂದಮೇಲೆ ನಮ್ಮ ಸರ್ಕಾರ ಒಂದು ಪ್ಯಾಕೇಜ್ ಅನ್ನು ಅನೌನ್ಸ್ ಮಾಡುತ್ತೇವೆಂದು ಹೇಳಿದ್ದೇವೆ. ಮತ್ತೆ ಕಬ್ಬಿನ ಬೆಳೆಗೂ

ಸಬ್ಸಿಡಿ ಹಣವನ್ನು ಕೂಡ ಕೊಟ್ಟಿದ್ದೇವೆ. For the first time in the history of Karnataka ಒಂದು ಟನ್ ಕಬ್ಬಿಗೆ 250 ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟಿರತಕ್ಕಂಥದ್ದು ಇದೇ ಮೊದಲನೆಯ ಬಾರಿ. Not only in Karnataka State but in the entire country, Karnataka is the first State which has paid Rs. 250 per ton of sugarcane as subsidy. ಅಡಿಕೆಗೆ ಕೊಳೆ ರೋಗ ಬಂದಿದ್ದಕ್ಕೆ 83 ಕೋಟಿ ರೂಪಾಯಿಗಳ ಪರಿಹಾರವನ್ನು ಅಡಿಕೆ ಬೆಳೆಗಾರರಿಗೆ ಕೊಟ್ಟಿದ್ದೇವೆ. ನಾವು ರೈತರ ಪರವಾಗಿದ್ದೇವೆಂದು ಹೇಳಿ, ನಾವು ರೈತರ ವಿರೋಧ, ರೈತರ ಹಿತಾಸಕ್ತಿಗೆ ವಿರೋಧ ಹೋಗತಕ್ಕಂತಹ ಕೆಲಸವನ್ನು ನಾವು ಮಾಡುವುದಿಲ್ಲ. ಆದ್ದರಿಂದ ಇವತ್ತು ಪ್ರಿಲಿಮಿನರಿ ರಿಪೋರ್ಟ್ ಪ್ರಕಾರವಾಗಿ ಸುಮಾರು 61,000 ಹೆಕ್ಟೇರ್ ಪ್ರದೇಶದಲ್ಲಿ ಅಗ್ರಿಕಲ್ಚರ್ ಬೆಳೆ ಹಾಳಾಗಿದೆ ಎಂದು ಹೇಳಿದ್ದಾರೆ. ಮತ್ತೆ ತೋಟಗಾರಿಕೆ ಬೆಳೆ ಸುಮಾರು 4,450 ಹೆಕ್ಟೇರ್ ಪ್ರದೇಶದಲ್ಲಿ ಹಾಳಾಗಿದೆ ಎಂದು ಹೇಳಿದ್ದಾರೆ. ಅದಕ್ಕಿಂತಲೂ ಜಾಸ್ತಿ ಹಾಳಾಗಿರಬಹುದು. ಮತ್ತೆ ಕೇಂದ್ರ ಸರ್ಕಾರ ಈಗ ಪರಿಹಾರವನ್ನು ಸ್ವಲ್ಪ revise ಮಾಡಿದೆ. ಮೊದಲು 50% ಮತ್ತು ಅದಕ್ಕಿಂತಲೂ ಹೆಚ್ಚು ಬೆಳೆ ಹಾನಿಯಾಗಿದ್ದರೆ ಪರಿಹಾರವನ್ನು ಕೊಡಬೇಕೆಂದು ನಿಯಮ ಇತ್ತು. ಈಗ ಗೈಡ್‌ಲೈನ್ಸ್‌ನಲ್ಲಿ ಮೂರನೇ ಒಂದು ಭಾಗ ಮತ್ತು ಅದಕ್ಕಿಂತಲೂ ಹೆಚ್ಚು ಬೆಳೆ ನಷ್ಟವಾದರೆ ಬೆಳೆ ಪರಿಹಾರವನ್ನು ಕೊಡಬೇಕೆಂದು ಮಾಡಿದ್ದಾರೆ. ಅದನ್ನು ಈಗ ನಾವು ಲೆಕ್ಕ ಹಾಕಿಕೊಂಡು ಮಾಡಬೇಕು. ಮತ್ತೆ ಗೈಡ್‌ಲೈನ್ಸ್‌ನಲ್ಲಿ 9,000 ರೂಪಾಯಿಗಳ ಪರಿಹಾರ ಇದ್ದದ್ದನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಿ 13,500 ರೂಪಾಯಿಗಳನ್ನು ಮಾಡಿದ್ದಾರೆ. ನಾವು ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಏನಿದೆ ಅಷ್ಟಕ್ಕೆ ನಾವು ಸೀಮಿತ ಮಾಡುವುದಿಲ್ಲ. ಅದಕ್ಕಿಂತಲೂ ಮುಂದೆ ಹೋಗಿ ರೈತರಿಗೆ ಪರಿಹಾರವನ್ನು ಕೊಡಬೇಕೆಂದು ನಮ್ಮ ಸರ್ಕಾರದ ಆಲೋಚನೆ ಇದೆ. ವರದಿ ಬಂದಮೇಲೆ ನಾವು ಪ್ಯಾಕೇಜ್ ಅನ್ನು ಅನೌನ್ಸ್ ಮಾಡುತ್ತೇವೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಮತ್ತು ಮಾನ್ಯ ಸದಸ್ಯರುಗಳು ರೈತರ ಬಗ್ಗೆ ಏನು ಆತಂಕವನ್ನು ವ್ಯಕ್ತಪಡಿಸಿದ್ದಾರೆ, ರೈತರಿಗೆ ಪರಿಹಾರವನ್ನು ಕೊಡಬೇಕೆಂದು ಹೇಳಿದ್ದಾರೆ. ನಮ್ಮ ಸರ್ಕಾರ ರೈತರ ಪರವಾಗಿದೆ, ರೈತರ ಕಷ್ಟಗಳಿಗೆ ನಾವು ಸ್ಪಂದಿಸುತ್ತೇವೆ ಎನ್ನುವಂತಹ ಮಾತುಗಳನ್ನು ತಮ್ಮ ಮುಖಾಂತರ ಬಹಳ ಸ್ಪಷ್ಟವಾಗಿ ತಿಳಿಸುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಕಳೆದ ಸಾರಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಭಾಗಕ್ಕೆ ಬಂದಿದ್ದರು. ನಾಲೆ ಒಡೆದು ಬೆಳೆ ಎಲ್ಲಾ ಕೊಚ್ಚಿಕೊಂಡು ಹೋಗಿತ್ತು, ಮೊನ್ನೆಯ ದಿವಸ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದಾಗ ನಮಗೆ ಇನ್ನು ಹಣಕಾಸಿನ ಅನುದಾನ ಸರ್ಕಾರದಿಂದ ಬಂದಿಲ್ಲವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಕಳೆದ ಆಗಸ್ಟ್ ತಿಂಗಳಿನಲ್ಲಿ ನಮ್ಮ ಭಾಗಕ್ಕೆ ಬಂದಿದ್ದರು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ವರದಿ ಪ್ರಕಾರವಾಗಿ 61,000 ಹೆಕ್ಟೇರ್‌ನಲ್ಲಿದ್ದ ವ್ಯವಸಾಯದ ಬೆಳೆ ನಷ್ಟವಾಗಿದೆ ಮತ್ತು 4,450 ಹೆಕ್ಟೇರ್ ಪ್ರದೇಶದಲ್ಲಿದ್ದ ತೋಟಗಾರಿಕಾ ಬೆಳೆ ನಷ್ಟವಾಗಿದೆ ಎಂದು ಹೇಳಿದರು. ಅದಕ್ಕೆ ನಾವು ಏನು ಕೇಳುವುದೇನೆಂದರೆ ಈಗ ಸದನ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಎಲ್ಲರೂ ಇಷ್ಟೊಂದು ನಷ್ಟ 40–50 ವರ್ಷಗಳಿಂದ ಯಾವಾಗಲೂ ಕೂಡ ಆಗಿರಲಿಲ್ಲವೆಂದು, ಹೇಳಿದ್ದಾರೆ. ಇವತ್ತು ಇಷ್ಟೊಂದು ಗಂಭೀರವಾದಂತಹ ಪರಿಸ್ಥಿತಿ ಇದೆ. ಮಾನ್ಯ ಮುಖ್ಯಮಂತ್ರಿಗಳು, ಮಂತ್ರಿಗಳು, ಎಂಎಲ್ಎ, ಎಂಎಲ್‌ಸಿ ಎಲ್ಲರೂ ಅಲ್ಲಿಗೆ ಹೋಗಿದ್ದೀರಿ. ಅದನ್ನು ನಾವು ಪತ್ರಿಕೆಗಳಲ್ಲಿ ಮತ್ತು ಟಿ.ವಿ.ಯಲ್ಲಿ ವರದಿಯಾಗಿರುವುದನ್ನು ನೋಡಿದ್ದೇವೆ. ಅದಕ್ಕೆ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಏನಾಗಿದೆ ಎಂದರೆ, ಇವತ್ತು ಸದನ ನಡೆಯುತ್ತಿದೆ ಜನ ಎಲ್ಲಾ ಏನು ಆಸೆ ಇಟ್ಟುಕೊಂಡಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಏನಾದರು ಅನೌನ್ಸ್ ಮಾಡುತ್ತಾರೆಂದು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಸ್ವಲ್ಪವಾದರೂ ಪರಿಹಾರವನ್ನು ಅನೌನ್ಸ್ ಮಾಡಿ. ಈಗ ಅನೌನ್ಸ್ ಮಾಡಿದರೆ. . .

**ಸಭಾಪತಿಯವರು:–** ಮಾನ್ಯ ಬಸವರಾಜ ಹೊರಟ್ಟಿಯವರೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಬೇಕಂತೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮನೆಗಳಿಗೆ ಹಾನಿಯಾದರೆ ಅದಕ್ಕೆ ಪರಿಹಾರವನ್ನು ಕೊಡುತ್ತಿದ್ದಾರೆ. ಜೀವ ಹಾನಿಯಾಗಿದ್ದರೆ ಅದಕ್ಕೆ ಪರಿಹಾರವನ್ನು ಕೊಡುತ್ತಿದ್ದಾರೆ. ಪ್ರಾಣಿಗಳು ಹಾನಿಯಾಗಿದ್ದರೆ ಅದಕ್ಕೆ ಪರಿಹಾರವನ್ನು ಕೊಡುತ್ತಿದ್ದಾರೆ. ತಾತ್ಕಾಲಿಕವಾಗಿ ಅವರಿಗೆ ಏನಾದರು ಪರಿಹಾರವನ್ನು ಕೊಡಬೇಕೆಂದರೆ ಅದನ್ನು ಕೊಡುತ್ತಿದ್ದಾರೆ. ವಸತಿ ಕೊಡುವಂಥದ್ದು, ಪಡಿತರ ಪದಾರ್ಥಗಳನ್ನು ಹಂಚಿಕೆ ಮಾಡುತ್ತಿರುವುದು, ಈ ರೀತಿ ಎಲ್ಲಾ ಮಾಡಲಾಗುತ್ತಿದೆ. The only thing is crop compensation. ಇದನ್ನು ಸರಿಯಾಗಿ ಅಂದಾಜು ಮಾಡದೆ ಕೊಡುವುದಕ್ಕೆ ಬರುವುದಿಲ್ಲ. ಹಾಗಾಗಿ ಈಗ ಬೆಳೆ ಹಾನಿಗೆ ಸಂಬಂಧಿಸಿದ ಪರಿಹಾರ ಮಾತ್ರ ಏನು ಬಾಕಿ ಉಳಿದಿದೆ, ಅದನ್ನು ಸರಿಯಾಗಿ ಅಂದಾಜು ಮಾಡದೆ ಕೊಡುವುದಕ್ಕೆ ಬರುವುದಿಲ್ಲ; ತಾತ್ಕಾಲಿಕವಾಗಿ ಸಧ್ಯಕ್ಕೆ 5 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳಿ, ಆಮೇಲೆ ಉಳಿದುದನ್ನು ಕೊಡುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಅಲ್ಲದೆ ಗರಿಷ್ಠ ಎಂದರೆ 2 ಹೆಕ್ಟೇರ್‌ವರೆಗೆ, ಅಂದರೆ 5 ಎಕರೆವರೆಗೆ ಏನು ಪರಿಹಾರವನ್ನು ಕೊಡಬೇಕಾಗಿದೆ ಅದರಂತೆ ನಾವು ಕೊಡುತ್ತೇವೆ. ಏಕೆಂದರೆ ಸಣ್ಣ ಮತ್ತು ಅತಿ ಸಣ್ಣ ರೈತರೇನಿದ್ದಾರೆ ಅವರಿಗೆ ಸಹಾಯ ಮಾಡಬೇಕೆನ್ನುವುದು ಈ ಬೆಳೆ ಹಾನಿಗೆ ಪರಿಹಾರ ನೀಡುವ ಕಾರ್ಯಕ್ರಮದ

ಉದ್ದೇಶವಾಗಿದೆ. ಅದರಲ್ಲಿ ಕೇಂದ್ರ ಸರ್ಕಾರ ಮತ್ತು ನಮ್ಮ ಸರ್ಕಾರದ ಜವಾಬ್ದಾರಿ ಸಹ ಇರುತ್ತದೆ. ಅಲ್ಲದೆ ಕೇಂದ್ರ ಸರ್ಕಾರಕ್ಕೆ ನಾವು ರಾಜ್ಯ ಸರ್ಕಾರದ ವತಿಯಿಂದ ಮನವಿಯನ್ನು ಸಲ್ಲಿಸುತ್ತೇವೆ. ಬೆಳೆ ಹಾನಿಗೆ ಸಂಬಂಧಿಸಿದ ವರದಿ ಬಂದ ನಂತರ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ. ಹಾಗೆಂದ ಮಾತ್ರಕ್ಕೆ ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ, ಅಲ್ಲಿಂದ ಬರಲಿ ಎಂದು ಕಾಯುತ್ತಾ ಕುಳಿತುಕೊಳ್ಳುವುದಿಲ್ಲ. ನಮ್ಮ ಅಧಿಕಾರಿಗಳಿಂದ ವರದಿ ಬಂದ ತಕ್ಷಣವೇ ನಾವು ರಾಜ್ಯ ಸರ್ಕಾರದಿಂದ ಘೋಷಣೆ ಮಾಡಿ ಪರಿಹಾರವನ್ನು ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರಲ್ಲಿ ನಮ್ಮ ವಿನಂತಿ ಏನೆಂದರೆ, ಈಗ ರೈತರ ಬ್ಯಾಂಕ್ ಸಾಲಗಳೇನಿವೆ, ಆ ಸಾಲಗಳನ್ನು waive off ಮಾಡುವುದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಕಾಲಿಕ ಮಳೆಯಿಂದ ಯಾವ ರೈತರಿಗೆ ಲುಕ್ಸಾನಾಗಿದೆ, ಅದರಿಂದ ಯಾರಿಗೆ ಎಫೆಕ್ಟ್ ಆಗಿದೆ ಎನ್ನುವುದು ಸರ್ಕಾರಕ್ಕೆ ಈಗಾಗಲೇ ಗೊತ್ತಾಗಿದೆ. ಆದ್ದರಿಂದ ಅಂತಹ ರೈತರ ಸಾಲವನ್ನು ಮನ್ನಾ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು):–** ಮನ್ನಾ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಇಲ್ಲ, ಇದನ್ನು ಮಾಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಬೇಜವಾಬ್ದಾರಿಯಾಗಿ ಉತ್ತರ ಕೊಟ್ಟಿರುವಂತಹ ಸಚಿವರ ಬಗ್ಗೆ ಏನು ಹೇಳುತ್ತೀರಿ?

**ಶ್ರೀ ಸಿದ್ದರಾಮಯ್ಯ:–** ಅದನ್ನು ಅವರು ಯಾವ context ನಲ್ಲಿ ಹೇಳಿದ್ದಾರೆ ಎನ್ನುವುದು ಗೊತ್ತಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಯಾವ context ನಲ್ಲಿ ಹೇಳಿದ್ದಾರೆ ಎನ್ನುವುದನ್ನು ಸಹ ಪತ್ರಿಕೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಪತ್ರಿಕೆಗಳಲ್ಲಿ ಬಂದಂತಹ ಹೇಳಿಕೆಗಳು ಯಾವ context ನಲ್ಲಿ ಬಂದಿರುತ್ತವೆ ಎಂಬುದನ್ನು ಸಹ ನೋಡಬೇಕಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** 'ಬೇಜವಾಬ್ದಾರಿ ಮಂತ್ರಿಗೆ ರಕ್ಷಣೆ, ರೈತರಿಗೆ ದ್ರೋಹ' ಇದನ್ನು ನಾವು ಒಪ್ಪುವುದಿಲ್ಲ, ಇದರ ವಿರುದ್ಧ ನಾವು ಧರಣಿ ಮಾಡುತ್ತೇವೆ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದಿಯಾಗಿ ಬಿ.ಜೆ.ಪಿ ಪಕ್ಷದ ಎಲ್ಲ ಸದಸ್ಯರು ಸಹ ಸದನದ ಬಾವಿಗೆ ಬಂದರು)**

**ಶ್ರೀ ಸಿದ್ದರಾಮಯ್ಯ:–** ಏನ್ರೀ ಇದು, ಎಲ್ಲಕ್ಕೂ ಈ ರೀತಿ ಬಾವಿಗೆ ಹೋಗುತ್ತೇವೆ ಎಂದರೆ ಹೇಗೆ? ಬಾವಿಗೆ ಬೀಳಬೇಡ್ರೀ. ಪತ್ರಿಕೆಗಳಲ್ಲಿ ಬಂದ ಹೇಳಿಕೆಗಳಿಗೆಲ್ಲಾ ಬಾವಿಗೆ ಹೋಗುತ್ತೇವೆ ಎಂದರೆ ಹೇಗೆ?

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ರೈತರ ಬಗ್ಗೆ ಮೊಸಳೆ ಕಣ್ಣೀರು ಹಾಕುವುದನ್ನು ಬಿಡ್ರೀ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತ್ರ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನಿಮ್ಮ ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೆ ಯಾರು ಯಾವ ರೀತಿ ಬೇಕಾದರೂ ಹೇಳಿಕೆ ಕೊಡಬಹುದೇ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, we are not going to protect anybody. ಯಾವುದೇ ವ್ಯಕ್ತಿಯನ್ನು ನಾವು ರಕ್ಷಣೆ ಮಾಡಬೇಕಾದಂತಹ ಅಗತ್ಯವಿಲ್ಲ. ಅವರು ಯಾವ ಸಂದರ್ಭದಲ್ಲಿ, ಯಾವ ಸನ್ನಿವೇಶದಲ್ಲಿ ಯಾವ context ನಲ್ಲಿ ಆ ರೀತಿ ಹೇಳಿಕೆ ಕೊಟ್ಟಿದ್ದಾರೆ ಎಂಬುದು ಸಹ ಗೊತ್ತಾಗಬೇಕಲ್ಲವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದೆಲ್ಲವನ್ನೂ ಪತ್ರಿಕೆಯಲ್ಲಿ ತಿಳಿಸಲಾಗಿದೆ, ತಾವು ಪತ್ರಿಕೆಯನ್ನು ಓದಿ, ಗೊತ್ತಾಗುತ್ತದೆ. ನಿಮಗೆ ಪತ್ರಿಕೆ ಓದುವುದಕ್ಕೆ ಬರುವುದಿಲ್ಲವೆ?

**ಶ್ರೀ ಸಿದ್ದರಾಮಯ್ಯ:–** ಇಲ್ಲ, ನನಗೆ ಪತ್ರಿಕೆ ಓದುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಮುಖ್ಯಮಂತ್ರಿಯವರೇ, ತಾವು ನನಗೆ ಓದುವುದಕ್ಕೆ ಬರುವುದಿಲ್ಲ ಎಂದಿರಿ, ನನಗೆ ಒಂದು ಚೂರು ಓದುವುದಕ್ಕೆ ಬರುತ್ತದೆ. ಆದ್ದರಿಂದ ನಿಮಗೆ ಓದಿ ಹೇಳುತ್ತೇನೆ. ನಿಮಗೆ ಬಹಳ ಜನ ಪಿ.ಎ.ಗಳಿದ್ದಾರೆ, ಅವರ ಸಹಾಯದಿಂದ ತಾವು ನಿಮ್ಮ ಮಂತ್ರಿಗಳು ರೈತರ ಬಗ್ಗೆ, ಸುದ್ದಿಗಾರರ ಬಗ್ಗೆ ಎಷ್ಟು ಹಗುರವಾಗಿ ಮಾತನಾಡಿದ್ದಾರೆ ಎಂಬುದರ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಇಂತಹ ಭ್ರಷ್ಟ ಮಂತ್ರಿಗಳನ್ನಿಟ್ಟುಕೊಂಡು ನೀವು ಸರ್ಕಾರ ನಡೆಸುವುದು ನ್ಯಾಯವಲ್ಲ.

**ಶ್ರೀ ಸಿದ್ದರಾಮಯ್ಯ:–** ರೈತರು ಅನ್ನದಾತರು. ಅವರ ಬಗ್ಗೆ ಹಗುರವಾಗಿ, ಲಘುವಾಗಿ ಮಾತನಾಡುವ ಪ್ರಶ್ನೆಯೇ ಇಲ್ಲ. ಯಾವ ಸಂದರ್ಭ, ಸನ್ನಿವೇಶದಲ್ಲಿ ಅವರು ಮಾತನಾಡಿದ್ದಾರೆ ಎಂಬುದು ಗೊತ್ತಿಲ್ಲದೆ ಇರುವಾಗ ಅದರ ಬಗ್ಗೆ ತೀರ್ಮಾನ ಮಾಡುವುದಕ್ಕಾಗುತ್ತದೆಯೇ? ಮಾನ್ಯ ಶಾಣಪ್ಪನವರೇ, ನೀವಾದರೂ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಅಂತಹ ಮಂತ್ರಿಗಳನ್ನು ಸಂಪುಟದಿಂದ ತೆಗೆದರೆ ನಿಮ್ಮ ಸರ್ಕಾರ ಉಳಿಯುತ್ತದೆ, ಆದರೆ ನಿಮಗೆ ಸರ್ಕಾರ ಹೋಗುತ್ತದೆ ಎನ್ನುವ ಭಯವಿದೆ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಬೆಳೆಹಾನಿಯಿಂದ ಆತಂಕಕ್ಕೆ ಈಡಾಗಿರುವ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ನಾನು ಕೇಳಿದ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸ್ಪಂದಿಸಲಿಲ್ಲ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸಾಕಷ್ಟು ಸಮಯವಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸಮಯ ಸಾಕಷ್ಟಾಗಿದೆ, ಅಲ್ಲಿ ರೈತರು ಸಾಯುತ್ತಿದ್ದಾರೆ. ಆದರೆ ಸರ್ಕಾರದವರು ಬಿ.ಬಿ.ಎಂ.ಪಿ. ಚುನಾವಣೆಯಲ್ಲಿ ಸೋಲುತ್ತೇವೆಂದು ಈ ವಿಧೇಯಕವನ್ನು ಪಾಸ್ ಮಾಡಿಕೊಳ್ಳಲು ನಾಟಕ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ನಿಮ್ಮಿಂದಾಗಿ ರೈತರು ಇವತ್ತು ಕಣ್ಣೀರು ಹಾಕುತ್ತಿದ್ದಾರೆ, ನೀವೀಗ ರೈತರ ಬಗ್ಗೆ ಮಾತನಾಡುತ್ತಿದ್ದೀರಿ. ರೈತರ ಪರಿಸ್ಥಿತಿ ಬಗ್ಗೆ ನಿಮಗೆ ಇವತ್ತು ಅರ್ಥವಾಗಿದೆಯೇ? ನೀವು ರೈತರ ಜಮೀನನ್ನು ಕಿತ್ತುಕೊಳ್ಳುತ್ತಿದ್ದೀರಿ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಿಯಮ 68ರ ಅಡಿಯಲ್ಲಿ 15 ಜನ ಗೌರವಾನ್ವಿತ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದು, ಸರ್ಕಾರದ ಪರವಾಗಿ ಸಚಿವರು, ಸ್ವತಃ ಮುಖ್ಯಮಂತ್ರಿಯವರು ಸಹ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇದನ್ನು ಉತ್ತರ ಎನ್ನುತ್ತಾರೆಯೇ?

**ಸಭಾಪತಿಯವರು:–** ನಾನು ಮಾತನಾಡಿ ಮುಗಿಸುವವರೆಗೂ ಸ್ವಲ್ಪ ಕೇಳಿ, ಈ ಉತ್ತರದಿಂದ ನಮಗೆ ಸಮಾಧಾನವಾಗಿಲ್ಲ ಎಂದು ಧರಣಿ ನಡೆಸುವಂತಹ ಪ್ರಯತ್ನವನ್ನು ಸನ್ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಮಾಡುತ್ತಿದ್ದಾರೆ. ದಯಮಾಡಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಟ್ಟು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ನಾನು ತಮ್ಮೆಲ್ಲರಲ್ಲಿಯೂ ವಿನಂತಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ರೈತರ ಸಾಲ ಮನ್ನಾ ಮಾಡಬೇಕೆಂದು ನಾನು ವಿನಂತಿಸುತ್ತಿದ್ದೇನೆ.

**ಸಭಾಪತಿಯವರು:–** ಸದನ ನಡೆಯಲಿ, ಆಮೇಲೆ ನೋಡೋಣ. ಮೊದಲು ಅವರವರ ಸ್ಥಾನಗಳಿಗೆ ತೆರಳಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ರೈತರ ಸಾಲ ಮನ್ನಾ ಮಾಡುವುದಕ್ಕೆ ಏನು ತೊಂದರೆ?

**(ಗೊಂದಲ)**

**ಸಭಾಪತಿಯವರು:–** ಧರಣಿ ನಡೆಸುತ್ತಿರುವ ಸದಸ್ಯರು ಅವರವರ ಸ್ಥಾನಗಳಿಗೆ ಬರಲಿ, ಆಮೇಲೆ ಸರ್ಕಾರದವರು ಏನು ಹೇಳುತ್ತಾರೆಯೋ ಕೇಳೋಣ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಬಡ ರೈತರು, ಸಣ್ಣ ರೈತರ ಸಾಲ ಮನ್ನಾ ಮಾಡುವ ಬಗ್ಗೆಯಾದರೂ ಸರ್ಕಾರದವರು ಹೇಳಲಿ.

**ಸಭಾಪತಿಯವರು:–** ಸರ್ಕಾರದವರಿಗೆ ನೀವು ಹೀಗೆಯೇ ಮಾಡಿ ಎಂದು ನಾನು ಹೇಳುವುದಕ್ಕೆ ಬರುವುದಿಲ್ಲ. ಮೊದಲು ಧರಣಿಯಲ್ಲಿ ನಿರತರಾಗಿರುವ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಬಂದರೆ ಮಾತ್ರ ನಾನು ಏನಾದರೂ ಮಾತನಾಡಬಹುದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಬೆಳೆಹಾನಿಯ ಪರಿಣಾಮಕ್ಕೆ ಯಾವ ರೈತರು ಒಳಗಾಗಿದ್ದಾರೆ ಅವರ ಸಾಲ ಮನ್ನಾ ಮಾಡುವುದಕ್ಕೆ ದಯಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಸರ್ಕಾರ ದಯಮಾಡಿ ಸಾಲ ಮನ್ನಾ ಬಗ್ಗೆಯಾದರೂ ಒಂದು ಹೇಳಿಕೆಯನ್ನು ನೀಡುವಂತಹ ಕೆಲಸವನ್ನು ಮಾಡಿದರೆ ರೈತರು ಬದುಕುತ್ತಾರೆ, ಇಲ್ಲವಾದರೆ ರೈತರು ಸತ್ತುಹೋಗುತ್ತಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಅದೊಂದು ಹೇಳಿಕೆಯನ್ನಾದರೂ ನೀಡಬೇಕೆನ್ನುವುದು ನಮ್ಮ ವಿನಂತಿಯಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಇದೊಂದನ್ನಾದರೂ ಮಾಡಬೇಕು. ಏಕೆಂದರೆ ತಾವೆಲ್ಲರೂ ಹಾನಿಯಾಗಿರುವುದನ್ನು ನೋಡಿದ್ದೀರಿ, ಹೀಗಿರುವಾಗ ಸರ್ಕಾರಕ್ಕೆ ಆ ರೈತರ ಸಾಲವನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲವೆ? ಆ ಸಾಲವನ್ನು ಮನ್ನಾ ಮಾಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ.

**ಸಭಾಪತಿಯವರು:–** ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಿದ್ದಾರೆ, ದಯಮಾಡಿ ಎಲ್ಲರೂ ಸುಮ್ಮನಿರಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಮುಖ್ಯಮಂತ್ರಿಯವರೇ, ದಯವಿಟ್ಟು ಒಳ್ಳೆಯ ಹೇಳಿಕೆಯನ್ನು ಕೊಡಿ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು):–** ಮಾನ್ಯ ಸಭಾಪತಿಯವರೇ, ಸಹಕಾರ ಸಂಘಗಳಿಂದ ಕೊಟ್ಟಿರುವಂತಹ ಸಾಲ ಏನಿದೆ, ಅದನ್ನು re-schedule ಮಾಡೋಣ ಎಂದು ನಾನು ಅಲ್ಲಿ ಕೂಡ ಹೇಳಿದ್ದೇನೆ, ಗಂಗಾವತಿಯಲ್ಲಿ ಕೂಡ ಹೇಳಿದ್ದೇನೆ, ಅದನ್ನು ಮಾಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡುತ್ತೀರಿ. ಅದರಿಂದ ರೈತರಿಗೆ ಏನು ಲಾಭವಿದೆ?

**ಶ್ರೀ ಸಿದ್ದರಾಮಯ್ಯ:–** ನಾನು ಹೇಳುವುದನ್ನು ಕೇಳಿ, ಎಲ್ಲರೂ ಮಾಡುವುದು ಅದನ್ನೇ. ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ರೈತರು ಪಡೆದಿರುವಂತಹ ಸಾಲ ಏನಿದೆ, ಅದನ್ನು ಮಾನ್ಯ ಈಶ್ವರಪ್ಪನವರು ಕೇಂದ್ರ ಸರ್ಕಾರಕ್ಕೆ ಹೋಗಿ ಸ್ವಲ್ಪ ಮನ್ನಾ ಮಾಡಿಸಿದರೆ ರೈತರಿಗೆ ಅನುಕೂಲವಾಗುತ್ತದೆ.

**(ಆಡಳಿತ ಪಕ್ಷದ ಸದಸ್ಯರು ಮುಖ್ಯಮಂತ್ರಿಗಳ ಹೇಳಿಕೆಯನ್ನು ಮೇಜು ತಟ್ಟುವ ಮೂಲಕ ಸ್ವಾಗತಿಸಿದರು)**

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಸರ್ಕಾರದ ಇಷ್ಟು ಬೇಜವಾಬ್ದಾರಿ ಹೇಳಿಕೆಯನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿಯವರು ರೈತರ ಪರವಾಗಿಲ್ಲ, ದ್ರಾಕ್ಷಿ ಬೆಳೆ ಹಾಳಾಗಿರುವುದರ ಬಗ್ಗೆ ಬೆಳಗಾವಿಯಲ್ಲಿ ಪ್ರಸ್ತಾಪ ಮಾಡಿ ಸುಮಾರು 3 ತಿಂಗಳಾಯಿತು, ಅದಕ್ಕೆ ಸಂಬಂಧಿಸಿದಂತೆ ಸರ್ಕಾರ ಇದುವರೆಗೂ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ. ಹಾಗಾಗಿ ಬಾಯಿಗೆ ಬಂದಂತೆ ಹೇಳಿಕೆ ಕೊಡುವಂತಹ ಒಬ್ಬ ಬೇಜವಾಬ್ದಾರಿ ಮಂತ್ರಿಯನ್ನು ಇಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಯವರು ತಮ್ಮ ಕುರ್ಚಿಯನ್ನು ಭದ್ರವಾಗಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅವರಿಗೆ ಅವರ ಕುರ್ಚಿಯೇ ಮುಖ್ಯ ಎನ್ನುವಂತಹ ರೀತಿಯಲ್ಲಿ ನಡೆದುಕೊಂಡು ಆ ಬೇಜವಾಬ್ದಾರಿ ಮಂತ್ರಿಯನ್ನು ಸಚಿವ ಸಂಪುಟದಲ್ಲಿಟ್ಟುಕೊಂಡಿದ್ದಾರೆ. ರೈತರ ಪರವಾಗಿ ಒಂದು ಆಣೆಯನ್ನು ಸಹ ಪರಿಹಾರವಾಗಿ ಕೊಟ್ಟಿರುವುದಿಲ್ಲ. ಆದ್ದರಿಂದ ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾವೆಲ್ಲರೂ ಸಭಾತ್ಯಾಗ ಮಾಡುತ್ತಿದ್ದೇವೆ.

**(ವಿರೋಧ ಪಕ್ಷದ ನಾಯಕರೂ ಒಳಗೊಂಡಂತೆ ಬಿ.ಜೆ.ಪಿ ಪಕ್ಷದ ಎಲ್ಲ ಸದಸ್ಯರೂ ಸಭಾತ್ಯಾಗ ಮಾಡಲನುವಾದರು)**

**ಶ್ರೀ ಬಸವರಾಜ ಹೊರಟ್ಟಿ:–** ರೈತರ ಸಾಲ ಮನ್ನಾ ಮಾಡದ ಸರ್ಕಾರದ ವಿರುದ್ಧವಾಗಿ ಪ್ರತಿಭಟಿಸಿ ನಾವು ಸಹ ಸಭಾತ್ಯಾಗ ಮಾಡುತ್ತಿದ್ದೇವೆ.

**(ಜೆ.ಡಿ.ಎಸ್. ಪಕ್ಷದ ಸದಸ್ಯರು ಸಹ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಲನುವಾದರು)**

**ಶ್ರೀ ಐವನ್ ಡಿ'ಸೋಜಾ:–** ಸಾಲ ಮನ್ನಾ ಮಾಡಲು ಕೇಂದ್ರದಿಂದ ದುಡ್ಡು ತರಲಿ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಸಹ ಮನವಿ ಮಾಡಿಕೊಳ್ಳುತ್ತೇನೆ, ಮುಖ್ಯಮಂತ್ರಿಗಳು ನಿಮ್ಮ ನಿರೀಕ್ಷಣೆಗಳಿಗೂ ಮೀರಿ ಅತ್ಯುತ್ತಮವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ದಯಮಾಡಿ ತಮ್ಮ ಸ್ಥಾನಗಳಿಗೆ ತೆರಳುವ ಮೂಲಕ ಕಲಾಪವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಎಲ್ಲ ವಿರೋಧ ಪಕ್ಷದ ಸದಸ್ಯರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

**(ಸರ್ಕಾರದ ವಿರುದ್ಧ ಘೋಷಣೆಗಳು ಮೊಳಗಿದವು)**

**ಸಭಾಪತಿಯವರು:–** ನಾನು ಪುನಃ ಕೇಳುತ್ತೇನೆ, ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನವನ್ನು ಸುಗಮವಾಗಿ ನಡೆಸಲು ಅನುಕೂಲ ಮಾಡಿಕೊಡಿ. ಸದನವನ್ನು ನಡೆಸೋಣ. ಗೌರವಾನ್ವಿತ ಸದಸ್ಯರೆಲ್ಲರೂ ಧರಣಿ ಮಾಡುತ್ತಿದ್ದರೆ ನಾನು ಸದನವನ್ನು ನಡೆಸುವುದಕ್ಕಾಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಸದನ ಸುಗಮವಾಗಿ ನಡೆಯಬೇಕೆನ್ನುವ ಕಾರಣಕ್ಕಾಗಿಯೇ ನಾವು ಆ ರೈತರ ಪರವಾಗಿ ಈ ಸದನದಲ್ಲಿ ಧ್ವನಿ ಎತ್ತುತ್ತಿದ್ದೇವೆ. ಈ ಸರ್ಕಾರಕ್ಕೆ ಮೂಗು, ಕಿವಿ, ಹೃದಯ ಯಾವುದೂ ಇಲ್ಲ. ಇವರು ಆ ರೈತರಿಗೆ ದ್ರೋಹ ಮಾಡುತ್ತಿದ್ದಾರೆ. ಇದು ನ್ಯಾಯ ಅಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ರೈತರ ಜಮೀನನ್ನೇನು ಕಿತ್ತುಕೊಳ್ಳುತ್ತಿದ್ದಾರೆ ಅವರಿಗೂ ತಾವು ಈ ಮಾತನ್ನು ಸ್ವಲ್ಪ ಹೇಳಿ. ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಕೊಪ್ಪಳ ಜಿಲ್ಲೆಯಲ್ಲಿ ರೈತರಿಗೆ ಗುಂಡು ಹೊಡೆದಿದ್ದನ್ನು ಮರೆತುಬಿಟ್ಟಿರಾ?

(ಗೊಂದಲ)

**ಸಭಾಪತಿಯವರು:–** ಸರ್ಕಾರದ ಪರವಾಗಿ ತಾವು ಮನವಿ ಮಾಡಿಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಮನವಿ ಮಾಡಿಕೊಂಡಿದ್ದೀರಿ, ನಾನೂ ಕೂಡ ಮನವಿ ಮಾಡಿಕೊಂಡಿದ್ದೇನೆ. ಆದರೂ ಕೂಡ ಪ್ರತಿಪಕ್ಷದವರು ಧರಣಿಯಲ್ಲಿ ನಿರತರಾಗಿದ್ದಾರೆ. ದಯಮಾಡಿ ವಿಧೇಯಕವನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಈಗ ಬಿಬಿಎಂಪಿ ಚುನಾವಣೆ ಬರುತ್ತಿದೆ, ಇವರಿಗೆ ಕುರ್ಚಿ ಉಳಿದುಕೊಳ್ಳಬೇಕು, ಅದಕ್ಕೋಸ್ಕರ ವಿಧೇಯಕ ತೆಗೆದುಕೊಳ್ಳಿ. ಇದುಯಾವ ಸೀಮೆಯ ಆಡಳಿತವೆಂದು ನನಗಂತೂ ಅರ್ಥವಾಗುತ್ತಿಲ್ಲ. ಇಷ್ಟು ಬೇಜವಾಬ್ದಾರಿ ಸರ್ಕಾರ ಯಾವುದೂ ಇರಲಿಲ್ಲ.

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಮುಂದಿನ ಕಲಾಪಕ್ಕೆ ಹೋಗಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ದಯಮಾಡಿ ವಿಧೇಯಕವನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಮಗೆ ಮನವಿ ಮಾಡುವುದಲ್ಲ. ರೈತರ ಪರವಾಗಿ ಮನವಿ ಮಾಡಿಕೊಳ್ಳಲಿ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಕದಲ್ಲಿಯೇ ಇದ್ದಾರೆ ತಾಕತ್ತಿದ್ದರೆ ಹೇಳಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸರಿಯಾದಂತಹ ಉತ್ತರ ಕೊಟ್ಟಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಏನು ಉತ್ತರ ಕೊಟ್ಟಿದ್ದಾರೆ, ಉತ್ತರ ತೆಗೆದುಕೊಂಡು ಬೆಂಕಿಗೆ ಹಾಕಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರಿ ಬ್ಯಾಂಕುಗಳಲ್ಲಿ ಇರುವಂತಹ ಸಾಲವನ್ನು ರೀ–ಶೆಡ್ಯೂಲ್ ಮಾಡುತ್ತೇವೆಂದು ಹೇಳಿದ್ದಾರೆ. ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದಂತಹ ಸಾಲವನ್ನು ನಿಮ್ಮ ಪ್ರಧಾನ ಮಂತ್ರಿಗಳಾದಂತಹ ಮಾನ್ಯ ನರೇಂದ್ರ ಮೋದಿಯವರಿಗೆ ಹೇಳಿ ಅದನ್ನೂ ಕೂಡ ನೀವು ರೀ–ಶೆಡ್ಯೂಲ್ ಮಾಡುವಂತಹ ಕೆಲಸ ಮಾಡಿ. ರೈತರ ಪರವಾಗಿ ನೀವು ದಾವಿಸಬೇಕಲ್ಲವೆ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನಿಮ್ಮ ಮನಮೋಹನ್‌ಸಿಂಗ್‌ಗೆ ....

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಮನ್‌ಮೋಹನ್‌ಸಿಂಗ್‌ರವರು ಎಷ್ಟು ಪಾಪ್ಯುಲರ್ ಇದ್ದಾರೆಂದರೆ ಅವರು ರೈತರು ಕಷ್ಟದಲ್ಲಿದ್ದಾಗ ಸುಮಾರು 75 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದ್ದರು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮುದುಕಿ ತುರುಬು ನೆನಪಿಸಿಕೊಳ್ಳುತ್ತಿದ್ದಳಂತೆ, ನನ್ನ ಕಾಲದಲ್ಲಿ ತುರುಬು ಹಂಗಿತ್ತು, ಹಿಂಗಿತ್ತು ಎಂದು ನೆನಪಿಸಿಕೊಳ್ಳುತ್ತಿದ್ದಳಂತೆ. ಆದರೆ ಈಗಿನ ಪರಿಸ್ಥಿತಿ ಹೇಳಿ.

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ್:–** ಒಂದು ವೈಮಾನಿಕ ಸಮೀಕ್ಷೆಯಾಗಲಿ.

**ಸಭಾಪತಿಯವರು:–** ದಯವಿಟ್ಟು ಎಲ್ಲರು ಕುಳಿತುಕೊಳ್ಳಿ. ಈಗಾಗಲೆ ಕಾರ್ಯದರ್ಶಿಯವರು ಕೆಳಮನೆಯಿಂದ ಬಂದಿರುವಂತಹ ವಿಧೇಯಕವನ್ನು ಕಾಗದ ಪತ್ರಗಳೊಂದಿಗೆ ಸಭೆಯ ಮುಂದೆ ಮಂಡಿಸಿದ್ದಾರೆ. ಅದರ ಬಗ್ಗೆ ದೀರ್ಘವಾಗಿ ಮಾತನಾಡಬೇಕು, ಚರ್ಚೆ ಮಾಡಬೇಕು, ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವಂತಹ ಅಭಿಪ್ರಾಯ ಎಲ್ಲರಿಗೂ ಇದೆ. ಆ ಹಿನ್ನೆಲೆಯಲ್ಲಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ತಮಗೆಲ್ಲರಿಗೂ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಬಂಡ ಸರ್ಕಾರ. ರೈತರ ಪರವಾಗಿಲ್ಲ. ಬಂಡತನದ ಸಚಿವರನ್ನು ಸಚಿವ ಸಂಪುಟದಲ್ಲಿ ಇಟ್ಟುಕೊಂಡಿದ್ದಾರೆ, ಎಷ್ಟು ಹೇಳಿದರು ಕೇಳುವುದಿಲ್ಲ, ಉಗಿಯುವುದು ಒಂದೇ ಬಾಕಿ ಇರುವುದು. ಆದುದರಿಂದ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿ ಸದನದಿಂದ ಹೊರ ನಡೆದರು)**

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಇವರಿಗೆ ಮಾನ ಮರ್ಯಾದೆ ಇಲ್ಲ.

**ಸಭಾಪತಿಯವರು:–** ಸಭೆಯಲ್ಲಿ ಸ್ವಲ್ಪ ಶಾಂತತೆ ನೆಲೆಸಿದರೆ ನಾನು ಮುಂದಿನ ವಿಷಯಕ್ಕೆ ಹೋಗಬಹುದು.

**(ಸಭಾತ್ಯಾಗ ಮಾಡಿದ್ದ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಪುನಃ ಸದನಕ್ಕೆ ಹಿಂತಿರುಗಿದರು)**

**ಶ್ರೀ ಹೆಚ್.ಎಂ. ರೇವಣ್ಣ:–** ನಾಟಕ, ನಾಟಕ, ರಾಮಕೃಷ್ಣ ಸದಾರಮೆ ನಾಟಕ!

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರು ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ 2015ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, Point of Order.

**ಸಭಾಪತಿಯವರು:–** ಇಲ್ಲ. ಇದಕ್ಕೆ Point of Order ಬರುವುದಿಲ್ಲ. I am in the midst of....

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದೆ, 2ನೇ ತಾರೀಖು ತೀರ್ಮಾನ ಕೊಡುವವರಿದ್ದಾರೆ. It becomes subjudice.

**ಸಭಾಪತಿಯವರು:–** ನಿಯಮ 68ರ ಮೇಲಿನ ಚರ್ಚೆ ಮುಗಿದು ಹೋಗಿದೆಯೆಂದು ನಾನು ಹೇಳಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಇದರ ಬಗ್ಗೆ subjudice ಆಗುತ್ತದೆ. The matter of trifurcation of BBMP becomes subjudice.

**ಸಭಾಪತಿಯವರು:–** ಮೊದಲು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಸಚಿವರು ಮಂಡಿಸಲಿ. ನಂತರ ಅದರ ಬಗ್ಗೆ ಹೇಳುತ್ತಾರೆ.

## 11. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## ಕರ್ನಾಟಕ ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ 2015

## ಪರ್ಯಾಲೋಚನ ಪ್ರಸ್ತಾವ

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕರ್ನಾಟಕ ಮಹಾನಗರ ಪಾಲಿಕೆ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿರುವಂತಹ ಒಂದು ನಗರ. ಬೆಂಗಳೂರು ನಗರ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದಂತಹ ವಿಶೇಷವಾದಂತಹ ಮಾನ್ಯತೆ ಪಡೆದಿದೆ. ಆದರೆ ಬೆಂಗಳೂರಿನಲ್ಲಿ ಸ್ಥಳೀಯವಾಗಿ ಆಡಳಿತ ಕೊಡುವಂತಹ ವ್ಯವಸ್ಥೆ ಯಾವ ರೀತಿ ಇತ್ತು ಎಂದರೆ, ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವದಲ್ಲಿತ್ತು. ಅದನ್ನು 2006ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ಕಾನೂನಿನಲ್ಲಿ ಒಂದು ತಿದ್ದುಪಡಿಯನ್ನು ತರುವ ಮುಖಾಂತರ ಪಾಲಿಕೆಯನ್ನು ರಚನೆ ಮಾಡಲಾಯಿತು.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಪಾಲಿಕೆ ರಚನೆಯಾಗಿ 5 ವರ್ಷಗಳ ಕಾಲ ಆಡಳಿತವನ್ನು ನಡೆಸಿರುವಂತಹ ಸಂದರ್ಭದಲ್ಲಿ ಬಿಬಿಎಂಪಿ ಎಷ್ಟರಮಟ್ಟಿಗೆ ಬೆಂಗಳೂರಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿದೆ, ಎಷ್ಟರ ಮಟ್ಟಿಗೆ ಜನರನ್ನು ಸ್ಪಂದಿಸುವಂತಹ ಕೆಲಸ ಮಾಡಿದೆ, ಎಷ್ಟರಮಟ್ಟಿಗೆ ಜನರ ನಿರೀಕ್ಷೆಗಳನ್ನು ಪೂರೈಸುವುದರಲ್ಲಿ ಸಾರ್ಥಕವಾಗಿದೆ ಎನ್ನುವುದನ್ನು ಅವಲೋಕಿಸಿದಾಗ ಅದು ಎಲ್ಲೋ ಒಂದು ಕಡೆ ನಾವು ನಿರೀಕ್ಷೆ ಮಾಡಿದ ಮಟ್ಟಕ್ಕೆ ಅದು ಸಾಫಲ್ಯವಾಗಲಿಲ್ಲ. ಅನೇಕ ಸಲ ಬಿಬಿಎಂಪಿ ವಿಚಾರ ಪ್ರಸ್ತಾಪವಾದಂತಹ ಸಂದರ್ಭದಲ್ಲಿ ನ್ಯಾಯಾಲಯಗಳಲ್ಲಿ ಇದರ ಬಗ್ಗೆ ಕಟುವಾದಂತಹ ಟೀಕೆಗಳು ಕೇಳಿಬಂದವು. ಅದೇ ರೀತಿ ಮಾಧ್ಯಮಗಳಲ್ಲಿಯೂ ಸಹ ಒಂದಲ್ಲ ಒಂದು ರೀತಿಯಲ್ಲಿ ಟೀಕೆಗಳು ಬರುತ್ತಿದ್ದುದ್ದನ್ನು ನಾವು ನೋಡುತ್ತಿದ್ದೇವೆ.

ಬಹುಶಃ ಬೆಂಗಳೂರು ತನ್ನದೇ ಆದಂತಹ ವೈಭವವನ್ನು ಮೆರೆದಿರುವಂತಹ ಒಂದು ಪ್ರದೇಶ. ಕೆಂಪೇಗೌಡರ ಕಾಲದಿಂದ ಇಲ್ಲಿಯವರೆಗೂ ಬೆಂಗಳೂರು ಎಂದರೆ ಬಹುಶಃ ವಾಸಿಗರಿಗೆ ಇದೊಂದು ಸ್ವರ್ಗ ಎನ್ನುವ ರೀತಿಯಲ್ಲಿ ವ್ಯಾಖ್ಯಾನವಾಗುತ್ತದೆ. ಪ್ರಪಂಚದ ಮತ್ತು ದೇಶದ ಅನೇಕ ಭಾಗದ ಜನರು ಬೆಂಗಳೂರು ಕಡೆಗೆ ಬರಬೇಕು, ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು, ನೆಲೆಸಬೇಕು ಎಂಬ ಆಸೆಯನ್ನು ಇಟ್ಟುಕೊಂಡಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಕೆಂಪೇಗೌಡರು ಸೃಷ್ಟಿಮಾಡಿದಂತಹ ಎಲ್ಲೆ ಏನಿತ್ತು, ಆ ಎಲ್ಲೆಯನ್ನು ಮೀರಿ ಅದರ ನಾಲ್ಕೈದರಷ್ಟು ಬೆಂಗಳೂರು ಬೆಳೆದಿದೆ. ಈ ಹಿಂದೆ ಇದ್ದಂತಹ ಬೆಂಗಳೂರಿಗೂ, ಈಗ ಇರುವಂತಹ ಬೆಂಗಳೂರಿಗೂ ಸುಮಾರು 800 ಸ್ಕ್ವೇರ್ ಕಿ.ಲೋ. ಮೀಟರ್‌ನಷ್ಟು ದೊಡ್ಡದಾಗಿ ವಿಸ್ತಾರವಾಗಿ ಬೆಳೆದಿದೆ. ಬೆಂಗಳೂರು 2012ರ ಸೆನ್ಸಸ್ ಪ್ರಕಾರ 85 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯುಳ್ಳಂತಹ ಪ್ರದೇಶವಾಗಿದೆ. ಈಗ ನಾವು ಲೆಕ್ಕ ಹಾಕುವುದಾದರೆ ಬಹುಶಃ ಒಂದು ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ.

(7–30 ಗಂಟೆ)

(ಉಪ ಸಭಾಪತಿಯವರ ಉಪಸ್ಥಿತಿ)

ಎಲ್ಲೋ ಒಂದು ಕಡೆ ಬಿಬಿಎಂಪಿ ಸ್ಥಳಿಯವಾಗಿ ಅಧಿಕಾರದ ಮುಖೇನ ಮುಖ್ಯವಾಗಿ ಕಸ ವಿಲೇವಾರಿ, ಚರಂಡಿಗಳ ನಿರ್ಮಾಣ, ಇಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಮಳೆ ಬಂದಲ್ಲಿ ಯಾರು ಕೂಡ ನೆಮ್ಮದಿಯಾಗಿ ಇರುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದರಲ್ಲಿಯೂ ವಿಶೇಷವಾಗಿ ಸ್ಲಮ್‌ನಲ್ಲಿರುವ ಜನರು, ಇನ್ನು ಅಭಿವೃದ್ಧಿ ಹೊಂದದ ಪ್ರದೇಶದಲ್ಲಿರುವಂತವರು ಮಳೆ ಬಂದರೆ ರಾತ್ರಿ ಎಲ್ಲಾ ಎದ್ದು ಜಾಗರಣೆ ಮಾಡುವಂತಹ, ಒಂಟಿ ಕಾಲಿನಲ್ಲಿ ನಿಂತು ಕಾಯುವಂತಹ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಇಂತಹ ವಾತಾವರಣ ಇರಬೇಕಾದಾಗ ಇದೆಲ್ಲದರ ಪರಿಹಾರಕ್ಕಾಗಿ ಈಗಾಗಲೇ ಒಂದು ಮಸೂದೆಯನ್ನು ತರಲಾಗಿದೆ. ಕೆಳಮನೆಯಲ್ಲಿ ಈ ಮಸೂದೆಯ ಬಗ್ಗೆ ಬೆಳಗ್ಗಿನಿಂದಲೂ ಚರ್ಚೆ ಆಗಿ, ಸದನದ ಒಪ್ಪಿಗೆಯನ್ನು ಪಡೆದಿದೆ. ಈಗ ಈ ಸದನದಲ್ಲಿ ಆ ಮಸೂದೆಯನ್ನು ಮಂಡಿಸಲಾಗಿದೆ. ನಾವು ಬಿಲ್ ತಂದಿರುವ ಉದ್ದೇಶ ಏನೆಂದರೆ ಈ ಬಿಬಿಎಂಪಿಯನ್ನು ಸಮಾಪ್ತಿಗೊಳಿಸಬೇಕೆಂದು ಮತ್ತು ಅದರ ಜಾಗದಲ್ಲಿ 2–3 ಕಾರ್ಪೊರೇಷನ್‌ಗಳನ್ನು ಮಾಡಬೇಕೆಂದು ಆಡಳಿತದ ದೃಷ್ಟಿಯಿಂದ ಮತ್ತು ಸಂವಿಧಾನ ಬದ್ಧವಾದ ಅಧಿಕಾರದ ಹಿನ್ನೆಲೆಯಲ್ಲಿ ಅದರ ಅವಶ್ಯಕತೆ ಇದೆ ಎಂದು ಭಾವಿಸಿ., ಅದೊಂದು ಬದಲಾವಣೆಯನ್ನು ತಂದಿದ್ದೇವೆ. ದಯಮಾಡಿ ಈ ಸದನದಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ ಬೆಂಗಳೂರಿನ ಭವಿಷ್ಯದ ದೃಷ್ಟಿಯಿಂದ ಮತ್ತು ಇವತ್ತು ಬೆಂಗಳೂರಿನಲ್ಲಿ 1 ಕೋಟಿಗೂ ಹೆಚ್ಚಿನ ಜನಸಂಖ್ಯೆ ಆಗಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ, ರಸ್ತೆಗಳ ಸಮಸ್ಯೆ,

ಚರಂಡಿಗಳ ಸಮಸ್ಯೆ ಇರಬಹುದು, ಕಸ ವಿಲೇವಾರಿ ಮಾಡಿರುವ ಸಂದರ್ಭದಲ್ಲಿರಬಹುದು, ಯಾವುದರಲ್ಲಿಯೂ ನಾವು ನಿರೀಕ್ಷೆ ಮಾಡಿದಷ್ಟು ಸಾಧನೆ ಆಗಲಿಲ್ಲ. ಸರ್ಕಾರ ನಾವು ಹಣ ನೀಡುತ್ತೇವೆ. ಕಳೆದ 5 ವರ್ಷಗಳಲ್ಲಿ ಸರ್ಕಾರ ಸರಿಸುಮಾರು 1000 ಕೋಟಿಯಷ್ಟು ಹಣ ನೀಡಿದರೂ ಸಹ ಇವತ್ತು ಅಲ್ಲಿ ನಡೆದಿರುವ ಅವ್ಯವಹಾರವನ್ನು ಲೆಕ್ಕ ಹಾಕಿಕೊಂಡಾಗ ಮತ್ತು ಅವರು ಮಂಡಿಸತಕ್ಕ ಬಜೆಟ್ ಅನ್ನು ಲೆಕ್ಕ ಹಾಕಿಕೊಂಡಾಗ ಮತ್ತು ಅಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಲೆಕ್ಕ ಹಾಕಿಕೊಂಡಾಗ ಸುಮಾರು 9000 ಕೋಟಿಗೂ ಹೆಚ್ಚು ಇವತ್ತು ಬಿಲ್‌ಗಳು ಪೆಂಡಿಂಗ್ ಇವೆ. ಮತ್ತು ಇದನ್ನು ಯಾವುದೇ ರೀತಿಯಿಂದಲೂ ಸಹ ಸುಧಾರಣೆ ಮಾಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ನಾವು ಸರ್ಕಾರದಿಂದ ನೀಡುವ 1000 ಕೋಟಿ ಹಣದಿಂದ ಯಾವುದೇ ರೀತಿಯ ಸುಧಾರಣೆ ಆಗುವುದಿಲ್ಲ. ತತ್ಪರಿಣಾಮ ಏನಾಗಿದೆ ಎಂದರೆ ಒಂದು ವರ್ಷದಿಂದಲೂ ಬಿಲ್ ಕಟ್ಟದೆ ಎಲ್ಲಾ ಟೆಲಿಫೋನ್‌ಗಳು ಕಟ್ ಆಗಿವೆ. ಅಲ್ಲಿನ ಪೌರಕಾರ್ಮಿಕರಿಗೂ ಸಹ 6–7 ತಿಂಗಳುಗಳಿಂದ ಸಂಬಳವನ್ನು ನೀಡುವುದಕ್ಕೆ ಸಾಧ್ಯವಾಗಿಲ್ಲ. ವಾಹನಗಳು ಸಹ ಓಡಾಡದ ಮಟ್ಟದಲ್ಲಿ ನಿಂತುಹೋಗಿವೆ. ಉನ್ನತ ಮಟ್ಟದಲ್ಲಿರುವ ಅಧಿಕಾರಿಗಳಿಗೂ ಸಹ ಸಂಬಳವನ್ನು ನೀಡುವುದಕ್ಕೆ ಆಗುತ್ತಿಲ್ಲ. ಆ ಕಾರಣಕ್ಕಾಗಿ ಇದಕ್ಕೆ ಹೊಸ ಚೈತನ್ಯವನ್ನು ತರುವುದಕ್ಕೆ ಸಾಧ್ಯವೇ ಎನ್ನುವುದನ್ನು ಚಿಂತನೆ ಮಾಡಿ., ಸರ್ಕಾರ ಈಗಾಗಲೇ ಒಂದು ಸಮಿತಿಯನ್ನು ನೇಮಕ ಮಾಡಿ, ಆ ಸಮಿತಿಯು ನೀಡಿದಂತಹ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಇವತ್ತು ಸಚಿವ ಸಂಪುಟದಲ್ಲಿ ವ್ಯಾಪಕವಾಗಿ ಸರ್ಕಾರ ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬಂದಿದೆ. ಈ ಬಿಬಿಎಂಪಿಯನ್ನು 3 ಕಾರ್ಪೊರೇಷನ್‌ಗಳಾಗಿ ವಿಭಾಗವನ್ನು ಮಾಡಿ., ಮತ್ತು ಸಂವಿಧಾನ ಬದ್ಧವಾಗಿರುವುದನ್ನು delimitation ಅನ್ನು ಕೂಡ ಮಾಡಬೇಕಾಗಿರುತ್ತದೆ. Delimitation ಅನ್ನುವುದು ಅಧಿಕಾರಯುತವಾಗಿ ಸಂವಿಧಾನದ ಪ್ರಕಾರವಾಗಿ ಆಗಲೇಬೇಕಾಗುತ್ತದೆ. ಇವತ್ತು delimitation ಆಗಬೇಕಾದರೆ ಅದಕ್ಕೆ ಕೆಲವು ನಿಯಮಗಳು ಬೇಕಾಗುತ್ತದೆ. ಇಲ್ಲಿಯವರೆಗೆ ಅದಕ್ಕೆ ಯಾವುದೇ ನಿಯಮಗಳು delimitation ಆಗುತ್ತಿರುವ ಪರಿಣಾಮ ಏನಾಗಿದೆ ಎಂದರೆ ಕೆಲವು ಭಾಗಗಳಲ್ಲಿ 95,000 ಮತದಾರರಿದ್ದಾರೆ, ಕೆಲವು ಕಡೆ 21,000 ಮತದಾರರಿದ್ದಾರೆ. ಕೆಲವು ಕಡೆ 18,000 ಮತದಾರರು ಇದ್ದಾರೆ. ಇನ್ನೊಂದು ಕಡೆ 85,000 ಇದ್ದಾರೆ. ಈ ರೀತಿಯಾದಂತಹ ತಾರತಮ್ಯ ಆಗುವುದರಿಂದ ಅಲ್ಲಿನ ಜನರಿಗೆ ತೊಂದರೆ ಆಗುತ್ತದೆ. ಸರ್ಕಾರಕ್ಕೂ ಹಾಗೂ ಬಿಬಿಎಂಪಿಯವರಿಗೂ ಸಹ ಹಣವನ್ನು ನೀಡುವಾಗ ವಾರ್ಡುವಾರು ಹಣ ನೀಡಿದಂತಹ ಸಂದರ್ಭದಲ್ಲಿ ಈ ಜನಸಂಖ್ಯೆಯ ವ್ಯತ್ಯಾಸದಿಂದ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಚ್ಚಿದಂತಾಗುತ್ತದೆ. ಇದನ್ನೆಲ್ಲ ತಪ್ಪಿಸಬೇಕಾದರೆ ಎಲ್ಲೋ ಒಂದು ಶಾಶ್ವತ ಪರಿಹಾರವನ್ನು ನೀಡಬೇಕಾದರೆ ಇದಕ್ಕೆ ಒಂದು ಕಾಯಕಲ್ಪವನ್ನು ನೀಡಬೇಕೆನ್ನುವ ಉದ್ದೇಶದಿಂದ ಈ ಮಸೂದೆಯನ್ನು ನಾವು ತಂದಿದ್ದೇವೆ. ಈ ಮಸೂದೆಗೆ ದಯಮಾಡಿ ಈ ಸದನ ಒಪ್ಪಿಗೆಯನ್ನು ನೀಡಬೇಕೆಂದು

ಬೆಂಗಳೂರಿನ ಅಭಿವೃದ್ಧಿಯ ದೃಷ್ಟಿಯಿಂದ, ಬೆಂಗಳೂರಿನ ಭವಿಷ್ಯದ ದೃಷ್ಟಿಯಿಂದ, ಬೆಂಗಳೂರಿಗಿರುವ ಗತವೈಭವವನ್ನು ಎಂದಿಗೂ ಕಾಪಾಡಬೇಕೆನ್ನುವ ದೃಷ್ಟಿಯಿಂದ ಮತ್ತು ಮೂಲಭೂತ ಸೌಕರ್ಯಗಳನ್ನು ನೀಡುವಲ್ಲಿ ಆಗಿರುವ ಕೊರತೆಯಿಂದ ಇದರಿಂದ ಉಂಟಾಗಿರುವ ಕಳಂಕವನ್ನು ತೊಡೆದುಹಾಕುವ ಸಲುವಾಗಿ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಶಕ್ತಿಯನ್ನು ನೀಡಬೇಕೆಂದು ಇದಕ್ಕೆ ಸಂಪನ್ಮೂಲವನ್ನು ರೂಢಿಸುವಂತಹ ಕೆಲಸ ಆಗಬೇಕೆಂದು ಈ ಮಸೂದೆಯನ್ನು ತರಲಾಗಿದೆ. ದಯಮಾಡಿ ಈ ಮಸೂದೆಗೆ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿ. ಸೋಮಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳು ಈಗ ಬೆಂಗಳೂರು ನಗರಕ್ಕೆ ಒಂದು ಮರಣ ಶಾಸನ ಬರೆಯಲು ಹೊರಟಿದ್ದಾರೆ. ಅನುಭವದ ಚಿಂತನೆ ಇದ್ದರೂ ಕೂಡ ಈ ನಗರದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಮಾಹಿತಿ ಇದ್ದರೂ ಕೂಡ ಈ ನಗರವನ್ನು ಯಾವ ರೀತಿ ಮುನ್ನಡೆಸಬೇಕೆನ್ನುವ ಒಂದು ಯೋಚನೆಯನ್ನು ಮಾಡದೆ ಇಂತಹ ಒಂದು ಕರಾಳ ಶಾಸನವನ್ನು ರಾಜ್ಯದ ರಾಜಧಾನಿಯಾದ ಬೆಂಗಳೂರಿಗೆ, ಪ್ರಪಂಚದ ಭೂಪಟದಲ್ಲಿ ಒಂದು ದೊಡ್ಡ ಸ್ಥಾನವನ್ನು ಪಡೆದಿರುವಂತಹ ಈ ಮೆಟ್ರೊಪಾಲಿಟನ್ ಸಿಟಿಗೆ ಒಂದು ಕಂಟಕಪ್ರಾಯವಾದ ಒಂದು ಕಾಯಿದೆಯನ್ನು ಮಂಡಿಸಿ, ರಾಜ್ಯದ ರಾಜಧಾನಿಯನ್ನು ಹೈದರಾಬಾದ್‌ನ ಸೀಮಾಂಧ್ರ ಮತ್ತು ತೆಲಂಗಾಣದ ಮಾದರಿಯಲ್ಲಿ ಬೆಂಗಳೂರನ್ನು ಮಾಡತಕ್ಕ ರೀತಿಯಲ್ಲಿ ಮಾಡಿರುವ ಈ ಚಿಂತನೆ ನಾನು ಕಂಡಂತಹ ಸಿದ್ದರಾಮಯ್ಯನವರಿಗೆ ರಾಜ್ಯದ ಮುಖ್ಯಮಂತ್ರಿಗಳಿಗೆ ಅನುಭವದ ಚಿಂತನೆ ಇದೆ ಎನ್ನುವ ಭಾವನೆಯೊಳಗೆ ನಾವು ಕೂಡ ಅವರೊಡನೆ ಸಚಿವರುಗಳಾಗಿ ಕೆಲಸವನ್ನು ಮಾಡಿದ್ದೇವೆ. ಆದರೆ ಇವತ್ತು ಈ ರಾಜ್ಯದ ರಾಜಧಾನಿಗೆ ಒಂದು ಮರಣಶಾಸನವನ್ನು ಬರೆಯುವ ಹಾಗೆ ರಾಜ್ಯದ ಮುಖ್ಯಮಂತ್ರಿಗಳು ಈ ವಿಧೇಯಕವನ್ನು ಮಂಡನೆ ಮಾಡಿದ್ದಾರೆ. ಗೌರವಾನ್ವಿತ ಕಾನೂನು ಸಚಿವರು ಪಂಡಿತರು, ಯಾವುದನ್ನು ಹೇಗೆ ಬೇಕಾದರೂ ಹೇಳುತ್ತಾರೆ. ಒಂದೊಂದು ಸಲ ನಾಣಯ್ಯನವರು ಈ ಸದನದಲ್ಲಿಲ್ಲ ಎನ್ನುವ ಕೊರಗು ನಮ್ಮನ್ನು ಕಾಡುತ್ತಿತ್ತು., ಆದರೆ ನಾಣಯ್ಯನವರನ್ನು ಮೀರಿಸತಕ್ಕ ಕೆಲವು ಅನುಭವ, ಹಾಗೂ ವಿಚಾರಗಳನ್ನು ಚಾಕಚಕ್ಯತೆಯಿಂದ ಹೇಳತಕ್ಕ ಪರಿಣಿತಿಯನ್ನು ಅವರು ಪಡೆದಿದ್ದೀರಿ. ನಿಜವನ್ನು ಸುಳ್ಳು ಮಾಡುವುದಾಗಲಿ, ಸುಳ್ಳನ್ನು ನಿಜ ಮಾಡುವುದಾಗಲಿ ಅನುಭವ ಅವರಿಗಿದೆ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುವ ಕೆಲಸವನ್ನು ಮಾಡಿ ಒಂದು ಬೃಹತ್ ಬೆಂಗಳೂರು ಪಾಲಿಕೆಯನ್ನು ಒಂದು ನಗರಸಭೆಯನ್ನಾಗಿ ಮಾಡುವಂತಹ ಕೆಲಸ ಸರ್ಕಾರ ಮಾಡುತ್ತಿದೆ. ಬೆಂಗಳೂರು ನಗರಕ್ಕೆ ತನ್ನದೇ ಆದ ಒಂದು ಇತಿಹಾಸವಿದೆ. ಕಸ ಗುಡಿಸುವುದು ರಸ್ತೆಗಳ ನಿರ್ಮಾಣ ಮಾತ್ರವಲ್ಲದೇ ಬೆಂಗಳೂರು ನಗರದಲ್ಲಿ ಬೆಂಗಳೂರು ನಗರ ಪಾಲಿಕೆ, ಬೆಂಗಳೂರು ಒಳಚರಂಡಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಬಿಎಂಆರ್‌ಡಿಎ, ಬಿಡಿಎ, ಬಿಎಂಆರ್‌ಸಿಎಲ್, ಬೆಸ್ಕಾಂ, ಕೆಪಿಟಿಸಿಎಲ್, ಬಿಎಂಟಿಸಿ, ಕೊಳಚೆ ಅಭಿವೃದ್ಧಿ

ಮಂಡಳಿ ಇವೆಲ್ಲ ಸ್ಥಾಯಿ ಸಂಸ್ಥೆಗಳ ಮಧ್ಯದಲ್ಲಿ ಯಾವುದಾದರೂ ಒಂದು ಸಂಸ್ಥೆ ಇದೆ ಎಂದರೆ ಅದು ಬೆಂಗಳೂರು ಮಹಾನಗರ ಪಾಲಿಕೆ, ನಾನು ಹಿಂದೆ ಸಚಿವನಾಗಿದ್ದಾಗ ಈಗಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಅಂದು ಉಪಮುಖ್ಯಮಂತ್ರಿಗಳಾಗಿದ್ದರು. ಆಗ ಅವರು ಬೆಂಗಳೂರನ್ನು ವಿಭಜನೆ ಮಾಡುವ ಅವಶ್ಯಕತೆ ಇಲ್ಲ, ಬೆಂಗಳೂರಿಗೆ 1996ರಲ್ಲಿ ನಡೆದಂತಹ ಚುನಾವಣೆಯಲ್ಲಿ ಅದರ ನೇತೃತ್ವವನ್ನು ವಹಿಸಿ ಬೆಂಗಳೂರನ್ನು Mayor-in-Council ಮಾಡಬೇಕೆಂದು ಒಂದು ದೊಡ್ಡ ಸಂದೇಶವನ್ನು ಕೊಟ್ಟಿರುವವರು ಇಂದು ಮುಖ್ಯಮಂತ್ರಿಗಳಾಗಿ ಈ ಕೆಲಸವನ್ನು ಮಾಡಲಿಕ್ಕೆ ಹೊರಟಿದ್ದಾರೆ. ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ತಾಂತ್ರಿಕವಾಗಿರುವ ಕೆಲವು ಲೋಪದೋಷಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ನಗರ ಪಾಲಿಕೆಯನ್ನು ವಿಸರ್ಜಿಸಿ, 2–3 ಭಾಗಗಳನ್ನಾಗಿ ಮಾಡಿ, ಒಬ್ಬ ಮೇಯರ್ ಬದಲಿಗೆ ಮೂರು ಜನ ಮೇಯರ್‌ಗಳನ್ನು ಮಾಡಿ, ಅವರ ಜೊತೆಯಲ್ಲಿ ಮೂರು ಜನ ಉಪ ಮೇಯರ್‌ಗಳನ್ನು ಮಾಡಿ,  ಕಮಿಟಿಗಳನ್ನು ರಚಿಸಿ, ಅದಕ್ಕೆ ಆಯುಕ್ತರುಗಳನ್ನು ನೇಮಿಸಿ, ಅವರ ಕೈಕೆಳಗೆ 8 ಜನ ಜಾಯಿಂಟ್ ಕಮೀಷನರ್‌ಗಳನ್ನು ಹಾಕಿ ಅಧಿಕಾರಿಗಳ ವಿಕೇಂದ್ರಿಕರಣಕ್ಕೆ ಇದು ದಾರಿಯಾಗುತ್ತಿದೆ.

ಈಗ ಮೇಯರ್ ಎಂದರೆ ಯಾರು? ಅವರಿಗೆ ಇರುವ ಅಧಿಕಾರವೇನು? KMC Act ನಲ್ಲಿರುವುದನ್ನು ನಾನಿಲ್ಲಿ ಬಿಡಿಬಿಡಿಯಾಗಿ ಹೇಳಬೇಕಾಗುತ್ತದೆ. ನಾನು ಯಾವುದನ್ನೋ, ಯಾವುದಕ್ಕೋ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಎರಡು ಬಾರಿ ನಗರ ಪಾಲಿಕೆ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ತೆರಿಗೆ ಮತ್ತು ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿ, ಆಡಳಿತ ಪಕ್ಷದ ಒಬ್ಬ ನಾಯಕನಾಗಿ, ಹಿಂದೆ ನಗರ ಪಾಲಿಕೆ ಸದಸ್ಯನಾಗಿ ನಾನು ಹಿರಿಯರಾದ ರಾಮಚಂದ್ರಗೌಡರು ಮತ್ತು ರಾಮಲಿಂಗರೆಡ್ಡಿಯವರ ಕೆಲಸ ಮಾಡೆದ್ದೇವೆ. ಇದರ ಜೊತೆಗೆ ಆ ಸದನದಲ್ಲಿಯೂ ಸಹ ಕೆಲವರು ಇದ್ದಾರೆ. ಜಯಚಂದ್ರರವರೆ, ಈ ನಗರಕ್ಕೆ ಒಂದು ಇತಿಹಾಸವಿದೆ. ಈ ನಗರವನ್ನು ನಾವು–ನೀವು ಕಟ್ಟಿರುವುದಲ್ಲ. 150 ವರ್ಷಗಳ ಹಿಂದೆ ವಿಜಯನಗರದಿಂದ ಬಂದಂತಹ ಮಹಾರಾಜರು, 500 ವರ್ಷಗಳ ಹಿಂದೆ ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯನ್ನು ಶಾಶ್ವತವಾಗಿ ಉಳಿಸಬೇಕೆಂದು... ಈ ನಗರದವರೆ ಆದ ದಿ: ಲಕ್ಷ್ಮಣರಾಯರು, ಕೆ.ಎಂ. ನಂಜಪ್ಪನವರು, ಟಿ.ಆರ್. ಶಾಮಣ್ಣನವರು, ಟಿ.ಡಿ. ರಾಗಣ್ಣನವರು, ವಿ.ಎಸ್. ಕೃಷ್ಣಯ್ಯನವರು, ಕೆ.ಎಂ. ನಾಗಣ್ಣನವರು,  ಜೆ.ಎಲ್. ಲಿಂಗಯ್ಯನವರು ಮತ್ತು ಜಿ. ನಾರಾಯಣರವರಂತಹ ಪುಣ್ಯಪುರುಷರು ಈ ನಗರಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟು ರಾಷ್ಟ್ರದ ಭೂಪಟದಲ್ಲಿ ಎದ್ದು ಕಾಣಬೇಕೆಂದು ಕಾರ್ಯವನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿರುವ ಕಬ್ಬನ್ ಪಾರ್ಕ್, ಲಾಲಬಾಗ್‌ನಂತಹ ಪಾರ್ಕ್‌ಗಳು ಎಲ್ಲಿಯು ಇಲ್ಲ. ಟಿಪ್ಪು ಸುಲ್ತಾನ್‌ರವರು ಲಾಲಬಾಗ್ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ನವೀಕರಣ ಮಾಡಿ ರಾಷ್ಟ್ರದ ಆಡಳಿತದಲ್ಲಿ ಮುಂದಾಳತ್ವವನ್ನು ವಹಿಸಿಕೊಂಡಿದ್ದಾರೆ. ಇದನ್ನು ಮಾಡುವ ಕೆಲಸದಲ್ಲಿ

ದಿ: ವಿಶ್ವೇಶ್ವರಯ್ಯನವರ, ನಾಲ್ವಡಿ ಕೃಷ್ಣರಾಜ ಒಡೆಯರ್ ಪಾತ್ರವು ದೊಡ್ಡದು. ಇದಕ್ಕಿಂತ ಹೆಚ್ಚಾಗಿ ಬೆಂಗಳೂರಿಗೆ ಕಬ್ಬನ್ ಪಾರ್ಕ್ ನಿರ್ಮಿಸಿ ಕೊಟ್ಟಿರುವ ಬ್ರಿಟಿಷ್‌ನ ಕಬ್ಬನ್‌ರವರು. ಲಾಲ್‌ಬಾಗ್‌ಗೆ ಇತಿಹಾಸ ಕೊಟ್ಟಿರುವ ತೋಟಗಾರಿಕಾ ಇಲಾಖೆ ಇವತ್ತು ಇಡೀ ರಾಷ್ಟ್ರದಲ್ಲಿ ಮುಂದೆ ಇದೆ. ಇದಕ್ಕೆ ಮೂಲ ಕಾರಣಕರ್ತರು ದಿ. ಮರಿಗೌಡರು. ಬೆಂಗಳೂರು ನಗರಕ್ಕೆ ನೀರು ಸರಬರಾಜು ಆಗುತ್ತಿರುವುದು ಒಂದು ತಿಪ್ಪಗೊಂಡನಹಳ್ಳಿಯಿಂದ ಮತ್ತು ಇನ್ನೊಂದು ಹೆಸರಘಟ್ಟದಿಂದ. ಈ ಎರಡೇ ಮಾರ್ಗದಿಂದ ನೀರು ಸರಬರಾಜು ಮಾಡಿದರೆ ಮುಂದೆ ಬೆಂಗಳೂರು ನಗರಕ್ಕೆ ನೀರಿನ ಸರಬರಾಜಿನಲ್ಲಿ ತೊಂದರೆಯಾಗುತ್ತದೆ ಎನ್ನುವುದನ್ನು ಅರಿತ ಅಂದಿನ ಮುಖ್ಯಮಂತ್ರಿಗಳಾಗಿದ್ದ ದಿ: ದೇವರಾಜ ಅರಸ್‌ರವರು ಜಲಮಂಡಲಿಗೆ B.W.S.S.B. ಎನ್ನುವ concept ನ್ನು ಕೊಟ್ಟು ಐ.ಎಂ. ಮೊಗದಂರವರನ್ನು ನೇಮಕ ಮಾಡಿ, ತೊರೆಕಾಡಿನಿಂದ ನೀರನ್ನು ತರಲು ಚಿಂತನೆಯನ್ನು ಮಾಡಿದರು. ಅಂದು ಇದ್ದಂತಹ ಗುಲಾಂ ಅಹಮದ್‌ರವರು ಈ ನಗರದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಕರ್ತರು. ಕೇವಲ ಇದರಿಂದ ಕರ್ನಾಟಕದ ಜನರು ಮಾತ್ರವಲ್ಲ, ಇಡೀ ರಾಷ್ಟ್ರದ ಜನರ ಅಭಿವೃದ್ದಿಯಾಗಿದೆ. ಇಲ್ಲಿ ಬೇರೆ ರಾಜ್ಯದವರು, ಬೇರೆ ದೇಶದವರು ಇದ್ದಾರೆ. ಅಮೇರಿಕಾದವರು ಇದ್ದಾರೆ, ಆಸ್ಟ್ರೇಲಿಯಾ, ಮಲೇಶಿಯಾದವರು ಇದ್ದಾರೆ. ಇಡೀ ವಿಶ್ವದ ನಾನಾ ಕಡೆಯ ಜನರು ಇದ್ದಾರೆ ಎಂದರೆ ಅದು ಬೆಂಗಳೂರಿನಲ್ಲಿ. ಇಂತಹ ಬೆಂಗಳೂರನ್ನು ವಿಶ್ವದರ್ಜೆಯಲ್ಲಿ "ಎ ದರ್ಜೆ ಸಿಟಿ" ಮಾಡಲಾಗಿದೆ. 'ಎ ದರ್ಜೆ ಸಿಟಿ' ಆದರೆ ಏನು ಅನಾನುಕೂಲವಾಗುವುದಿಲ್ಲ ಎಂದು ಮುಖ್ಯ ಕಾರ್ಯದರ್ಶಿಯವರು ಹೇಳುತ್ತಾರೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಹೇಳಬಯಸುವುದು, "ಹುಚ್ಚನ ಮದುವೆಯಲ್ಲಿ ಉಂಡವನೇ ಜಾಣ" ಎನ್ನುವ ಹಾಗೆ ಆಗುವುದು ಬೇಡ. ಈ ಕಾಯಿದೆ ಎಷ್ಟರಮಟ್ಟಿಗೆ ಮರಣ ಶಾಸನ ಎನ್ನುವುದನ್ನು ನಾನು ತಮಗೆ ವಿವರವಾಗಿ ಹೇಳಬಯಸುತ್ತೇನೆ. ಕೆಂಗಲ್ ಹನುಮಂತಯ್ಯನವರು, ಕೆ.ಟಿ. ಭಾಷ್ಯಂರವರು, ವಿ.ಟಿ. ಸೋಮಣ್ಣನವರು ಯಾರು ಎನ್ನುವುದು ಎಲ್ಲರಿಗೂ ಗೊತ್ತಿದೆ. ವಿ.ಟಿ. ಸೋಮಣ್ಣನವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಬಡವನ ಹತ್ತಿರಕ್ಕೆ ತಂದು ಕೊಟ್ಟಿರುವುದು ನೀವು ಬೆಂಗಳೂರನ್ನು ಮೂರು ಭಾಗ ಮಾಡಿ ಎಂದು ಅಲ್ಲ. ಬೆಂಗಳೂರಿನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಕೇವಲ ಕರ್ನಾಟಕಕ್ಕೆ ಬೆಂಗಳೂರು ಸೀಮಿತವಾಗಿಲ್ಲ, ಭಾರತದ ಜನರ ಜೊತೆಗೆ ಬೇರೆ-ಬೇರೆ ರಾಷ್ಟ್ರದ ಜನರನ್ನು ಅಪ್ಪಿಕೊಳ್ಳುತ್ತಿದೆ. ಕಸ ತೆಗೆಯಲು ಕಷ್ಟವಾಗಿದೆ ಎಂದು ಸರ್ಕಾರ ಹೇಳುತ್ತಿದೆ. ಮೂರು ಭಾಗ ಮಾಡಿದರೆ ಕಸ ತೆಗೆದುಬಿಡುತ್ತೀರಾ? ಕಸ ಎಲ್ಲಿ ತೆಗೆದುಕೊಂಡು ಹೋಗುತ್ತೀರಿ? ಮಳೆ ಬಂದರೆ ಚರಂಡಿ ನೀರು ತುಂಬಿ ಹೋಗುತ್ತದೆ ಎಂದು ಮಾನ್ಯ ಮಂತ್ರಿಗಳಾದ ಜಯಚಂದ್ರರವರು ಹೇಳುತ್ತಾರೆ. ತುಮಕೂರಿನಲ್ಲಿ ಚರಂಡಿ ನೀರು ತುಂಬುವುದಿಲ್ಲವೆ? ಅದನ್ನು ನಾಲ್ಕು ಭಾಗ ಮಾಡಿಬಿಡಿ. ನನಗೆ ತಿಳಿದಮಟ್ಟಿಗೆ ಪಟ್ಟಣ ಪಂಚಾಯಿತಿ ಮಾಡಲಾಗುತ್ತದೆ, ಪಟ್ಟಣ ಪಂಚಾಯಿತಿಯನ್ನು ಪುರಸಭೆ ಮಾಡಲಾಗುತ್ತದೆ,

ಪುರಸಭೆಯನ್ನು ನಗರಸಭೆ ಮಾಡಲಾಗುತ್ತದೆ, ನಗರಸಭೆಯಾದ ಮೇಲೆ ಮಹಾನಗರಪಾಲಿಕೆ ಮಾಡಲಾಗುತ್ತದೆ, ಮಹಾನಗರಪಾಲಿಕೆ ಇವತ್ತು ಬೃಹತ್ ಬೆಂಗಳೂರು ಆಗಿ ಏಳು ವರ್ಷವಾಗಿದೆ, ಅದನ್ನು ಒಡೆದು ಮೂರು ಭಾಗ ಮಾಡುತ್ತೇವೆ ಎಂದು ನೀವು ಹೇಳುತ್ತೀದ್ದಿರಿ. ನನ್ನ 30 ವರ್ಷದ ಅನುಭವದಿಂದ ಹೇಳುತ್ತಿದ್ದೇನೆ, ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾದ ಮೇಲೆ ಐದಾರು ಸಾರಿ ಬೆಂಗಳೂರನ್ನು ಸುತ್ತಾಡಿರಬಹುದು. ಆದರೆ ಮಾನ್ಯ ಜೆ.ಎಚ್. ಪಟೇಲ್‌ರವರ ಸರ್ಕಾರವಿದ್ದಾಗ ಮಾನ್ಯ ಸಿದ್ದರಾಮಯ್ಯನವರನ್ನು ಬೆಂಗಳೂರಿನ ಮೂಲೆ–ಮೂಲೆಗೂ ಕರೆದುಕೊಂಡು ಹೋಗಿ ಕೆಲಸಗಳನ್ನು ಮಾಡಿಸುತ್ತಿದ್ದೆವು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಒಬ್ಬ ಅನುಭವಸ್ಥ ಮುಖ್ಯಮಂತ್ರಿಗೆ ತಾವೆಲ್ಲಾ ಸೇರಿ ಎಷ್ಟು ಚೆನ್ನಾಗಿ ಟೋಪಿ ಹಾಕುತ್ತಿದ್ದೀರಿ ನೋಡಿ. ಇದು ಯಾವ ನ್ಯಾಯ? ಏಕೆ ಅವರನ್ನು ಖಳನಾಯಕನಾಗಿ ಮಾಡುತ್ತಿದ್ದೀರಿ? ಇದು ನನ್ನ ಅನುಭವದ ಮಾತು, ಯಾವುದೇ ಉತ್ಪ್ರೇಕ್ಷೆಗಾಗಿ ನಾನು ಮಾತನಾಡುತ್ತಿಲ್ಲ. ಮಾನ್ಯ ಸೊರಕೆಯವರು ನಗರಾಭಿವೃದ್ಧಿ ಮಂತ್ರಿಗಳಾಗಿದ್ದಾರೆ, ಅವರು ನಗರದ ವ್ಯವಸ್ಥೆಯನ್ನು ಬಲ್ಲವರಾಗಿದ್ದಾರೆ. ಇವತ್ತು ನಾಡಪ್ರಭು ಕೆಂಪೇಗೌಡರು ಇದ್ದರೆ ಏನಾಗುತ್ತಿದ್ದರು ಯೋಚನೆ ಮಾಡಿ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ, ದುಡ್ಡು ತಿಂದುಬಿಡುತ್ತಾರೆ, ಅದಕ್ಕೆ ಒಡೆಯಲಾಗುತ್ತದೆ ಎಂದು ಹೇಳುತ್ತಾರೆ. ಮೇಖ್ರಿ ಸರ್ಕಲ್ underpass ಮಾಡಿರುವುದು ಯಾರು? ಮೈಸೂರು ರೋಡ್ flyover ಮಾಡಿದವರು ಯಾರು? ಬೆಂಗಳೂರಿಗೆ ಒಂದು ವ್ಯವಸ್ಥೆಯನ್ನು ತರಲು ಅಂದು ಇದ್ದ ಉಪಮುಖ್ಯಮಂತ್ರಿಗಳು, ಮಾನ್ಯ ಜೆ.ಎಚ್. ಪಟೇಲ್‌ರವರು ಅವರಿಗಿಂತ ಹಿಂದೆ ಇದ್ದಂತಹ ಮಾನ್ಯ ದೇವೇಗೌಡರು, ವೀರಪ್ಪ ಮೊಯ್ಲಿಯವರಾಗಿರಬಹುದು, ಅವರ ನಂತರ ಬಂದ ಮಾನ್ಯ ಎಸ್.ಎಂ. ಕೃಷ್ಣರವರು ಆಗಿರಬಹುದು ಇವರುಗಳು ಬೆಂಗಳೂರನ್ನು ರಾಷ್ಟ್ರ ಮಟ್ಟಕ್ಕೆ ತರಲು ಚಿಂತನೆ ಮಾಡಿದರು. ಮಾನ್ಯ ಎಸ್.ಎಂ. ಕೃಷ್ಣರವರು ಬೆಂಗಳೂರನ್ನು ಸಿಂಗಪೂರ್ ಮಾಡುತ್ತೇನೆ ಎಂದು ಹೇಳಿದರು, ಆ concept, ಆ vision ಮುಖ್ಯ. ಮಾಜಿ ರಾಷ್ಟ್ರಪತಿಗಳಾದ ಮಾನ್ಯ ಅಬ್ದುಲ್ ಕಲಾಂರವರು ಇಲ್ಲಿಗೆ ಬಂದಾಗ ಏನು ಹೇಳಿದರು.... ಮಧ್ಯೆ ತೊಂದರೆ ಕೊಡಬೇಡಿ. ಇದರ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಬೆಂಗಳೂರಿನ ಜನರು ಕಣ್ಣು ಮುಚ್ಚಿ ಕೈ ಕಟ್ಟಿಕೊಂಡು ಕುಳಿತಿದ್ದಾರೆ ಎಂದು ತಿಳಿದುಕೊಳ್ಳಬೇಡಿ. ದೆಹಲಿ ನಗರಸಭೆಯಲ್ಲಿ ಆಗಿರುವಂತಹ ಅನಾಹುತವನ್ನು ಇವತ್ತು ಇಲ್ಲಿ ಮಾಡಲು ಹೊರಟ್ಟಿದ್ದಾರೆ. ಅವತ್ತು ಗೊತ್ತಾಗದೆ ಶ್ರೀಮತಿ ಶೀಲಾ ದೀಕ್ಷಿತ್‌ರವರು ತೆಗೆದುಕೊಂಡಿರುವ ತಪ್ಪು ನಿರ್ಣಯದಿಂದ... ಇವತ್ತು ಆ ನಗರಸಭೆಯವರು ಮಾನ್ಯ ಮುಖ್ಯಮಂತ್ರಿಗಳಾದ ಅರವಿಂದ ಕೇಜ್ರಿವಾಲ್‌ರವರಿಗೆ ಇದನ್ನು ವಾಪಸ್ ತೆಗೆದುಕೊಳ್ಳಿ ಎಂದು ಪತ್ರ ಬರೆದಿದ್ದಾರೆ. ಅನೇಕ ವಿಚಾರಗಳನ್ನು ಮಾನ್ಯ ಸಿದ್ದರಾಮಯ್ಯನವರ ಗಮನಕ್ಕೆ ನಾನು ತರಲೇಬೇಕಾಗುತ್ತದೆ. ಏಕೆ ಎಂದರೆ, ಈ ನಗರಕ್ಕೆ ತನ್ನದೇ ಆದ ಸ್ವಾಯತ್ತತೆ ಇದೆ. ದಿ: ದೇವರಾಜ

ಅರಸುರವರು ಇವತ್ತು ಇಲ್ಲ, ವಿಧಾನಸೌಧವನ್ನು ಕಟ್ಟಿಸಿರುವಂತಹ ದಿ: ಕೆಂಗಲ್ ಹನಮಂತಯ್ಯನವರು ಇವತ್ತು ಇಲ್ಲ. ಅನೇಕ ಪುಣ್ಯ ಪುರುಷರು ಇವತ್ತು ಇಲ್ಲ. ಏಕೆ ಪಾಪ ಮಾನ್ಯ ಸಿದ್ದರಾಮಯ್ಯನವರನ್ನು ಸಿದ್ದರಾಮನ ಹುಂಡಿಗೆ ಕಳುಹಿಸುವಂತಹ ಕೆಲಸವನ್ನು ಮಾಡುತ್ತೀರಿ? ಇದು ಯಾವ ನ್ಯಾಯ? 2009ರಲ್ಲಿ ನನ್ನ ಕಾರ್ಯವೈಖರಿಯನ್ನು ಮೆಚ್ಚಿಕೊಂಡು ಮಾನ್ಯ ಸಿದ್ದರಾಮಯ್ಯನವರು ನನಗೆ ಸೋಮಣ್ಣಿ ಮುಂದೆ ಒಂದು ದಿನ Mayor-in-Council ಮಾಡಬೇಕಾಗುತ್ತದೆ, ನೀನೇ ಅದಕ್ಕೆ ಅರ್ಹ ವ್ಯಕ್ತಿ ಎಂದು ಹೇಳಿದರು. ಆ ಮಾತನ್ನು ಇವತ್ತು ಅವರ ನೆನಪಿಗೆ ತರುವಂತಹ ಕೆಲಸವನ್ನು ನಾನು ಮಾಡುತ್ತಿದ್ದೇನೆ. ನನಗೆ ಅದರ ಅವಶ್ಯಕತೆ ಇಲ್ಲ. ನಾನು ಒಂದು ಹಂತಕ್ಕೆ reach ಆಗಿದ್ದೇನೆ. ಆದರೆ ಈ ನಗರ ವಿಶಾಲವಾದ ತಳಹದಿಯಿಂದ ಬಂದಿರುವುದು. ತನ್ನದೆ ಆದ ವೈಶಿಷ್ಟತೆಯಿಂದ ಮೆರೆದಿರುವುದು. ಈ ನಗರದ ಸರ್ವಾಂಗೀಣ ಅಭಿವೃದ್ಧಿ ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯ. ಈ ಆದ್ಯ ಕರ್ತವ್ಯವನ್ನು ಗಮನದಲ್ಲಿ ಇಟ್ಟುಕೊಳ್ಳದೇ ನಗರವನ್ನು ಒಡೆಯಲು ಹೊರಟ್ಟಿದ್ದೀರಿ. ಇದನ್ನು ನಾನು ಏಕೆ ಕರಾಳ ಶಾಸನ ಎಂದು ಹೇಳಿದೆ ಎಂದರೆ, 1896ರಲ್ಲಿ Arcot ಶ್ರೀನಿವಾಸಚಾರ್ಯ ಎನ್ನುವವರು ಇದ್ದರು. ಅವರು ಬೆಂಗಳೂರಿನ ಮುನ್ಸಿಪಾಲಿಟಿಗೆ ಮೊದಲನೆಯ ನೇಮಕಾತಿ ಮಾಡಿದರು. 1913ರಲ್ಲಿ ಕೆ.ಪಿ. ಪುಟ್ಟಣ್ಣಶೆಟ್ಟರು, 1919ರಲ್ಲಿ ಇದನ್ನು Municipal Chief Office ಎಂದು ಮಾಡಿದರು. 1930ರಲ್ಲಿ ಮುನ್ಸಿಪಾಲಿಟಿ ಎಂದು ಮಾಡಿದರು. ನಂತರ 1949ರಲ್ಲಿ Civil Station ಎರಡು ಇದ್ದವು ಅವುಗಳನ್ನು ಒಂದು ಮಾಡಿ ಇದಕ್ಕೆ ಮಹಾನಗರಪಾಲಿಕೆ ಎಂದು ಮಾಡಿದರು. ಇದು ಆದಮೇಲೆ ಮೊದಲನೆಯ ಮೇಯರ್ ಆಗಿ ದಿ: ಆರ್. ಸುಬ್ಬಣ್ಣನವರು ಆಯ್ಕೆಯಾದರು. ಸುಬ್ಬಯ್ಯ ಸರ್ಕಲ್ ಎಂದು ಇದೆಯಲ್ಲ ಕಾಂಗ್ರೆಸ್‌ನವರು ತಮ್ಮ ಪಕ್ಷದ ಕಛೇರಿ ಎಂದು ತೆಗೆದುಕೊಂಡಿದ್ದಾರಲ್ಲ ಅದೇ ಸುಬ್ಬಯ್ಯ ಎನ್ನುವ ಮಹಾತ್ಮನ ಸರ್ಕಲ್. ಕಾಂಗ್ರೆಸ್ ಕಛೇರಿಯನ್ನು ಬಳುವಳಿಯಾಗಿ ಕೊಟ್ಟಿರುವುದು ಆ ಸುಬ್ಬಯ್ಯನವರು.

(ಗೊಂದಲ)

**ಶ್ರೀ ವಿ. ಸೋಮಣ್ಣ:-** ನಾನು ಯಾರ್‍ಯಾರ ಕೊಡುಗೆ ಏನು ಎಂದು ಹೇಳುತ್ತಿದ್ದೇನೆ. ಅದಕ್ಕಾಗಿ ಇಂತಹ ಪುಣ್ಯ ಪುರುಷರನ್ನು ಮರೆಯಬಾರದು. ನಾನೂ ಕೂಡ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಲಿ ಎಂದು ಮಾಡಿದ್ದೆನು. ಅದಕ್ಕೆ ಅವರು ಸ್ವಲ್ಪ ಸೇರಿಸಿ ಹೇಳಿದರು. 86 ಜನ JDLP Secretary. ಮಾನ್ಯ ದೇವೇಗೌಡರು designated Prime Minister ಆದರು. ಶ್ರೀ ಜೆ.ಹೆಚ್. ಪಟೇಲರು ಉಪ ಮುಖ್ಯಮಂತ್ರಿಯಾಗಿದ್ದರು. ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಮಂತ್ರಿಯಾಗಿದ್ದರು. 86 ಜನರ ಸಹಿ ಹಾಕಿಸಿ, Sri Biju Patnaik, Sri J.N. Malhotra, ಶ್ರೀ

ರಾಮಕೃಷ್ಣ ಹೆಗಡೆ, ಶ್ರೀ ದೇವೇಗೌಡರು, ಮಾನ್ಯ ಬೊಮ್ಮಾಯಿಯವರ ಎದುರು ನಾನು JDLP ಕಾರ್ಯದರ್ಶಿಯಾಗಿ ಒಂದು ಪತ್ರವನ್ನು ಕೊಟ್ಟೆ. ಅಂದು ಮಾನ್ಯ ಪಟೇಲರು 'ಹೇ, ನಾನು ಉಪ ಮುಖ್ಯಮಂತ್ರಿಯಾಗಿದ್ದೇನೆ, ನೀನೇನಪ್ಪಾ! ಸಿದ್ದರಾಮಣ್ಣನ ಹೆಸರು ಹೇಳುತ್ತೀಯಾ!' ಎಂದು ಕೇಳಿದರು. ಅವರು ಸಿದ್ದರಾಮಯ್ಯ ಎಂದು ಎಂದಿಗೂ ಹೇಳುವುದಿಲ್ಲ. ಸಿದ್ದರಾಮಣ್ಣ ಎಂದು ಹೇಳುತ್ತಿದ್ದರು. ತಾವು ಅದನ್ನು ಅರ್ಥ ಮಾಡಿಕೊಂಡಿದ್ದೀರಿ. ಆಗ ನಾನು 'ತಾವು ಉಪ ಮುಖ್ಯಮಂತ್ರಿಯಾಗಿದ್ದೀರಿ, ಸಾಕು ಸಾರ್, ಮಾನ್ಯ ಸಿದ್ದರಾಮಯ್ಯನವರು ಒಂದು ಸಾರಿ ಮುಖ್ಯಮಂತ್ರಿಯಾಗಲೀ' ಎಂದು ಹೇಳಿದ್ದೇನೆ. ಅಂತಹ ಸಿದ್ದರಾಮಯ್ಯನವರನ್ನು ತೆಗೆದುಕೊಂಡು ಬಂದು...... ಏಕೆ ಈ ಮಕ್ಮಲ್ ಟೋಪಿ ಕೆಲಸ!. ಏಕೆ ಇದು ಆಗಬೇಕಾಗಿದೆ?

(ಗೊಂದಲ)

**ಶ್ರೀ ಬಿ. ರಮಾನಾಥ ರೈ:–** ಮುಖ್ಯಮಂತ್ರಿ ಮಾಡಿದವರು ನಾವು.

**ಶ್ರೀ ವಿ. ಸೋಮಣ್ಣ:–** ರೀ Mr. Ramanath Rai ಅವರೇ, ಒಂದು ನಿಮಿಷ ತಾಳಿ, ನಾನು ಕಾಂಗ್ರೆಸ್‌ನಲ್ಲಿದ್ದವನು ಮತ್ತು ಎರಡು ಬಾರಿ ಶಾಸಕನಾಗಿದ್ದೇನೆ. ಕಾಂಗ್ರೆಸ್‌ನ ಆಗುಹೋಗುಗಳು ನನಗೆ ಅರ್ಥವಾಗಿವೆ. ಯಾವುದೇ ಒಬ್ಬ ನಾಯಕ ನಾಯಕನಾಗಿಯೇ ಇರುತ್ತಾರೆ. ಆ ನಾಯಕನನ್ನು ದಾರಿ ತಪ್ಪಿಸುವ ಷಡ್ಯಂತ್ರ ಸುಮಾರು ವರ್ಷಗಳಿಂದ ಬೆಳೆದು ಬಂದಿದೆ. ಆದ್ದರಿಂದ 1983ರಲ್ಲಿ ....

**ಶ್ರೀ ವೀರಣ್ಣ ಮತ್ತಿಕಟ್ಟಿ:–** ದಾರಿ ತಪ್ಪಿಸುವ ಕೆಲಸವನ್ನು ಕಾಂಗ್ರೆಸ್ ಎಂದಿಗೂ ಮಾಡುವುದಿಲ್ಲ. ಕಾಂಗ್ರೆಸ್ ಪಕ್ಷದ ಬಗ್ಗೆ ಮಾತನಾಡಬಾರದು. ದಾರಿಗೆ ತರುತ್ತದೆ.

(ಗೊಂದಲ)

**ಶ್ರೀ ಬಿ. ರಾಮಕೃಷ್ಣ:–** ಕುಂಬಳಕಾಯಿ ಕಳ್ಳ ಎಂದರೆ ಅವರು ಏಕೆ ಎದ್ದು ನಿಲ್ಲುತ್ತಾರೆ?

**ಉಪ ಸಭಾಪತಿಯವರು:–** ಅವರು ಮಾತನಾಡಲಿ, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ನಾನು ಅವರ ಯಾವುದೇ ಮಾತಿಗೂ objection ಮಾಡಿಲ್ಲ, ಕಾಂಗ್ರೆಸ್ ದಾರಿ ತಪ್ಪಿಸುತ್ತದೆ ಎಂದು ಹೇಳಿದರು. ಕಾಂಗ್ರೆಸ್ ಯಾವಾಗಲೂ ದಾರಿ ತಪ್ಪಿಸುವುದಿಲ್ಲ ಎಂದು ನಾನು ಹೇಳುತ್ತೇನೆ.

**ಶ್ರೀ ವಿ. ಸೋಮಣ್ಣ:–** ನಾನು ಏನು ಹೇಳಬೇಕೋ, ಅದನ್ನು ಹೇಳುತ್ತೇನೆ. ಅವರು ಏನು ಹೇಳಬೇಕೋ ಅದನ್ನು ಹೇಳಲಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಅವರು ಹೇಳಿದಂತೆ ನಾವು ಹೋಗುತ್ತಿದ್ದೇವೆ.

**ಶ್ರೀ ಕೆ.ಬಿ. ಶಾಣಪ್ಪ:–** ಅವರ ವಿರುದ್ಧ ಏನೂ ಹೇಳುತ್ತಿಲ್ಲ, ಅನಾವಶ್ಯಕವಾಗಿ ಅವರು ಏಕೆ ಗದ್ದಲ ಮಾಡುತ್ತಿದ್ದಾರೆ? He is appreciating you. Let him talk I say. Please allow him to speak. ಅವರ ವಿರುದ್ಧ ಏನೂ ಹೇಳುತ್ತಿಲ್ಲ.

**ಶ್ರೀ ವಿ. ಸೋಮಣ್ಣ:–** ಹೇಳಬೇಕಾದ್ದು ನನ್ನ ಕರ್ತವ್ಯ.

**ಶ್ರೀ ಕೆ.ಬಿ. ಶಾಣಪ್ಪ:–** ಅವರು ಏನೇನು ಆಗಿದೆ ಎಂದು ಹೇಳುತ್ತಿದ್ದಾರೆ. ಅವರಿಗೆ ಏನು ಚಿಂತೆ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ನಾನು ಅವರನ್ನು ಪ್ರಶ್ನೆ ಮಾಡುತ್ತಿಲ್ಲ ಅಥವಾ ಆಕ್ಷೇಪಣೆ ವ್ಯಕ್ತ ಮಾಡುತ್ತಿಲ್ಲ. ಕಾಂಗ್ರೆಸ್ ದಾರಿ ತಪ್ಪಿಸುತ್ತದೆ ಎಂದು ಹೇಳಿದ್ದಕ್ಕೆ ಮಾತನಾಡುತ್ತಿದ್ದೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಹೇಳಿದರೆ ತಪ್ಪೇನಿದೆ?

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಈ ಸದನದ ಹಿರಿಯ ಸದಸ್ಯರು ಮಾತನಾಡಲಿ ಬಿಡಿ, ಅವರಿಗೆ ಬೆಂಗಳೂರಿನ ಬಗ್ಗೆ ಏನು ಸಂಬಂಧ ಇದೆ? ಅವರಿಗೆ ಬೆಂಗಳೂರಿನ ಬಗ್ಗೆ ಏನು concern ಇದೆ?

**Sri K.B. SHANAPPA:-** He is not talking anything unnecessary. Mr. Seetharam, let him talk, I say.

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಬರುತ್ತಾರೆ, ಊಟ ಮಾಡುತ್ತಾರೆ, ಹೋಗುತ್ತಾರೆ.

**ಶ್ರೀ ವಿ. ಸೋಮಣ್ಣ:-** ಇದನ್ನು ಎಲ್ಲೋ ತೆಗೆದುಕೊಂಡು ಹೋಗಬಾರದು, ಆಮೇಲೆ ನಾನು ಮಾತನಾಡಬೇಕಾಗುತ್ತದೆ. ನಾನು ಅವರನ್ನು ಭಾರಿ ಗೌರವಿಸುತ್ತೇನೆ. ದಯಮಾಡಿ ಅವರ ಭಾವನೆಗಳನ್ನು .....

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಅವರು ಈ ನಗರಕ್ಕೆ ಒಳ್ಳೆಯದಾಗುವುದನ್ನು ಹೇಳಿದರೆ ನಾವು ಬೇಡ ಎನ್ನುವುದಿಲ್ಲ.

**ಶ್ರೀ ವಿ. ಸೋಮಣ್ಣ:-** ಅವರು ಕುಳಿತುಕೊಳ್ಳಬೇಕು, ಅವರಿಗೆ ಮೆಚ್ಚುಗೆಯಾದ ಮಾತುಗಳನ್ನು ನಾನು ಆಡುವುದಕ್ಕೆ ಆಗುವುದಿಲ್ಲ. ನನ್ನದೇ ಆದ ದಾಟಿಯಲ್ಲಿ ಮಾತನಾಡಬೇಕಾಗುತ್ತದೆ.

**ಶ್ರೀ ಎಂ.ಆರ್. ಸೀತಾರಾಂ:-** ನಾನು ಅದರ ಬಗ್ಗೆ ಚರ್ಚೆ ಮಾಡುತ್ತಿಲ್ಲ. ವಿಧೇಯಕದ ವಿರುದ್ಧವಾಗಿ ಮಾತನಾಡಿದರೂ ಸಂತೋಷ, ಅದರಲ್ಲಿ ನಮ್ಮ ತಕರಾರೇನೂ ಇಲ್ಲ. ಆದರೆ ಅವರು ನಮ್ಮ ಪಕ್ಷದಲ್ಲಿ ನಾಲ್ಕೈದು ವರ್ಷ ಅಥವಾ ಹತ್ತು ವರ್ಷ ಇದ್ದರು ಎನ್ನುವುದಕ್ಕೆ ಸೀಮಿತ ಇದ್ದರೂ ಮಾತನಾಡಲಿ. 30 ವರ್ಷ, 50 ವರ್ಷ....... ದಯವಿಟ್ಟು ಆ ಬಗ್ಗೆ ಮಾತನಾಡಬಾರದು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:-** ಅವರು ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀ ಬಿ. ರಾಮಕೃಷ್ಣ:-** ಅವರು citation ಕೊಡಲೇ ಬೇಕು ಅದಕ್ಕೆ. ಬರೀ ಮುದ್ದೆ ತಿನ್ನುವುದಕ್ಕೆ ಆಗುತ್ತದೆಯೇ? ಅದಕ್ಕೆ ಸಾರು-ಗೀರು ಏನೂ ಬೇಡವೇ?

**ಉಪ ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಜಯಚಂದ್ರರವರು ...... ಪದೇ ಪದೇ ...

**ಶ್ರೀ ಬಿ. ರಮಾನಾಥ ರೈ:-** ಅವರು party ಬಗ್ಗೆ ಮಾತನಾಡುತ್ತಾರೆ.

**ಶ್ರೀ ವಿ. ಸೋಮಣ್ಣ:-** ಗಂಡಸುತನ ಇದ್ದರೆ...... ಅವರಿಗೆ ತಾಕತ್ತು ಇದ್ದರೆ independent ಆಗಿ ನಿಂತುಕೊಂಡು ಗೆದ್ದು ಬರಲಿ. ನಾನು independent ಆಗಿ ಗೆದ್ದಿದ್ದೇನೆ. ಕಾಂಗ್ರೆಸ್ ಇಲ್ಲದೇ ಮುನಿಸಿಪಾಲಿಟಿ ಸದಸ್ಯರಾಗಲೀ, ನೋಡೋಣ. ನಾನು ಎಂ.ಎಲ್.ಎ ಆಗಿದ್ದೇನೆ.

**(ಗೊಂದಲ)**

**ಶ್ರೀ ಬಿ. ರಮಾನಾಥ ರೈ:-** ನಮ್ಮ ಪರಂಪರೆ, ನಮ್ಮ ಇತಿಹಾಸ ಅವರಿಗೆ ಗೊತ್ತಿಲ್ಲ. ಅವರು ತಿಳಿದುಕೊಂಡು ಮಾತನಾಡಬೇಕು.

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ:-** ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:-** ಈ ರೀತಿಯಾದರೆ ಹೊರಗೆ ಹಾಕಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಉಪ ಸಭಾಪತಿಯವರು:-** ಕುಳಿತುಕೊಳ್ಳಿ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:-** ಉಡಾಫೆಯಿಂದ ಮಾತನಾಡುತ್ತಾರೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಅವರಿಗೆ ಯೋಗ್ಯತೆ ಇಲ್ಲ.

**ಶ್ರೀ ವಿ. ಸೋಮಣ್ಣ:-** ಅವರಿಗೆ ಸಂಸ್ಕಾರ ಇಲ್ಲ.

**ಶ್ರೀ ಬಿ. ರಮಾನಾಥ ರೈ:-** ಅವರಿಗೆ ಸಂಸ್ಕಾರ ಇದೆಯೇ?

**Sri V. SOMANNA:-** You don't have the manners…. *(Interruptions)*… You don't have the manners. ನಿಮಗೆ manners ಇಲ್ಲ.

**ಉಪ ಸಭಾಪತಿಯವರು:-** ಶ್ರೀ ನಾರಾಯಣಸ್ವಾಮಿಯವರೇ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಭಾನುಪ್ರಕಾಶ್:-** ಮಾನ್ಯ ಸದಸ್ಯರು ಮಾತನಾಡಿದರೆ ಕೇಳಬಹುದು, ಸರ್ಕಾರವೇ ಅಡ್ಡ ಬಂದರೆ ಏನು ಮಾಡಬೇಕು? ಅದು ಸರ್ಕಾರ. He is government. He is objecting.

(ಗೊಂದಲ)

**ಉಪ ಸಭಾಪತಿಯವರು:–** ಕುಳಿತುಕೊಳ್ಳಿ, ನಾನು ನಿಂತಿದ್ದೇನೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸೋಮಣ್ಣನವರು ವಿಷಯ ಎಷ್ಟಿದೆಯೋ ಅಷ್ಟನ್ನು ಮಾತನಾಡಲಿ, ಕಾಂಗ್ರೆಸ್, ಅದರ ಒಳಗೆ, ಅದು ಬೇಡ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾತನಾಡುವಾಗ ರಾಜಕೀಯವಾಗಿ ಮಾತನಾಡುತ್ತಾರೆ, ಅದಕ್ಕೆ ಅವರು ಆಕ್ಷೇಪಣೆ ವ್ಯಕ್ತಪಡಿಸಿಬಿಟ್ಟರೆ ಒಳ್ಳೆ ಕತೆ ಆಯಿತು.

**ಉಪ ಸಭಾಪತಿಯವರು:–** ಮಾನ್ಯ ಸೋಮಣ್ಣನವರೇ, ತಾವು ದಯಮಾಡಿ ಈ ಕಡೆ ತಿರುಗಿ ಮಾತನಾಡಿ, ಆ ಕಡೆ ಏಕೆ ತಿರುಗುತ್ತೀರಿ?

**ಶ್ರೀ ನಾಗರಾಜ್ ಎಸ್. (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ಆನೆ ಮಂತ್ರಿಗಳಿಗೆ ಅವರ ಭಾಷಣ ಮುಗಿಯುವವರೆಗೂ ಸ್ವಲ್ಪ ನಿದ್ದೆ ಮಾಡುವುದಕ್ಕೆ ಹೇಳಿ, ಇವತ್ತು ಅವರು ನಿದ್ದೆ ಮಾಡುತ್ತಿಲ್ಲ. ಆದ್ದರಿಂದ ಇಷ್ಟೆಲ್ಲಾ ಗಲಾಟೆಯಾಗುತ್ತಿದೆ. ದಯವಿಟ್ಟು ಅವರಿಗೆ ನಿದ್ದೆ ಮಾಡುವುದಕ್ಕೆ ಹೇಳಿ.

(8–00 ಗಂಟೆ)

**ಶ್ರೀ ವಿ. ಸೋಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ವಿಧೇಯಕವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಕಾರಣಗಳು ಮತ್ತು ಉದ್ದೇಶದಲ್ಲಿ 'ಬೆಂಗಳೂರು ಮಹಾನಗರ ಪಾಲಿಕೆಯು 80 ಲಕ್ಷ ಜನ ಸಂಖ್ಯೆಯನ್ನು ಮೀರಿದೆ. ಆದ್ದರಿಂದ ರಾಜ್ಯದ ಮತ್ತು ಕೇಂದ್ರದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮತ್ತು ಅದರ ಮೇಲ್ವಿಚಾರಣೆ ಮಾಡುವುದು ಕಷ್ಟಕರವಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯ ಸುಗಮ ಆಡಳಿತ ನಿರ್ವಹಣೆಯ ಉದ್ದೇಶಕ್ಕಾಗಿ ಸರ್ಕಾರವು ನೇಮಿಸಿರುವ ತಜ್ಞರ ಸಮಿತಿ ತನ್ನ ಮಧ್ಯಂತರ ವರದಿಯನ್ನು ಬೆಂಗಳೂರು ಮಹಾನಗರ ಪಾಲಿಕೆ ತ್ರಿಭಜನೆಗೆ ಶಿಫಾರಸ್ಸು ಮಾಡಿದೆ' ಎಂದು ಹೇಳಿದ್ದಾರೆ. ಆ ವರದಿ ಅನಧಿಕೃತವಾಗಿ ನಮ್ಮ ಬಳಿ ಇದೆ.

**ಶ್ರೀ ಬಿ. ರಮಾನಾಥ ರೈ:–** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ ಅದು ಅಧಿಕೃತ ವರದಿ ಅಲ್ಲವೆಂದಾಯಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಐ.ಎ.ಎಸ್. ಅಧಿಕಾರಿ ರಾಜೇಂದ್ರ ಕುಮಾರ್ ಕಠಾರಿಯಾರವರ ಏಕ ಸದಸ್ಯ ಸಮಿತಿ ನೀಡಿದ ವರದಿಯ ಪ್ರತಿಗಳನ್ನು ಸರ್ಕಾರ ಯಾವ ಸದಸ್ಯರಿಗೂ ನೀಡಿಲ್ಲ.

**ಶ್ರೀ ವಿ. ಸೋಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ರಾಜೇಂದ್ರ ಕುಮಾರ್ ಕಠಾರಿಯಾ ವರದಿಯಲ್ಲಿ ಮಾನ್ಯ ಬಿ.ಎಸ್. ಪಾಟೀಲ್‌ರವರು ಎಲ್ಲಿಯೂ ಬೆಂಗಳೂರು ಮಹಾನಗರಪಾಲಿಕೆಯನ್ನು ಮೂರು ನಗರಪಾಲಿಕೆಗಳನ್ನಾಗಿ ವಿಭಜಿಸಬೇಕೆಂದು ಹೇಳಿಲ್ಲ. 'ಬೆಂಗಳೂರಿನ ಜನಸಾಂದ್ರತೆ ಈ ರೀತಿ ಇದೆ. ಕಲ್ಕತ್ತಾ ಈ ರೀತಿ ಇತ್ತು, ಮುಂಬೈ ಹೇಗಿತ್ತು ಮತ್ತು ದೆಹಲಿ ಹೇಗಿತ್ತು ಎನ್ನುವುದರ ಬಗ್ಗೆ ಉಲ್ಲೇಖ ಮಾಡಿ, ನಾವು ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ' ಎನ್ನುವ ಮಾತನ್ನು ಹೇಳಿದ್ದಾರೆ. ಈ ವರದಿಯ ರೂಪರೇಶೆಗಳನ್ನು ನೋಡಿದಾಗ, ಈ ವಿಚಾರವನ್ನು ಮೂರು ಜನ ತಜ್ಞರ ಸಮಿತಿಯನ್ನು ರಚನೆ ಮಾಡಿ ಅವರಿಗೆ ವಹಿಸಿಕೊಟ್ಟರೆ ಎಲ್ಲವೂ ಸರಿ ಹೋಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಹಿಂದೆ ಈ ದೇಶ ವಿಭಜನೆಯಾದ ಸಂದರ್ಭದಲ್ಲಿ ಗುಜರಾತಿನ ಕಾತಿಯಾವಾರು, ಹೈದ್ರಾಬಾದ್, ಜುನಾಘಡ್ ಈ ಮೂರು ಪ್ರದೇಶಗಳ ಬಗ್ಗೆ ಕೇಳಿದಾಗ, ರಾಷ್ಟ್ರಪಿತ ಮಹಾತ್ಮಗಾಂಧಿಯವರು ಎಲ್ಲರನ್ನು ಕೂಡಿಸಿಕೊಂಡು, 'ಜನರ ತೀರ್ಮಾನವನ್ನು, ಜನಾಭಿಪ್ರಾಯವನ್ನು ಕೇಳಿ ತೀರ್ಮಾನ ಮಾಡಿ' ಎಂದು ಹೇಳಿ, ಜುನಾಘಡ್ ಪ್ರದೇಶದಲ್ಲಿನ ಜನರ ಅಭಿಪ್ರಾಯವನ್ನು ಕೇಳಲಾಗಿ, ಶೇಕಡಾ 75ರಷ್ಟು ಜನರು ಅದು ಭಾರತದಲ್ಲಿಯೇ ಉಳಿಯಬೇಕು ಎನ್ನುವ ಅಭಿಪ್ರಾಯವನ್ನು ನೀಡಿದ ಹಿನ್ನೆಲೆಯಲ್ಲಿ ಆ ಪ್ರದೇಶ ಭಾರತಕ್ಕೆ ಸೇರ್ಪಡೆಯಾಯಿತು. ಅದೇ ರೀತಿಯಲ್ಲಿ ಹೈದ್ರಾಬಾದ್ ಮತ್ತು ಕಾಶ್ಮೀರಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಾಯಿತು. ಇಂತಹ ಅನೇಕ ಉದಾಹರಣೆಗಳು ಇತಿಹಾಸದಲ್ಲಿದೆ. ಈ ಮಾತನ್ನು ಯಾಕೆ ಹೇಳುತ್ತಿದ್ದೇನೆಂದರೆ, ಬೆಂಗಳೂರು ನಗರಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು 2007ರಲ್ಲಿ ರಚಿಸಲಾಯಿತು. ಸುಮಾರು 292 ವಾರ್ಡ್‌ಗಳನ್ನು ರಚನೆ ಮಾಡಲಾಯಿತು. ಹಳೆಯ ಪಾಲಿಕೆ ಒಳಗೊಂಡಂತೆ 110 ಹಳ್ಳಿ, 7 ಸಿ.ಎಂ.ಸಿ., 1 ಟಿ.ಎಂ.ಸಿ. ಹೀಗೆ ಎಲ್ಲವೂ ಸೇರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಟ್ಟು 28 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ಇದರಲ್ಲಿ 8 ವಲಯಗಳಿವೆ. 8 ಜನ ಜಂಟಿ ಆಯುಕ್ತರು ಮತ್ತು 8 ಜನ ಉಪ ಆಯುಕ್ತರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವ ಶ್ರೀ ರಾಮಲಿಂಗಾರೆಡ್ಡಿಯವರು ಹಾಗೂ ನಾನು ಇಬ್ಬರು ಒಟ್ಟಿಗೆ ಕಾರ್ಪೋರೇಶನ್ ಚುನಾವಣೆಗಳಿಂದ ಬಂದವರು. ಅವರ ಹಣೆಬರಹ ಚೆನ್ನಾಗಿತ್ತು ಅವರು 4–5 ಬಾರಿ ಗೆದ್ದಿದ್ದಾರೆ. ಹಿಂದೆ ಬೆಂಗಳೂರು ನಗರ 800 ಚದರ ಕಿಲೋ ಮೀಟರ್‌ಗಳಷ್ಟು ವಿಸ್ತೀರ್ಣವನ್ನು ಹೊಂದಿತ್ತು. ಇದಕ್ಕೆ ಸಂಬಂಧಪಟ್ಟ ಕ್ಯಾಸೆಟ್ ನನ್ನ ಹತ್ತಿರವಿದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಭ್ರಷ್ಟಾಚಾರ ಆಗಿರಬಹುದು, ಅದರ ಬಗ್ಗೆ ಸರ್ಕಾರ ಏನುಬೇಕಾದರೂ ಕ್ರಮ ತೆಗೆದುಕೊಳ್ಳಲಿ. ನಿನ್ನೆ ಸರ್ಕಾರ ಬೃಹತ್ ಬೆಂಗಳೂರು ನಗರ ಪಾಲಿಕೆಯನ್ನು ರದ್ದುಗೊಳಿಸಿ, ಇಬ್ಬರು ಅಧಿಕಾರಿಗಳನ್ನು ನೇಮಕ ಮಾಡಿದೆ, ಆ ಕೆಲಸವನ್ನು ಎರಡು ವರ್ಷಗಳ ಹಿಂದೆ ಮಾಡಿದ್ದರೆ ಉತ್ತಮವಾಗಿತ್ತು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನಾನು ಈ ಮೊದಲೇ ಹೇಳಿದಂತೆ 8 ವಲಯಗಳಲ್ಲಿ ಇರುವ ಜಂಟಿ ಆಯುಕ್ತರು ಕೇವಲ From and To ಬರೆಯುವ ಪೋಸ್ಟ್‌ಮ್ಯಾನ್ ಕೆಲಸ ಮಾಡುತ್ತಿದ್ದಾರೆ. ಕೇವಲ 5000 ಸಾವಿರ ರೂಪಾಯಿಗಳ ಕೆಲಸವನ್ನು ಸಹ ಅಪ್ರೂವ್ ಮಾಡುವ ಅಧಿಕಾರ ಅವರಿಗಿಲ್ಲ. ಎಲ್ಲ ಅಧಿಕಾರಗಳನ್ನು ಆಯುಕ್ತರಿಗೆ ಕೊಟ್ಟು ಬೆಂಗಳೂರನ್ನು 8 ವಲಯಗಳಲ್ಲ, 20 ವಲಯಗಳನ್ನಾಗಿ ಮಾಡಿದರೂ ಏನೂ ಪ್ರಯೋಜನವಾಗುವುದಿಲ್ಲ. 3 ಜನ ಮೇಯರ್‌ಗಳಲ್ಲ 10 ಜನ ಮೇಯರ್‌ಗಳನ್ನು ಮಾಡಿದರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಬೆಂಗಳೂರು ನಗರಕ್ಕೆ ಹೊಸ ಒಂದು ವ್ಯವಸ್ಥೆಯನ್ನು ತರಬೇಕಾದರೆ, ಒಬ್ಬ ಮೇಯರ್, ಒಬ್ಬ ಉಪ ಮೇಯರ್ ಮತ್ತು ಇತರೇ ಸ್ಥಾಯಿ ಸಮಿತಿಗಳ ಜೊತೆಯಲ್ಲಿ 8 ವಲಯಗಳ ಅವಶ್ಯಕತೆ ಇಲ್ಲ. ಬೆಂಗಳೂರು ಜನರ ಅಭಿಪ್ರಾಯವನ್ನು ಕೇಳದೇ ಮೂರು ಜನ ಐ.ಎ.ಎಸ್. ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯ ವರದಿಯನ್ನು ಈ ಸರ್ಕಾರ ತೆಗೆದುಕೊಂಡಿದೆ. ಬೆಂಗಳೂರು ನಗರದಲ್ಲಿ ಇರುವ ಜನರನ್ನು, ಈ ಜನರ ಜೊತೆಯಲ್ಲಿರುವ ಆತ್ಮೀಯತೆಯನ್ನು ನೋಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಐ.ಟಿ., ಬಿ.ಟಿ ನಗರವಾಗಿದೆ. ಈ ನಗರದ 'ಎ ಓನ್ ಗ್ರೇಡ್' ಕಡಿಮೆಯಾದರೆ, ದೊಡ್ಡ ದೊಡ್ಡ ಐ.ಟಿ., ಬಿ.ಟಿ. ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ 'ಎ' ಗ್ರೇಡ್ ಹೋಗಿ 'ಬಿ' ಗ್ರೇಡ್ ಬರುತ್ತದೆ. 'ಬಿ' ಗ್ರೇಡ್ ಸಿಟಿ ಹೋಗಿ 'ಸಿ' ಗ್ರೇಡ್ ಸಿಟಿಯಾಗುತ್ತದೆ. ಆ ನಗರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಈಗ ಪಡೆದುಕೊಳ್ಳುತ್ತಿರುವ ಆರ್ಥಿಕ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಸರ್ಕಾರಿ ನೌಕರರು ಹೆಚ್.ಆರ್.ಎ., ಸಿ.ಸಿ.ಎ., ಗಳಿಂದ ವಂಚಿತರಾಗುತ್ತಾರೆ.

**ಶ್ರೀ ರಾಮಲಿಂಗಾರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಯಾವುದೇ ಬದಲಾಣೆಗಳು ಆಗುವುದಿಲ್ಲವೆಂದು ಹೇಳಿದ್ದಾರೆ.

**ಶ್ರೀ ವಿ. ಸೋಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ನಾನು ಹಾಗೂ ರಾಮಲಿಂಗಾರೆಡ್ಡಿಯವರು ಅನೇಕ ಬಾರಿ ಫೋನ್ ಮೂಲಕ ಮಾತನಾಡುತ್ತಿರುತ್ತೇವೆ. ಒಮ್ಮೆ ನಾವು ತೆಗೆದುಕೊಳ್ಳುವ ಕೆಟ್ಟ ನಿರ್ಣಯಗಳು ನಾವೇ ಗೊಂದಲಕ್ಕೀಡಾಗಿ ಕೈಹಿಸುಕಿಕೊಳ್ಳುವಂತೆ ಮಾಡುತ್ತವೆ. ಕಲ್ಕತ್ತ, ವಿಶಾಖಪಟ್ಟಣಂ, ಚೆನ್ನೈ ಮತ್ತು ವಿಜಯವಾಡಗಳಲ್ಲಿ ಬಹಳ ಚೆನ್ನಾಗಿ ನಗರಪಾಲಿಕೆಗಳು ಕಾರ್ಯನಿರ್ವಹಿಸುತ್ತಿವೆ. ಮೇಯರ್ ಮತ್ತು ನಗರಪಾಲಿಕೆಯ ಸದಸ್ಯರಿಗೆ ಏನು ಅಧಿಕಾರವಿದೆ ಎನ್ನುವುದನ್ನು ತಾವೇ ಹೇಳಬೇಕಾಗಿದೆ. ಸ್ಥಾಯಿ ಸಮಿತಿಗಳಿಗೆ ಆಯುಕ್ತರ ಅಧಿಕಾರ ವ್ಯಾಪ್ತಿಗಿಂತ ಹೆಚ್ಚಿನ ಮಟ್ಟದ ಸಮಸ್ಯೆಗಳು ಬಂದಾಗ ಅದನ್ನು ತೀರ್ಮಾನ ಮಾಡುವ ಅವಕಾಶವಿದೆಯೇ ವಿನ: ಯಾರೋ ಮಾಡಿದ ಕೊಳೆಯನ್ನು ಐದು ವರ್ಷದಲ್ಲಿ ನೀವೇ ಮಾಡಿದ್ದೀರಿ ಎಂದು ನಮ್ಮನ್ನು ಈ ವಿಪರ್ಯಾಸಕ್ಕೆ ತಂದಿರುವ ಸರ್ಕಾರ ಮುಂದಿನ ದಿನಗಳಲ್ಲಿ ಏನು ಮಾಡುತ್ತದೆ ಎನ್ನುವುದರ ಬಗ್ಗೆ ಸಹ ಬೆಳಕು ಚೆಲ್ಲಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಪಟ್ಟಣ ಪಂಚಾಯತಿ ಮತ್ತು ನಗರಸಭೆಗಳ ಬಗ್ಗೆ ನಾನು ಪದೇಪದೇ ಮಾತನಾಡುವುದಕ್ಕೆ ಹೋಗುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರಪಾಲಿಕೆ 'ಎ ಓನ್ ಸಿಟಿ ಗ್ರೇಡ್' ಹೋಗಿ, 'ಬಿ' ಮತ್ತು 'ಸಿ' ಸಿಟಿ ಎಂದು ಕರೆಯಿಸಿಕೊಂಡ ಮೇಲೆ ಐ.ಟಿ., ಬಿ.ಟಿ. ನೌಕರರು ಸ್ಪರ್ಧಾತ್ಮಕ ಜೀವನವನ್ನು ಕಳೆದುಕೊಳ್ಳಬೇಕಾಗುತ್ತದೆ. ಕಲ್ಕತ್ತಾ ಮಹಾನಗರಪಾಲಿಕೆಯಲ್ಲಿ Mayor in Council ಇದೆ. ಅವರ ನೀತಿಯ ಪ್ರಕಾರ ಒಬ್ಬ ಮೇಯರ್‌ನ ಅಧಿಕಾರಾವಧಿ 5 ವರ್ಷಗಳಾಗಿರುತ್ತದೆ. ಅಲ್ಲಿ 8 ಜನ ಆಯುಕ್ತರನ್ನು ನೇಮಿಸಿದ್ದಾರೆ. ಒಬ್ಬ ಚೀಫ್ ಕಮೀಶನರ್ ಅವರನ್ನು ನೇಮಿಸಿದ್ದಾರೆ. ಕೆಳಹಂತದಲ್ಲಿ ಇರುವ ಅಧಿಕಾರಿಗಳನ್ನು ತಹಬದಿಗೆ ತಂದು ಪಾರದರ್ಶಕವಾದ ವ್ಯವಸ್ಥೆಗೆ ಮೂಲಭೂತ ಸೌಕರ್ಯಗಳನ್ನು ಕೊಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುತ್ತಾರೆ. ಇಂತಹ ವ್ಯವಸ್ಥೆಯನ್ನು ಈ ಸರ್ಕಾರ ಯೋಚನೆ ಮಾಡುವುದನ್ನು ಬಿಟ್ಟು, ಮೆಗಾಸಿಟಿಯಾಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕೇಂದ್ರ ಸರ್ಕಾರದಿಂದ ಬರುತ್ತಿರುವ ಯೋಜನೆಗಳಿಗೆ ಬರುತ್ತಿರುವ ಎಸ್.ಎಫ್.ಸಿ. ಫಂಡ್‌ಗಳು ಯಾವ ರೀತಿಯಲ್ಲಿ ಬದಲಾವಣೆಯಾಗುತ್ತವೆ ಎನ್ನುವುದನ್ನು ಸಹ ನೋಡಬೇಕಾಗುತ್ತದೆ. ಯಾವ ರೀತಿಯ ಕಾನೂನು ಇದೆ, ಎ,ಬಿ,ಸಿ, ಗ್ರೇಡ್ ಸಿಟಿಗಳು ಏನಾಗುತ್ತವೆ ಎನ್ನುವುದರ ಬಗ್ಗೆ ಅಧಿಕಾರಿಗಳು ನಮ್ಮ ಹತ್ತಿರವೇ ಬಂದು ಅದು ಈ ರೀತಿ ಆಯಿತು, ಆ ರೀತಿ ಆಯಿತು' ಎಂದು ಹೇಳಿದಾಗ, ಮತ್ತೇ ಮತ್ತೇ ನಾವು ಕಾಯಿದೆಗಳನ್ನು ಬದಲಾವಣೆ ಮಾಡಿದರೆ, ಇಡೀ ನಗರದ ಜನರನ್ನು ಕತ್ತಲೆ ಕೋಣೆಯಲ್ಲಿಟ್ಟಂತಾಗುತ್ತದೆ. ಈ ರೀತಿ ಆಗುವುದಕ್ಕೆ ಅವಕಾಶ ಕೊಡಬೇಡಿ ಎನ್ನುವುದು ನನ್ನ ಮನವಿಯಾಗಿದೆ. ಇನ್ನು ಆಸ್ತಿ ತೆರಿಗೆ, ನಕ್ಷೆ ಮಂಜೂರಾತಿ, ವಾಣಿಜ್ಯ ಪರವಾನಗಿ, ಜಾಹಿರಾತುಗಳಿಂದ ಬರುವ ಹಣ, ಮಾನ್ಯ ಜಯಚಂದ್ರರವರು ಹೊರಗಡೆ ಮಾತನಾಡುವಾಗ ನಾನು ಸಹ ಕುಳಿತಿದ್ದೆ. ಜಾಹಿರಾತುಗಳ 20,000 ಹೋರ್ಡಿಂಗ್ಸ್ ಬಗ್ಗೆ ಹೇಳುತ್ತಿದ್ದರು. ಈ ಹೋರ್ಡಿಂಗ್ಸ್ ಐದು ವರ್ಷಗಳಿಂದ

ಇರುವಂಥಾದ್ದೆ? ನಾನು ಸಹ ಕಾರ್ಪೊರೇಟರ್ ಆಗಿದ್ದೆ. ಜಾಹಿರಾತು ವಿಭಾಗದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸದಸ್ಯನಾಗಿದ್ದಾಗ, ಹಿರಿಯರಾಗಿರತಕ್ಕಂಥ ಮಾನ್ಯ ರಾಮಚಂದ್ರಗೌಡರು ಮತ್ತು ನನ್ನ ಮಿತ್ರರಾಗಿರತಕ್ಕಂಥ ಮಾನ್ಯ ರಾಮಲಿಂಗಾರೆಡ್ಡಿಯವರು ಸಹ ಆಗ ಕಾರ್ಪೊರೇಟರ್ ಆಗಿದ್ದರು. ಆವತ್ತು ನಾನು ಬಿಬಿಎಂಪಿ ಯ ಜಾಹಿರಾತು ಕಛೇರಿಗೆ ಹೋಗಿ ಬರಬೇಕಾದರೆ ಯಾರೋ ಒಬ್ಬರು ಬಿಲ್ ಹಾಕಿಸಿಕೊಂಡು ಚೀಟಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಆ ಚೀಟಿಯನ್ನು ತೆಗೆದುಕೊಂಡು ನನ್ನ ಬಳಿ ಇಟ್ಟುಕೊಂಡಿದ್ದೆ. ಆವತ್ತು ಶ್ರೀ ಎಂ.ಬಿ. ಪ್ರಕಾಶ್‌ರವರು ಆಯುಕ್ತರು ಮತ್ತು ಶ್ರೀ ಸುಂದರ್‌ರಾಜ್‌ರವರು ಮೇಯರ್ ಆಗಿದ್ದರು.  ಕಂಟೋನ್ಮೆಂಟ್ ಏರಿಯಾದ ಬಹಳ ದೊಡ್ಡ ಮನುಷ್ಯರು. ಅವರೆಲ್ಲಾ ದೇವರನ್ನು ತಮ್ಮ ಕೆಲಸದಲ್ಲಿ ಕಾಣುತ್ತಿದ್ದರು. ಆ ಚೀಟಿಯನ್ನು ತೆಗೆದುಕೊಂಡು ಹೋಗಿ ಇದರ ಮೂಲ ಪ್ರತಿ ಏನಿದೆ ಅದನ್ನು ತೆಗೆದುಕೊಂಡು ಬನ್ನಿ ಎಂದು ಅಧಿಕಾರಿಗಳಿಗೆ ಹೇಳಿದೆ. ಪಾರ್ಟಿಗೆ 4,660 ರೂಪಾಯಿ ಹಾಕಿದ್ದರು, ಆದರೆ ಅವರ ಪುಸ್ತಕದ ಎಂಟ್ರಿಯಲ್ಲಿ 46 ರೂಪಾಯಿ 60 ಪೈಸೆ ಹಾಕಿದ್ದರು. ಅದಕ್ಕೆ ಸಂಬಂಧಿಸಿದ ಎಆರ್‌ಓ ರವರನ್ನು ಅಲ್ಲಿಯೇ ತಕ್ಷಣ ಅಮಾನತ್ತು ಮಾಡಿ ಎಲ್ಲಾ ಆದ ನಂತರ ಅಂದಿನ ಕಮೀಷನರ್‌ರವರು ಅದಕ್ಕೆ ಏನಾದರೂ ಮಾಡಿ... ಮೊದಲು ಜಾಹಿರಾತಿನಿಂದ 50 ರಿಂದ 60 ಲಕ್ಷ ರೂಪಾಯಿಗಳ ವರಮಾನ ಬರುತ್ತಿತ್ತು. ಇವತ್ತು ಕೋರ್ಟಿಗೆ ಬಂದಿದೆ. ಸುಮಾರು 20,000 ಹೋರ್ಡಿಂಗ್ಸ್ ಬಗ್ಗೆ ಹೇಳುತ್ತಾರಲ್ಲಾ, ನಾಳೆ ಬೆಳಿಗ್ಗೆ ಕಾನೂನು ಪ್ರಕಾರ ಈ ಹೋರ್ಡಿಂಗ್ಸ್‌ನ್ನು ಕಿತ್ತು ಹಾಕುವುದಕ್ಕೂ, ಈ ಬಿಬಿಎಂಪಿ ವಿಭಜನೆಗೂ ಏನು ಸಂಬಂಧವಿದೆ? ವಿಭಜನೆ ಎಂದರೆ ಯಾವುದೋ ಒಂದು ಗೂಬೆಯನ್ನು ಕೂರಿಸಿಬಿಟ್ಟು ಏನೋ ಮಾಡತಕ್ಕಂಥಾದ್ದಲ್ಲ. ಬಿಬಿಎಂಪಿ ವಿಭಜನೆ ಬಗ್ಗೆ ಜನರ ಅಭಿಪ್ರಾಯವನ್ನು ಕೇಳಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಸುಮಾರು ಒಂದು ಕೋಟಿ ಜನರಿದ್ದಾರೆ. ತಾವೇನಾದರೂ ಪ್ರಜಾಪ್ರಭುತ್ವಕ್ಕೆ ಮನ್ನಣೆಯನ್ನು ಕೊಡಬೇಕೆಂದರೆ 15 ದಿವಸಗಳ ಸಮಯವನ್ನು ಕೊಡಿ. ಇನ್ನೇನು ಚುನಾವಣೆಯನ್ನು ಮುಂದಕ್ಕೆ ಹಾಕಿಕೊಳ್ಳುತ್ತೀರಿ. ನಾನು ಸಹ ನೋಡಿದೆ. ಪಾಪ ಕಟಾರಿಯಾರವರನ್ನು ಹಗ್ಗದ ಮೇಲೆ ಇಟ್ಟು ಕುಯ್ಯಲು ಪ್ರಾರಂಭ ಮಾಡಿಬಿಟ್ಟಿರಿ. ಕಟಾರಿಯಾ ವರದಿ, ಮತ್ತೊಂದು ವರದಿ ಮುಂತಾದವುಗಳ ಬಗ್ಗೆ ಸುಮಾರು ನಾಲ್ಕೈದು ಗಂಟೆಗಳ ಕಾಲ ಮಾತನಾಡುವುದಕ್ಕೆ ನಾನೂ ಸಹ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ನಾನು ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಬಿಬಿಎಂಪಿ ವಿಭಜನೆಯ ಅವಶ್ಯಕತೆ ಇಲ್ಲ. ಇವತ್ತು ಹೋರ್ಡಿಂಗ್ಸ್ ತೆಗೆಸುವುದಕ್ಕೆ ಸಂಬಂಧಿಸಿದಂತೆ ಒಳ್ಳೆಯ ಅಧಿಕಾರಿಗಳನ್ನು ಏನು ಹಾಕಿದ್ದಾರೆ, ಅವರ ಕಾರ್ಯವೈಖರಿಗಳು ಸಹ ನಮಗೂ ಗೊತ್ತಿದೆ. ಮಾನ್ಯ ರಾಮಲಿಂಗಾರೆಡ್ಡಿಯವರಂತಹವರು ಸಚಿವರಾದ ತಕ್ಷಣವೇ ಏಕೆ ಇಂತಹ ಅಧಿಕಾರಿಗಳನ್ನು ಹಾಕಬಾರದಾಗಿತ್ತು? ನಾವಿದಕ್ಕೆ ಬೇಡವೆಂದು ಹೇಳಿದ್ದೇವೆಯೇ?

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೆ, ಲೋಕಾಯುಕ್ತ, ಸಿಐಡಿ ವರದಿ, ಉಚ್ಚ ನ್ಯಾಯಾಲಯದ ಆದೇಶ ಎಲ್ಲವನ್ನು ನೋಡಿದೆವು. ಕೊನೆಗೆ ಏನು ಮಾಡಿದೆವು ಎಂದರೆ ಉಚ್ಚ ನ್ಯಾಯಾಲಯ ಹೇಳಿದರೂ ಸಹ ಹೋರ್ಡಿಂಗ್ಸ್‌ನ್ನು ತೆಗೆಯುವುದಿಲ್ಲ, ಕಸವನ್ನು ಸಹ ತೆಗೆಯುವುದಿಲ್ಲ. ಉಪ ಲೋಕಾಯುಕ್ತರು ಬಂದು ಇನ್ಸ್‌ಪೆಕ್ಷನ್ ಮಾಡಿದರೂ ಸಹ ಕಸವನ್ನು ತೆಗೆಯುವುದಿಲ್ಲ. ಕೊನೆಗೆ ನಾವು ಈ ಕೆಲಸವನ್ನು ಮಾಡಿದೆವು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಬಿಬಿಎಂಪಿಯನ್ನು ಮೂರು ಭಾಗವಾಗಿ ವಿಭಜನೆ ಮಾಡಿದರೆ ಅವೆಲ್ಲವೂ ಆಗುತ್ತವೆ ಅಲ್ಲವೇ?

**ಶ್ರೀ ಮರಿತಿಬ್ಬೇಗೌಡ:–** ಎತ್ತಿ ಹಾಕಿದರೆ ಹೊಡೆಯುವ ಹಾಗಿಲ್ಲ, ಎಳೆದರೆ ಸವೆಯುವ ಹಾಗಿಲ್ಲ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೆ, ಕಟಾರಿಯಾರವರನ್ನು ನೇಮಕ ಮಾಡಿದ್ದರ ಬಗ್ಗೆ ನಾನು ಹೇಳಿದ್ದು.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅವರು ನಾವು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಇದನ್ನು ಸೇರಿಸಿದ್ದೇವೆ ಎನ್ನುವ ಒಂದು ಮಾತನ್ನು ಹೇಳಿದರು. ನನ್ನ ಬಳಿ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯು ಸಹ ಇದೆ. ಇದರಲ್ಲಿ ಏನು ಹೇಳಿದ್ದಾರೆ ಎಂದರೆ, 1) Review the existing structure of BBMP and make the administration viable. 2) Creation of mechanism for the improvement of the old villages in side BBMP and recently included villages and 3) Construction of five well equipped auditoriums, stadiums and different zones ಎಂದು ಹೇಳುತ್ತಾರೆ. ಇದರಲ್ಲಿ ಎಲ್ಲಾದರೂ ಬಿಬಿಎಂಪಿ ಯನ್ನು ಮೂರು ಭಾಗ ಮಾಡುತ್ತೇವೆಂದು ಹೇಳಿದ್ದರೆ, ಪ್ರಾಯಶಃ ಇದನ್ನು ಇವರು ಹೇಳಿರುವುದು ಸುಧಾರಣೆಗಾಗಿ. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿದೆ ಇದನ್ನು ತಾವು ನೋಡಿ. ನಮ್ಮ ಪಕ್ಷದ ಪ್ರಣಾಳಿಕೆ ಬಗ್ಗೆ ಬೇಡ. ಅವರು ಹೇಳಿದ್ದೇನು ಎಂಬುದನ್ನು ನಾನು ಹೇಳುತ್ತಿದ್ದೇನೆ. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಾಂಗ್ರೆಸ್ ಪಕ್ಷದವರು ಕೊಟ್ಟಿರತಕ್ಕಂಥ ಪ್ರಣಾಳಿಕೆಯಲ್ಲಿ ಎಲ್ಲಾದರೂ ಒಂದು ಕಡೆ 3 ನಗರಪಾಲಿಕೆ ಮಾಡುತ್ತೇವೆಂದು ಹೇಳಿದ್ದರೆ ಪ್ರಾಯಶಃ ಆವತ್ತು ಏನಾಗುತ್ತಿತ್ತೋ ಏನೋ ಗೊತ್ತಿಲ್ಲ. ನಾನೇಕೆ ಈ ಮಾತನ್ನು ಹೇಳುತ್ತೇನೆಂದರೆ, ಈ ರೀತಿ ಕತ್ತಲೆ ಕೋಣೆಯಲ್ಲಿಟ್ಟುಕೊಂಡು ಇಂತಹ ಕೆಲವು ಗುರುತರವಾದ ಜವಾಬ್ದಾರಿಯನ್ನು ನಿರ್ವಹಣೆ ಮಾಡುವಾಗ ಇವರೇಕೆ ಇಂತಹ ಕೆಲಸವನ್ನು ಮಾಡುತ್ತಿದ್ದಾರೆ? ಇದರಿಂದ ಅವರಿಗೆ ದೊರೆಯುವಂತಹ ಪುರುಷಾರ್ಥವೇನು? ಅದರ ಜೊತೆಯಲ್ಲಿ

Sec. 3 of KMC Act 1976, CHAPTER-II Establishment of Corporation, Page. 33 ಯಲ್ಲಿ ಈ ರೀತಿ ಹೇಳಲಾಗಿದೆ. "Megacity grade Bengaluru" ರಾಜ್ಯಪಾಲರ ಅನುಮೋದನೆಯಂತೆ ಬಿಬಿಎಂಪಿ ರೂಪುಗೊಂಡಿದೆ ಎಂದು ಹೇಳುತ್ತಾರೆ. ಈ ಬಿಬಿಎಂಪಿ ಬಗ್ಗೆ ಹೇಳುವಾಗ ಆವತ್ತಿನ ಇತಿಹಾಸವನ್ನೆಲ್ಲಾ ಹೇಳಿದ್ದಾರೆ. ದಂಡುಪಾಳ್ಯವಿದ್ದಾಗ ಏನು ಟೋಲ್ ಸಂಗ್ರಹವನ್ನು ಮಾಡುತ್ತಿದ್ದೆವು, ಇದಕ್ಕೆ ಮೂಲಭೂತ ಸೌಕರ್ಯವನ್ನೊದಗಿಸಬೇಕು, ಇದಕ್ಕೆ ಒಂದು ದೊಡ್ಡ ಸ್ವಾಯತ್ತತೆಯನ್ನು ಕೊಡಬೇಕು. ಇದೆಲ್ಲಾ ಮಾಡುವಾಗ ವಿಶ್ವದ, ದೇಶದ ಭೂಪಟದಲ್ಲಿರತಕ್ಕಂಥ ಎಲ್ಲಾ ಧರ್ಮೀಯರ, ಎಲ್ಲಾ ಜಾತಿಗಳ, ಎಲ್ಲಾ ವರ್ಗದ ಜನರಿಗೆ ಈ ಬೆಂಗಳೂರು ಒಂದು ಆಶ್ರಯ ತಾಣವೆಂದು ನಾವೆಲ್ಲರೂ ಸೇರಿಕೊಂಡು ಮಾಡಿ ಅದೇ ಬೆಂಗಳೂರನ್ನು ಇವತ್ತು ಒಡೆಯುವುದರ ಜೊತೆಯಲ್ಲಿ ಪ್ರಾಯಶಃ ನಾಡಪ್ರಭು ಕೆಂಪೇಗೌಡರ ಕನಸಿನ ಬೆಂಗಳೂರನ್ನು ಏನು ಮಾಡಬೇಕೆಂದು ಇದ್ದಾರೆ? ಏತಕ್ಕೋಸ್ಕರ ಮೂರು ಜನ ಮೇಯರ್‌ಗಳಿರಬೇಕು ಎಂಬುದರ ಬಗ್ಗೆ ದಯಮಾಡಿ ಸರ್ಕಾರ ಸ್ಪಷ್ಟೀಕರಣವನ್ನು ಕೊಡಲಿ. ಇದನ್ನು ಮಾಡುವಾಗ ಒಂದು ಕಡೆ ಕಟಾರಿಯಾ ವರದಿಯಲ್ಲಿ ಏನು ಹೇಳಿದ್ದಾರೆಂದರೆ, ಇದಕ್ಕೆ ಆಡಳಿತದ ಅವ್ಯವಸ್ಥೆ, ಹಣಕಾಸಿನ ಅವ್ಯವಸ್ಥೆ, ಅನಧಿಕೃತ ಫ್ಲೆಕ್ಸ್‌ಗಳ ಪ್ರದರ್ಶನ ಬಗ್ಗೆ ಹೇಳಿದ್ದಾರೆ. ಈ ಫ್ಲೆಕ್ಸ್‌ಗಳನ್ನು ಹಾಕುವವರು ಯಾರು? ನಮ್ಮ ಪಕ್ಷದವರು, ಅವರ ಪಕ್ಷದವರು ಎಲ್ಲರೂ ಫ್ಲೆಕ್ಸ್‌ಗಳನ್ನು ಹಾಕುತ್ತಾರೆ. ಯಾರ ಒಬ್ಬರ ಮೇಲಾದರೂ ಕ್ರಮ ಕೈಗೊಂಡು ಪ್ರಕರಣವನ್ನು ದಾಖಲು ಮಾಡಿದರೆ ನಾವು ಬಿಡುತ್ತೇವೆಯೇ? ಇತ್ತೀಚೆಗೆ ಮಾನ್ಯ ರಾಮಲಿಂಗಾರೆಡ್ಡಿಯವರು ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋದಾಗ ಆ ಕಾರ್ಯಕ್ರಮದಲ್ಲಿ ಅವರು ಹೇಳಿದ್ದನ್ನು ಕೇಳಿ ನನಗೆ ಖುಷಿಯಾಯಿತು. ಅವರು ಇನ್ನು ಮುಂದೆ ಯಾರಾದರೂ ಫ್ಲೆಕ್ಸ್‌ಗಳನ್ನು ಹಾಕಿದರೆ ನಾನು ಈ ಕಾರ್ಯಕ್ರಮಕ್ಕೆ ಬರುವುದಿಲ್ಲವೆಂದು ಹೇಳಿದರು. ಇನ್ನ್ಯಾರಾದರೂ ಹೆಚ್ಚು ಮಾತನಾಡಿದರೆ ಅವರ ಮೇಲೆಯೇ ತಿರುಗಿ ಬೀಳುವಂಥ ಒಂದು ವ್ಯವಸ್ಥೆ ಇತ್ತು. ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಂಥ ಕೆಲಸವನ್ನು ಮಾಡುವಾಗ ಮೂರು ಜನರ ಒಂದು ಸಮಿತಿಯನ್ನು ಮಾಡಿ... ಬೆಂಗಳೂರಿನಲ್ಲಿ ಎಂತೆಂತಹ stalwarts ಇದ್ದಾರೆ. ಬೆಂಗಳೂರಿನಲ್ಲಿ ಬುದ್ಧಿವಂತರು ಯಾರಿಲ್ಲ ಹೇಳಿ. ಅಂತಹ ಎಲ್ಲಾ ಬುದ್ಧಿಜೀವಿಗಳನ್ನು ಬಿಟ್ಟು, ಜನಾಭಿಪ್ರಾಯವನ್ನು ಬಿಟ್ಟು ಈ ನಗರದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಈ ರೀತಿಯಾದರೆ ಹೇಗೆ? ಚೆನ್ನೈ, ಮುಂಬೈ, ಕಲ್ಕತ್ತಾ ನಗರಗಳಿಗೆ ಇತಿಹಾಸವಿಲ್ಲ. ಇಡೀ ಭಾರತ ದೇಶದಲ್ಲಿ ಹಿಂದೂಸ್ಥಾನದಲ್ಲಿ ಯಾವುದಾದರೂ ಒಂದು ನಗರಕ್ಕೆ 500 ವರ್ಷಗಳ ಇತಿಹಾಸವಿದ್ದರೆ ಅದು ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಇತಿಹಾಸವಿದೆ. ನಾನಿವತ್ತು ಸನ್ಮಾನ್ಯ ಎಸ್.ಎಂ. ಕೃಷ್ಣರವರನ್ನು ಅಭಿನಂದಿಸುತ್ತೇನೆ. ಬೆಂಗಳೂರಿನ ಜಲಮಂಡಳಿಯನ್ನು ಖಾಸಗೀಕರಣ ಮಾಡಬೇಕೆಂದು ಹೊರಟಾಗ ಆವತ್ತು ನಾನು ಕಾಂಗ್ರೆಸ್ ಪಕ್ಷದ ಒಬ್ಬ ಸಹ ಸದಸ್ಯನಾಗಿ ಅದರ ಬಗ್ಗೆ ಒಂದು ಹಕ್ಕುಚ್ಯುತಿಯನ್ನು ನಾನು,

ಸಿಂಧ್ಯಾರವರು ಮತ್ತು ಸನ್ಮಾನ್ಯ ಸುರೇಶ್ ಕುಮಾರ್‌ರವರು ಮಂಡಿಸಿದೆವು. ನಮ್ಮೆಲ್ಲರ ಭಾವನೆಗಳನ್ನು ಕೇಳಿ ಅವರು ಒಂದು ಮಾತನ್ನು ಹೇಳಿದರು. ಇವೆಲ್ಲವೂ ಸಹ ನನಗೆ ಅರ್ಥವಾಗಲಿಲ್ಲ, ಅದಕ್ಕೋಸ್ಕರವಾಗಿ ನಾವು ಖಾಸಗೀಕರಣ ಮಾಡಬೇಕೆಂದು ಹೊರಟಿದ್ದೆವು. ಇದನ್ನು ವಿತ್‌ಡ್ರಾ ಮಾಡುತ್ತೇವೆಂದು ಆವತ್ತಿನ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣಾರವರು ಹೇಳಿದರು. ಆ ದೊಡ್ಡತನವನ್ನು ಇವರು ಸಹ ಇವತ್ತು ತೋರಿಸಬೇಕಾಗುತ್ತದೆ. In the interest of Bengaluru, in the interest of Karnataka and in the interest of the Nation ಇವರು ಇದನ್ನು ಮಾಡಬಾರದು. ನಮ್ಮ ಇನ್ನೊಬ್ಬ ಮಿತ್ರರಾದ ರೋಷನ್ ಬೇಗ್‌ರವರು ಸದನಕ್ಕೆ ಬಂದರು. ಬೆಂಗಳೂರನ್ನು ಮೂರು ಭಾಗ ಮಾಡುವುದರಿಂದ... ನಾವೆಲ್ಲರೂ ಬೆಂಗಳೂರನ್ನು ಅಪ್ಪಿಕೊಳ್ಳತಕ್ಕಂಥವರು. ನಾವೆಲ್ಲರೂ ಆತ್ಮೀಯತೆಯಿಂದ ಬೆಳೆದಿರತಕ್ಕಂಥವರು. ಫ್ಲೆಕ್ಸ್‌ಗಳಿಗೋಸ್ಕರ ಇಲ್ಲಿ ಏನು ಹೇಳುತ್ತಾರೆಂದರೆ, ಅನಧಿಕೃತ ಫ್ಲೆಕ್ಸ್‌ಗಳ ಪ್ರದರ್ಶನ. ನಾವು ಯಾರೂ ಸಹ ಫ್ಲೆಕ್ಸ್‌ಗಳನ್ನು ಹಾಕಿಕೊಳ್ಳುವುದಿಲ್ಲವೇ? ಇನ್ನೊಂದು ಮಾತನ್ನು ಹೇಳುತ್ತಾರೆ. ಇಲ್ಲಿ ಇನ್ನೊಂದನ್ನೂ ಹೇಳಿದ್ದಾರೆ. "ಅಕ್ರಮ ಲೋಪದೋಷಗಳ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯ ಮತ್ತು ಮಾನ್ಯ ಲೋಕಾಯುಕ್ತರಿಂದ ಬಂದಿರುವ ಆಕ್ಷೇಪಣೆಗಳನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರ ಮೇಲ್ಕಂಡ ಲೋಪಗಳನ್ನು ಮತ್ತು ಅವ್ಯವಹಾರಗಳನ್ನು, ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳುವ ಸಲುವಾಗಿ ತನಿಖೆ ನಡೆಸಿ ವರದಿ ಸಲ್ಲಿಸಲು ದಿನಾಂಕ: 19.2.2015 ರಂದು ಶ್ರೀ ರಾಜೇಂದ್ರ ಕಠಾರಿಯಾ ಅವರನ್ನು ನೇಮಕ ಮಾಡುತ್ತಾರೆ. ಮಾನ್ಯ ಕಠಾರಿಯಾ ಅವರು ಏನು ವರದಿಯನ್ನು ಕೊಟ್ಟರು? ಆ ವರದಿ ಇಲ್ಲಿದೆ. ಎಲ್ಲಾದರೂ ಒಂದು ಕಡೆ, ನಿರ್ದಿಷ್ಟವಾಗಿ, ಮಹಾಪೌರರಿರಬಹುದು, ಆಡಳಿತ ವ್ಯವಸ್ಥೆಯ ಮಹಾನಗರ ಪಾಲಿಕೆಯ ಸದಸ್ಯರಿರಬಹುದು, ಡೆಪ್ಯೂಟಿ ಮೇಯರ್ ಇರಬಹುದು ಅಥವಾ ಸ್ಥಾಯಿ ಸಮಿತಿಯವರು ಇರಬಹುದು, ಇವರು ದುಡ್ಡು ಹೊಡೆದಿದ್ದಾರೆ ಎನ್ನುವುದಿದ್ದರೆ ತೋರಿಸಲಿ. ಒಂದೇ ಒಂದು ಸಣ್ಣ ಉದಾಹರಣೆ ಇದ್ದರೆ ಹೇಳಲಿ. ಇದನ್ನು ಹೋಗಿ ನೀವು ಸೂಪರ್‌ಸೀಡ್ ಮಾಡುತ್ತೀರಿ. ಏತಕ್ಕೆ ಮಾಡಿದಿರಿ ಎನ್ನುವ ಬಗ್ಗೆ ನನಗೂ ಅಲ್ಪಸ್ವಲ್ಪ ಮಾಹಿತಿ ಇದೆ, ನಾನೂ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. 1996ರಲ್ಲಿ ಸನ್ಮಾನ್ಯ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ನಾನು ಜೆಡಿಎಲ್‌ಪಿ ಕಾರ್ಯದರ್ಶಿ ಆಗಿದ್ದೆ. ಆವತ್ತು ಇದೇ ರೀತಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಂದಿಗ್ಧ ಪರಿಸ್ಥಿತಿ ಬಂತು. ನಾಮಿನೇಷನ್ ಮಾಡಿ, ವಿತ್‌ಡ್ರಾ ಮಾಡುವ ದಿನ ನಗರ ಪಾಲಿಕೆ ಚುನಾವಣೆಯನ್ನು ಮುಂದೂಡಿದ್ದೆವು. ಮುಂದೂಡಿ ನಾವು ಮಾನ್ಯ ದೇವೇಗೌಡರ ಜೊತೆ ಲೋಕಾರೂಢಿಯಾಗಿ ಮಾತನಾಡುತ್ತಾ, ಸಾರ್, ಈ ಚುನಾವಣೆ ಇನ್ನೊಂದು ಸಲ ಬರುವಂತಹ ಕಾಲದಲ್ಲಿ ನೀವು ಮುಖ್ಯಮಂತ್ರಿಯಾಗಿ ಇರುವುದಿಲ್ಲ ಎಂದು ಹೇಳಿದೆವು. ಅದೃಷ್ಟವಶಾತ್ ಅವರು ಮುಖ್ಯಮಂತ್ರಿಯಾಗಿ ಇರಲೂ ಇಲ್ಲ, ರಾಷ್ಟ್ರದ ಪ್ರಧಾನಿಗಳಾದರು. ಆದರೆ ಮಾನ್ಯ ಸಿದ್ದರಾಮಯ್ಯನವರನ್ನು ನೀವೇನು ಮಾಡುತ್ತೀರಿ? ಅವರನ್ನು ರಾಷ್ಟ್ರದ ಪ್ರಧಾನಿಯನ್ನಾಗಿ ಮಾಡುತ್ತೀರಾ?

ಮಾಡಿ, ನನಗೆ ಖುಷಿ ಆಗುತ್ತದೆ. ಮಾನ್ಯ ಜಯಚಂದ್ರರವರು, ಮಾನ್ಯ ಹೆಚ್.ಕೆ. ಪಾಟೀಲ್‌ರವರು ಮತ್ತು ನನ್ನ ಅನೇಕ ಸನ್ಮಿತ್ರ ಅನುಭವಿಗಳು ಇಲ್ಲಿದ್ದೀರಿ. ಈ ಕಠಾರಿಯ ವರದಿಯನ್ನು ಉದ್ದೇಶ ಪೂರ್ವಕವಾಗಿ ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದಕ್ಕೆ, ಮಹಾನಗರ ಪಾಲಿಕೆಯನ್ನು ಭಾರತೀಯ ಜನತಾ ಪಕ್ಷ ತಪ್ಪು ದಾರಿಗೆ ಎಳೆದಿದೆ, ಈ ನಗರದ ಜನಕ್ಕೆ ಇವರು ಅನ್ಯಾಯ ಮಾಡಿದ್ದಾರೆ, ಅದಕ್ಕೋಸ್ಕರ ನಾವು ವಿಸರ್ಜನೆ ಮಾಡುತ್ತಿದ್ದೇವೆ ಎಂದು ಹೇಳುತ್ತೀರಾ?

**ಶ್ರೀ ರಾಮಲಿಂಗಾರೆಡ್ಡಿ:–** ಕಠಾರಿಯ ಅವರ ವರದಿಯಲ್ಲಿ ತೋರಿಸಿರುವಂತೆ, ಬೆಂಗಳೂರು ಹೊರ ವಲಯದಲ್ಲಿದ್ದಂಥ ಪ್ರದೇಶಗಳನ್ನು ಬಿ ಖಾತಾ ಇದ್ದದ್ದು ಎ ಖಾತಾ ಮಾಡಿದರು. ಇದರಿಂದ ನಮಗೆ 5 ಸಾವಿರ ಕೋಟಿ ರೂ.ಗಿಂತ ಹೆಚ್ಚು ನಷ್ಟವಾಯಿತು. 2009ರಲ್ಲಿ ಇವರೇ ಇದನ್ನು ಮಾಡಿದರು. ಅಕ್ರಮ–ಸಕ್ರಮ ಆಗುವವರೆಗೂ ಖಾತಾ ಮಾಡಬಾರದು ಎಂದೂ ಹೇಳಿದ್ದರು. ಬಿ ಯಿಂದ ಎ ಖಾತಾ ಮಾಡಿದ್ದರಿಂದ ಸುಮಾರು 5 ಸಾವಿರ ಕೋಟಿ ನಷ್ಟವಾಯಿತು. ಸುಮಾರು 20 ಸಾವಿರ ಅನಧಿಕೃತ ಹೋರ್ಡಿಂಗ್ಸ್ 4–5 ವರ್ಷಗಳಿಂದ ಹಾಗೆಯೇ ಇದೆ. Job Code ಹಗರಣ, TDR ಹಗರಣ, ಮತ್ತೆ ಹಣ ಇಲ್ಲದೇ ಸಹಸ್ರಾರು ಕೋಟಿ ರೂ.ಗಳಿಗೆ ಕೋಡ್ ಹಾಕಿದ್ದಾರೆ. ಇವೆಲ್ಲವೂ ನಡೆದವು . . .

**ಶ್ರೀಮತಿ ವಿಮಲಾಗೌಡ:–** ಅದರ ಬಗ್ಗೆ ತನಿಖೆ ನಡೆಸಿ . . . (ಗೊಂದಲ) . . . 22 ವಾರ್ಡ್‌ಗಳಿಗೆ ಸಂಬಂಧಪಟ್ಟಂತೆ 2 ವರ್ಷವಾದರೂ ಸಿಓಡಿಗೆ ವರದಿ ಕೊಡುವುದಕ್ಕೆ ಆಗಿಲ್ಲ. ಹೀಗಿರುವಾಗ 15 ದಿವಸದಲ್ಲಿ ಕಠಾರಿಯರವರು ವರದಿ ಕೊಡುವುದಕ್ಕೆ ಆಗುತ್ತದೆಯೇ? . . . **(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಲವಲವಿಕೆ ಪಬ್ಲಿಕೇಷನ್ಸ್‌ನಲ್ಲಿ 700 ಕಡತಗಳು ಸಿಕ್ಕಿತು. . .

**(ಗೊಂದಲ)**

**ಶ್ರೀ ರಾಮಲಿಂಗಾರೆಡ್ಡಿ:–** ಇದರಲ್ಲಿ ಹೈಕೋರ್ಟ್ ಜಡ್ಜ್‌ಮೆಂಟ್‌ಗಳಿವೆ, ಲೋಕಾಯುಕ್ತ ವರದಿ ಇದೆ, ಸಿಎಜಿ ವರದಿ ಇದೆ. ನಮ್ಮ ಪಾಲಿಕೆಯಲ್ಲಿ ಎರಡು ಆಂತರಿಕ ತನಿಖಾ ಸಂಸ್ಥೆಗಳಿವೆ. ಅದರ ವರದಿಗಳೂ ಇವೆ. ಇವೆಲ್ಲವನ್ನೂ ಸೇರಿಸಿ, ನಂತರ ಕಠಾರಿಯ ಅವರ ವರದಿಯನ್ನೂ ಸೇರಿಸಿ, ಆಗಿರುವ ತಪ್ಪುಗಳನ್ನು ತನಿಖೆ ನಡೆಸಲು ಸಿಓಡಿಗೆ ಕೊಡುತ್ತೇವೆ.

**ಶ್ರೀಮತಿ ವಿಮಲಾಗೌಡ:–** 3 ವಿಧಾನಸಭಾ ಕ್ಷೇತ್ರಗಳಲ್ಲಾದ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಬಂದ ಆರೋಪಗಳನ್ನು ತನಿಖೆ ಮಾಡಲು ಸಿಓಡಿಗೆ ಕೊಟ್ಟಿದ್ದಿರಿ. 2 ವರ್ಷವಾದರೂ ತನಿಖೆ ಮಾಡಿ ವರದಿ ಕೊಡುವುದಕ್ಕೆ ಆಗಿಲ್ಲ. ಆದರೆ ಕೇವಲ 15 ದಿವಸದಲ್ಲಿ ರಾಜೇಂದ್ರಕುಮಾರ್ ಕಠಾರಿಯರವರು ವರದಿ ಕೊಡುತ್ತಾರೆ ಎಂದರೆ ಇದು ರಾಜಕೀಯ ದುರುದ್ದೇಶ ಅಲ್ಲವೇ? ರಾಜಕೀಯ ಪ್ರೇರಿತ ಅಲ್ಲವೇ?

**ಶ್ರೀ ರಾಮಲಿಂಗಾರೆಡ್ಡಿ:–** ಎಲ್ಲಾ ತನಿಖೆಗಳು ರೆಡಿ ಇತ್ತು, ಆದ್ದರಿಂದ (ಗೊಂದಲ). . .

**ಶ್ರೀಮತಿ ವಿಮಲಾಗೌಡ:–** ಬರೆಸಿ ಕೊಟ್ಟಿದ್ದಾರೆ . . . . (ಗೊಂದಲ)

**ಶ್ರೀ ರಾಮಲಿಂಗಾರೆಡ್ಡಿ:–** ರಾಜೇಂದ್ರ ಕಠಾರಿಯ ಅವರಿಗೆ 15 ದಿನ ಬೇಕಾಯಿತು, ನಾನಾಗಿದ್ದರೆ 3 ದಿನದಲ್ಲಿ ವರದಿ ಕೊಟ್ಟುಬಿಡುತ್ತಿದ್ದೆ. . .

**ಶ್ರೀಮತಿ ವಿಮಲಾಗೌಡ:–** ಮಾನ್ಯ ಸಚಿವರೇ ಬೆಂಗಳೂರು ನಗರ ಬೆಳೆಯುವುದಕ್ಕೆ ನಿಮ್ಮ ಕೊಡುಗೆಯೂ ಇದೆ. ಹಾಗಾಗಿ ನೀವು ಈ ರೀತಿ ಮಾತನಾಡಬಾರದು.

**ಶ್ರೀ ಬಸವರಾಜ ಹೊರಟ್ಟಿ:–** ನೀವು ಚುನಾವಣೆಯಲ್ಲಿ ಸೋಲುತ್ತೀರಿ ಎನ್ನುವ ಉದ್ದೇಶಕ್ಕೆ ಹೀಗೆ ಬೆಂಗಳೂರನ್ನು ಭಾಗ ಮಾಡುವುದಕ್ಕೆ ಹೊರಟಿದ್ದೀರಿ.

**ಶ್ರೀ ಆರ್. ರಾಮಲಿಂಗಾರೆಡ್ಡಿ:–** ಚುನಾವಣೆಗೂ ಇದಕ್ಕೂ ಏನೂ ಸಂಬಂಧ ಇಲ್ಲ. ಇದು ನಮ್ಮ ಪ್ರಣಾಳಿಕೆಯಲ್ಲೇ ಇತ್ತು. ಯಾರು ಮಾತನಾಡಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ, ನಾನಂತೂ ಸುಮಾರು ಒಂದು, ಒಂದೂವರೆ ವರ್ಷದಿಂದ ಬೆಂಗಳೂರಿನ ಜನತೆಯ ಹಿತದೃಷ್ಟಿಯಿಂದ, ಒಳ್ಳೆಯ ಸೌಲಭ್ಯಗಳನ್ನು ಕೊಡುವುದಕ್ಕೆ 2–3 ಭಾಗ ಮಾಡಬೇಕೆಂದು ಹೇಳುತ್ತಿದ್ದೆ. ಮಾನ್ಯ ಸೋಮಣ್ಣನವರನ್ನೇ ಕೇಳಿ. ಮಾನ್ಯ ಸೋಮಣ್ಣನವರೂ ನಮ್ಮ ಜೊತೆಯಲ್ಲೇ ಇದ್ದಾರೆ. ಆವತ್ತು ಮಾನ್ಯ ರಾಮಚಂದ್ರಗೌಡರವರೂ ಇದ್ದರು. ಆಗ ನಾವು, ಬೆಂಗಳೂರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನಾಗಿ ಮಾಡುವುದು ಬೇಡ, ಚಿಕ್ಕದಾಗಿಯೇ ಇರಲಿ ಎಂದು 2006ರಲ್ಲೇ ಮಾತನಾಡಿದೆವು. ಮಾನ್ಯ ಸೋಮಣ್ಣನವರೂ ಕೂಡ ಆವತ್ತು ನಮ್ಮ ಜೊತೆಯಲ್ಲಿದ್ದರು.

**ಶ್ರೀ ಬಸವರಾಜ ಹೊರಟ್ಟಿ:–** ಚುನಾವಣೆ ಬಂದಾಗ ಈ ವಿಧೇಯಕವನ್ನು ಏಕೆ ತಂದಿರಿ? ಮೊದಲೇ ಏಕೆ ತರಲಿಲ್ಲ?

**ಶ್ರೀ ವಿ. ಸೋಮಣ್ಣ:–** ಬೆಂಗಳೂರು ಉಸ್ತುವಾರಿ ಸಚಿವರು, 5 ಸಾವಿರ ಕೋಟಿ ನಷ್ಟವಾಗಿದೆ, ಇದರಲ್ಲಿ ಅಪಚಾರವಾಗಿದೆ ಎನ್ನುವ ಮಾತನ್ನು ಹೇಳಿದರು. ಯಾರೇ ತಪ್ಪು ಮಾಡಿರಲಿ ಅವರನ್ನು ಜೈಲಿಗೆ ಹಾಕಿ. ತನಿಖೆ ಮಾಡಿಸಿ. ಕಾನೂನು ಚೌಕಟ್ಟಿನಲ್ಲಿ ಏನು ಮಾಡಬೇಕೋ ಅದನ್ನು ಮಾಡಿ. 2000ನೇ ಇಸವಿಯಿಂದ ಏನೇನಾಯಿತು ಎನ್ನುವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳಿ. 2001–2006ರ ಅವಧಿಯಲ್ಲಿ ಪಾಲಿಕೆಯಲ್ಲಿದ್ದಂಥ ಆಡಳಿತ ಮಂಡಳಿ ಸುಮಾರು 153 ಅತ್ಯಮೂಲ್ಯ ಆಸ್ತಿಗಳನ್ನು ಯಾರಿಗೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಬೆಳಕು ಚೆಲ್ಲಬೇಕು. 2001 ರಿಂದ 2007ರ ಅವಧಿಯಲ್ಲಿ ತ್ಯಾಜ್ಯ ವಿಲೇವಾರಿಯಲ್ಲಿ ಆಗಿರುವ ಅವ್ಯವಹಾರಗಳಿಗೆ ಸಂಬಂಧಪಟ್ಟಂತೆ ಬಿಎಂಟಿಎಫ್ ಒಂದು ವರದಿ ಕೊಟ್ಟಿದೆ. ಆ ವರದಿಯಲ್ಲಿ ಏನಿದೆ ಎನ್ನುವುದನ್ನು ದಯವಿಟ್ಟು ಹೇಳಿ.

**ಶ್ರೀ ಆರ್. ರಾಮಲಿಂಗಾರೆಡ್ಡಿ:–** ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಅವುಗಳನ್ನೆಲ್ಲಾ ತನಿಖೆ ಮಾಡಿಸಬೇಕಾಗಿತ್ತು . . .

**ಶ್ರೀ ವಿ. ಸೋಮಣ್ಣ:–** ತಾವು ದಯವಿಟ್ಟು ಆಮೇಲೆ ಮಾತನಾಡಿ. 2013–14 ಮತ್ತು 2014–15ನೇ ಸಾಲಿನಲ್ಲಿ ಪಾಲಿಕೆಗೆ ಒದಗಿಸಿರುವ ಅನುದಾನ ಎಷ್ಟು ಎನ್ನುವುದರ ವಿವರಣೆ ಕೊಡಿ. ಬೆಂಗಳೂರು ನಗರದ ಮನೆಗಳ ತೆರಿಗೆ ಹೊರತುಪಡಿಸಿದರೆ ಬೇರೆ ಯಾವ ಅನುದಾನ ಇಲ್ಲ. ಹಿಂದೆ ಆಕ್ಟ್ರಾಯ್ ಇತ್ತು, ಅದು ಮುಂದೆ ವ್ಯಾಟ್ ಆಯಿತು. ನಾನು, ಮಾನ್ಯ ರಾಮಲಿಂಗಾರೆಡ್ಡಿಯವರು ಮತ್ತು ಮಾನ್ಯ ರೋಷನ್‌ಬೇಗ್‌ರವರು ಒಟ್ಟಿಗೆ ಕೆಲಸ ಮಾಡಿದ್ದೇವೆ. ಆವತ್ತು 10 ಲಕ್ಷ ರೂ.ಗಳ ಕೆಲಸ ಇವತ್ತು ಎಷ್ಟು ಕೋಟಿಗಳಿಗೆ ಆಗುತ್ತಿದೆ? ಮಾನ್ಯ ಯಡಿಯೂರಪ್ಪನವರು, ಮಾನ್ಯ ಸದಾನಂದಗೌಡರು, ಮಾನ್ಯ ಎಸ್.ಎಂ. ಕೃಷ್ಣರವರು ಬೆಂಗಳೂರು ಮಹಾನಗರ ಪಾಲಿಕೆಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಟ್ಟಿರುವ ಉದಾಹರಣೆಗಳಿವೆ. ಇದು A-1 ಸಿಟಿಯಾಗಿದೆ. ಕೇಂದ್ರ ಸರ್ಕಾರದ ಅನುದಾನವನ್ನು ಹೊರತುಪಡಿಸಿದರೆ ಶೇಕಡ 70 ರಷ್ಟು ತೆರಿಗೆ ಬೆಂಗಳೂರು ಒಂದರಿಂದಲೇ ಬರುತ್ತಿದೆ. ರಸ್ತೆ ತೆರಿಗೆ ಇರಬಹುದು, ಆಕ್ಟ್ರಾಯ್ ಇರಬಹುದು, ಕಮರ್ಷಿಯಲ್ ಟ್ಯಾಕ್ಸ್ ಇರಬಹುದು, ಹೀಗೆ ಎಲ್ಲಾ ರೆವಿನ್ಯೂಗಳಿಂದ ರಾಜ್ಯದ ಬೊಕ್ಕಸಕ್ಕೆ ಬರುತ್ತಿರುವ ತೆರಿಗೆ ಅದರಲ್ಲಿ ಶೇಕಡ 65–70 ಭಾಗ ಬೆಂಗಳೂರು ನಗರದಿಂದ ಬರುತ್ತಿದೆ. ಆದರೆ ನಾವು ಪಾಲಿಕೆಗೆ ಎಷ್ಟು ಕೊಟ್ಟಿದ್ದೇವೆ? ಹಿಂದೆ ಇದ್ದಂಥ ಸರ್ಕಾರ ನಗರ ಪಾಲಿಕೆಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಟ್ಟಿತ್ತು.

**(8–30 ಗಂಟೆ)**

ಆ ಕೋಟಿ ರೂಪಾಯಿಗಳನ್ನು ಅವ್ಯವಹಾರ ಮಾಡಿರತಕ್ಕಂಥ ವ್ಯಕ್ತಿಗಳನ್ನು ನೀವು ಜೈಲಿಗೆ ಹಾಕಿ. ಕಾನೂನು ಪ್ರಕಾರ ನಿಮ್ಮದೇ ಸರ್ಕಾರ ಇದೆ ತನಿಖೆ ಮಾಡಿ. ಅದನ್ನು ಬಿಟ್ಟು ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುವಂತಹ ಕೆಲಸವನ್ನು ಮಾಡತಕ್ಕಂಥ ನಿಮ್ಮ ತೀರ್ಮಾನ ಏನಿದೆ ಈ ತೀರ್ಮಾನ ಎಷ್ಟರಮಟ್ಟಿಗೆ ಸಮಂಜಸ ಎನ್ನುವುದನ್ನು ಕೂಡ ನಾವು ಚಿಂತನೆ ಮಾಡಬೇಕಾಗಿದೆ. 2010 ರಲ್ಲಿ ಏನು ಅಂದಿನ ಬಿಜೆಪಿ ಸರ್ಕಾರ ಇದ್ದಂಥ ಸಮಯದಲ್ಲಿ ಒಂಟಿ ಮನೆಗಳು ಮತ್ತು ಅನುಷ್ಠಾನಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳು ಪ್ರಾಯಶಃ ಸಾಕಷ್ಟು ಆಗಿವೆ. ನವದೆಹಲಿ ವಿಭಜನೆಯಾದ ಮೇಲೆ ಏನಾಗಿದೆ ಎನ್ನುವುದನ್ನು ದಯವಿಟ್ಟು ತಾವು ಮಾಹಿತಿಯನ್ನು ತರಿಸಿಕೊಳ್ಳಿ. ನವದೆಹಲಿಯನ್ನು ವಿಭಜನೆ ಮಾಡಿ ಆ ನವದೆಹಲಿಯಲ್ಲಿ ಆಗಿರುವಂತಹ ಅವ್ಯವಸ್ಥೆ, ಸಾಮಾನ್ಯ ಜನರಿಗೆ ಆಗಿರುವಂತಹ ತೊಂದರೆಗಳು, ಬೆಂಗಳೂರು ನಗರದಲ್ಲಿ 4 ಲಕ್ಷಕ್ಕೂ ಮೇಲ್ಪಟ್ಟು ವಿದ್ಯುಚ್ಛಕ್ತಿ ಬಲ್ಬ್‌ಗಳಿವೆ. ಇದರ ನಿರ್ವಹಣೆಯನ್ನು ಮಾಡತಕ್ಕಂಥದ್ದಕ್ಕೆ ನೀವು ಮೂರು ಭಾಗ ಮಾಡಿದರೆ "ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆದಂತೆ" ಎನ್ನುವ ಹಾಗೆ ಒಂದೊಂದು ಒಂದು ದಾರಿಯಾಗುತ್ತವೆ. ಈ ದಾರಿಯನ್ನು ಮಾಡುವ ಸಂದರ್ಭದಲ್ಲಿ ಇವತ್ತಿನ ಆರ್ಥಿಕ ದುಸ್ಥಿತಿಯನ್ನು.......

**ಶ್ರೀ ರಾಮಲಿಂಗಾರೆಡ್ಡಿ:–** ಸೋಮಣ್ಣನವರೇ, ಒಂದೂವರೆ ವರ್ಷದಿಂದ street light ನವರಿಗೆ ಕಾರ್ಪೊರೇಷನ್‌ನಲ್ಲಿ ಪೇಮೆಂಟ್ ಆಗಿಲ್ಲ. ಎರಡು ವರ್ಷಗಳಿಂದ ಗುತ್ತಿಗೆದಾರರುಗಳಿಗೆ ಪೇಮೆಂಟ್ ಆಗಿಲ್ಲ. ಪಾರ್ಕ್ ಮೇಂಟೆನೆನ್ಸ್‌ಗೆ ಒಂದೂವರೆ ವರ್ಷದಿಂದ ಹಣ ಬಿಡುಗಡೆ ಮಾಡಿಲ್ಲ.

**ಶ್ರೀ ವಿ. ಸೋಮಣ್ಣ:–** ಆಯಿತು, ಒಪ್ಪಿಕೊಂಡೆ.

**(ಗೊಂದಲ)**

**ಶ್ರೀ ರಾಮಲಿಂಗಾರೆಡ್ಡಿ:–** ಆಡಳಿತ ಮಾಡುತ್ತಿರುವುದು ಯಾರು, ಕಾರ್ಪೊರೇಷನ್‌ನಲ್ಲಿ ಬಿಜೆಪಿ ಯವರು ಆಡಳಿತ ಮಾಡುತ್ತಿರುವುದು. ಕಾರ್ಪೊರೇಷನ್‌ನಲ್ಲಿ ಬಿಜೆಪಿ ಯವರು ಮೇಯರ್ ಆಗಿರುವುದು. ಇವತ್ತು 9,302 ಕೋಟಿ ರೂಪಾಯಿ ಸಾಲ ಇದೆ. ಅಲ್ಲಿ ಬಿಜೆಪಿ ಮೇಯರ್ ಇರುವುದು. ಬಿಜೆಪಿ ಆಡಳಿತ ಇರುವುದು, ಅಲ್ಲಿ ನಾವು ಮೂಗು ತೂರಿಸುವುದಕ್ಕಾಗುತ್ತದೆಯೇ?

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಇವತ್ತು ಪಾಲಿಕೆ ಆಡಳಿತವನ್ನು ವಿಭಜನೆ ಮಾಡುವುದರಿಂದ ಏನು ಅವಾಂತರಗಳಾಗುತ್ತವೆ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಅದರ ಜೊತೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2008 ರಿಂದ 2010 ರವರೆಗೆ ಆಡಳಿತಾಧಿಕಾರಿಗಳು ಇದ್ದರು. ಉಗ್ರಪ್ಪನವರೇ, ಆಡಳಿತಾಧಿಕಾರಿಗಳು 1400 ಕೋಟಿ ರೂಪಾಯಿಯವರೆಗೆ ಸಾಲ ಮಾಡಿ ಹೋದರು. 1400 ಕೋಟಿ ರೂಪಾಯಿಗಳನ್ನು ಸಾಲ ಮಾಡಿದರು. 1999–2004ರ ಅವಧಿಯಲ್ಲಿ 11 ಸರ್ವೀಸಸ್ ಪ್ರೈವೇಟ್ ಕಂಪನಿಗಳಿಗೆ ಉಚಿತವಾಗಿ optic fiber cable ಗಳನ್ನು ಅಳವಡಿಸುವಂಥದ್ದಕ್ಕೆ ಅನುಮತಿಯನ್ನು ಕೊಟ್ಟು ಸುಮಾರು 4500 ಕಿ.ಮೀ. ದೂರವನ್ನು ಅಗೆದರು. ಅಗೆದಂತಹ ರಸ್ತೆಗಳಿಗೆ ರಿಪೇರಿ ಮಾಡುವುದಕ್ಕೆ 600 ಕೋಟಿ ರೂಪಾಯಿಗಳು ಬೆಂಗಳೂರು ಮಹಾನಗರ ಪಾಲಿಕೆಗೆ ಬಂತು. 1999–2004 ರವರೆಗೆ ಯಾರಿದ್ದರು? ಇದನ್ನು ತನಿಖೆಗೆ ಕೊಡಿ. ಇದು ಯಾರು ತಪ್ಪು ಮಾಡಿದ್ದಾರೆಂದು ತನಿಖೆ ಮಾಡಿ. ಅದರ ಜೊತೆಗೆ 2001–2002 ರಲ್ಲಿ ಮೆಜೆಸ್ಟಿಕ್ ಮಹಾರಾಜ ಕಾಂಪ್ಲೆಕ್ಸ್‌ನ್ನು ಯಾರು ಪರಭಾರೆ ಮಾಡಿದರು? ಅದರ ಜೊತೆಯಲ್ಲಿ ದಿವ್ಯಶ್ರೀ ಛೇಂಬರ್ ಬಿಬಿಎಂಪಿ ಗೆ ಎಷ್ಟಕ್ಕೆ ಮಾರಾಟವಾಯಿತು? ಇದು ಯಾರ ಅವಧಿಯಲ್ಲಿ ಆಯಿತು?

**ಶ್ರೀ ರಾಮಲಿಂಗಾರೆಡ್ಡಿ:–** ಜೆ.ಹೆಚ್. ಪಟೇಲ್‌ರವರ ಅವಧಿಯಲ್ಲಿ ಆಗಿರುವಂಥದ್ದು.

**ಶ್ರೀ ವಿ. ಸೋಮಣ್ಣ:–** ಅವರು, ಇವರು ಎಂದಲ್ಲ ತನಿಖೆಗೆ ಕೊಡಿ.

**ಶ್ರೀ ರಾಮಲಿಂಗಾರೆಡ್ಡಿ:–** ಆಗ ನೀವೇ ಮಂತ್ರಿಯಾಗಿದ್ದಿರಿ.

**ಶ್ರೀ ವಿ. ಸೋಮಣ್ಣ:–** ಆಗ ನಾನು ಮಂತ್ರಿಯಾಗಿರಲಿಲ್ಲ. ಬೇರೆ ಮಂತ್ರಿಯಾಗಿದ್ದೆ. ಆಮೇಲೆ ನಾನು ಬಂದಿದ್ದು. ನಾನು ಬಂದಾದ ಮೇಲೆ ಅದಕ್ಕೆ ಏನೇನು ಮಾಡಿದ್ದೇನೆ ಎನ್ನುವುದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ. ನನ್ನದು ಇದ್ದರೆ ನನ್ನನ್ನು ಸೇರಿಸಿ ಕೊಡಿ. I am prepared. ನನ್ನದೇನಾದರೂ ಇದ್ದರೆ ನಾನು ತಲೆಬಾಗುತ್ತೇನೆ, ಕ್ಷಮೆ ಕೋರುತ್ತೇನೆ, ಯಾವ ಶಿಕ್ಷೆಗೆ ಬೇಕಾದರೂ ಗುರಿಯಾಗುತ್ತೇನೆ. I am prepared.

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನಲಂಕರಿಸಿದರು)**

ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು, ನನ್ನ ಮಿತ್ರರಾದ ರಾಮಲಿಂಗಾರೆಡ್ಡಿಯವರಿಗೆ ಒಂದು ಮಾತನ್ನು ಕೇಳುತ್ತೇನೆ, ಸುಮಾರು ಎರಡು ವರ್ಷದಲ್ಲಿ 276 ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದೀರಿ, 276 ಅಧಿಕಾರಿಗಳನ್ನು ಫುಟ್‌ಬಾಲ್ ಹೊಡೆದ ಹಾಗೆ ಹೊಡೆದಿದ್ದೀರಿ. ಇದು ಯಾರ ಚಿತಾವಣೆಯಿಂದ ಆಯಿತು? ಇದನ್ನು ಮೂರು ಭಾಗ ಮಾಡಿಬಿಟ್ಟರೆ ಸರಿ ಹೋಗುತ್ತದೆಯೇ? ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೇವಲ ಒಂದು ಕೈಯಲ್ಲಿ ಚಪ್ಪಾಳೆ ಹೊಡೆದರೆ ಸೌಂಡ್ ಬರುವುದಿಲ್ಲ. ಎರಡು ಕೈಗಳನ್ನು ಸೇರಿಸಿ ಚಪ್ಪಾಳೆ ಹೊಡೆದಾಗಲೇ ಸೌಂಡ್ ಬರುವುದು. ಇದರ ಜೊತೆಯಲ್ಲಿ ಇವತ್ತು 2001–07 ರವರೆಗೆ BMTF ನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಯಾವ ಯಾವುದರಲ್ಲಿ ಎಷ್ಟೆಷ್ಟು ಏನೇನು ಹಗರಣಗಳಾಗಿವೆ, ಎಷ್ಟೆಷ್ಟು ಕೋಟಿ ರೂಪಾಯಿಗಳು ಇದರಲ್ಲಿ ಯಾರ್ಯಾರು ಜೇಬಿಗೆ ಹಾಕಿಕೊಂಡಿದ್ದಾರೆ, ಏನೇನು ಪಾಪದ ಕೆಲಸ ಮಾಡಿದ್ದಾರೆ ಎನ್ನುವುದನ್ನು BMTF ನವರು ಸವಿಸ್ತಾರವಾಗಿ ವರದಿಯನ್ನು ಕೊಟ್ಟಿದ್ದಾರೆ. ದಯಮಾಡಿ ಆ ವರದಿಯನ್ನು ಸದನದಲ್ಲಿ ಮಂಡಿಸಿದರೆ ನಾನು ನಿಮಗೆ ಕೃತಜ್ಞನಾಗುತ್ತೇನೆ. ನಿಮಗೆ ಅಭಿನಂದಿಸುತ್ತೇನೆ. ಇವೆಲ್ಲವೂ ಕೂಡ ಈಚೆಗೆ ಬರಬೇಕಾಗುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ:–** ಮುಖ್ಯಮಂತ್ರಿಗಳಿಗೆ ಹೇಳಿ ತನಿಖೆ ಮಾಡಿಸುತ್ತೇವೆ. 2008 ರಲ್ಲಿ ಇವರ ಸರ್ಕಾರ ಬಂತು ತನಿಖೆ ಮಾಡುವಂತಹ ಅವಕಾಶವನ್ನು ನೀವು ತಪ್ಪಿಸಿಕೊಂಡುಬಿಟ್ಟಿರಿ. ಈಗಲೂ ನಾವು ತನಿಖೆ ಮಾಡಿಸುತ್ತೇವೆ.

**ಶ್ರೀ ವಿ. ಸೋಮಣ್ಣ:–** ಸರ್ಕಾರ ಎಂದರೆ ಅದು ನಿಂತ ನೀರು ಅಲ್ಲ. ಇದು ಹರಿಯುವ ನೀರು. ಈ ಹರಿಯುವ ನೀರನ್ನು ಯಾವ ಯಾವ ರೀತಿ ಉಪಯೋಗಿಸಿಕೊಳ್ಳುತ್ತೇವೆ ಎನ್ನುವುದು ಬಹಳ ಪ್ರಮುಖವಾದದ್ದು. ಯಾವ ಉದ್ದೇಶಕೋಸ್ಕರ ಉಪಯೋಗಿಸಿಕೊಳ್ಳುತ್ತೇವೆ ಎನ್ನುವುದು ಬಹಳ ಪ್ರಮುಖವಾದದ್ದು.

**ಸಭಾಪತಿಯವರು:–** ಸೋಮಣ್ಣನವರೇ, ನಿಮಗೆ ಇನ್ನು ಎಷ್ಟು ಸಮಯ ಬೇಕು? ನಾನು ಇಷ್ಟು ಸಮಯ ಎಂದು ಹೇಳುತ್ತಿಲ್ಲ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಇನ್ನು ಒಂದು ಗಂಟೆ ಸಮಯ ಬೇಕು.

**ಸಭಾಪತಿಯವರು:–** ನಾನು ಇಷ್ಟು ಸಮಯದಲ್ಲಿ ಮುಗಿಸಿ ಎಂದು ಹೇಳುತ್ತಿಲ್ಲ. ನಿಮಗೆ ಸುಮಾರು ಒಂದು ಗಂಟೆ ಸಮಯ ಬೇಕಲ್ಲವೆ, ನಾನು ಸಮಯ ಕೊಡುವುದಕ್ಕೆ ತಯಾರಿದ್ದೇನೆ, ಆದರೆ ಈಗ ಸಮಯ ಎಂಟು ಮುಕ್ಕಾಲು ಆಗುತ್ತಿದೆ. ನಾವು ಹೆಚ್ಚು ಕಡಿಮೆ ಬೆಳಿಗ್ಗೆಯಿಂದ ಕಾಯುತ್ತಿದ್ದೇವೆ, ಕುಳಿತಿದ್ದೇವೆ. ಹಾಗಾಗಿ ನಾನು ನಿಮಗೆ ಒಂದು ಗಂಟೆ ಸಮಯ ಕೊಡಬೇಕು, ಮುಂದೆ ಯಾರಾದರೂ ಮಾತನಾಡುವವರಿದ್ದರೆ ಅವರಿಗೆ ಇಷ್ಟೊಂದು ಅಲ್ಲದಿದ್ದರೂ ಸಾಕಷ್ಟು ಸಮಯ ಅವರಿಗೂ ಕೊಡಬೇಕಾಗುತ್ತದೆ. ಈ ವಿಷಯ ಬಹಳ ಪ್ರಮುಖವಾಗಿರುವಂಥದ್ದು, ಇಡೀ ಬೆಂಗಳೂರು ನಗರ ಮಾತ್ರವಲ್ಲ, ಇಡೀ ರಾಜ್ಯದ ಗಮನ ಸೆಳೆದಿರುವಂಥದ್ದು. ಇದು ಆಡಳಿತ ಪಕ್ಷ, ವಿರೋಧ ಪಕ್ಷದವರೆಲ್ಲರಿಗೂ ಆಸಕ್ತಿ ಇರುವಂತಹ ವಿಷಯ. ನಾನು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ, ಸಮಯ ಆಯಿತು ಮುಗಿಸಿ ಎಂದು ಹೇಳುವುದು ಅಷ್ಟು ಚೆನ್ನಾಗಿರುವುದಿಲ್ಲ. ತಮಗೆ ಎಷ್ಟು ಸಮಯ ಬೇಕು ಒಂದು ಗಂಟೆಗಿಂತ ಐದು–ಹತ್ತು ನಿಮಿಷ ಹೆಚ್ಚು ಕಡಿಮೆಯಾದರೂ ನಾನು ಅವಕಾಶ ಕೊಡುತ್ತೇನೆ. ಆದರೆ ಈಗ ಸಮಯ ಎಂಟೂ ಮುಕ್ಕಾಲು ಆಗುತ್ತಿದೆ. ತುಂಬಾ ಸಮಯವಾಗಿದೆ. ಮತ್ತೆ ಕೆಲವು ಸದಸ್ಯರುಗಳು ನಾಳೆ ಬಸವ ಜಯಂತಿಗೆ ಭಾಗವಹಿಸುವುದಕ್ಕೆ ನಾವು ನಮ್ಮ ಊರುಗಳಿಗೆ ತೆರಳಬೇಕೆಂದು ಹೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಸದನವನ್ನು 23ನೇ ತಾರೀಖು ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ 8 ಗಂಟೆ 37 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 23ನೇ ಏಪ್ರಿಲ್ 2015ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**